ವಿಶ್ವವಾಣಿ
ವಿಶ್ವಾಸವೇ ವಿಶ್ವ

ಕೇರಳದಲ್ಲಿ ಮೋದಿ ಚುನಾವಣೆ ಶಿಳ್ಳೆ

ತಿರುವನಂತಪುರಂ ಮಹಾನಗರಪಾಲಿಕೆ ಚುನಾವಣೆಯಲ್ಲಿ ಬಿಜೆಪಿ ಭರ್ಜರಿ ಗೆಲುವು ಕಂಡ ನಂತರ ಮೊದಲ ಬಾರಿಗೆ ಕೇರಳಕ್ಕೆ ಭೇಟಿ ಕೊಟ್ಟ ಪ್ರಧಾನಿ ಮೋದಿ ನಾಗರಕೊಯಿಲ್-ಮಂಗಳೂರು ಸೇರಿದಂತೆ ಮೂರು ಅಮೃತ್ ಭಾರತ್ ರೈಲುಗಳಿಗೆ ಚಾಲನೆ ನೀಡಿದರು. ಬಳಿಕ ಬಿಜೆಪಿ ಕಾರ್ಯಕರ್ತರ ಸಮಾವೇಶದಲ್ಲಿ ಭಾಗಿಯಾದರು

ಸತ್ಯಮೇವ ಜಯತೆ

ವಸತಿ ಇಲಾಖೆ
ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ

ಶ್ರೀ ನರೇಂದ್ರಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು

ವಸತಿರಹಿತರ ಕನಸಿನ ಸೂರಿಗೆ
ಆಸರೆಯ ಬೆಳಕಾದ
ಗ್ಯಾರಂಟಿ ಸರ್ಕಾರ

ವಸತಿ ರಹಿತರೆಲ್ಲರೂ ತಲೆಯ ಮೇಲೊಂದು ಸ್ವಂತ ಸೂರು ಹೊಂದಿ ನೆಮ್ಮದಿಯ ಜೀವನ ಸಾಗಿಸುವಂತಾಗಲು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯು ನಿರಂತರವಾಗಿ ಶ್ರಮಿಸುತ್ತಿದೆ. ರಾಜ್ಯಾದ್ಯಂತ ನಗರ, ಪಟ್ಟಣ ಪ್ರದೇಶ ವ್ಯಾಪ್ತಿಯಲ್ಲ ಜನವಸತಿಗೆ ಸೂಕ್ತವಾದ ವಿಶಾಲ ಜಾಗಗಳಲ್ಲಿ ವಸತಿ ಸಮುಚ್ಛಯ ನಿರ್ಮಿಸಿ ಅರ್ಹ ಫಲಾನುಭವಿಗಳಿಗೆ ಹಂಚಿಕೆ ಮಾಡಿ, ಅವರ ಕನಸನ್ನು ನನಸಾಗಿಸುತ್ತಿದೆ.

ಮಾನ್ಯ ವಸತಿ ಸಚಿವರಾದ
ಶ್ರೀ ಬಿ.ಝಡ್. ಜಮೀರ್ ಅಹಮದ್ ಖಾನ್‌ರವರು
ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ
ಮಾನ್ಯ ಅಧ್ಯಕ್ಷರಾದ ಶ್ರೀ ಪ್ರಸಾದ್ ಅಬ್ಬಯ್ಯ ಅವರೊಂದಿಗೆ
ಹುಬ್ಬಳ್ಳಿಯಲ್ಲಿ ನಿರ್ಮಾಣಗೊಂಡಿರುವ ಮನೆಗಳ ಪರಿವೀಕ್ಷಣೆ

ಸನ್ಮಾನ್ಯ ಮುಖ್ಯಮಂತ್ರಿಯವರ
ವಿಶೇಷ ಅನುದಾನದಲ್ಲಿ
ಪೂರ್ಣಗೊಂಡಿರುವ ಪ್ರಧಾನಮಂತ್ರಿ ಆವಾಸ್ ಯೋಜನೆಯಡಿಯಲ್ಲಿ ಮಂಡಳಿ ವತಿಯಿಂದ ರಾಜ್ಯಾದ್ಯಂತ ನಿರ್ಮಾಣಗೊಳ್ಳುತ್ತಿರುವ
180253 ಮನೆಗಳ ಪೈಕಿ 2ನೇ ಹಂತದ
42345 ಮನೆಗಳ
ಲೋಕಾರ್ಪಣೆ
ಹಾಗೂ
ಮಂಡಳಿಯ ಸುವರ್ಣ ಮಹೋತ್ಸವದ ಅಂಗವಾಗಿ
ಮನೆ ಹಂಚಿಕೆ ಪತ್ರ / ಹಕ್ಕುಪತ್ರಗಳ ವಿತರಣಾ ಸಮಾರಂಭ

ದಿನಾಂಕ: 24.01.2026, ಶನಿವಾರ
ಸಮಯ: ಬೆಳಿಗ್ಗೆ 11:00 ಗಂಟೆಗೆ
ಸ್ಥಳ: ಮಂಟೂರು ರಸ್ತೆ, ಹುಬ್ಬಳ್ಳಿ.

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ, ಇವರು
ಉದ್ಘಾಟನೆ ಮತ್ತು ಲೋಕಾರ್ಪಣೆ ಮಾಡಲಿದ್ದಾರೆ.

ಘನ ಉಪಸ್ಥಿತಿ

ಶ್ರೀ ಪ್ರಲ್ಹಾದ ಜೋಷಿ
ಮಾನ್ಯ ಕೇಂದ್ರ ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣೆ ಮತ್ತು ಹೊಸ ಹಾಗೂ ನವೀಕರಿಸಬಹುದಾದ ಇಂಧನ ಸಚಿವರು, ಭಾರತ ಸರ್ಕಾರ

ಡಾ|| ಮಲ್ಲಿಕಾರ್ಜುನ್ ಖರ್ಗೆ
ಮಾನ್ಯ ವಿರೋಧ ಪಕ್ಷದ ನಾಯಕರು, ರಾಜ್ಯಸಭೆ

ಶ್ರೀ ರಾಹುಲ್ ಗಾಂಧಿ
ಮಾನ್ಯ ವಿರೋಧ ಪಕ್ಷದ ನಾಯಕರು, ಲೋಕಸಭೆ

ಮನೆ ಹಂಚಿಕಾತಿ / ಹಕ್ಕುಪತ್ರಗಳ ವಿತರಣೆ
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು, ಭಾರಿ ಮತ್ತು ಮಧ್ಯಮ ನೀರಾವರಿ ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವರು, ಕರ್ನಾಟಕ ಸರ್ಕಾರ

ಉಪಸ್ಥಿತಿ
ಶ್ರೀ ಬಸವರಾಜ ಹೊರಟ್ಟಿ
ಮಾನ್ಯ ಸಭಾಪತಿಗಳು
ಕರ್ನಾಟಕ ವಿಧಾನ ಪರಿಷತ್

ಅಧ್ಯಕ್ಷತೆ
ಶ್ರೀ ಬಿ.ಝಡ್. ಜಮೀರ್ ಅಹಮದ್ ಖಾನ್
ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಿಜಯನಗರ ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ

ಮುಖ್ಯ ಅತಿಥಿಗಳು

ಶ್ರೀ ಸಂತೋಷ ಎಸ್. ಲಾಡ್
ಮಾನ್ಯ ಕಾರ್ಮಿಕ ಸಚಿವರು ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರು
ಕರ್ನಾಟಕ ಸರ್ಕಾರ

ಶ್ರೀ ಆರ್. ಅಶೋಕ
ಮಾನ್ಯ ವಿರೋಧ ಪಕ್ಷದ ನಾಯಕರು
ಕರ್ನಾಟಕ ವಿಧಾನಸಭೆ

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ
ಮಾನ್ಯ ವಿರೋಧ ಪಕ್ಷದ ನಾಯಕರು
ಕರ್ನಾಟಕ ವಿಧಾನ ಪರಿಷತ್

ಶ್ರೀ ಸಲೀಂ ಅಹ್ಮದ್
ಸರ್ಕಾರದ ಮಾನ್ಯ ಮುಖ್ಯ ಸಚೇತಕರು
ಕರ್ನಾಟಕ ವಿಧಾನ ಪರಿಷತ್

ಪ್ರಾಸ್ತಾವಿಕ ನುಡಿ ಮತ್ತು ಮಂಡಳಿಯ ಸುವರ್ಣ ಮಹೋತ್ಸವದ ಅಂಗವಾಗಿ ಸ್ಮರಣಿಕೆ ವಿತರಣೆ
ಶ್ರೀ ಪ್ರಸಾದ್ ಅಬ್ಬಯ್ಯ
ಮಾನ್ಯ ಅಧ್ಯಕ್ಷರು,
ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ
ಹಾಗೂ ಶಾಸಕರು, ಹುಬ್ಬಳ್ಳಿ-ಧಾರವಾಡ ಪೂರ್ವ ವಿಧಾನಸಭಾ ಕ್ಷೇತ್ರ

ಸೌಜನ್ಯದ ಉಪಸ್ಥಿತಿ
ಡಾ. ಶಾಲಿನಿ ರಜನೀಶ್, ಭಾಆಸೇ
ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ

ರಾಜ್ಯದ ಎಲ್ಲಾ ಮಾನ್ಯ ಸಚಿವರುಗಳು, ಮಾನ್ಯ ಸಂಸದರು (ಲೋಕಸಭೆ/ರಾಜ್ಯಸಭೆ), ಮಾನ್ಯ ಶಾಸಕರು (ವಿಧಾನಸಭೆ/ವಿಧಾನಪರಿಷತ್), ಎಲ್ಲಾ ಆಯೋಗ / ನಿಗಮ ಮಂಡಳಿಗಳ ಅಧ್ಯಕ್ಷರುಗಳು, ಉಪಾಧ್ಯಕ್ಷರು ಮತ್ತು ಸದಸ್ಯರು ಹಾಗೂ ಸ್ಥಳೀಯ ಸಂಸ್ಥೆಗಳ ಚುನಾಯಿತ ಜನಪ್ರತಿನಿಧಿಗಳು ಈ ಸಮಾರಂಭದಲ್ಲಿ ಉಪಸ್ಥಿತರಿರುವರು.

ಸರ್ವರಿಗೂ ಆದರದ ಸುಸ್ವಾಗತ

ಮೋಹನ್ ರಾಜ್. ಕೆ.ಪಿ., ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು,
ವಸತಿ ಇಲಾಖೆ

ಪರಶುರಾಮ್ ಶಿನ್ನಾಳ್ಕರ್, ಕ.ಆ.ಸೇ. (ಸೂಪರ್‌ಟೈಮ್ ಸ್ಕೇಲ್)
ವ್ಯವಸ್ಥಾಪಕ ನಿರ್ದೇಶಕರು
ರಾಜೀವ್ ಗಾಂಧಿ ವಸತಿ ನಿಗಮ ನಿ., ಬೆಂಗಳೂರು

ರಾಘವೇಂದ್ರ. ಟಿ., ಕ.ಆ.ಸೇ. (ಸೂಪರ್‌ಟೈಮ್ ಸ್ಕೇಲ್)
ಆಯುಕ್ತರು,
ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಬೆಂಗಳೂರು

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ನಂ. 55, ಅಭಯ ಕಾಂಪ್ಲೆಕ್ಸ್, ರಿಸಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560 020

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೆಎಂಎಫ್‌ನ ಹೊಸ ಉತ್ಪನ್ನಗಳಾದ ಗುಡ್ ಲೈಫ್ ತುಪ್ಪ, ಪನೀರ್, ಪ್ರೊ ಮಿಲ್ಕ್, ಪ್ರೋಬಯೋಟಿಕ್ ಮೊಸರು ಸೇರಿ ಇತರೆ ಆರೋಗ್ಯಕಾರಿ ಉತ್ಪನ್ನಗಳನ್ನು ಲೋಕಾರ್ಪಣೆ ಗೊಳಿಸಿದರು. ಕೆಎಂಎಫ್ ಎಂಡಿ ಶಿವಸ್ವಾಮಿ, ಶಾಸಕರಾದ ನಂಜೇಗೌಡ, ಅಶೋಕ್ ಕುಮಾರ್ ರೈ ಸೇರಿ ಹಲವು ಪ್ರಮುಖರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಮುದ್ದರಾಜಯ್ಯಗೆ ಪಿಎಚ್.ಡಿ ಪ್ರದಾನ

ಬೆಂಗಳೂರು: ಮುದ್ದರಾಜಯ್ಯ ಎಚ್.ವಿ. ಅವರಿಗೆ ಮೈಸೂರು ವಿವಿ ಪಿಎಚ್. ಡಿ ಪದವಿಯನ್ನು ನೀಡಿ ಗೌರವಿಸಿದೆ.

ಮೈಸೂರು ವಿವಿ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರಾದ ಡಾ: ಪ್ರೇಮಕುಮಾರ್ ಅವರ ಮಾರ್ಗದರ್ಶನದಲ್ಲಿ An Empirical Analysis of Trade Relations of India With ASEAN Countries. ಎಂಬ ವಿಷಯದಲ್ಲಿ ಸಂಶೋಧನೆ ನಡೆಸಿದ ಮಹಾಪ್ರಬಂಧಕ್ಕೆ ಮೈಸೂರು ವಿವಿ ಪಿಎಚ್.ಡಿ ಪದವಿ ನೀಡಿ ಗೌರವಿಸಿದೆ.

ಗಾಂಧೀಜಿ ಆತ್ಮಕಥೆ ನೈಜ ಚರಿತ್ರೆಯ ಜೀವಂತ ದಾಖಲೆ

ಬೆಂಗಳೂರು: ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಆತ್ಮಕಥೆ ನನ್ನ ಸತ್ಯಾನ್ವೇಷಣೆ ಜಗತ್ತಿನಲ್ಲಿಯೇ ಅತ್ಯಂತ ದಿಟ್ಟ, ಪ್ರಾಮಾಣಿಕ ಮತ್ತು ಪಾರದರ್ಶಕ ಆತ್ಮಕಥೆಗಳಲ್ಲಿ ಒಂದಾಗಿದೆ ಎಂದು ಸಾಹಿತಿ ಡಾ. ಮೀನಾಕ್ಷಿ ಬಾಳಿ ಹೇಳಿದರು.

ಕನ್ನಡ ಪುಸ್ತಕ ಪ್ರಾಧಿಕಾರ ಹಾಗೂ ಎನ್.ಇ.ಎಸ್ ಆಫ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಸಹಯೋಗದಲ್ಲಿ ಶುಕ್ರವಾರ ಬಸವನಗುಡಿಯ ನ್ಯಾಷನಲ್ ಕಾಲೇಜಿನ ಡಾ.ಎಚ್.ಎನ್. ಸಭಾಂಗಣದಲ್ಲಿ ಆಯೋಜಿಸಿದ್ದ ಅಂಗಳದಲ್ಲಿ ತಿಂಗಳ ಪುಸ್ತಕ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗಾಂಧೀಜಿಯವರು ತಮ್ಮ ಬದುಕಿನಲ್ಲಿ ಸತ್ಯ ದೊಂದಿಗೆ ಮಾಡಿದ ಪ್ರಯೋಗಗಳ ನೈಜ ಅನು ಸಂಧಾನವೇ ನನ್ನ ಸತ್ಯಾನ್ವೇಷಣೆ ಆತ್ಮಕಥೆಯಾಗಿದ್ದು, ಇಂದಿನ ಯುವಪೀಳಿಗೆ ಅವಶ್ಯವಾಗಿ ಓದಲೇಬೇಕಾದ ಕೃತಿಯಾಗಿದೆ. ಇಂದಿನ ಶಿಕ್ಷಣ ವ್ಯವಸ್ಥೆ ಅಂಕಾಧಾರಿತ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡುತ್ತಿದ್ದು, ಮೌಲ್ಯಾಧಾರಿತ ಶಿಕ್ಷಣ ಹಿನ್ನಡೆಯಾಗುತ್ತಿದೆ. ಇದರಿಂದ ಯುವಜನತೆ ನೈಜ ಇತಿಹಾಸ ಮತ್ತು ಚರಿತ್ರೆಯಿಂದ ದೂರವಾಗುತ್ತಿದೆ ಎಂದರು.

ಬಸವನಗುಡಿಯ ನ್ಯಾಷನಲ್ ಕಾಲೇಜಿನ ಡಾ.ಎಚ್.ಎನ್. ಸಭಾಂಗಣದಲ್ಲಿ ಆಯೋಜಿಸಿದ್ದ ಅಂಗಳದಲ್ಲಿ ತಿಂಗಳ ಪುಸ್ತಕ ಕಾರ್ಯಕ್ರಮವನ್ನು ಸಾಹಿತಿ ಡಾ. ಮೀನಾಕ್ಷಿ ಬಾಳಿ ಉದ್ಘಾಟಿಸಿದರು.

ಗಾಂಧೀಜಿಯನ್ನು ದೇಶ ವಿಭಜಕ ಎಂದು ಚಿತ್ರಿಸಲಾಗುತ್ತಿರುವ ಇಂದಿನ ಪರಿಸ್ಥಿತಿ ನಿಜಕ್ಕೂ ದುರಂತಕಾರಿ. ವಾಸ್ತವವಾಗಿ ಗಾಂಧೀಜಿ ಎಂದಿಗೂ ದೇಶ ಒಡೆಯುವ ಕೆಲಸ ಮಾಡಿಲ್ಲ. ಮಹಿಳೆಯರು, ದಲಿತರು, ಶೋಷಿತ ವರ್ಗಗಳ ಹಕ್ಕುಗಳಿಗಾಗಿ ಧೈರ್ಯವಾಗಿ ಧ್ವನಿ ಎತ್ತಿದವರು ಗಾಂಧೀಜಿ ಎಂದರು.

ಡಾ. ಮಾನಸ ಮಾತನಾಡಿದರು. ಈ ವೇಳೆ ಎನ್.ಇ.ಎಸ್ ಆಫ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ. ಎಚ್.ಎನ್. ಸುಬ್ರಹ್ಮಣ್ಯ, ಪ್ರಾಂಶುಪಾಲ ಡಾ. ಪಿ. ಎಲ್ ರಮೇಶ್, ಉಪ ಪ್ರಾಂಶುಪಾಲ ಪ್ರೊ. ಅಲಕಾನಂದ, ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿ ಕೆ.ಬಿ. ಕಿರಣ್ ಸಿಂಗ್, ಕನ್ನಡ ವಿಭಾಗದ ಮುಖ್ಯಸ್ಥ ಡಾ. ಬಿ. ಪಾಪಣ್ಣ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಬೆಂಗಳೂರಿನಲ್ಲಿ ಕೇರಳ ರೋಡ್ ಶೋ ಆಯೋಜನೆ

ಬೆಂಗಳೂರು: ಕೇರಳಕ್ಕೆ ಮತ್ತಷ್ಟು ಪ್ರವಾಸಿಗರನ್ನು ಆಕರ್ಷಿಸುವ ನಿಟ್ಟಿನಲ್ಲಿ ಕೇರಳ ಸರಕಾರ ಬೆಂಗಳೂರಿನಲ್ಲಿ ರೋಡ್ ಶೋ ಹಮ್ಮಿಕೊಂಡಿತ್ತು.

ಪ್ರತಿ ಎರಡು ವರ್ಷಕ್ಕೊಮ್ಮೆ ನಡೆಯುವ ಕೊಚ್ಚಿ-ಮುಝಿರಿಸ್ ಬೈಯೆನ್ನೇಲ್ ಕಲಾ ಹಬ್ಬದ ನಿಮಿತ್ತ ರೋಡ್ ಶೋ ಆಯೋಜಿಸಲಾಗಿತ್ತು. ಕೊಚ್ಚಿ ಕೋಟೆಯ ಐತಿಹಾಸಿಕ ಮತ್ತು ಪಾರಂಪರಿಕ ಪರಿಸರದಲ್ಲಿ ನಡೆಯುತ್ತಿರುವ ಕಲಾ ಹಬ್ಬವು ಕಲೆ, ಇತಿಹಾಸ ಮತ್ತು ಪ್ರವಾಸೋದ್ಯಮವನ್ನು ಬೆಸೆಯುವ ಮೂಲಕ ಪ್ರವಾಸಿಗರಿಗೆ ಅನನ್ಯ ಅನುಭವವನ್ನು ನೀಡುತ್ತಿದೆ. ಈ ಕಲಾ ಉತ್ಸವವು ಮಾರ್ಚ್ 31ರವರೆಗೆ ಮುಂದುವರಿಯಲಿದ್ದು, ವಿಶ್ವದ ಮೂಲೆ ಮೂಲೆಗಳ ಕಲಾವಿದರ ಅತ್ಯಾಧುನಿಕ ಕಲಾಕೃತಿಗಳು ಇಲ್ಲಿನ ಪಾರಂಪರಿಕ ತಾಣಗಳಲ್ಲಿ ಪ್ರದರ್ಶನಗೊಳ್ಳುತ್ತಿವೆ ಎಂದು ಕೇರಳ ಸರಕಾರ ಹೇಳಿದೆ.

ಈ ಬಗ್ಗೆ ಮಾತನಾಡಿರುವ ಕೇರಳ ಪ್ರವಾಸೋದ್ಯಮ ಸಚಿವ ಪಿ.ಎ. ಮೊಹಮ್ಮದ್ ರಿಯಾಸ್, ಕೋವಿಡ್ ನಂತರದ ದಿನಗಳಲ್ಲಿ ಕೇರಳಕ್ಕೆ ಆಗಮಿಸುತ್ತಿರುವ ಪ್ರವಾಸಿಗರ ಸಂಖ್ಯೆಯಲ್ಲಿ ಭಾರಿ ಏರಿಕೆ ಕಂಡುಬಂದಿದೆ. ನಮ್ಮ ಸಾಂಪ್ರದಾಯಿಕ ಆಕರ್ಷಣೆಗಳ ಜೊತೆಗೆ ಹೊಸದಾಗಿ ಪರಿಚಯಿಸಲಾದ ಪ್ರವಾಸಿ ಉತ್ಪನ್ನಗಳಿಗೂ ದೇಶ-ವಿದೇಶಗಳ ಪ್ರವಾಸಿಗರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ ಎಂದು ಹೇಳಿದರು. ಪ್ರವಾಸಿಗರನ್ನು ಸೆಳೆಯಲು 'ಕೇರಳ ಟೂರಿಸಂ' ದೇಶದ ಪ್ರಮುಖ ನಗರಗಳಲ್ಲಿ ರೋಡ್ ಶೋಗಳನ್ನು ಆಯೋಜಿಸಿದೆ. ಜನವರಿ 20ರಂದು ಚೆನ್ನೈನಲ್ಲಿ ಆರಂಭವಾದ ಈ ಅಭಿಯಾನವು ಬೆಂಗಳೂರಿನಲ್ಲಿ ನಡೆದಿದೆ. ಮುಂದಿನ ದಿನಗಳಲ್ಲಿ ಹೈದರಾಬಾದ್, ಕೋಲ್ಕತ್ತಾ, ಲಕ್ನೋ ಮತ್ತು ಇಂದೋರ್‌ಗಳಲ್ಲಿಯೂ ಬಿ2ಬಿ ಸಭೆಗಳನ್ನು ನಡೆಸುವ ಮೂಲಕ ಹೊಸ ಪ್ರವಾಸಿ ಪ್ಯಾಕೇಜ್‌ಗಳನ್ನು ಪರಿಚಯಿಸಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಕುಡಿದು ವಾಹನ ಚಾಲನೆ
11,500 ಚಾಲಕರ ಡಿಎಲ್ ರದ್ದು

ಬೆಂಗಳೂರು: ಕುಡಿದು ವಾಹನ ಚಾಲನೆ ಮಾಡಿದ 11,500 ಚಾಲಕರ ಚಾಲನಾ ಪರವಾನಗಿಯನ್ನು ಬೆಂಗಳೂರು ಸಂಚಾರಿ ಪೊಲೀಸರು ರದ್ದು ಮಾಡಿದ್ದಾರೆ. ಕಳೆದ ವರ್ಷ ಕುಡಿದು ವಾಹನ ಚಾಲನೆ ಮಾಡಿ ಸಂಚಾರಿ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದ 12,900 ಚಾಲಕರ ಡಿಎಲ್ ರದ್ದು ಮಾಡುವಂತೆ ಸಾರಿಗೆ ಇಲಾಖೆ ಅಧಿಕಾರಿಗಳಿಗೆ ಸಂಚಾರಿ ಪೊಲೀಸರು ಪತ್ರ ಬರೆದಿದ್ದರು. 12,900 ಚಾಲಕರ ಪೈಕಿ 11,500 ಡಿಎಲ್‌ಗಳನ್ನು ಆರ್‌ಟಿಒ ಅಧಿಕಾರಿಗಳು ರದ್ದು ಮಾಡಿದ್ದಾರೆಂದು ಸಂಚಾರಿ ಜಂಟಿ ಪೊಲೀಸ್ ಆಯುಕ್ತ ಕಾರ್ತಿಕ್ ರೆಡ್ಡಿ ಸ್ಪಷ್ಟಪಡಿಸಿದ್ದಾರೆ. ಪದೇ ಪದೇ ಡ್ರಿಂಕ್ ಅಂಡ್ ಡ್ರೈವ್ ಮಾಡಿ ಪೊಲೀಸರ ಕೈಗೆ ಸಿಕ್ಕಿ ಬಿದ್ದಿದ್ದ ಚಾಲಕರ ಡಿಎಲ್‌ಗಳನ್ನು ಪರಿಶೀಲಿಸಿ ರದ್ದು ಮಾಡಲಾಗಿದೆ. ಉಳಿದವುಗಳನ್ನ ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳುವ ಬಗ್ಗೆ ಆರ್‌ಟಿಒ ಅಧಿಕಾರಿಗಳು ಪೊಲೀಸರಿಗೆ ತಿಳಿಸಿದ್ದಾರೆ.

ಇತ್ತೀಚಿಗೆ ಕುಡಿದು ಶಾಲಾ ವಾಹನ ಚಾಲನೆ ಮಾಡುವ ಬಗ್ಗೆ ದೂರುಗಳು ಬರುತ್ತಿತ್ತು. ಹಾಗಾಗಿ ಬೆಂಗಳೂರಿನಾದ್ಯಂತ ವಿಶೇಷ ಕಾರ್ಯಾಚರಣೆ ನಡೆಸಲಾಗಿದೆ. ನಗರದ್ಯಂತ 5,110 ಶಾಲಾ ವಾಹನಗಳ ತಪಾಸಣೆ ಮಾಡಲಾಗಿದೆ. ಈ ಪೈಕಿ ಸುಮಾರು 26 ಶಾಲಾ ಬಸ್ ಚಾಲಕರು ಮದ್ಯಪಾನ ಮಾಡಿ ವಾಹನ ಚಾಲನೆ ಪತ್ತೆಯಾಗಿದೆ. ಕುಡಿದು ವಾಹನ ಚಾಲನೆ ಮಾಡುತ್ತಿದ್ದ ಚಾಲಕರ ಡಿಎಲ್ ರದ್ದುಗೊಳಿಸಲು ಆರ್‌ಟಿಒಗೆ ರಿಪೋರ್ಟ್ ಸಲ್ಲಿಕೆ ಮಾಡಲಾಗಿದೆ. ಕುಡಿದು ವಾಹನ ಚಾಲನೆ ಮಾಡ್ತಿದ್ದವರ ವಿರುದ್ಧ ಭಾರತೀಯ ಮೋಟಾರು ವಾಹನ ಕಾಯಿದೆಯಡಿ ಕೇಸ್ ದಾಖಲು ಮಾಡಲಾಗಿದೆ. ಶಾಲಾ ಆಡಳಿತ ಮಂಡಳಿಯವರ ನಿರ್ಲಕ್ಷ್ಯ ಕಂಡು ಬಂದಲ್ಲಿ, ಶಿಕ್ಷಣ ಇಲಾಖೆಗೆ ಪತ್ರ ಬರೆಯುತ್ತೇವೆ ಎಂದು ಸಂಚಾರ ಜಂಟಿ ಪೊಲೀಸ್ ಆಯುಕ್ತ ಕಾರ್ತಿಕ್ ರೆಡ್ಡಿ ತಿಳಿಸಿದ್ದಾರೆ.

ರಾಜ್ಯ ಲೋಕಭವನಕ್ಕೆ ಹುಸಿ ಬಾಂಬ್ ಬೆದರಿಕೆ

ಆರ್‌ಡಿಎಕ್ಸ್ ಬಾಂಬ್ ಸ್ಫೋಟಿಸುವ ಎಚ್ಚರಿಕೆ
ಶ್ವಾನ ದಳ, ಬಾಂಬ್ ನಿಷ್ಕ್ರಿಯ ದಳ ತಪಾಸಣೆ

ಬೆಂಗಳೂರು: ಕರ್ನಾಟಕ ಲೋಕಭವನ ಸ್ಫೋಟಿಸುವುದಾಗಿ ಬಾಂಬ್ ಬೆದರಿಕೆಯ ಇ-ಮೇಲ್ ಸಂದೇಶ ಬಂದಿದೆ. ಜನವರಿ 14ರಂದು ರಾಜ್ಯಪಾಲರ ಅಧಿಕೃತ ಮೇಲ್ ಐಡಿಗೆ ಸಂದೇಶ ಕಳಿಸಿರುವ ಕಿಡಿಗೇಡಿಗಳು ಮಧ್ಯಾಹ್ನದೊಳಗೆ ಬಾಂಬ್ ಸ್ಫೋಟಿಸುವುದಾಗಿ ಬೆದರಿಕೆ ಹಾಕಿದ್ದರು. ತಪಾಸಣೆ ವೇಳೆ ಇದೊಂದು ಹುಸಿ ಬೆದರಿಕೆ ಕರೆ ಎಂದು ಪೊಲೀಸರು ದೃಢಪಡಿಸಿದ್ದಾರೆ.

ಹುಸಿ ಬೆದರಿಕೆ ಕರೆ ಎಂದ ಪೊಲೀಸ್: gainaramesh@outlook.com ಎಂಬ ಇ-ಮೇಲ್ ರಾಜ್ಯಪಾಲರ ಅಧಿಕೃತ ಮೇಲ್ ಐಡಿಗೆ ಸಂದೇಶ ಬಂದಿದೆ. ಆರ್‌ಡಿಎಕ್ಸ್ ಬಾಂಬ್ ಸ್ಫೋಟಿಸುವುದಾಗಿ ಬೆದರಿಕೆ ಹಾಕಲಾಗಿತ್ತು. ತಕ್ಷಣ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ್ದ ಶ್ವಾನ ದಳ, ಬಾಂಬ್ ನಿಷ್ಕ್ರಿಯ ದಳಕ್ಕೆ ಯಾವುದೇ ಸ್ಫೋಟಕ ಸಾಮಗ್ರಿ ಪತ್ತೆಯಾಗಿಲ್ಲ. ತಪಾಸಣೆ ನಂತರ ಹುಸಿ ಬೆದರಿಕೆ ಕರೆ ಎಂದು ಪೊಲೀಸರು ದೃಢಪಡಿಸಿದ್ದಾರೆ. ಲೋಕಭವನದ ಅಧಿಕಾರಿಗಳು ಜನವರಿ 20ರಂದೇ ಪ್ರಕರಣ ದಾಖಲಿಸಿದ್ದು, ವಿಧಾನಸೌಧ ಠಾಣೆ ಪೊಲೀಸರು ತನಿಖೆ ನಡೆಸಿದ್ದಾರೆ.

ಇ-ಮೇಲ್ ಸಂದೇಶದಲ್ಲಿ ಏನಿದೆ?: ತಮಿಳುನಾಡಿನಲ್ಲಿ 1979ರ ನೈನಾರ್ ದಾಸ್ ಪೊಲೀಸ್ ಒಕ್ಕೂಟವನ್ನು ಜಾರಿಗೆ ತನ್ನಿ. ನಿಮ್ಮ ರಾಜ್ಯಪಾಲರ ಕಚೇರಿಯಲ್ಲಿ 3 ಆರ್‌ಡಿಎಕ್ಸ್ ಬಾಂಬ್‌ಗಳನ್ನು ಬಳಸಿ ಮಾನವ ಆತ್ಮಹತ್ಯಾ ಸ್ಫೋಟಿಸುತ್ತೇವೆ. ಮಧ್ಯಾಹ್ನ 1:35ರೊಳಗೆ ಸಿಬ್ಬಂದಿ ಸ್ಥಳಾಂತರಿಸಿ ಎಂದಿದ್ದಾರೆ. ತಮಿಳುನಾಡು ಕಾನ್‌ಸ್ಟೆಬಲ್‌ಗಳು ನಿವೇತಾ ಪೇತುರಾಜ್ ಮತ್ತು ಇತರ ಡಿಎಂಕೆ ಪತ್ನಿಯರ ಬಟ್ಟೆ ಮತ್ತು ಕೊಳಕು ಪಾತ್ರೆಗಳನ್ನು ಸ್ವಚ್ಛಗೊಳಿಸಲು ಒತ್ತಾಯಿಸಲ್ಪಡುತ್ತಾರೆ. ಇದರಿಂದಾಗಿ ಅನೇಕರು ಅವಮಾನ ಅನುಭವಿಸಿದ್ದಾರೆ. ಆದ್ದರಿಂದ, ಮಾಜಿ ಎಲ್‌ಟಿಟಿಇ ಸದಸ್ಯರು ಮತ್ತು ಕಾಶ್ಮೀರ ಐಎಸ್‌ಐ ಸದಸ್ಯರು ಇಂದು ನಿಮ್ಮ ಸರಕಾರಿ ಕಚೇರಿಯನ್ನು ಗುರಿಯಾಗಿಸಿಕೊಂಡು ಈ ಪದ್ಧತಿಯ ವಿರುದ್ಧ ಹೇಳಿಕೆ ನೀಡಲು ಮತ್ತು ತಮಿಳುನಾಡಿನಲ್ಲಿ 1979 ರ ನೈನಾರ್ ದಾಸ್ ಪೊಲೀಸ್ ಯೂನಿಯನ್ ಶಿಫಾರಸುಗಳನ್ನು ಕಾನ್‌ಸ್ಟೆಬಲ್‌ಗಳಿಗೆ ಜಾರಿಗೆ ತರಲು ಪ್ರಯತ್ನಿಸಿದ್ದಾರೆ. ನಮ್ಮ ಬೇಡಿಕೆಗಳನ್ನು ಕೇಳಲು ನಮಗೆ ಬೇರೆ ದಾರಿಯಿಲ್ಲ, ಕ್ಷಮಿಸಿ ಎಂದು ಹೇಳಿದ್ದಾರೆ.

ವಿರಾಮ
ಪ್ರತಿ ಭಾನುವಾರ

PUBLIC NOTICE

The general public are hereby notified that, my clients Mrs.Aruna W/o Mr.S.Ramu and her daughter Mrs.Sindhu.R have lost the Original Rectification deed bearing document no.HLS-1-02850-2019-2020, Book-I, dated 21-08-2019, C.D.No.HLSD336 registered at the Sub-registered office Shivajinagar, Bangalore, pertaining to immovable property bearing Southern Portion No. 2. Katha No. 1006, H.L. No. 959/1, situated at Subbaiahanapalya, BBMP, Ward No. 87, now New Municipal No. 43 at Muniswamappa Road, Subbaihna Palya, measuring 747 Square feet during the renovation of the house in this regard a lost report No.2021988/2026 was lodged before the Bangalore City Police on 22-01-2026. If any person/s finds the said documents kindly inform the above said stated person or address mentioned below. If any person/s misuses the said document, the same is not binding on my client and they shall do so at their own risk.

C.K.V.K. LAW ASSOCIATES
Mr. VENKATESH CHANDRAN M.A., L.L.B.
Advocates & Legal Consultants Bangalore-43
M : 9845846428, 9108784843
E- Mail: rvlaw.76@gmail.com

यूनियन बैंक ऑफ इंडिया
भारत सरकार का उपक्रम
Union Bank of India
A Government of India Undertaking

ಅಸೆಟ್ ರಿಕವರಿ ಶಾಖೆ ಬೆಂಗಳೂರು ಉತ್ತರ, ನಂ.1234, 1ನೇ ಮಹಡಿ, 4ನೇ ಮೇನ್, ಚಂದ್ರ ಲೇಔಟ್ ಬಸ್ ನಿಲ್ದಾಣದ ಎದುರು, ಚಂದ್ರ ಲೇಔಟ್, ಬೆಂಗಳೂರು-560040. ಇ-ಮೇಲ್: arb.bengalurunorth@unionbankofindia.bank.in, ಮೊಬೈಲ್ ನಂ. 9825766633

ಇ-ಹರಾಜು ಮಾರಾಟದ ನೋಟೀಸ್

ಪ್ರೊವಿಜೋ ನಿಯಮ 8 & 9 ರ ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002 ಮತ್ತು ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಹರಾಜು ಮಾರಾಟಕ್ಕೆ 15 ದಿನಗಳ ನೋಟೀಸ್

ಸಾರ್ವಜನಿಕವಾಗಿ ಮತ್ತು ನಿರ್ದಿಷ್ಟವಾಗಿ ಸಾಲಗಾರ(ರು)ರಿಗೆ ಮತ್ತು ಜಾಮೀನುದಾರರಾದ ಇವರಿಗೆ ಈ ಮೂಲಕ ತಿಳಿಸುವುದೇನೆಂದರೆ ಈ ಕೆಳಗೆ ತಿಳಿಸಿದ ಸ್ಥಿರಾಸ್ತಿ ಸ್ವತ್ತನ್ನು ಭದ್ರತಾ ಸಾಲಗಾರರಿಗೆ ಅಡಮಾನ/ಚಾರ್ಜ್ ಮಾಡಲಾಗಿದೆ. ಸೆಕ್ಯೂರ್ಡ್ ಕ್ರೆಡೀಟರ್ ಅಧಿಕೃತ ಅಧಿಕಾರಿಯವರಿಂದ ಸ್ವಾಧೀನವನ್ನು ತೆಗೆದುಕೊಳ್ಳಲಾಗಿದೆ. **ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ,** ಸೆಕ್ಯೂರ್ಡ್ ಕ್ರೆಡೀಟರ್ ಇವರು ಬಾಕಿ ಮೊತ್ತ ಮತ್ತು ಜೊತೆಗೆ ಮುಂದಿನ ಬಡ್ಡಿ ಮತ್ತು ಕಾನೂನು / ಇತರ ವೆಚ್ಚಗಳೊಂದಿಗೆ ಬಾಕಿ ಮೊತ್ತದ ವಸೂಲಾತಿಗಾಗಿ ಅದನ್ನು **"ಎಲ್ಲಿ ಹೇಗಿದೆಯೋ ಹಾಗೆ" ಎಲ್ಲಿ ಏನಿದೆಯೋ ಹಾಗೆ" ಮತ್ತು ಅಲ್ಲಿ ಏನೇ ಇರಲಿ ಹಾಗೆ"** ಆಧಾರದ ಮೇಲೆ ಹೇಳಿದಂತೆ ಬಾಕಿ ವಸೂಲಿಗಾಗಿ ಕೆಳಗೆ ತಿಳಿಸಿದ ದಿನಾಂಕದಂದು, ಸಾರ್ವಜನಿಕ ಹರಾಜಿನ ಮೂಲಕ ಮಾರಾಟ ಮಾಡಲಾಗುವುದು. ಸಾಲಗಾರ ಮತ್ತು ಜಾಮೀನುದಾರರಿಂದ ಮುಂದಿನ ಬಡ್ಡಿ ಮತ್ತು ಇತರೆ ಖರ್ಚುಗಳು ಜೊತೆಗೆ ಕೆಳಗೆ ತಿಳಿಸಲಾದ ಬಾಕಿಗಳನ್ನು ಮರು ಪಡೆಯಲು ಮತ್ತು ಮುಂಗಡ ಠೇವಣಿಯನ್ನು ಕೆಳಕಂಡ ದಿನಾಂಕದಂದು ಆಸ್ತಿಯ ಮೀಸಲು ಬೆಲೆ ಮತ್ತು ಮುಂಗಡ ಠೇವಣಿ (ಇಎಂಡಿ) ಸ್ಥಿರಾಸ್ತಿ ಇತ್ಯಾದಿಗಳನ್ನು ಕೆಳಗೆ ನೀಡಲಾಗಿದೆ.

1. ಶಾಖೆ: ಅಸೆಟ್ ರಿಕವರಿ ಶಾಖೆ ಬೆಂಗಳೂರು ಉತ್ತರ : ಸಾಲಗಾರರ, ಸಹ-ಅರ್ಜಿದಾರರ, ಮತ್ತು ಜಾಮೀನುದಾರರ ಹೆಸರು ಮತ್ತು ವಿಳಾಸ : (1) **ಮೆ॥ ಅಜಿತ್ ಸಿವಿಲ್ ಕಂಟ್ರ್ಯಾಕ್ಟರ್ ಇದನ್ನು ಪ್ರತಿನಿಧಿಸುವ ಮಾಲೀಕರು ಶ್ರೀ ಪ್ರಭುದಾಸ್ ಅಜಿತ್ ಕಿಶೋರ್** ಬಿನ್ ಶ್ರೀ ಕೆ ಪ್ರಭುದಾಸ್, ನಂ. 445, 14ನೇ ಮೇನ್, 17ನೇ ಕ್ರಾಸ್, ಈಜಿಪುರ, ವಿವೇಕನಗರ ಪೋಸ್ಟ್ ಬೆಂಗಳೂರು-560047. (2) **ಶ್ರೀ ಪ್ರಭುದಾಸ್ ಅಜಿತ್ ಕಿಶೋರ್** ಬಿನ್ ಕೆ ಪ್ರಭುದಾಸ್, ನಂ.9-1 ಕಮ್ಮಪಲ್ಲೆ ಹೆಚ್‌ಡಬ್ಲ್ಯೂ, ತಾನೆಬಂಡಾ, ಚಿತ್ತೂರು, ಆಂಧ್ರಪ್ರದೇಶ-517004. **ಪರ್ಯಾಯ ವಿಳಾಸ:** ನಿವೇಶನ ನಂ:25, ಖಾತಾ ನಂ: 57, ಕ್ರ.ಸಂ: 325, ಸಿಂಗೇನ ಅಗ್ರಹಾರ ಗ್ರಾಮ, ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು, ಮುತ್ತಾನಲ್ಲೂರು ಗ್ರಾಮ ಪಂಚಾಯಿತಿ ಮಿತಿಯಲ್ಲಿ, ಬೆಂಗಳೂರು-560100.
ಬರಬೇಕಾದ ಬಾಕಿ ಮೊತ್ತ: ರೂ. 45,87,189.16 (ರೂಪಾಯಿ ನಲವತ್ತೈದು ಲಕ್ಷದ ಎಂಭತ್ತೇಳು ಸಾವಿರದ ಒಂದುನೂರ ಎಂಭತ್ತೊಂಭತ್ತು ಮತ್ತು ಹದಿನಾರು ಪೈಸೆ ಮಾತ್ರ) ಜೊತೆಗೆ ದಿನಾಂಕ: 31.12.2025 ರಿಂದ ಭವಿಷ್ಯದ ಬಡ್ಡಿ ಮತ್ತು ಇತರೆ ಖರ್ಚುವೆಚ್ಚಗಳು.
ಆಸ್ತಿಯ ವಿವರ : ಷೆಡ್ಯೂಲ್ 'ಎ' ಆಸ್ತಿ: ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ಖಾಲಿ ನಿವೇಶನ ನಂ.25, ಫಾರ್ಮ್ 9 & 11 ರ ಪ್ರಕಾರ ಕ್ರಮ ಸಂಖ್ಯೆ.325, ಖಾತಾ ನಂ.57, ಈ ಆಸ್ತಿಯು ಸಿಂಗೇನ ಅಗ್ರಹಾರ ಗ್ರಾಮ, ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ಜಿಲ್ಲೆಯಲ್ಲಿದ್ದು, ಮುತ್ತನಲ್ಲೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿದೆ, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 40 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 30 ಅಡಿ, ಒಟ್ಟು ವಿಸ್ತೀರ್ಣ 1200 ಚದರ ಅಡಿ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ನಂ.12, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ನಿವೇಶನ ನಂ.24, ದಕ್ಷಿಣಕ್ಕೆ: ನಿವೇಶನ ನಂ.26.
ಈ ಆಸ್ತಿಯ ಮಾಲೀಕರು: ಶ್ರೀ ಅಜೀತ್ ಕಿಶೋರ್.
ಮೀಸಲು ಬೆಲೆ : ರೂ. 36,00,000/-   ಇಎಂಡಿ ಮೊತ್ತ: ರೂ.3,60,000/-   ಬಿಡ್ ಗುಣಕ : ರೂ. 50,000/-
ಸ್ವಾಧೀನದ ಪ್ರಕಾರ: ಭೌತಿಕ ಸ್ವಾಧೀನ.
ಭದ್ರತಾ ಸಾಲದಾರ ಯಾವುದಾದರೂ ಋಣಭಾರ ತಿಳಿದಿದ್ದರೆ ವಿವರಗಳು: ಇಲ್ಲ.

2. ಶಾಖೆ: ಅಸೆಟ್ ರಿಕವರಿ ಶಾಖೆ ಬೆಂಗಳೂರು ಉತ್ತರ : ಸಾಲಗಾರರ, ಸಹ-ಅರ್ಜಿದಾರರ, ಮತ್ತು ಜಾಮೀನುದಾರರ ಹೆಸರು ಮತ್ತು ವಿಳಾಸ : 1(ಎ) **ಮೆ॥ ತರುಣ್ ಇಂಟೀರಿಯರ್ಸ್ ಮಾಲೀಕರು: ಶ್ರೀ ಜಗಜೀವನ್ ತರುಣ್,** ನಂ.17, 1ನೇ ಕ್ರಾಸ್, ವಿವೇಕನಗರ ಪೋಸ್ಟ್, ಬೆಂಗಳೂರು-560047. 1(ಬಿ) **ಶ್ರೀ. ಜಗಜೀವನ್ ತರುಣ್** ಬಿನ್ ಜಗಜೀವನ್, ಡಿ.ನಂ.9-59, ಕಮ್ಮಪಲ್ಲೆ ವಿಟಿಸಿ: ಥಾಣೆಬಂಡಾ, ಚಿತ್ತೂರು ಜಿಲ್ಲೆ, ಆಂಧ್ರ ಪ್ರದೇಶ-517004.
ಬರಬೇಕಾದ ಬಾಕಿ ಮೊತ್ತ: ರೂ. 46,68,091.18 (ರೂಪಾಯಿ ನಲವತ್ತಾರು ಲಕ್ಷದ ಅರವತ್ತೆಂಟು ಸಾವಿರದ ತೊಂಭತ್ತೊಂದು ಮತ್ತು ಹದಿನೆಂಟು ಪೈಸೆ ಮಾತ್ರ) ಜೊತೆಗೆ ದಿನಾಂಕ: 31.12.2025 ರಂತೆ ಭವಿಷ್ಯದ ಬಡ್ಡಿ ಮತ್ತು ಇತರೆ ಖರ್ಚುವೆಚ್ಚಗಳು.
ಸ್ಥಿರಾಸ್ತಿಯ ವಿವರ : ಖಾಲಿ ನಿವೇಶನ ನಂ.26, ಖಾತಾ ನಂ.26 & 57, ಈ ಆಸ್ತಿಯು ಸಿಂಗೇನ ಅಗ್ರಹಾರ ಗ್ರಾಮ, ಸರ್ಜಾಪುರ ಹೋಬಳಿ, ಮುತ್ತನಹಳ್ಳಿ ಗ್ರಾಮ ಪಂಚಾಯತ್, ಆನೇಕಲ್ ತಾಲ್ಲೂಕು, ಬೆಂಗಳೂರು-560100ರಲ್ಲಿದೆ ಮತ್ತು ಈ ಆಸ್ತಿಯು ಶ್ರೀ ಜಗಜೀವನ್ ತರುಣ್‌ರವರ ಹೆಸರಿನಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 40 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 30 ಅಡಿ, ಒಟ್ಟು ವಿಸ್ತೀರ್ಣ 1200 ಚದರ ಅಡಿ. ಮತ್ತು ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ನಂ.11, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ನಿವೇಶನ ನಂ.25, ದಕ್ಷಿಣಕ್ಕೆ: ನಿವೇಶನ ನಂ.27.
ಮೀಸಲು ಬೆಲೆ: ರೂ. 38,00,000/-   ಇಎಂಡಿ ಮೊತ್ತ: ರೂ. 3,80,000/-   ಬಿಡ್ ಗುಣಕ : ರೂ.50,000/-
ಸ್ವಾಧೀನದ ಪ್ರಕಾರ: ಭೌತಿಕ ಸ್ವಾಧೀನ
ಭದ್ರತಾ ಸಾಲದಾರ ಯಾವುದಾದರೂ ಋಣಭಾರ ತಿಳಿದಿದ್ದರೆ ವಿವರಗಳು: ಇಲ್ಲ.

3. ಶಾಖೆ: ಅಸೆಟ್ ರಿಕವರಿ ಶಾಖೆ ಬೆಂಗಳೂರು ಉತ್ತರ : ಸಾಲಗಾರರ, ಸಹ-ಅರ್ಜಿದಾರರ, ಮತ್ತು ಜಾಮೀನುದಾರರ ಹೆಸರು ಮತ್ತು ವಿಳಾಸ : 1(ಎ) **ಮೆ॥ ವೆನ್ನೆಲಾ ಇನ್‌ಫ್ರಾ ಮಾಲೀಕರು: ಶ್ರೀಮತಿ ವೆನ್ನೆಲಾ** D/o ಕೆ ಡೇವಿಡ್, ನಂ 6, ನಾರ್ತ್ ಸ್ಟ್ರೀಟ್, ಎ ಕ್ರಾಸ್, ನೀಲಸಂದ್ರ, ಬೆಂಗಳೂರು-560047. 1(ಬಿ) **ಶ್ರೀಮತಿ ವೆನ್ನೆಲಾ** D/o ಕೆ ಡೇವಿಡ್, ಡಿ ನಂ.: 9-66/1, ಕಮ್ಮಪಲ್ಲೆ ಹೆಚ್‌ಡಬ್ಲ್ಯೂ, ವಿಟಿಸಿ: ತಾನೆಬಂಡಾ, ಚಿತ್ತೂರು ಜಿಲ್ಲೆ, ಆಂಧ್ರಪ್ರದೇಶ-517004.
ಬರಬೇಕಾದ ಬಾಕಿ ಮೊತ್ತ: ರೂ. 46,56,026.47 (ರೂಪಾಯಿ ನಲವತ್ತಾರು ಲಕ್ಷದ ಐವತ್ತಾರು ಸಾವಿರದ ಇಪ್ಪತ್ತಾರು ಮತ್ತು ನಲವತ್ತೇಳು ಪೈಸೆ ಮಾತ್ರ) ಜೊತೆಗೆ ದಿನಾಂಕ: 31.12.2025 ರಂತೆ ಭವಿಷ್ಯದ ಬಡ್ಡಿ ಮತ್ತು ಇತರೆ ಖರ್ಚುವೆಚ್ಚಗಳು.
ಸ್ಥಿರಾಸ್ತಿಯ ವಿವರ : ಖಾಲಿ ನಿವೇಶನ ನಂ.24, ಆಸ್ತಿ ನಂ.24, ಫಾರ್ಮ್ 9 ಮತ್ತು 11, ಕ್ರಮ.ಸಂಖ್ಯೆ 119, ಈ ಆಸ್ತಿಯು ಸಿಂಗೇನ ಅಗ್ರಹಾರ ಗ್ರಾಮ, ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ಜಿಲ್ಲೆಯಲ್ಲಿದ್ದು, ಮುತ್ತನಹಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿದೆ, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 40 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 30 ಅಡಿ, ಒಟ್ಟು ವಿಸ್ತೀರ್ಣ 1200 ಚದರ ಅಡಿ. ಈ ಆಸ್ತಿಯು ಶ್ರೀಮತಿ ವೆನ್ನೆಲಾರವರ ಹೆಸರಿನಲ್ಲಿದೆ. ಮತ್ತು ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ನಂ.13, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ನಿವೇಶನ ನಂ.23, ದಕ್ಷಿಣಕ್ಕೆ: ನಿವೇಶನ ನಂ.25.
ಮೀಸಲು ಬೆಲೆ: ರೂ. 38,00,000/-   ಇಎಂಡಿ ಮೊತ್ತ: ರೂ. 3,80,000/-   ಬಿಡ್ ಗುಣಕ : ರೂ.50,000/-
ಸ್ವಾಧೀನದ ಪ್ರಕಾರ: ಭೌತಿಕ ಸ್ವಾಧೀನ
ಭದ್ರತಾ ಸಾಲದಾರ ಯಾವುದಾದರೂ ಋಣಭಾರ ತಿಳಿದಿದ್ದರೆ ವಿವರಗಳು: ಇಲ್ಲ.

4. ಶಾಖೆ: ಅಸೆಟ್ ರಿಕವರಿ ಶಾಖೆ ಬೆಂಗಳೂರು ಉತ್ತರ : ಸಾಲಗಾರರ, ಸಹ-ಅರ್ಜಿದಾರರ, ಮತ್ತು ಜಾಮೀನುದಾರರ ಹೆಸರು ಮತ್ತು ವಿಳಾಸ : ಶ್ರೀ ಮಹೇಶ್ ಎಲ್ (ಇವರ ಮರಣದ ನಂತರ) ಪ್ರತಿನಿಧಿಸುವ ಕಾನೂನುಬದ್ಧ ಉತ್ತರಾಧಿಕಾರಿಗಳು:- (ಎ) ಶ್ರೀಮತಿ ದೇವಕಿ ಕೋಂ ಲೇಟ್ ಮಹೇಶ್ ಎಲ್, ನಂ.1760, 4ನೇ ಕ್ರಾಸ್, 3ನೇ ಬ್ಲಾಕ್, HRBR ಲೇಔಟ್, ಹೆಣ್ಣೂರು ಮುಖ್ಯ ರಸ್ತೆ, ಬೆಂಗಳೂರು-560084. (ಬಿ) **Minor Children's represented by Guardian :- ಶ್ರೀಮತಿ ದೇವಕಿ ಕೋಂ ಲೇಟ್ ಮಹೇಶ್ ಎಲ್,** ನಂ.1760, 4ನೇ ಕ್ರಾಸ್, 3ನೇ ಬ್ಲಾಕ್, HRBR ಲೇಔಟ್, ಹೆಣ್ಣೂರು ಮುಖ್ಯ ರಸ್ತೆ, ಬೆಂಗಳೂರು-560084. **ಜಾಮೀನುದಾರರು: (ಎ) ಶ್ರೀ ಹರೀಶ್ ಕುಮಾರ್** ಕೋಂ ಶ್ರೀ ಲಕ್ಷ್ಮಿ ನಾರಾಯಣ, ನಂ.25, 4ನೇ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003. (ಬಿ) **ಶ್ರೀಮತಿ ರತ್ನಮ್ಮ** ಕೋಂ ಶ್ರೀ ಲಕ್ಷ್ಮಿ ನಾರಾಯಣ, ನಂ.25, 4ನೇ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003.
ಬರಬೇಕಾದ ಬಾಕಿ ಮೊತ್ತ: ರೂ. 4,86,66,203.87 (ರೂಪಾಯಿ ನಾಲ್ಕು ಕೋಟಿ ಎಂಭತ್ತಾರು ಲಕ್ಷದ ಅರವತ್ತಾರು ಸಾವಿರದ ಎರಡುನೂರ ಮೂರು ಮತ್ತು ಎಂಭತ್ತೇಳು ಪೈಸೆ ಮಾತ್ರ) ಜೊತೆಗೆ ದಿನಾಂಕ: 31.12.2025 ರಂತೆ ಭವಿಷ್ಯದ ಬಡ್ಡಿ ಮತ್ತು ಇತರೆ ಖರ್ಚುವೆಚ್ಚಗಳು.
ಭದ್ರತಾ ಆಸ್ತಿಯ ವಿವರ: ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಭಾಗದ ಕಮರ್ಷಿಯಲ್ ಆಸ್ತಿಯ ಹಳೆ ಸರ್ವೆ ನಂ.43, ಹೊಸ ಸರ್ವೆ ನಂ.43/2, ಹನುಮಂತಪುರ ಗ್ರಾಮ, ಬೆಂಗಳೂರು ತಾಲ್ಲೂಕು, ನಂತರ ಕಾರ್ಪೋರೇಷನ್ ಮುನಿಸಿಪಲ್ ನಂ.230, ನಂತರ ಕಾರ್ಪೋರೇಷನ್ ಮುನಿಸಿಪಲ್ ನಂ.174, ಸುಬೇದಾರ್ ಛತ್ರಂ ರಸ್ತೆ, ಬೆಂಗಳೂರು ಸಿಟಿ, ಪ್ರಸ್ತುತ ಕಾರ್ಪೋರೇಷನ್ ಮುನಿಸಿಪಲ್ ನಂ.174/2, ನಾಟಕ ರತ್ನ ಗುಬ್ಬಿ ವೀರಣ್ಣ ರಸ್ತೆ, ಕಾರ್ಪೊರೇಷನ್ ವಾರ್ಡ್ ನಂ.27, ಪಿಐಡಿ ನಂ.27-13-174/2, ಬೆಂಗಳೂರು, (ಕಮರ್ಷಿಯಲ್ ಆಸ್ತಿ), ವಿಸ್ತೀರ್ಣ ಪೂರ್ವಕ್ಕೆ: 141' (ಒಂದುನೂರ ನಲವತ್ತೊಂದು ಅಡಿ), ಪಶ್ಚಿಮಕ್ಕೆ: 145' (ಒಂದುನೂರ ನಲವತ್ತೈದು ಅಡಿ), ಉತ್ತರಕ್ಕೆ: 40' (ನಲವತ್ತು ಅಡಿ) ಮತ್ತು ದಕ್ಷಿಣಕ್ಕೆ: 13' (ಹದಿಮೂರು ಅಡಿ) ಮತ್ತು ಚಕ್ಕುಬಂದಿ: ಪೂರ್ವಕ್ಕೆ: 13 ಅಡಿ ರಸ್ತೆ, ಪಶ್ಚಿಮಕ್ಕೆ: ಶ್ರೀ ಎನ್ ಬಾಲಕೃಷ್ಣಯ್ಯ ಅವರ ಹಳೆ ಸರ್ವೆ ನಂ.43, ಹೊಸ ಸರ್ವೆ ನಂ.43/2 ರ ಆಸ್ತಿಯ ಭಾಗ, ಉತ್ತರಕ್ಕೆ: ಸುಬೇದಾರ್ ಛತ್ರಂ ರಸ್ತೆ, ದಕ್ಷಿಣಕ್ಕೆ: ಶ್ರೀ ಎಂ ಒ ಪಾರ್ಥಸಾರಥಿ ಅವರ ಆಸ್ತಿಯ ಹಳೆ ಸರ್ವೆ ನಂ.43, ಹೊಸ ಸರ್ವೆ ನಂ.43/2.
ಮೀಸಲು ಬೆಲೆ: ರೂ. 5,57,50,000/-   ಇಎಂಡಿ ಮೊತ್ತ: ರೂ. 55,75,000/-   ಬಿಡ್ ಗುಣಕ : ರೂ.2,00,000/-
ಸ್ವಾಧೀನದ ಪ್ರಕಾರ: ಭೌತಿಕ ಸ್ವಾಧೀನ
ನ್ಯಾಯಾಲಯಗಳು/ನ್ಯಾಯಮಂಡಳಿಗಳು ಇತ್ಯಾದಿಗಳಲ್ಲಿ ಸುರಕ್ಷಿತ ಸಾಲಗಾರ ಆಸ್ತಿಯ ವಿರುದ್ಧ ಬಾಕಿ ಇರುವ ಸ್ಟೇ / ಯಥಾಸ್ಥಿತಿ / ಮೊಕದ್ದಮೆಯ ವಿವರಗಳು : ಗೌರವಾನ್ವಿತ ಡಿಆರ್‌ಟಿ-1, ಬೆಂಗಳೂರಿನ ಹಿಂದ ಸಂಖ್ಯೆ : ಎಸ್‌ಎ/662/2025 & ಎಸ್‌ಎ/2/2026. ಗೌರವಾನ್ವಿತ ಹೈಕೋರ್ಟ್ ಆಫ್ ಕರ್ನಾಟಕ ದ ಹಿಂದಿನ ಸಂಖ್ಯೆ : ಡಬ್ಲ್ಯೂಪಿ/31103/2025 ಮತ್ತು ಡಬ್ಲ್ಯೂಪಿ/36619/2025

5. ಶಾಖೆ: ಅಸೆಟ್ ರಿಕವರಿ ಶಾಖೆ ಬೆಂಗಳೂರು ಉತ್ತರ : ಸಾಲಗಾರರ, ಸಹ-ಅರ್ಜಿದಾರರ, ಮತ್ತು ಜಾಮೀನುದಾರರ ಹೆಸರು ಮತ್ತು ವಿಳಾಸ : (1) **ಶ್ರೀ ಇನಾಯತುಲ್ಲಾ ಅಬ್ದುರಹಮಾನ್ ಅಸ್ಕರಿ,** ಬಿನ್ ಅಬ್ದುರಹಮಾನ್ ಅಸ್ಕರಿ, ನಂ.37/1, ಅಸ್ಕರಿ ಹೌಸ್, ಡೋಂಗರಪಲ್ಲಿ, ಭಟ್ಕಳ, ಕಾರವಾರ, ಕರ್ನಾಟಕ-581320, (2) **ಸಹ-ಅರ್ಜಿದಾರರು/ಜಾಮೀನುದಾರರು (ಜಿಪಿಎ ಹೊಂದಿರುವವರು) : ಸೈಯದ್ ಮುಸ್ತಹೀಬ್** ಬಿನ್ ಸೈಯದ್ ಮೊಹ್ಸಿನ್ ಬಾಫಕ್ಕಿ, ನಂ.13, 2ನೇ ಮಹಡಿ, 5ನೇ ಮುಖ್ಯರಸ್ತೆ, ಸಿಎಸ್‌ಐ ಚರ್ಚ್ ಎದುರು, ಜೆಸಿ ನಗರ, ಬೆಂಗಳೂರು ನಗರ-560006.
ಬರಬೇಕಾದ ಬಾಕಿ ಮೊತ್ತ: ರೂ. 3,90,04,866.43 (ರೂಪಾಯಿ ಮೂರು ಕೋಟಿ ತೊಂಭತ್ತು ಲಕ್ಷದ ನಾಲ್ಕು ಸಾವಿರದ ಎಂಟುನೂರ ಅರವತ್ತಾರು ಮತ್ತು ನಲವತ್ತಮೂರು ಪೈಸೆ ಮಾತ್ರ) ಜೊತೆಗೆ **ದಿನಾಂಕ: 30.11.2025 ರಂತೆ** ಭವಿಷ್ಯದ ಬಡ್ಡಿ ಮತ್ತು ಇತರೆ ಖರ್ಚುವೆಚ್ಚಗಳು.
ಸ್ಥಿರಾಸ್ತಿಯ ವಿವರ : ಷೆಡ್ಯೂಲ್ ಆಸ್ತಿ: ಷೆಡ್ಯೂಲ್ ಎ ಆಸ್ತಿ: ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ಪರಿವರ್ತಿತ ಸರ್ವೆ ನಂ.119/2 , ಪ್ರಸ್ತುತ ಖಾತಾ ಸಂಖ್ಯೆ.92/180, (ದಿನಾಂಕ 21.10.2011 ರಂದು ಉಪ ಆಯುಕ್ತರು, ಬೆಂಗಳೂರು ಜಿಲ್ಲೆ, ಬೆಂಗಳೂರು ರವರು ಹೊರಡಿಸಿರುವ ಪರಿವರ್ತಿತ ಆದೇಶ ಸಂಖ್ಯೆ.ALN (A) (S.H) SR:98A/2011-12 ರ ಪ್ರಕಾರ ಆಸ್ತಿಯನ್ನು ಪರಿವರ್ತಿಸಲಾಗಿದೆ) ಈ ಆಸ್ತಿಯು ಎಸ್.ಮಾದೇಹಳ್ಳಿ ಗ್ರಾಮ, ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ಜಿಲ್ಲೆ, ಬೆಂಗಳೂರಿನಲ್ಲಿದೆ. ವಿಸ್ತೀರ್ಣ 1 ಎಕರೆ 32 ಗುಂಟೆಗಳು ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಆಸ್ತಿಯ ಸರ್ವೆ ನಂ.119/3, ಪಶ್ಚಿಮಕ್ಕೆ: ಆಸ್ತಿಯ ಸರ್ವೆ ನಂ.119/1, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಆಸ್ತಿಯ ಸರ್ವೆ ನಂ.117.
ಷೆಡ್ಯೂಲ್ ಬಿ ಆಸ್ತಿ: (ಆಸ್ತಿಯನ್ನು ಸಾಲಗಾರರು ಸ್ವಾಧೀನಪಡಿಸಿಕೊಂಡಿದ್ದಾರೆ): ವಿಸ್ತೀರ್ಣ 2314.15 ಚದರ ಅಡಿ ಅವಿಭಾಜಿತ ಪಾಲು, ಹಕ್ಕು, ಶೀರ್ಷಿಕೆ ಮತ್ತು ಹಿತಾಸಕ್ತಿಯನ್ನು ಷೆಡ್ಯೂಲ್ "ಎ" ಆಸ್ತಿಯಲ್ಲಿ ಹೊಂದಿದೆ.
ಷೆಡ್ಯೂಲ್ ಸಿ ಆಸ್ತಿ: (ಷೆಡ್ಯೂಲ್ 'ಎ' ಆಸ್ತಿಯ ಸ್ವಾಧೀನಕ್ಕೆ ಅನುಗುಣವಾದ ವಿಲೇಮೆಂಟ್ ವಿವರಣೆ): ವಿಲೇಮೆಂಟ್ ಸಂಖ್ಯೆ.180/1ಎ ಅನ್ನು "ಎ" ಎಂದೂ ಕರೆಯುತ್ತಾರೆ, ಪ್ರಸ್ತುತ ಆರ್‌ಡಿಪಿಆರ್ ಪಿಐಡಿ ನಂ.150200102701020432, "ವೈಷ್ಣವಿ ಅನಂತ್ಯ" ಎಂದು ಕರೆಯಲ್ಪಡುವ ಅಪಾರ್ಟ್‌ಮೆಂಟ್ ಕಟ್ಟಡದ ಸೂಪರ್ ಬಿಲ್ಟ್ ಅಪ್ ಪ್ರದೇಶದ ವಿಸ್ತೀರ್ಣ 5079 ಚದರ ಅಡಿ (ಬಿಲ್ಟ್‌ಅಪ್ ಪ್ರದೇಶ / ಪ್ಲಿಂತ್ ಪ್ರದೇಶದ ವಿಸ್ತೀರ್ಣ 3780.59 ಚದರ ಅಡಿ) ನಿರ್ಮಿಸಲಾಗಿದೆ. ಬೇಸ್ಮೆಂಟ್, ನೆಲಮಹಡಿ, ಮೊದಲನೇ ಮಹಡಿ ಮತ್ತು ಎರಡನೇ ಮಹಡಿಗಳನ್ನೊಳಗೊಂಡಿದ್ದು ವಿಟ್ರಿಫೈಡ್ ಫ್ಲೋರಿಂಗ್, ಜೊತೆಗೆ ಮುಚ್ಚಿದ ಕಾರ್ ಪಾರ್ಕಿಂಗ್ ಸ್ಥಳವನ್ನು ಒಳಗೊಂಡಿರುತ್ತದೆ, ವಿಲೇಮೆಂಟ್ ಪ್ರಾಜೆಕ್ಟ್‌ನಲ್ಲಿ ಸಾಮಾನ್ಯ ಬಳಕೆಯ ಇತರ ಪ್ರದೇಶಗಳಲ್ಲಿ ಅನುಪಾತದ ಪಾಲನ್ನು ಒಳಗೊಂಡಿದೆ. ವಿಲೇಮೆಂಟ್ ನಂ.180/1ಎ ಅನ್ನು "ಎ" ಎಂದೂ ಕರೆಯುತ್ತಾರೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ : ಬೌಲೆವಾರ್ಡ್ ಮಯೂರ್ ಡ್ಯಾಫೋಡಿಲ್ಸ್, ಪಶ್ಚಿಮಕ್ಕೆ : ವಿಲೇಮೆಂಟ್ ಸಂಖ್ಯೆ 180/14ಬಿ, ಉತ್ತರಕ್ಕೆ: ಪ್ಯಾಸೇಜ್ ಗೇಟೆಡ್ ಕಮ್ಯುನಿಟಿ, ದಕ್ಷಿಣಕ್ಕೆ: ವಿಲೇಮೆಂಟ್ ಸಂಖ್ಯೆ: 180/2ಎ.
ಆಸ್ತಿಯ ಮಾಲೀಕರ ಹೆಸರು: ಇನಾಯತುಲ್ಲಾ ಅಬ್ದುರಹ್ಮಾನ್ ಅಸ್ಕರಿ.
ಮೀಸಲು ಬೆಲೆ: ರೂ. 1,91,00,000/-   ಇಎಂಡಿ ಮೊತ್ತ: ರೂ. 19,10,000/-   ಬಿಡ್ ಗುಣಕ : ರೂ.2,00,000/-
ಸ್ವಾಧೀನದ ಪ್ರಕಾರ: ಭೌತಿಕ ಸ್ವಾಧೀನ
ಭದ್ರತಾ ಸಾಲದಾರ ಯಾವುದಾದರೂ ಋಣಭಾರ ತಿಳಿದಿದ್ದರೆ ವಿವರಗಳು: ಇಲ್ಲ.

ಆಸ್ತಿ/ಆಸ್ತಿಗಳ ಮೊದಲ ಬಿಡ್ ಮೀಸಲು ಬೆಲೆ ಮತ್ತು ಒಂದು ಬಿಡ್ ಗುಣಾಂಕ ಯಾವಾಗಲೂ ಹೆಚ್ಚಳವಾಗಿರುತ್ತದೆ. ಈ ಮೊತ್ತವು ಬಿಡ್ಡಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಕನಿಷ್ಠ ಬಿಡ್ ಮೊತ್ತವಾಗಿರುತ್ತದೆ.

ಭದ್ರತಾ ಸಾಲದಾರ ಯಾವುದಾದರೂ ಋಣಭಾರ ತಿಳಿದಿದ್ದರೆ ವಿವರಗಳು: ಆದಾಗ್ಯೂ, ಉದ್ದೇಶಿತ ಬಿಡ್‌ದಾರರ ಋಣಭಾರಗಳು, ಆಸ್ತಿಯ ವಿರುದ್ಧ ಬಾಕಿ ಇರುವ ಯಾವುದೇ ನ್ಯಾಯಾಲಯದ ಪ್ರಕರಣಗಳು, ಹರಾಜಿಗೆ ಇಡಲಾದ ಆಸ್ತಿಯ ಶೀರ್ಷಿಕೆ ಮತ್ತು ಆಸ್ತಿಯ ಮೇಲೆ ಪರಿಣಾಮ ಬೀರುವ ಹಕ್ಕುಗಳು / ಹಕ್ಕುಗಳು/ ಬಾಕಿಗಳು, ಉದಾಹರಣೆಗೆ ವಿದ್ಯುತ್ ಬಿಲ್, ನೀರಿನ ಬಿಲ್, ಬಾಕಿ ಇರುವ ಸಿಎಎಂ ಶುಲ್ಕಗಳು, ಸಂಘಕ್ಕೆ ಸಂಬಂಧಿಸಿದಂತೆ ಬಾಕಿ ಇರುವ ಶುಲ್ಕಗಳು, ಖಾತಾ ವರ್ಗಾವಣೆ ಮತ್ತು ಆಸ್ತಿ ತೆರಿಗೆ ಇತ್ಯಾದಿಗಳ ಬಗ್ಗೆ ತಮ್ಮ ಬಿಡ್ ಸಲ್ಲಿಸುವ ಮೊದಲು ತಮ್ಮದೇ ಆದ ಸ್ವತಂತ್ರ ವಿಚಾರಣೆಯನ್ನು ನಡೆಸಬೇಕು. ಮಾರಾಟ ದೃಢಪಡಿಸಿದ ನಂತರ/ಹರಾಜು ಮುಕ್ತಾಯಗೊಂಡ ನಂತರ, ಹೆಚ್1 ಬಿಡ್ಡರ್‌ಗಳು ಪಾವತಿಸಿದ ಮಾರಾಟ ಬೆಲೆಯ ಮಾರಾಟವನ್ನು ರದ್ದುಗೊಳಿಸಲು / ಮರುಪಾವತಿ ಮಾಡಲು ಯಾವುದೇ ವಿನಂತಿಯನ್ನು ಪರಿಗಣಿಸಲಾಗುವುದಿಲ್ಲ.
ಯಶಸ್ವಿ ಬಿಡ್ದಾರನು ಇ - ಖಾತಾ ಮತ್ತು ನಂತರದ ಮಾರಾಟ ಪ್ರಮಾಣಪತ್ರದ ನೋಂದಣಿಯನ್ನು ಪಡೆಯಲು ತನ್ನದೇ ಆದ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು.
ಖಾತೆಯನ್ನು ಹೊಂದಿರುವ ಸಂಖ್ಯೆ 800001980050000 A/C ಹೆಸರು : Inward RTGS IFSC ಕೋಡ್: UBIN0580007
ಹರಾಜಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ eauctionhelpdesk@unionbankofindia.bank ಅಥವಾ arb.bengalurunorth@unionbankofindia.bank ಗೆ ಇಮೇಲ್ ಮಾಡಿ ಅಥವಾ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಅಸೆಟ್ ರಿಕವರಿ ಶಾಖೆ, ಬೆಂಗಳೂರು ಉತ್ತರ, ನಂ.1234, 1ನೇ ಮಹಡಿ, 4ನೇ ಮುಖ್ಯ ರಸ್ತೆ, ಚಂದ್ರ ಲೇಔಟ್ ಬಸ್ ನಿಲ್ದಾಣದ ಎದುರು, ಚಂದ್ರ ಲೇಔಟ್, ಬೆಂಗಳೂರು-560040 ಅನ್ನು ಸಂಪರ್ಕಿಸಿ. ಮುಖ್ಯ ವ್ಯವಸ್ಥಾಪಕ ಶ್ರೀ ಸಿರಿಲ್ ಮೊಂತೆರೊ ಸಂಪರ್ಕ ಸಂಖ್ಯೆ 9825766633.

ಇ-ಹರಾಜಿನ ದಿನಾಂಕ ಮತ್ತು ಸಮಯ: ದಿನಾಂಕ : 13.02.2026 (ಶುಕ್ರವಾರ) ರಂದು ಮಧ್ಯಾಹ್ನ 12.00 ರಿಂದ ಸಂಜೆ 5.00 ಗಂಟೆಯವರೆಗೆ (10 ನಿಮಿಷ ಅನಿಯಮಿತ ಸ್ವಯಂ ವಿಸ್ತರಣೆಗಳೊಂದಿಗೆ)
ಇಎಂಡಿ ಸಲ್ಲಿಸಲು ಕೊನೆಯ ದಿನಾಂಕ : ಇ-ಹರಾಜು ಪ್ರಾರಂಭವಾಗುವ ಮುನ್ನ ಅಥವಾ ಮೊದಲು

ಗಮನಿಸಿ: (1) ಉದ್ದೇಶಿತ ಖರೀದಿದಾರರು **https://baanknet.com (Buyer Registration – link provided in the home page of the website)** ಮೂಲಕ ನೋಂದಾಯಿಸಿಕೊಳ್ಳಬೇಕು.
ಇಎಂಡಿ ಮೊತ್ತವನ್ನು (10%) **https://baanknet.com** ಮೂಲಕ ಪಾವತಿಸಬೇಕು ಮತ್ತು ಬಾಕಿ ಮೊತ್ತ ಮಾರಾಟದ ಸೂಚನೆಯಲ್ಲಿ ನಮೂದಿಸಲಾದ ಖಾತೆ ಸಂಖ್ಯೆಯ ಮೂಲಕ ಮಾರಾಟದ ಬೆಲೆಯನ್ನು ಪಾವತಿಸಬೇಕು. ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ಕೆಳಗೆ ತಿಳಿಸಿದ ಬ್ಯಾಂಕ್‌ಗಳ ವೆಬ್‌ಸೈಟ್‌ನಂತೆ ಒದಗಿಸಲಾದ ಲಿಂಕ್ ಅನ್ನು ನೋಡಿ ಮತ್ತು ಇ-ಹರಾಜು ಏಜೆಂಟ್ ವೆಬ್‌ಸೈಟ್. ಡಿಜಿಟಲ್ ಸಹಿ ಕಡ್ಡಾಯವಲ್ಲ.

www.unionbankofindia.co.in | https://baanknet.com

ದಿನಾಂಕ: 23.01.2026
ಸ್ಥಳ : ಬೆಂಗಳೂರು
ಸಹಿ/- ಅಧಿಕೃತ ಅಧಿಕಾರಿ
ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ

ಕೆನರಾ ಬ್ಯಾಂಕ್ Canara Bank
SyndicateBank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಎಆರ್‌ಎಂ-1 ಶಾಖೆ,
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್,
ಎಂ.ಜಿ. ರಸ್ತೆ, ಬೆಂಗಳೂರು-560001
ದೂ: 080-25310066, ಇ-ಮೇಲ್: cb2366@canarabank.com

ಹರಾಜು ಮಾರಾಟ ಪ್ರಕಟಣೆ

ಪ್ರೊವಿಜೊ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಇ-ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಚರಾಸ್ತಿ/ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ (2366), ಬೆಂಗಳೂರು** ರವರು ಸಾಂಕೇತಿಕವಾಗಿ ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು **ದಿನಾಂಕ: 10.02.2026 (ಬೆಳಿಗ್ಗೆ 10.30 ರಿಂದ ಬೆಳಿಗ್ಗೆ 11.00 ರವರೆಗೆ)** ರಂದು ಸ್ವತ್ತನ್ನು **"ಎಲ್ಲಿದೆಯೊ ಹಾಗೆ", "ಏನಿದೆಯೊ ಹಾಗೆ","ಹೇಗಿದೆಯೋ ಹಾಗೆ"** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು ಸಂದಾಯವಾಗತಕ್ಕ ಮೊಬಲಗು: **ರೂ. 3,37,81,956.28 (ರೂಪಾಯಿ ಮೂರು ಕೋಟಿ ಮೂವತ್ತೇಳು ಲಕ್ಷದ ಎಂಭತ್ತೊಂದು ಸಾವಿರದ ಒಂಭೈನೂರ ಐವತ್ತಾರು ಮತ್ತು ಇಪ್ಪತ್ತೆಂಟು ಪೈಸೆ ಮಾತ್ರ) ಜೊತೆಗೆ ದಿನಾಂಕ: 20.01.2026** ರಂದು ಇದ್ದಂತೆ ಮತ್ತು ಜೊತೆಗೆ ಬಡ್ಡಿ ಇತರೆ ಖರ್ಚು ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ. **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ (2366), ಬೆಂಗಳೂರು** ರವರಿಂದ ಸಾಲಗಾರರಾದ: **(1) M/s Nature Home Care Products,** (2) **ಶ್ರೀ. ಜಿ ಕೆ ರಾಮಚಂದ್ರ** ಬಿನ್ ಲೇಟ್ ಕೃಷ್ಣಪ್ಪ, **ಇವರಿಬ್ಬರ ವಿಳಾಸ:** ನಂ. #43, 1ನೇ ಮುಖ್ಯ ವಳಗೇರಹಳ್ಳಿ, ಕೆಂಗೇರಿ, ಚಿತ್ರಕೂಟ ಶಾಲೆಯ ಹತ್ತಿರ, ಬೆಂಗಳೂರು-560056. **ಪ್ರಸ್ತುತ ವಿಳಾಸ: ಶ್ರೀ. ಜಿ ಕೆ ರಾಮಚಂದ್ರ** ನಂ.#06, 1ನೇ ಮೇನ್, 9ನೇ ಕ್ರಾಸ್, ಎಂಟಿಎಸ್ ಲೇಔಟ್, ಕೆ ಎಸ್ ಟೌನ್, ಬೆಥೆಸ್ಡಾ ಹೈ ಎದುರು, ಬೆಂಗಳೂರು-560050. ಇವರುಗಳಿಗೆ ಸಾಲವನ್ನು ನೀಡಿರುತ್ತದೆ.
ಅರ್ನೆಸ್ಟ್ ಹಣವನ್ನು **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ **ದಿನಾಂಕ: 09.02.2026 ರ ಸಂಜೆ 5.00 ಗಂಟೆಯೊಳಗೆ** ಠೇವಣಿ ಮಾಡಬೇಕು. (₹. ಲಕ್ಷಗಳಲ್ಲಿ)

ಕ್ರ. ಸಂ	ಸ್ಥಿರಾಸ್ತಿ ವಿವರಣೆ:	ಮೀಸಲು ಬೆಲೆ	ಇಎಂಡಿ ಮೊತ್ತ	ಬಿಡ್‌ನಲ್ಲಿ ಹೆಚ್ಚುತ್ತಿರುವ ಮೌಲ್ಯ	ಆಸ್ತಿ ಪರಿಶೀಲನಾ ದಿನಾಂಕ ಮತ್ತು ಸ್ಥಳ
1	ಆಸ್ತಿಯ ನಿವೇಶನ ನಂ.8/4ಎ, ಅಸೆಸ್‌ಮೆಂಟ್ ನಂ.24/1, ವಳಗೆರೆಹಳ್ಳಿ ಗ್ರಾಮ, ಖಾತಾ ನಂ.49, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 80 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 60 ಅಡಿ, ಒಟ್ಟು ವಿಸ್ತೀರ್ಣ 4800 ಚದರ ಅಡಿ, ಈ ಆಸ್ತಿಯು ಕೆಂಗೇರಿ, ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿದೆ, ಪ್ರಸ್ತುತ ಬೆಂಗಳೂರು ಬಿಬಿಎಂಪಿ ವ್ಯಾಪ್ತಿಯಲ್ಲಿದೆ. ಪೂರ್ವಕ್ಕೆ: ಖಾಸಗಿ ಆಸ್ತಿ, ಪಶ್ಚಿಮಕ್ಕೆ: ಖಾಸಗಿ ಆಸ್ತಿ, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಖಾಸಗಿ ಆಸ್ತಿ. **Coordinates of the property, Latitude- 12.9331210, Longitude- 77.4950220.**	₹. 165.60	₹. 16.56	₹. 1.00	29.01.2026 ಬೆಳಿಗ್ಗೆ 10.00 ರಿಂದ ಸಂಜೆ 2.00 ರವರೆಗೆ ಅಧಿಕೃತ ಅಧಿಕಾರಿಯವರ ಪೂರ್ವ ನಿರ್ಧಾರಿತದಂತೆ

ಎನ್ಕಂಬರೆನ್ಸ್ ಯಾವುದಾದರೂ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ಬಂದಿಲ್ಲ.
ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, 'ಇ-ಹರಾಜು'ಲಿಂಕ್ ಪ್ರೋವೈಡೆಡ್ ಕೆನರಾ ಬ್ಯಾಂಕ್‌ರವರ ವೆಬ್‌ಸೈಟ್: **(www.canarabank.com)** ನಲ್ಲಿ ಒದಗಿಸಲಾಗಿದೆ ಅಥವಾ **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್ **ಮತ್ತು ಮುಖ್ಯ ಪ್ರಬಂಧಕರು, ಕೆನರಾ ಬ್ಯಾಂಕ್, ಎಆರ್‌ಎಂ-। ಶಾಖೆ, ಬೆಂಗಳೂರು** ಮೊಬೈಲ್ ಸಂಖ್ಯೆ: **08025310066, 6381952519 ಮತ್ತು 9483544116** ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 21.01.2026
ಸ್ಥಳ : ಬೆಂಗಳೂರು
ಸಹಿ/- ಅಧಿಕೃತ ಅಧಿಕಾರಿ,
ಕೆನರಾ ಬ್ಯಾಂಕ್

ಕೆನರಾ ಬ್ಯಾಂಕ್ Canara Bank
SyndicateBank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಎಆರ್‌ಎಂ-1 ಶಾಖೆ,
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್,
ಎಂ.ಜಿ. ರಸ್ತೆ, ಬೆಂಗಳೂರು-560001
ದೂ: 080-25310066, ಇ-ಮೇಲ್: cb2366@canarabank.com

ಹರಾಜು ಮಾರಾಟ ಪ್ರಕಟಣೆ

ಪ್ರೊವಿಜೊ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಇ-ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಚರಾಸ್ತಿ/ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ (2366), ಬೆಂಗಳೂರು** ರವರು ಭೌತಿಕವಾಗಿ (ಅನ್ವಯಿಸದಿರುವುದು) ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು **ದಿನಾಂಕ: 10.02.2026 (ಬೆಳಿಗ್ಗೆ 10.00 ರಿಂದ ಬೆಳಿಗ್ಗೆ 11.00 ರವರೆಗೆ)** ರಂದು ಸ್ವತ್ತನ್ನು **"ಎಲ್ಲಿದೆಯೊ ಹಾಗೆ", "ಏನಿದೆಯೊ ಹಾಗೆ","ಹೇಗಿದೆಯೋ ಹಾಗೆ"** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು ಸಂದಾಯವಾಗತಕ್ಕ ಮೊಬಲಗು: **ರೂ. 15,03,39,844/- (ರೂಪಾಯಿ ಹದಿನೈದು ಕೋಟಿ ಮೂರು ಲಕ್ಷದ ಮೂವತ್ತೊಂಭತ್ತು ಸಾವಿರದ ಎಂಟುನೂರ ನಲವತ್ತನಾಲ್ಕು ಮಾತ್ರ) ಜೊತೆಗೆ ದಿನಾಂಕ: 18.01.2026** ರಂದು ಇದ್ದಂತೆ ಮತ್ತು ಜೊತೆಗೆ ಬಡ್ಡಿ ಇತರೆ ಖರ್ಚು ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ. **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ (2366), ಬೆಂಗಳೂರು** ರವರಿಂದ ಸಾಲಗಾರರಾದ: **(1) ಮೆ॥ ಜ್ಯೋತ್ಸ್ನಾರೆಡ್ಡಿ ಹಾಸ್ಪಿಟಲ್ ಪ್ರೈವೇಟ್ ಲಿಮಿಟೆಡ್,** ಮಾರುತಿ ಪಟಾಲಪ್ಪ ಕಾಂಪ್ಲೆಕ್ಸ್ ಸಂಖ್ಯೆ 9, ಅಕ್ಷಯನಗರ ಟಿಸಿ ಪಾಳ್ಯ ಮುಖ್ಯರಸ್ತೆ, ಕೋವೇದೇನಹಳ್ಳಿ, ಬೆಂಗಳೂರು-560016. **(2) ಶ್ರೀ ಡಾ. ವೈ ರಾಘವೇಂದ್ರ ರೆಡ್ಡಿ** ಕೋಂ ವೈ ನಾರಪ ರೆಡ್ಡಿ, ನಂ. 308, ಹೆಚ್‌ಆರ್‌ಬಿಆರ್ ಲೇಔಟ್, 1ನೇ ಬ್ಲಾಕ್, 8ನೇ ಇ ಮುಖ್ಯರಸ್ತೆ, ಕಲ್ಯಾಣ್ ನಗರ, ಬೆಂಗಳೂರು-560043. **(3) ಶ್ರೀಮತಿ. ಕೆ ಪ್ರಮೋದಾ** ಕೋಂ ಕೆ ರಾಮಚಂದ್ರ ರೆಡ್ಡಿ, ನಂ. 12-3-790, ಜೀಸಸ್ ನಗರ, ಜಯಮನ್ನಮ್ಮ ಕಲ್ಯಾಣಮಂಟಪಂ ಹತ್ತಿರ, ಅನಂತಪುರ, ಆಂಧ್ರಪ್ರದೇಶ-515001 **(4) ಶ್ರೀಮತಿ. ಯರ್ರಗುಂಟ ಹೇಮಾವತಿ,** ಡಿ. ನಂ. 12-2-416, 3ನೇ ಕ್ರಾಸ್, ಹರಿಹರ ನಗರ ಪಶ್ಚಿಮ, ಅನಂತಪುರ, ಆಂಧ್ರಪ್ರದೇಶ-515001 **(5) ಶ್ರೀಮತಿ. ಕೆ ಚೆನ್ನಕೇಶವಮ್ಮ** ಕೋಂ ಕೆ ರಾಮಚಂದ್ರ ರೆಡ್ಡಿ, ನಂ. 12-3-790, ಜೀಸಸ್ ನಗರ, ಜಯಮನ್ನಮ್ಮ ಕಲ್ಯಾಣಮಂಟಪಂ ಹತ್ತಿರ, ಅನಂತಪುರ, ಆಂಧ್ರಪ್ರದೇಶ-515001. **(6) ಶ್ರೀ. ಕೆ ರಾಮಚಂದ್ರ ರೆಡ್ಡಿ** ಬಿನ್ ಕೆ ಓಬಿ ರೆಡ್ಡಿ, ನಂ. 12-3-790, ಜೀಸಸ್ ನಗರ, ಜಯಮನ್ನಮ್ಮ ಹತ್ತಿರ, ಕಲ್ಯಾಣಮಂಟಪಂ, ಅನಂತಪುರ, ಆಂಧ್ರಪ್ರದೇಶ-515001., ಇವರುಗಳಿಗೆ ಸಾಲವನ್ನು ನೀಡಿರುತ್ತದೆ.
ಅರ್ನೆಸ್ಟ್ ಹಣವನ್ನು **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ **ದಿನಾಂಕ: 09.02.2026 ರ ಸಂಜೆ 5.00 ಗಂಟೆಯೊಳಗೆ** ಠೇವಣಿ ಮಾಡಬೇಕು. (₹. ಲಕ್ಷಗಳಲ್ಲಿ)

ಕ್ರ. ಸಂ	ಸ್ಥಿರಾಸ್ತಿ ವಿವರಣೆ:	ಮೀಸಲು ಬೆಲೆ	ಇಎಂಡಿ ಮೊತ್ತ	ಬಿಡ್‌ನಲ್ಲಿ ಹೆಚ್ಚುತ್ತಿರುವ ಮೌಲ್ಯ	ಆಸ್ತಿ ಪರಿಶೀಲನಾ ದಿನಾಂಕ ಮತ್ತು ಸ್ಥಳ
1	**ಐಟಂ ನಂ.1: ನೋಂದಾಯಿತ ಮಾರಾಟ ಪತ್ರ ಸಂಖ್ಯೆ.211/2005 ರ ಪ್ರಕಾರ.** ವಾಸಯೋಗ್ಯ ಬಿಲ್ಡಿಂಗ್ ಹೊಂದಿರುವ ಆಸ್ತಿಯು ಅನಂತಪುರ ಮುನಿಸಿಪಲ್ ಕಾರ್ಪೋರೇಷನ್ ಪ್ರದೇಶ ಜೊತೆಗೆ ಎಸ್‌ಆರ್ ಡಿ ಮತ್ತು ಆರ್‌ಡಿ ಅನಂತಪುರ, ವಾರ್ಡ್ ನಂ. 12, ಸರ್ವೆ ನಂ. 284/2, ಪ್ಲಾಟ್ ನಂ.7, ಎಲ್‌ಪಿ ನಂ. 26/63, ಜೀಸಸ್ ನಗರ, ಅನಂತಪುರ ಮುನಿಸಿಪಲ್ ಕಾರ್ಪೋರೇಷನ್, ಅನಂತಪುರಂ ಜಿಲ್ಲೆ, ಆಂಧ್ರಪ್ರದೇಶ, ಚಕ್ಕುಬಂದಿ : ಪೂರ್ವಕ್ಕೆ: ಪ್ಲಾಟ್ ನಂ.12, ದಕ್ಷಿಣಕ್ಕೆ: ಕೆ.ರಾಮಚಂದ್ರ ರೆಡ್ಡಿ ರವರ ಪ್ಲಾಟ್ ನಂ.7ರ ಉಳಿಕೆ ಭಾಗ, ಪಶ್ಚಿಮಕ್ಕೆ: 40 ಅಡಿ ರಸ್ತೆ, ಉತ್ತರಕ್ಕೆ: ಪ್ಲಾಟ್ ನಂ.6. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 72 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 24 ಅಡಿ, ಒಟ್ಟು ವಿಸ್ತೀರ್ಣ 1728 ಚದರ ಅಡಿ ಅಥವಾ 193.6 ಚದರ ಯಾರ್ಡ್ಸ್. **ಐಟಂ ನಂ.2: ನೋಂದಾಯಿತ ಮಾರಾಟ ಪತ್ರ ಸಂಖ್ಯೆ.212/2005 ರ ಪ್ರಕಾರ.** ವಾಸಯೋಗ್ಯ ಕಟ್ಟಡ ಜೊತೆಗೆ ಅನಂತಪುರ ಮುನಿಸಿಪಲ್ ಕಾರ್ಪೋರೇಷನ್ ಪ್ರದೇಶ ಜೊತೆಗೆ ಎಸ್‌ಆರ್‌ಡಿ ಮತ್ತು ಆರ್‌ಡಿ, ಅನಂತಪುರ, ವಾರ್ಡ್ ನಂ. 12, ಸರ್ವೆ ನಂ. 284/2, ಪ್ಲಾಟ್ ನಂ. 7, ಎಲ್‌ಪಿ ನಂ. 26/63, ಜೀಸಸ್ ನಗರ, ಅನಂತರಪುರ ಮುನಿಸಿಪಲ್ ಕಾರ್ಪೋರೇಷನ್, ಅನಂತಪುರ ಜಿಲ್ಲೆ, ಆಂಧ್ರಪ್ರದೇಶ. ಚಕ್ಕುಬಂದಿ : ಪೂರ್ವಕ್ಕೆ: ಪ್ಲಾಟ್ ನಂ. 12, ದಕ್ಷಿಣಕ್ಕೆ: ವಿ.ವೆಂಕಟರಾಮಿ ರೆಡ್ಡಿ ರವರ ಮನೆ, ಪಶ್ಚಿಮಕ್ಕೆ: 40 ಅಡಿ ರಸ್ತೆ, ಉತ್ತರಕ್ಕೆ: ಚನ್ನಕೇಶವಮ್ಮ ರವರ ಪ್ಲಾಟ್ ನಂ. 7 ರವರ ಉಳಿಕೆ ಭಾಗ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 72 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 36 ಅಡಿ, ಒಟ್ಟು ವಿಸ್ತೀರ್ಣ 2592 ಚದರ ಅಡಿ ಅಥವಾ 290.04 ಚದರ ಯಾರ್ಡ್ಸ್. ಮೇಲಿನ ಅಂಶಗಳ ಸಂಖ್ಯೆ ಎ ಮತ್ತು ಬಿ ಪಕ್ಕದ ಪ್ಲಾಟ್‌ಗಳಾಗಿವೆ. ಶ್ರೀಮತಿ. ಕೆ ಚೆನ್ನಕೇಶವಮ್ಮ ಮತ್ತು ಶ್ರೀ. ಕೆ ರಾಮಚಂದ್ರ ರೆಡ್ಡಿ ರವರು ಡೋರ್ ನಂ. 12-3-790 ಅಸೆಸ್‌ಮೆಂಟ್ ನಂ.1001046170ರ ಮನೆಯನ್ನು ನಿರ್ಮಿಸಿದ್ದಾರೆ.	ರೂ. 2,08,04,000/- (ರೂಪಾಯಿ ಎರಡು ಕೋಟಿ ಎಂಟು ಲಕ್ಷದ ನಾಲ್ಕು ಸಾವಿರ ಮಾತ್ರ)	ರೂ. 20,81,000/- (ರೂಪಾಯಿ ಇಪ್ಪತ್ತು ಲಕ್ಷದ ಎಂಭತ್ತೊಂದು ಸಾವಿರ ಮಾತ್ರ)	ರೂ. 5,00,000/- (ರೂಪಾಯಿ ಐದು ಲಕ್ಷ ಮಾತ್ರ)	30.01.2026 ಬೆಳಿಗ್ಗೆ 11.00 ರಿಂದ ಸಂಜೆ 4.00 ರವರೆಗೆ ಅಧಿಕೃತ ಅಧಿಕಾರಿಯವರ ಪೂರ್ವ ನಿರ್ಧಾರಿತದಂತೆ
2	ಕಮರ್ಷಿಯಲ್ ಕಟ್ಟಡವು ಅನಂತಪುರಂ ಮುನಿಸಿಪಲ್ ಕಾರ್ಪೋರೇಷನ್ ಪ್ರದೇಶದಲ್ಲಿದ್ದು, ಎಸ್‌ಆರ್‌ಡಿ ಮತ್ತು ಆರ್‌ಡಿ ಅನಂತಪುರಂ ವಾರ್ಡ್ ನಂ.13, ಟಿ.ಎಸ್. ನಂ.2074-1, ಬ್ಲಾಕ್-ಎ, ಪ್ಲಾಟ್ ನಂ.3 ಜೊತೆಗೆ ಶೆಡ್ ಡೋರ್ ನಂ.13-3-367, 13-3-368, ಅಸೆಸ್‌ಮೆಂಟ್ ನಂ.1001049967. ಪೂರ್ವಕ್ಕೆ: ಪಿ ಹಬೀಬ್ ಖಾನ್‌ರವರ ಪ್ಲಾಟ್ ನಂ.3 ಮತ್ತು ಅಖಿಲಾ ಬೇಗಂ ಮತ್ತು ಇತರರ ತೆರೆದ ನಿವೇಶನ, ದಕ್ಷಿಣಕ್ಕೆ: ಪ್ಲಾಟ್ ನಂ.4, ಡಿ ಫಕ್ರುದ್ದೀನ್ ರವರ ಬ್ಲಾಕ್ ಬಿ ಯಲ್ಲಿರುವ ಟಿ ಪಿ ನಂ.79/77, ಪಶ್ಚಿಮಕ್ಕೆ: ಆರ್‌ಟಿಸಿ ಕಾಂಪೌಂಡ್ ಗೋಡೆ, ಉತ್ತರಕ್ಕೆ: 20 ಅಡಿ ರಸ್ತೆ.	ರೂ. 5,50,00,000/- (ರೂಪಾಯಿ ಐದು ಕೋಟಿ ಐವತ್ತು ಲಕ್ಷ ಮಾತ್ರ)	ರೂ. 55,00,000/- (ರೂಪಾಯಿ ಐವತ್ತೈದು ಲಕ್ಷ ಮಾತ್ರ)	ರೂ. 5,00,000/- (ರೂಪಾಯಿ ಐದು ಲಕ್ಷ ಮಾತ್ರ)	

ಎನ್ಕಂಬರೆನ್ಸ್ ಯಾವುದಾದರೂ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ಬಂದಿಲ್ಲ.
ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, 'ಇ-ಹರಾಜು'ಲಿಂಕ್ ಪ್ರೋವೈಡೆಡ್ ಕೆನರಾ ಬ್ಯಾಂಕ್‌ರವರ ವೆಬ್‌ಸೈಟ್: **(www.canarabank.com)** ನಲ್ಲಿ ಒದಗಿಸಲಾಗಿದೆ ಅಥವಾ **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್ **ಮತ್ತು ಮುಖ್ಯ ಪ್ರಬಂಧಕರು, ಕೆನರಾ ಬ್ಯಾಂಕ್, ಎಆರ್‌ಎಂ-। ಶಾಖೆ, ಬೆಂಗಳೂರು** ಮೊಬೈಲ್ ಸಂಖ್ಯೆ: **6301683293 ಮತ್ತು 9483544116** ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 20.01.2026
ಸ್ಥಳ : ಬೆಂಗಳೂರು
ಸಹಿ/- ಅಧಿಕೃತ ಅಧಿಕಾರಿ,
ಕೆನರಾ ಬ್ಯಾಂಕ್

PUBLIC NOTICE

This is to inform general public and whomsoever it may concern that my client **MR. Y. V VENKATESH AND OTHERS** are the owners of the schedule property. That They have lost the following original documents in transit

1) Memo issued by office of the City Improvement Trust Board Block XII Kumara Park West Extension Sankey Road Bangalore -3 Dated 30/08/1960 P.R No 11/60-61

2) Memo issued by office of the City Improvement Trust Board Block XII Kumara Park West Extension Sankey Road Bangalore-3 Dated 30/08/1960 P.R No 12/60-61

3) Endorsement issued by office of the Assistant Officer East Range /West Range bangalore dated 17/08/1972 Reference No-B3 &TR 91/1972-1973

And in this regard my Client has lodged a complaint before the Bangalore City Police on 14/01/2026 Vide Lost Report No.20138 34/2026 Any person/s finding the said documents should write/inform to the under signed ***within 7 days*** from the date of this notice

SCHEDULE PROPERTY

Site bearing Number 17& 18 (Old) New no 76 PID No 15-9-76 Measuring **1040 sq.ft** and costructed Area RCC Roof Vetrified Tiles measuring **3300 sq ft** katha No 15-9-76 situated at **12 th main 2 Nd Block Rajaji Nagar Bangalore,** and togther Bounded as follows:
East-site no 686, **West-** Road
North- Site No 19, **South-** Site No 16

Prasad Badhya., Advocate,
#739/39, First Floor, Dr Rajkumar Road
6 th Block, Rajajinagar, Bangalore-560010
Mobile No.9844788741
Place: Bengaluru Date: 23/01/2026

₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಶನಿವಾರ 24.01.2026 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಭಾರತಕ್ಕೆ ಭರ್ಜರಿ ಜಯ

ರಾಯಪುರದಲ್ಲಿ ಶುಕ್ರವಾರ ನಡೆದ 2ನೇ ಟಿ20 ಪಂದ್ಯದಲ್ಲಿ ನ್ಯೂಜಿಲೆಂಡ್ ನೀಡಿದ್ದ 209 ರನ್‌ಗಳ ಗೆಲುವಿನ ಗುರಿಯನ್ನು ಬೆನ್ನಟ್ಟಿದ ಭಾರತ ತಂಡ ಸೂರ್ಯಕುಮಾರ್ ಯಾದವ್ 82(37ಬಾಲ್) ಮತ್ತು ಇಶಾನ್ ಕಿಶನ್ 76 (32) ಅವರ ಸ್ಫೋಟಕ ಬ್ಯಾಟಿಂಗ್ ಮೂಲಕ 7 ವಿಕೆಟ್‌ಗಳ ಭರ್ಜರಿ ಜಯಗಳಿಸಿದೆ.

ಸೊಂಪಾದ ಪುಟಗಳು

ದಕ್ಷಿಣ ಭಾರತದ ಸಿನಿಮಾಗಳ ನಾಗಾಲೋಟ

ವೀಕೆಂಡ್ ವಿತ್ ಮೋಹನ್ – ಮೋಹನ್ ವಿಶ್ವ 6

ಆಹಾರ-ಆಸನ-ಆಯುಷ್ಯ: ನಮ್ಮ ಸಂಸ್ಕೃತಿಯ ಆರೋಗ್ಯ ವಿಜ್ಞಾನ

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ – ಡಾ.ಸಾಧನಶ್ರೀ 7

ದಾರಿದೀಪೋಕ್ತಿ

ಬಾಳಿನ ದಾರಿಯಲ್ಲಿ ಎದುರಾಗುವ ಕಲ್ಲುಗಳು ನಿಮ್ಮನ್ನು ಕೆಡವಲು ಇರುವ ಅಡೆತಡೆಗಳಲ್ಲ, ಅವು ಉನ್ನತ ಶಿಖರವನ್ನು ಏರಲು ನೆರವಾಗುವ ಮೆಟ್ಟಿಲುಗಳು. ಗಾಳಿಯ ದಿಕ್ಕಿಗೆ ತಲೆಬಾಗುವ ಹುಲ್ಲಿನ ಎಳೆಗಿಂತ, ಬಿರುಗಾಳಿಯನ್ನೇ ಎದುರಿಸಿ ನಿಲ್ಲುವ ಮರದ ಛಲ ನಮ್ಮದಾಗಿರಲಿ.

ವಕ್ರತುಂಡೋಕ್ತಿ



ಅನೇಕರಿಗೆ ಕೆಲಸ ಮಾಡಲು ಯಾವುದೇ ತೊಂದರೆ ಇಲ್ಲ, ಆದರೆ ಈ ಕೆಲಸದ ನಡುವೆ ಬರುವ ಬಾಸ್ ಇದ್ದಾನಲ್ಲ, ಅವನೇ ದೊಡ್ಡ ಸಮಸ್ಯೆ!

ಕಾರ್ಕಳ: ಅಪಘಾತ ನಾಲ್ವರ ದುರ್ಮರಣ

ಕಾರ್ಕಳ: ಇಲ್ಲಿನ ಮಿಯ್ಯಾರು ಕಂಬಳ ಕ್ರಾಸ್ ಸಮೀಪ ಶುಕ್ರವಾರ ತೂಫಾನ್ ಮತ್ತು ಖಾಸಗಿ ಬಸ್ ನಡುವೆ ಸಂಭವಿಸಿದ ಅಪಘಾತದಲ್ಲಿ ನಾಲ್ವರು ಮೃತಪಟ್ಟಿದ್ದಾರೆ. ಕಲಬುರ್ಗಿಯ ಒಂದೇ ಕುಟುಂಬದ 13 ಮಂದಿಯನ್ನೊಳಗೊಂಡ ಕುಟುಂಬ ತೂಫಾನ್ ವಾಹನದಲ್ಲಿ ದೇಗುಲ ದರ್ಶನಕ್ಕೆ ಬಂದಿತ್ತು. ಮಧ್ಯಾಹ್ನ ಉಡುಪಿಯ ಶ್ರೀ ಕೃಷ್ಣ ಮಠದಲ್ಲಿ ಊಟ ಮುಗಿಸಿ ಕಾರ್ಕಳ ಬಜಗೋಳಿ ರಾಷ್ಟ್ರೀಯ ಹೆದ್ದಾರಿಯಾಗಿ ಧರ್ಮಸ್ಥಳದೆಡೆಗೆ ಸಾಗುವಾಗ ಧರ್ಮಸ್ಥಳ ದಿಂದ ಕಾರ್ಕಳಕ್ಕೆ ಬರುತ್ತಿದ್ದ ಖಾಸಗಿ ಸಾರಿಗೆ ಬಸ್ ಡಿಕ್ಕಿಯಾಗಿದೆ. ತೂಫಾನ್ ಚಾಲಕ ಮನ್ನಪ್ಪ ಸ್ಥಳದಲ್ಲೇ ಸಾವನಪ್ಪಿದ್ದಾರೆ. ರೋಹಿತ್ ಮತ್ತವರ ಸಹೋದರ ಚೇತು, ಮಲ್ಲಮ್ಮ ಆಸ್ಪತ್ರೆ ಯಲ್ಲಿ ಮೃತಪಟ್ಟಿದ್ದಾರೆ.

ಶಬರಿಮಲೆ ಚಿನ್ನ ಕಳವು ತನಿಖೆ ಗ್ಯಾರಂಟಿ: ಮೋದಿ

ತಿರುವನಂತಪುರಂ: ಕೇರಳದಲ್ಲಿ ಬಿಜೆಪಿ ಸರಕಾರ ರಚನೆಯಾದರೆ ಶಬರಿಮಲೆ ದೇವಸ್ಥಾನದ ಚಿನ್ನ ಕಳವು ಪ್ರಕರಣದ ತನಿಖೆ ನಡೆಸಲಾಗುವುದು. ಇದು ಮೋದಿಯ ಗ್ಯಾರಂಟಿ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ತಿರುವನಂತಪುರಂ ಮಹಾನಗರಪಾಲಿಕೆ ಚುನಾವಣೆಯಲ್ಲಿ ಬಿಜೆಪಿ ಭರ್ಜರಿ ಗೆಲುವು ಕಂಡ ನಂತರ ಮೊದಲ ಬಾರಿಗೆ ಕೇರಳಕ್ಕೆ ಭೇಟಿ ಕೊಟ್ಟ ಪ್ರಧಾನಿ ಮೋದಿ ನಾಗರಕೊಯಿಲ್-ಮಂಗಳೂರು ಸೇರಿದಂತೆ ಮೂರು ಅಮೃತ್ ಭಾರತ್ ರೈಲುಗಳಿಗೆ ಚಾಲನೆ ನೀಡಿದರು.

ಫನ್‌ತರಂಗ

- ರಘುಪತಿ ಶೃಂಗೇರಿ -

ರಾಜಕೀಯ ನೇತಾರರನ್ನು ಭೇಟಿಯಾದ ಬಿಗ್‌ಬಾಸ್ ವಿಜೇತ ಗಿಲ್ಲಿ



ರಾಜ್ಯಪಾಲರಿಗೆ ಅವಮಾನ: ಬಿಜೆಪಿ ರಾಷ್ಟ್ರಗೀತೆಗೆ ಅವಮಾನ: ಕಾಂಗ್ರೆಸ್

ಆರಂಭವಾಗದ ನರೇಗಾ ಚರ್ಚೆ, ಅಬಕಾರಿ ಹಗರಣ ಚರ್ಚೆಗೆ ವಿಪಕ್ಷ ಪಟ್ಟು

ಇಡೀ ದಿನ ಕ್ರಿಯಾಲೋಪದ್ದೇ ಸದ್ದು

ರಾಜ್ಯಪಾಲರು ರಾಜ್ಯದ ಜನರ ಕ್ಷಮೆ ಕೇಳಲಿ ಎಂದ ಸಚಿವ ಎಚ್.ಕೆ ಪಾಟೀಲ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಗೊಂದಲದಲ್ಲಿಯೇ ಆರಂಭಗೊಂಡ ವರ್ಷದ ಜಂಟಿ ಅಧಿವೇಶನದ ಎರಡನೇ ದಿನವೂ 'ಕ್ರಿಯಾಲೋಪ'ಕ್ಕೆ ರೂಲಿಂಗ್ ಹುಡುಕುವ ಪ್ರಯತ್ನ ಹಾಗೂ ಆಡಳಿತ, ಪ್ರತಿಪಕ್ಷ ಶಾಸಕರ ವಾಕ್ಸಮರದ ಕಿಚ್ಚಿನಲ್ಲಿಯೇ ಕಳೆದು ಹೋಯಿತು.

ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್ ಅವರ ಭಾಷಣದ ಮೇಲೆ ಉಭಯ ಸದನದಲ್ಲಿ ಚರ್ಚೆ ಆರಂಭವಾಗಬೇಕಾಗಿತ್ತು. ಆದರೆ ಗುರುವಾರ ರಾಜ್ಯಪಾಲರ ಭಾಷಣದ ಕ್ರಮ ಹಾಗೂ ಅದರ ಸುತ್ತ ನಡೆದ ಘಟನಾವಳಿಗಳೇ ಉಭಯ ಸದನದಲ್ಲಿ ಮಾರ್ದನಿಸಿದ್ದರಿಂದ, ಇತರೆ ಚರ್ಚೆಗೆ ಅವಕಾಶ ಸಿಗಲಿಲ್ಲ. ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಚರ್ಚೆಗೆ ಪೊನ್ನಣ್ಣ 'ಓಂಕಾರ' ಹಾಡಲು ಮುಂದಾದರೂ ಬಿಜೆಪಿ ಶಾಸಕರ ಗದ್ದಲ-ಗಲಾಟೆಯಿಂದ ಸದನವನ್ನು ಮಂಗಳವಾರಕ್ಕೆ ಮುಂದೂಡ ಲಾಯಿತು.

ಶುಕ್ರವಾರ ಸದನ ಆರಂಭವಾಗುತ್ತಿದ್ದಂತೆ ರಾಜ್ಯಪಾಲರೊಂದಿಗೆ ಕಾಂಗ್ರೆಸಿನ ಶಾಸಕರು ನಡೆದುಕೊಂಡ ರೀತಿಯನ್ನು ಮುಂದಿಟ್ಟುಕೊಂಡು ಬಿಜೆಪಿ ಶಾಸಕರು ಕಾಂಗ್ರೆಸಿಗರ ಅಮಾನತಿಗೆ ಪಟ್ಟು ಹಿಡಿದರು. ಕಾನೂನು ಸಚಿವ ಎಚ್.ಕೆ. ಪಾಟೀಲ್ ಸೇರಿದಂತೆ ಕಾಂಗ್ರೆಸ್ ಶಾಸಕರು, ರಾಜ್ಯಪಾಲರು ಸಂಪುಟ ಸಿದ್ಧಪಡಿಸಿದ ಭಾಷಣ ಓದದೇ, ಸರಕಾರಕ್ಕೆ ಹಾಗೂ ರಾಜ್ಯದ ಜನರಿಗೆ ಅಪಮಾನ ಮಾಡಿದ್ದಾರೆಂದು ಟೀಕಿಸಿ, ಕ್ರಿಯಾಲೋಪ ಎತ್ತಿದರು. ಈ ಕ್ರಿಯಾಲೋಪಕ್ಕೆ ಉತ್ತರ ಹುಡುಕುವಾಗಲೇ ವಿಧಾನಸಭೆ ಆಡಳಿತ-ಪ್ರತಿಪಕ್ಷ ಶಾಸಕರ ವಾಕ್ಸಮರ ವೇದಿಕೆಯಾಗಿದ್ದರಿಂದ ಸದನವನ್ನು ಮುಂದೂಡಲಾಯಿತು.

ಭೋಜನ ವಿರಾಮದ ಬಳಿಕ ಬಿಜೆಪಿಗರು ಅಬಕಾರಿ ಇಲಾಖೆಯ ಭ್ರಷ್ಟಾಚಾರದ ವಿಷಯವನ್ನು ಎತ್ತಿಕೊಂಡು ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ ರಾಜೀನಾಮೆಗೆ ಆಗ್ರಹಿಸಿ, ಬಾವಿಗಿಳಿದು ಪ್ರತಿಭಟನೆ ನಡೆಸಿದ್ದರಿಂದ ಸದನವನ್ನು ಮಂಗಳವಾರಕ್ಕೆ ಮುಂದೂಡಲಾಯಿತು.

ಪರಿಷತ್‌ನಲ್ಲಿಯೂ ಗದ್ದಲ ಗಲಾಟೆ: ಕಾಂಗ್ರೆಸ್ ಸದಸ್ಯರು ರಾಜ್ಯಪಾಲರನ್ನು ಅಡ್ಡಗಟ್ಟಿದ ವಿಚಾರ ಸಂಬಂಧ ಮೇಲ್ಮನೆಯಲ್ಲೂ ಪ್ರತಿಧ್ವನಿಸಿತು. ಆಡಳಿತ ಮತ್ತು ಪ್ರತಿಪಕ್ಷಗಳ ನಡುವಿನ ವಾಗ್ವಾಳಿಯಿಂದ ಪರಿಷತ್ ರಣಾಂಗಣವಾಯಿತು. ಶುಕ್ರವಾರ ಕಲಾಪ ಪ್ರಾರಂಭವಾಗುತ್ತಿದ್ದಂತೆ ವಿಧಾನಪರಿಷತ್ ಸಭಾಪತಿ ಬಸವರಾಜ್ ಹೊರಟ್ಟಿ ಪ್ರಶ್ನೋತ್ತರ ಕಲಾಪವನ್ನು ಪ್ರಾರಂಭಿಸಲು ಮುಂದಾದರು. ಈ ವೇಳೆ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಸ್ವಾಮಿ ಅವರು ವಿಷಯ ಪ್ರಸ್ತಾಪಿಸಲು ಮುಂದಾದರು. ನಾನು ನೀಡಿರುವ ಪತ್ರದ ಮೇಲೆ ವಿಷಯ ಪ್ರಸ್ತಾಪಿಸಲು ಅವಕಾಶ ಕೊಡಿ ಎಂದು ಸಭಾಪತಿಯವರಿಗೆ ಮನವಿ ಮಾಡಿದರು. ಈ ಹಂತದಲ್ಲಿ ಆಡಳಿತ ಮತ್ತು ಪ್ರತಿಪಕ್ಷಗಳ ಸದಸ್ಯರ ನಡುವೆ ಗದ್ದಲ, ಮಾತಿನ ಚಕಮಕಿ ನಡೆಯಿತು. ವಿಷಯ ಪ್ರಸ್ತಾಪಿಸಲು ವಿರೋಧ ಪಕ್ಷದ ನಾಯಕರಿಗೆ ಅವಕಾಶ ಕೊಡಿ ಎಂದು ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಒತ್ತಾಯ ಮಾಡಿದರು. ಆಗ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ಅವರು ಕ್ರಿಯಾಲೋಪ ಎತ್ತಲು ಮುಂದಾದರು. ಈ ಹಂತದಲ್ಲಿ ಮತ್ತೆ ಆಡಳಿತ ಮತ್ತು ಪ್ರತಿಪಕ್ಷದ ಸದಸ್ಯರ ನಡುವೆ ಮಾತಿನ ಚಕಮಕಿ ಗದ್ದಲ ಉಂಟಾಯಿತು. ಇದಾದ ಬಳಿಕ ಎರಡು ಬಾರಿ ಸದನವನ್ನು ಮುಂದೂಡಿದರೂ, ಆಡಳಿತ-ಪ್ರತಿಪಕ್ಷ ಶಾಸಕರ ಗಲಾಟೆಯಿಂದಾಗಿ ಸದನವನ್ನು ಸಭಾಪತಿ ಹೊರಟ್ಟಿ ಅವರು ಮಂಗಳವಾರಕ್ಕೆ ಮುಂದೂಡಿದರು.

ಕೇಂದ್ರದ ವಿರುದ್ಧ ಮಂಗಳವಾರ ನಿರ್ಣಯ: ಶುಕ್ರವಾರ ಬೆಳಗ್ಗೆ ನಡೆದ ಸಂಸದೀಯ ವ್ಯವಹಾರಗಳ ಸಮಿತಿ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನರೇಗಾ ಬದಲು ರಾಮ್ ಜಿ ಕಾಯಿದೆ ಜಾರಿಗೊಳಿಸಿರುವುದನ್ನು ವಿರೋಧಿಸಿ 27ಕ್ಕೆ ನಿರ್ಣಯ ಮಂಡಿಸುವ ವಿಷಯವನ್ನು ಪ್ರಸ್ತಾಪಿಸಿದರು.

→ 8

ಸರಕಾರದ ನೀತಿ ನಿಲುವುಗಳನ್ನು ರಾಜ್ಯಪಾಲರ ಭಾಷಣದ ಮೂಲಕ ಕೇಂದ್ರ ಸರಕಾರಕ್ಕೆ ಮನವರಿಕೆ ಮಾಡಿಕೊಡುವುದು ಪ್ರಜಾಪ್ರಭುತ್ವದ ಹಾದಿಯಾಗಿದೆ. ರಾಜ್ಯಪಾಲರು ಖುಷಿಯಾ ಗಲಿ ಎಂದು ಸರಕಾರ ಭಾಷಣವನ್ನು ಸಿದ್ಧಪಡಿ ಸುವುದಿಲ್ಲ. ಅವರು ಸಚಿವ ಸಂಪುಟ ಸಿದ್ಧಪಡಿ ಸಿಕೊಟ್ಟಿದ್ದ ಭಾಷಣವನ್ನು ಪೂರ್ತಿಯಾಗಿ ಓದದೆ ಸದನಕ್ಕೆ ಅಪಮಾನ ಮಾಡಿದ್ದು, ರಾಜ್ಯದ ಜನತೆಯ ಕ್ಷಮೆ ಕೇಳಬೇಕಿದೆ.

-ಎಚ್.ಕೆ. ಪಾಟೀಲ್, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವ

ಕಾನೂನು ಸಚಿವರು ರಾಜ್ಯಪಾಲರು ಭಾಷಣ ಮಾಡಿಲ್ಲವೆನ್ನುತ್ತಾರೆ. ಭಾಷಣವನ್ನೇ ಮಾಡಿಲ್ಲವೆಂದ ಮೇಲೆ ನೀವು ಭಾಷಣದ ಮೇಲೆ ವಂದನಾ ನಿರ್ಣಯ ಸ್ವೀಕರಿಸಲು ಹೇಗೆ ಸಾಧ್ಯ? ಆದರೆ ಮುಖ್ಯಮಂತ್ರಿಗಳು ಮೊದಲ ಮತ್ತು ಕೊನೆಯ ಸಾಲನ್ನು ರಾಜ್ಯಪಾಲರು ಹೇಳಿದ್ದರಿಂದ ಅದರ ಮೇಲೆ ವಂದನಾ ನಿರ್ಣಯ ಸ್ವೀಕರಿಸಬಹುದು ಎಂದಿದ್ದಾರೆ. ಇದು ಸರಕಾರದ ದ್ವಂದ್ವ ನೀತಿ.

-ಛಲವಾದಿ ನಾರಾಯಣಸ್ವಾಮಿ, ಪ್ರತಿಪಕ್ಷ ನಾಯಕ

ರಾಜ್ಯಪಾಲರು ಸಂವಿಧಾನದ ಆಶಯಕ್ಕೆ ವಿರುದ್ಧ ನಡೆದುಕೊಂಡಿದ್ದಾರೆ. ಅವರಿಂದ ರಾಷ್ಟ್ರಗೀತೆಗೆ ಅವಮಾನವಾಗಿದೆ. ಆರ್‌ಎಸ್‌ಎಸ್‌ನವರು ಎಂದಿಗೂ ರಾಷ್ಟ್ರಗೀತೆಗೆ ಗೌರವ ಕೊಟ್ಟಿಲ್ಲ. ಬಿಜೆಪಿ ಅತ್ಯಾಚಾರಿಗಳ ಪಕ್ಷ, ಬಲಾತ್ಕಾರಿಗಳ ಪಕ್ಷ, ಸುಪ್ರೀಂಕೋರ್ಟ್‌ನಲ್ಲಿ ತಡೆಯಾಜ್ಞೆ ತಂದವರು ನಮ್ಮ ಬಗ್ಗೆ ಮಾತನಾಡುವ ನೈತಿಕತೆ ಉಳಿಸಿಕೊಂಡಿಲ್ಲ.

- ಬಿ.ಕೆ.ಹರಿಪ್ರಸಾದ್, ವಿಧಾನಪರಿಷತ್ ಸದಸ್ಯ

ಇಡೀ ದಿನ ನಡೆದಿದ್ದೇನು?

- ರಾಜ್ಯಪಾಲರು ಸಂವಿಧಾನವನ್ನು ಉಲ್ಲಂಘಿಸಿದ್ದಾರೆಂದು ಆರೋಪಿಸಿದ ಕಾಂಗ್ರೆಸ್ ಶಾಸಕರು
- ರಾಜ್ಯಪಾಲರು ತಮ್ಮ ಕೆಲಸ ನಿಭಾಯಿಸಿದ್ದಾರೆ; ಕಾಂಗ್ರೆಸ್ ಶಾಸಕರಿಂದ ಅವಮಾನ ಎಂದ ಬಿಜೆಪಿ
- ಶಾಸಕ ಬಿ.ಕೆ. ಹರಿಪ್ರಸಾದ್ ಅಮಾನತು, ಅಬಕಾರಿಯ ಇಲಾಖೆ ಭ್ರಷ್ಟಾಚಾರ ಚರ್ಚೆಗೆ ಅವಕಾಶ ನೀಡಲು ಬಿಜೆಪಿ ಆಗ್ರಹ

ಗದ್ದಲ ನಿಯಂತ್ರಿಸಲು ರೂಲಿಂಗ್ ಬಾಕಿ ಇಟ್ಟ ಸ್ಪೀಕರ್

ಆಡಳಿತ-ಪ್ರತಿಪಕ್ಷ ಶಾಸಕರು ಎತ್ತಿದ್ದ ಕ್ರಿಯಾಲೋಪಕ್ಕೆ ಸಂಬಂಧಿಸಿದ ರೂಲಿಂಗ್ ಅನ್ನು ಮುಂದಿನ ವಾರ ನೀಡುವುದಾಗಿ ಹೇಳುವ ಮೂಲಕ ಇಡೀ ಗಲಾಟೆಗೆ ತಾತ್ಕಾಲಿಕ ವಿರಾಮ ಹೇಳುವ ಪ್ರಯತ್ನವನ್ನು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಮಾಡಿದರು. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ಹಾಗೂ ರಾಜ್ಯಪಾಲರೊಂದಿಗೆ ಆಡಳಿತ ಪಕ್ಷದ ಶಾಸಕರು ನಡೆದುಕೊಂಡ ರೀತಿಯನ್ನು ಖಂಡಿಸಿ ಪರಸ್ಪರ ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದರು. ಈ ಎರಡು ವಿಷಯಕ್ಕೆ ಸಂಬಂಧಿಸಿದಂತೆ ಮಾತನಾಡಿದ ಯು.ಟಿ.ಖಾದರ್, 'ಆಡಳಿತ ಪಕ್ಷದ ಕಡೆಯಿಂದ ರಾಜ್ಯಪಾಲರು ರಾಷ್ಟ್ರಗೀತೆಗೆ ಅಪಮಾನ ಮಾಡಿದ್ದಾರೆ' ಎಂಬ ಆಕ್ಷೇಪ ಸಲ್ಲಿಕೆಯಾಗಿದೆ. ಪ್ರತಿಪಕ್ಷದ ಸದಸ್ಯರು ರಾಜ್ಯಪಾಲರಿಗೆ ಅಗೌರವ ತೋರಲಾಗಿದೆ' ಎಂದು ಲಿಖಿತ ದೂರು ನೀಡಿದ್ದಾರೆ. ನಾವಿಲ್ಲಿ ಉದ್ದೇಶಕ್ಕಾಗಿ ಚರ್ಚೆ ನಡೆಸಬೇಕೇ ಹೊರತು ವೈಯಕ್ತಿಕವಾಗಿ ಹಗೆತನಕ್ಕಾಗಿ ಜಗಳವಾಡಬಾರದು. ಹೀಗಾಗಿ ಈ ವಿಷಯದ ಬಗ್ಗೆ ಪರಿಶೀಲಿಸಿ ಮುಂದಿನ ವಾರ ರೂಲಿಂಗ್ ನೀಡುತ್ತೇನೆ ಎಂದು ತಿಳಿಸಿದರು.

ಕೈದಿಗಳಿಗೆ ಮನೆ ಊಟಕ್ಕೆ ಮಾರ್ಗಸೂಚಿ: ಹೈ ಇಂಗಿತ

ಬೆಂಗಳೂರು: ವಿವಿಧ ಆರೋಪಗಳಡಿ ಜೈಲುವಾಸಿಯಾಗುತ್ತಿರುವ ಕೈದಿಗಳಿಗೆ ಮನೆ ಊಟ ಹಾಗೂ ಇತರ ಅಗತ್ಯ ವಸ್ತುಗಳನ್ನು ಪೂರೈಸುವ ಕುರಿತು ಮಾರ್ಗಸೂಚಿಗಳನ್ನು ರೂಪಿಸಲು ಕಾಲ ಕೂಡಿ ಬಂದಿದೆ ಎಂದು ಹೈಕೋರ್ಟ್ ತಿಳಿಸಿದೆ.

ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದ ಜೈಲಿನಲ್ಲಿರುವ ಮೊದಲನೇ ಆರೋಪಿ ಪವಿತ್ರಾ ಗೌಡ, 10ನೇ ಆರೋಪಿ ನಾಗರಾಜ್ ಮತ್ತು 11ನೇ ಆರೋಪಿ ಲಕ್ಷ್ಮಣ್ ವಾರಕ್ಕೊಮ್ಮೆ ಮನೆಯಿಂದ ಊಟ ತರಿಸಿಕೊಳ್ಳಲು ಅನುಮತಿಸುವಂತೆ ಪರಪ್ಪನ ಅಗ್ರಹಾರ ಜೈಲು ಅಧಿಕಾರಿಗಳಿಗೆ ನಿರ್ದೇಶಿಸಿದ್ದ ವಿಚಾರಣಾ ನ್ಯಾಯಾಲಯದ ಆದೇಶ ಪ್ರಶ್ನಿಸಿ ರಾಜ್ಯ ಸರಕಾರ ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ ನಾಗಪ್ರಸನ್ನ ಅವರಿದ್ದ ಏಕ ಸದಸ್ಯ ಪೀಠ, ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ದರ್ಶನ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಮಾಡಿರುವ ಆದೇಶವನ್ನು ತೋರಿಸುವ ಮೂಲಕ ಜೈಲು ಅಧಿಕಾರಿಗಳು ಅಕ್ಷರಶಃ ಇತರ ಆರೋಪಿಗಳಿಗೆ ಬೆದರಿಕೆಯೊಡ್ಡುತ್ತಿದ್ದಾರೆ. ದರ್ಶನ್ ಈ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎನ್ನುವ ಕಾರಣಕ್ಕಾಗಿ, ಅವರನ್ನು ಅಮಾನುಷ ರೀತಿಯಲ್ಲಿ ನಡೆಸಿಕೊಳ್ಳಬಾರದು ಎಂದು ವಿಚಾರಣಾಧೀನ ನ್ಯಾಯಾಲಯ ಹೇಳಿದೆ. ಈ ಅಭಿಪ್ರಾಯದಲ್ಲಿ ಯಾವುದೇ ದೋಷಗಳಿಲ್ಲ ಎಂದು ತಿಳಿಸಿದರು.

ಪೊಲೀಸ್ ಅಧಿಕಾರಿಗಳ ಪರ ವಕೀಲರು, ಸುಪ್ರೀಂ ಕೋರ್ಟ್ ತೀರ್ಪು ಮತ್ತು ಜೈಲು ಕೈಪಿಡಿಯ ಪ್ರಕಾರ ನಡೆಯಲೇಬೇಕು. ಮಾರ್ಗಸೂಚಿ ರೂಪಿಸುವ ಸಂಬಂಧ ಪೀಠಕ್ಕೆ ಎಲ್ಲಾ ದಾಖಲೆಗಳನ್ನು ಒದಗಿಸಲಾಗುವುದು ಎಂದು ತಿಳಿಸಿದರು. ವಾದ ಆಲಿಸಿದ ಪೀಠ, ನಟ ದರ್ಶನ್

ನಿಯಮಾವಳಿಗೆ ಸೂಚನೆ

ಯಾವೆಲ್ಲಾ ಕೈದಿಗಳಿಗೆ ವಿಶೇಷ ಸೌಲಭ್ಯ ಕಲ್ಪಿಸಲಾಗಿದೆ ಎಂಬ ಮಾಹಿತಿಯನ್ನು ಪ್ರಾಸಿಕ್ಯೂಷನ್ ಒದಗಿಸಬೇಕು. ಸುಪ್ರೀಂ ಕೋರ್ಟ್ ಆದೇಶಕ್ಕೆ ವಿರುದ್ಧವಾಗಿ ಯಾರಿಗೂ ವಿಶೇಷ ಸೌಲಭ್ಯ ಕಲ್ಪಿಸಲಾಗದು. ಜೈಲು ಕೈಪಿಡಿಯನ್ನು ಪಾಲಿಸಲೇಬೇಕು. ಆಹಾರ ಅಥವಾ ಬೆಡ್ ಅಥವಾ ಇನ್ನಾವುದೇ ವಿಚಾರವಿರಲಿ ಜೈಲಿನಲ್ಲಿ ಸೌಲಭ್ಯ ಕಲ್ಪಿಸುವುದಕ್ಕೆ ನಿಯಮಾವಳಿ ರೂಪಿಸೋಣ. ಕೊಡಲೇಬಾರದು ಎಂದು ಹೇಳುತ್ತಿಲ್ಲ. ವೈದ್ಯರ ಸರ್ಟಿಫಿಕೇಟ್ ಇರಬೇಕಾಗುತ್ತದೆ. ಮಾರ್ಗಸೂಚಿ ರೂಪಿಸಲು ಕಾಲ ಕೂಡಿ ಬಂದಿದೆ ಎಂದು ನ್ಯಾಯಮೂರ್ತಿ ಎಂ ನಾಗಪ್ರಸನ್ನ ಅವರ ಏಕ ಸದಸ್ಯ ಪೀಠ ತಿಳಿಸಿದೆ.

ಬಳ್ಳಾರಿಯಲ್ಲಿ ಆರದ ದ್ವೇಷಾಗ್ನಿ: ಮನೆ ಭಸ್ಮ

ಬಳ್ಳಾರಿ: ಗಣಿ ನಾಡು ಬಳ್ಳಾರಿಯಲ್ಲಿ ಬ್ಯಾನರ್ ಹರಿದ ಪ್ರಕರಣದ ಬಿಸಿ ಆರುವ ಮುನ್ನವೇ ಮಾಜಿ ಸಚಿವ ಜನಾರ್ದನ ರೆಡ್ಡಿ ಮತ್ತು ಶ್ರೀರಾಮುಲು ಅವರಿಗೆ ಸೇರಿದ ಲೇಔಟ್‌ನ ಮಾಡೆಲ್ ಹೌಸ್‌ಗೆ ಕಿಡಿಗೇಡಿಗಳು ಬೆಂಕಿ ಹಚ್ಚಿದ್ದು, ನಗರದಲ್ಲಿ ಮತ್ತೆ ಬಿಗುವಿನ ವಾತಾವರಣ ನಿರ್ಮಾಣವಾಗಿದೆ. ಬಳ್ಳಾರಿಯ ಜಿ ಸ್ಕ್ವೈರ್ ಲೇಔಟ್‌ನಲ್ಲಿ ಅಂದಾಜು 100 ಎಕರೆ ಪ್ರದೇಶದಲ್ಲಿ ಬೃಹತ್ ವಸತಿ ವಿನ್ಯಾಸ ಮಾಡಲಾಗಿತ್ತು. ಇಲ್ಲಿ ನಿವೇಶನ ಖರೀದಿಸಲು ಬರುವವರಿಗೆ ಮಾದರಿಯಾಗಿ ತೋರಿಸಲು ಸುಸಜ್ಜಿತವಾದ 'ಮಾಡೆಲ್ ಹೌಸ್' ನಿರ್ಮಿಸಲಾಗಿತ್ತು. ಶುಕ್ರವಾರ ಸಂಜೆ 6:30ರ ಸುಮಾರಿಗೆ ಈ ಮನೆಗೆ ಬೆಂಕಿ ಹೊತ್ತಿಕೊಂಡಿದ್ದು, ನೋಡ ನೋಡುತ್ತಿದ್ದಂತೆ ಮನೆಯ ಬಹುಪಾಲು ಸುಟ್ಟು ಭಸ್ಮವಾಗಿದೆ. 'ಇದು ಆಕಸ್ಮಿಕ ಘಟನೆಯಲ್ಲ, ಕಾಂಗ್ರೆಸ್‌ನವರು ಉದ್ದೇಶಪೂರ್ವಕವಾಗಿ ಮಾಡಿದ ಕೃತ್ಯ' ಎಂದು ಮಾಜಿ ಶಾಸಕ ಸೋಮಶೇಖರ್ ರೆಡ್ಡಿ ಆರೋಪಿಸಿದ್ದಾರೆ. ಬ್ಯಾನರ್ ಗಲಾಟೆ ನಡೆದ ಸಮಯದಲ್ಲಿಯೇ ಕಾಂಗ್ರೆಸ್ ಕಾರ್ಯಕರ್ತರು ಬೆಂಕಿ ಹಚ್ಚುವ ಬೆದರಿಕೆ ಹಾಕಿದ್ದರು. ಅದರ ಮುಂದುವರಿದ ಭಾಗವೇ ಇದು ಎಂದು ಅವರು ಆರೋಪಿಸಿದ್ದಾರೆ. ಮಾಡೆಲ್ ಹೌಸ್‌ಗೆ ಬೆಂಕಿ ಹಚ್ಚುತ್ತಿರುವುದನ್ನು ಗಮನಿಸಿದ ಕೆಲವರು ಕಿಡಿಗೇಡಿಗಳನ್ನು ಬೆನ್ನಟ್ಟಿ ಹಿಡಿಯಲು ಪ್ರಯತ್ನ ಪಟ್ಟರೂ ಅವರು ಅಲ್ಲಿಂದ ಪರಾರಿಯಾಗುವಲ್ಲಿ ಯಶಸ್ವಿಯಾಗಿದ್ದಾರೆ ಎನ್ನಲಾಗಿದೆ.

ಬಾಡಿಗೆ ವಾಹನಗಳಾಗಿ ಪರಿಗಣಿಸಲು ಸರಕಾರಕ್ಕೆ ಹೈಕೋರ್ಟ್ ಸೂಚನೆ

ಬೈಕ್ ಟ್ಯಾಕ್ಸಿಗೆ ಹೈಕೋರ್ಟ್ ಅಸ್ತು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು:

ರಾಜ್ಯದಲ್ಲಿ ಬೈಕ್ ಟ್ಯಾಕ್ಸಿಗಳ ಕಾರ್ಯಾಚರಣೆ ನಿಷೇಧಿಸಿದ್ದ ರಾಜ್ಯ ಸರಕಾರದ ಕ್ರಮವನ್ನು ಎತ್ತಿಹಿಡಿದಿದ್ದ ಏಕಸದಸ್ಯ ಪೀಠದ ಆದೇಶವನ್ನು ಶುಕ್ರವಾರ ರದ್ದುಪಡಿಸಿರುವ ಹೈಕೋರ್ಟ್ ವಿಭಾಗೀಯ ಪೀಠವು ಬೈಕ್‌ಗಳನ್ನು ಸಾರಿಗೆ ವಾಹನಗಳಾಗಿ (ಟ್ಯಾಕ್ಸಿ) ಬಳಸಲು ಅಗತ್ಯ ಷರತ್ತುಗಳನ್ನು ವಿಧಿಸಿ ಸರಕಾರ ಅನುಮತಿ ನೀಡಬಹುದು ಎಂದು ಆದೇಶಿಸಿದೆ.

ಮೋಟಾರು ವಾಹನಗಳ ಕಾಯಿದೆ 1988ರ ಅನ್ವಯ ಮಾರ್ಗಸೂಚಿ ಮತ್ತು ನಿಯಮಗಳನ್ನು ರೂಪಿಸುವವರೆಗೆ ಬೈಕ್ ಟ್ಯಾಕ್ಸಿಗಳು ಕಾರ್ಯಾಚರಣೆ ನಡೆಸುವಂತಿಲ್ಲ ಎಂಬ ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಿ ಅಗ್ರಿಗೇಟರ್ ಸಂಸ್ಥೆಗಳಾದ ಓಲಾ, ಉಬರ್, ರ್‍ಯಾಪಿಡೊ ಮತ್ತಿತರರು ಸಲ್ಲಿಸಿದ್ದ ಮೇಲ್ಮನವಿಗಳನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಕ್ರು ಮತ್ತು ನ್ಯಾಯಮೂರ್ತಿ ಸಿ ಎಂ ಜೋಶಿ ಅವರ ವಿಭಾಗೀಯ ಪೀಠ ಪುರಸ್ಕರಿಸಿದೆ.

ದ್ವಿಚಕ್ರ ವಾಹನ ಮಾಲೀಕರು ತಮ್ಮ ವಾಹನಗಳನ್ನು ಸಾರಿಗೆ ವಾಹನ ಎಂದು ನೋಂದಾಯಿಸಲು ಅರ್ಜಿ ಸಲ್ಲಿಸಬಹುದು. ಇಂತಹ ಅರ್ಜಿಗಳನ್ನು ಪರಿಗಣಿಸಿ, ವಾಹನ ಮಾಲೀಕರಿಗೆ ಸಾರಿಗೆ ವಾಹನವಾಗಿ ನೋಂದಣಿ ನೀಡಲು ಮತ್ತು ಕಾಂಟ್ರಾಕ್ಟ್ ಕ್ಯಾರೇಜ್ ಆಗಿ

ಕಾರ್ಯನಿರ್ವಹಿಸಲು ಅನುಮತಿ ನೀಡುವಂತೆ ರಾಜ್ಯ ಸರಕಾರಕ್ಕೆ ನಿರ್ದೇಶನ ನೀಡಲಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಪ್ರಸ್ತುತ ನಿಯಮಾವಳಿಗಳನ್ನು ಪರಿಶೀಲಿಸಬಹುದಾದರೂ, ದ್ವಿಚಕ್ರ ವಾಹನಗಳನ್ನು ಸಾರಿಗೆ ವಾಹನ ಅಥವಾ ಕಾಂಟ್ರಾಕ್ಟ್ ಕ್ಯಾರೇಜ್ ಆಗಿ ಬಳಸಲು ಸಾಧ್ಯವಿಲ್ಲ ಎಂಬ ಕಾರಣ ನೀಡಿ ಅನುಮತಿ ನಿರಾಕರಿಸುವಂತಿಲ್ಲ ಎಂದು ಹೈಕೋರ್ಟ್ ಆದೇಶದಲ್ಲಿ ಹೇಳಿದೆ.

ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಮೋಟಾರು ವಾಹನ ಕಾಯಿದೆಯ ಸೆಕ್ಷನ್ 74(2)ರ ಪ್ರಕಾರ ಅಗತ್ಯ ಷರತ್ತುಗಳನ್ನು ವಿಧಿಸಬಹುದು. ಅಗ್ರಿಗೇಟರ್‌ಗಳು ಸಹ ಹೊಸದಾಗಿ ಅರ್ಜಿ ಸಲ್ಲಿಸಲು ಸ್ವತಂತ್ರರಾಗಿದ್ದು, ಅಂತಹ ಅರ್ಜಿಗಳನ್ನು ಈ ಆದೇಶದಲ್ಲಿನ ನ್ಯಾಯಾಲಯದ ಅವಲೋಕನಗಳು ಹಾಗೂ ಕಾನೂನಿನ ಚೌಕಟ್ಟಿನ ಡಿಯಲ್ಲಿ ಪರಿಗಣಿಸಬೇಕು ಎಂದು ತಿಳಿಸಿರುವ ಹೈಕೋರ್ಟ್, ಏಕಸದಸ್ಯ ಪೀಠದ ಆದೇಶ ರದ್ದುಪಡಿಸಿ ಮೇಲ್ಮನವಿಗಳನ್ನು ಮಾನ್ಯ ಮಾಡಿದೆ.

ರಾಜ್ಯ ಸರಕಾರವನ್ನು ಪ್ರತಿನಿಧಿಸಿದ್ದ ಅಡ್ವೊಕೇಟ್ ಜನರಲ್ ಕೆ ಶಶಿಕಿರಣ್ ಶೆಟ್ಟಿ ಅವರು ಮೋಟಾರು ಸೈಕಲ್‌ಗಳು ಸಾರಿಗೆ ವಾಹನಗಳಾಗುವುದಿಲ್ಲ. ಮೋಟಾರು ಸೈಕಲ್ ವ್ಯಾಖ್ಯಾನದಲ್ಲಿ ಬೈಕ್ ಟ್ಯಾಕ್ಸಿಯನ್ನು ಪ್ರಯಾಣಿಕರನ್ನು ಸಾಗಿಸಲು ಇರುವ ವಾಹನ ಎಂದು ಹೇಳಿಲ್ಲ. ಮೋಟಾರು ವಾಹನಗಳ ಕಾಯಿದೆ ಅಥವಾ ನಿಯಮಗಳಲ್ಲೂ ಪ್ರಯಾಣಿಕರನ್ನು ಮೋಟಾರ್ ಸೈಕಲ್‌ನಲ್ಲಿ ಒಯ್ಯಬಹುದು ಎಂದು ಹೇಳಿಲ್ಲ ಎಂದರು. ಮೋಟಾರ್ ಸೈಕಲ್, ಮೋಟಾರ್ ಕ್ಯಾಬ್ ವ್ಯಾಖ್ಯಾನದ ಅಡಿ ಬರುವುದಿಲ್ಲ ಎಂದಿದ್ದರು.

ಕಾನೂನು ನಿರ್ಬಂಧವಿಲ್ಲ

ಅರ್ಜಿದಾರರ ಪರ ವಕೀಲರು, ರಾಜ್ಯ ಸರಕಾರ ನೇಮಕ ಮಾಡಿದ್ದ ಸಮಿತಿಯು ಬೆಂಗಳೂರಿಗೆ ಬೈಕ್ ಟ್ಯಾಕ್ಸಿ ಅಗತ್ಯವಿಲ್ಲ ಎಂದಿದೆ. ಒಂದು ಲಕ್ಷಕ್ಕೂ ಅಧಿಕ ಬೈಕ್ ಟ್ಯಾಕ್ಸಿಗಳು ಸೇವೆ ನೀಡುತ್ತಿವೆ. ಬೈಕ್ ಟ್ಯಾಕ್ಸಿ ಸೇವೆ ಪಡೆಯಬೇಕು ಎನ್ನುವವರನ್ನು ನಿರ್ಬಂಧಿಸಲಾಗದು. ಸರಕಾರವು ಇ-ಬೈಕ್ ಸೇವೆ ಹಿಂಪಡೆದಿದೆ. ಸಾರಿಗೆ ಕ್ಯಾರೇಜ್‌ಗೆ ಕಾನೂನಿನಲ್ಲಿ ಯಾವುದೇ ನಿರ್ಬಂಧವಿಲ್ಲ. ದೇಶದ 11 ರಾಜ್ಯಗಳಲ್ಲಿ ಅಲ್ಲಿನ ಕಾನೂನಿಗೆ ಅನುಗುಣವಾಗಿ ಬೈಕ್ ಟ್ಯಾಕ್ಸಿ ಸೇವೆಯಿದೆ ಎಂದು ವಾದಿಸಿದರು.

ಸಚಿವ ಖಂಡ್ರೆ ಸೂಚನೆ: ಬೆಟ್ಟದಲ್ಲಿ ಇನ್ನೆರಡು ಚಿರತೆ ಪತ್ತೆ

ಮಾದಪ್ಪನ ಭಕ್ತರಿಗೆ ಡ್ರೋನ್ ಕಣ್ಗಾವಲು

ಚಾಮರಾಜನಗರ: ತಾಳುಬೆಟ್ಟದಿಂದ ಮಲೆಮಹದೇಶ್ವರ ಬೆಟ್ಟಕ್ಕೆ ಕಾಲ್ನಡಿಗೆಯಲ್ಲಿ ತೆರಳುತ್ತಿದ್ದ ಭಕ್ತನ ಮೇಲೆ ದಾಳಿ ಮಾಡಿ ಸಾವಿಗೆ ಕಾರಣವಾಗಿದ್ದ ಚಿರತೆಯನ್ನು ಸೆರೆ ಹಿಡಿದ ಬೆನ್ನಿಗೇ ಇನ್ನೆರಡು ಚಿರತೆಗಳು ರಸ್ತೆ ಸಮೀಪದಲ್ಲೇ ಪತ್ತೆಯಾಗಿರುವುದು ಮಾದಪ್ಪ ಭಕ್ತರಲ್ಲಿ ಆತಂಕ ತಂದಿದೆ. ಇದೇ ವೇಳೆ ಭಕ್ತರು ಕಾಲ್ನಡಿಗೆಯಲ್ಲಿ ಬರುವ ಕಾಲುದಾರಿಯಲ್ಲಿ ಡ್ರೋನ್ ಕೆಮೆರಾ ಅಳವಡಿಸಿ ಸತತ ನಿಗಾ ಇಡುವಂತೆ ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚಿಸಿದ್ದಾರೆ.

ಹನೂರು ತಾಲೂಕಿನ ಪಿ ಜಿ ಪಾಳ್ಯ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚಿಕ್ಕರಂಗ ಶೆಟ್ಟಿ ದೊಡ್ಡಿ ಸಮೀಪ ರಸ್ತೆಯ ಬದಿಯಲ್ಲಿ ಎರಡು ಚಿರತೆ ಕಾಣಿಸಿಕೊಂಡಿರುವುದು ದ್ವಿಚಕ್ರ ವಾಹನ ಸವಾರರಲ್ಲಿ ಮತ್ತು ಪಾದ ಚಾರಿಗಳಲ್ಲಿ ನಡುಕವನ್ನುಂಟು ಮಾಡಿದೆ. ವಾಹನ ಸವಾರರು ಅವಳಿ ಚಿರತೆಗಳ ಸಂಚಾ ರವನ್ನು ತಮ್ಮ ಮೊಬೈಲ್ ಕ್ಯಾಮೆರಾದಲ್ಲಿ ಸೆರೆಹಿಡಿದು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟು ಎಚ್ಚರ ವಹಿಸುವಂತೆ ಮನವಿ ಮಾಡಿದ್ದಾರೆ.

ಕಾಲುದಾರಿ ಮೆಟ್ಟಿಲು ಇರುವ ಪ್ರದೇಶ

ದಲ್ಲಿ ಅರಣ್ಯ ಸಿಬ್ಬಂದಿ, ಹೋಂಗಾರ್ಡ್ಸ್ ಮತ್ತು ಸ್ಥಳೀಯ ಸಿಬ್ಬಂದಿಯ ತಂಡ ರಚಿಸಿ ಭಕ್ತರಿಗೆ ನೆರವಾಗುವ ಅಗತ್ಯವಿದ್ದು, ಇದಕ್ಕೆ ತಗಲುವ ವೆಚ್ಚವನ್ನು ಭರಿಸುವಂತೆ ಮಲೆ ಮಹದೇಶ್ವರಸ್ವಾಮಿ ಬೆಟ್ಟ ಅಭಿವೃದ್ಧಿ ಪ್ರಾಧಿಕಾರ ಮತ್ತು ಜಿಲ್ಲಾಡಳಿತಕ್ಕೆ ಪತ್ರ ಬರೆಯುವಂತೆಯೂ ಸಚಿವ ಖಂಡ್ರೆ ಅಧಿಕಾರಿಗಳಿಗೆ ನಿರ್ದೇಶಿಸಿದ್ದಾರೆ.

ಮಂಡ್ಯ, ಮೈಸೂರು, ರಾಮನಗರ, ಬೆಂಗಳೂರು ಸೇರಿದಂತೆ ಹಲವು ಜಿಲ್ಲೆಗಳಿಂದ ಭಕ್ತರು ಕಾವೇರಿ ನದಿ ದಾಟಿ, ಹನೂರು ತಾಲೂಕಿನ ಬಸವನಕಣಕ್ಕೆ ಬಂದು ಅಲ್ಲಿಂದ ಕಾಡಿನಲ್ಲಿಯೇ ನಡೆದುಕೊಂಡು ಶಾಗ್ಯ, ಡಿಎಂ ಸಮುದ್ರ, ಎಲ್ಲೆಮಾಳ, ಮಲ್ಲಯ್ಯನಪುರ, ಕೌದಳ್ಳಿ, ವಡಕೆಹಳ್ಳ, ಕೋಣನಕೆರೆ, ತಾಳುಬೆಟ್ಟ ಮಾರ್ಗವಾಗಿ ಬೆಟ್ಟಕ್ಕೆ ಬರುತ್ತಾರೆ.

ನಿರ್ದೇಶಕ ಸ್ಥಾನಕ್ಕೆ ಸಲ್ಲಿಸಿದ್ದ ನಾಮಪತ್ರ ವಾಪಸ್, 40 ವರ್ಷಗಳ ನಾಯಕತ್ವಕ್ಕೆ ತೆರೆ

ಕೆಎಲ್‌ಇ ಸಾಮ್ರಾಜ್ಯದಲ್ಲಿ ಕೋರೆ ಪರ್ವ ಅಂತ್ಯ

ಬೆಳಗಾವಿ: ಸುದೀರ್ಘ 40 ವರ್ಷಗಳ ನಿರಂತರ ಪರಿಶ್ರಮದ ಫಲವಾಗಿ ಪ್ರತಿಷ್ಠಿತ ಕರ್ನಾಟಕ ಲಿಂಗಾಯತ ಎಜುಕೇಶನ್ ಸೊಸೈಟಿ (ಕೆಎಲ್‌ಇ)ಗೆ ಜಾಗತಿಕ ಮನ್ನಣೆ ತಂದುಕೊಟ್ಟ ಡಾ. ಪ್ರಭಾಕರ ಕೋರೆ ಕಾರ್ಯಾಧ್ಯಕ್ಷ ಸ್ಥಾನದಿಂದ ನಿರ್ಗಮಿಸಿದ್ದಾರೆ.

ಕೆಎಲ್‌ಇ ಆಡಳಿತ ಮಂಡಳಿಗೆ ಚುನಾವಣೆ ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಗುರುವಾರ ರಾತ್ರಿ ಕೊನೆ ಕ್ಷಣದಲ್ಲಿ ಕಾರ್ಯಾಧ್ಯಕ್ಷರಾಗಿದ್ದ ಡಾ. ಪ್ರಭಾಕರ ಕೋರೆ ಕಣದಿಂದ ಹಿಂದೆ ಸರಿಯುವ ಮೂಲಕ ಅಚ್ಚರಿ ಜೊತೆಗೆ ಹೊಸ ಪೀಳಿಗೆಗೆ ಜವಾಬ್ದಾರಿ ನೀಡುವ ಕಾರಣಕ್ಕೆ ಮಹತ್ವದ ನಿರ್ಧಾರ ಕೈಗೊಂಡಿದ್ದಾರೆ. ಕೋರೆಯವರು ತಮ್ಮ ನಾಮಪತ್ರ ಹಿಂದಕ್ಕೆ ಪಡೆದಿದ್ದರಿಂದಾಗಿ 12 ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಕೋರೆಯವರ ಪುತ್ರಿ ಡಾ.ಪ್ರೀತಿ ದೊಡವಾಡ ನೂತನ ನಿರ್ದೇಶಕ ಮಂಡಳಿಯಲ್ಲಿದ್ದು, ಪುತ್ರ ಅಮಿತ್ ಕೋರೆ ಸಹ ಮುಂದುವರಿದಿದ್ದಾರೆ.

1985 ರಿಂದ ಕೆಎಲ್‌ಇ ಸಂಸ್ಥೆ ಕಾರ್ಯಾಧ್ಯಕ್ಷ ಹುದ್ದೆಗೇರಿದ್ದ ಪ್ರಭಾಕರ ಕೋರೆ ಪರಿಶ್ರಮದ ಫಲವಾಗಿ ಇಂದು ಈ ಸಂಸ್ಥೆ ಹೆಮ್ಮರವಾಗಿ ಬೆಳೆದುನಿಂತಿದೆ. ಹೊಸ ಪೀಳಿಗೆಗೆ ಅವಕಾಶ ನೀಡುವ ಮೂಲಕ ಸಂಸ್ಥೆಯನ್ನು ಇನ್ನಷ್ಟು



ಎತ್ತರಕ್ಕೆ ಬೆಳೆಸುವ ಸದುದ್ದೇಶದಿಂದಲೇ ಪ್ರಭಾಕರ ಕೋರೆ ಹುದ್ದೆ ತೊರೆಯುವ ನಿರ್ಧಾರಕ್ಕೆ ಬಂದಿದ್ದಾರೆ ಎಂದು ಅವರ ಆಪ್ತ ವಲಯಗಳು ತಿಳಿಸಿವೆ.

ಈ ಬಾರಿಯೂ ಕೆಎಲ್‌ಇ ಆಡಳಿತ ಮಂಡಳಿಗೆ ಚುನಾವಣೆ ನಡೆಸದೆ ಅವಿರೋಧ ಆಯ್ಕೆ ಮಾಡಲಾಗಿದೆ. ಕೋರೆ ಅವರ ಪುತ್ರಿ ಹಾಗೂ ಪುತ್ರ ಸೇರಿದಂತೆ 12 ಜನ ನಿರ್ದೇಶಕರು ಆಯ್ಕೆಯಾಗಿದ್ದು ಕೋರೆ ಅವರಿಂದ ತೆರವಾದ ಕಾರ್ಯಾಧ್ಯಕ್ಷ ಸ್ಥಾನ ಆಯ್ಕೆ ನಡೆಸಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ.

ಕೋರೆ ಪುತ್ರಿಗೆ ಕಾರ್ಯಾಧ್ಯಕ್ಷ ಸ್ಥಾನ ಸಾಧ್ಯತೆ : ಕೆಎಲ್‌ಇ ಕಾರ್ಯಾಧ್ಯಕ್ಷ ಸ್ಥಾನದಿಂದ ಪ್ರಭಾಕರ ಕೋರೆ ದೂರ ಉಳಿದ ಕಾರಣಕ್ಕೆ ಯಾರಿಗೆ ಈ ಹುದ್ದೆ ಎಂಬ ಪ್ರಶ್ನೆ ಸಾರ್ವಜನಿಕ ವಲಯದಲ್ಲಿ ಮೂಡಿದೆ. ಈ ಮಧ್ಯೆ ಆಡಳಿತಾತ್ಮಕ ಅನುಭವ ಹಾಗೂ ಶಿಕ್ಷಣ ಕುರಿತು ಒಲವು ಹೊಂದಿರುವ ಪ್ರಭಾಕರ ಕೋರೆ ಅವರ ಪುತ್ರಿ ಪ್ರೀತಿ ದೊಡವಾಡ ಅವರಿಗೆ ಲಭಿಸಬಹುದು ಎಂಬ ಮಾತು ಕೇಳಿಬರುತ್ತಿವೆ. ಇನ್ನೂ ಹಾಲಿ ನಿರ್ದೇಶಕ ಮಹಾಂತೇಶ ಕವಟಗಿಮಠ ಹಾಗೂ ಅಮಿತ್ ಕೋರೆ ಅವರ ಹೆಸರೂ ಕಾರ್ಯಾಧ್ಯಕ್ಷ ಸ್ಥಾನಕ್ಕೆ ಕೇಳಿಬರುತ್ತಿದೆ.

36ರಿಂದ 316 ಅಂಗಸಂಸ್ಥೆಗಳು

ತಮ್ಮ 36ನೇ ವಯಸ್ಸಿನಲ್ಲಿ ಕೆಎಲ್‌ಇ ಚುಕ್ಕಾಣಿ ಹಿಡಿದ ಕೋರೆಯವರು ನಿರಂತರ 40 ವರ್ಷಗಳ ಆಡಳಿತದಲ್ಲಿ 36 ಅಂಗ ಸಂಸ್ಥೆಗಳಿದ್ದ ಸಂಸ್ಥೆಯನ್ನು 316 ಅಂಗಸಂಸ್ಥೆಗಳಿಗೆ ಏರಿಸಿದ್ದಾರೆ. ಈ ಮೂಲಕ ಕೆಎಲ್‌ಇ ಸಂಸ್ಥೆಯನ್ನು ಸುವರ್ಣ ಯುಗದತ್ತ ಒಯ್ದ ಹೆಗ್ಗಳಿಕೆ ಹೊಂದಿದ್ದಾರೆ. 4 ದಶಕಗಳಲ್ಲಿ ರಾಜ್ಯದಲ್ಲಿ ಆಡಳಿತ ನಡೆಸಿದ ಬಹುತೇಕ ಎಲ್ಲ ಮುಖ್ಯಮಂತ್ರಿಗಳು, ಪ್ರಧಾನ ಮಂತ್ರಿಗಳು, ರಾಷ್ಟ್ರಪತಿಗಳನ್ನು ಕೆಎಲ್‌ಇ ಸಂಸ್ಥೆಗೆ ಕರೆಸಿದ್ದಲ್ಲದೆ, ಸಾಗರದಾಚೆಗೂ ಕೆಎಲ್‌ಇ ಸಂಸ್ಥೆಯನ್ನು ಬೆಳೆಸುವಲ್ಲಿ ಕೋರೆಯವರು ಪ್ರಮುಖ ಪಾತ್ರ ವಹಿಸಿದ್ದರು. ಮುಂದಿನ ದಿನಗಳಲ್ಲಿ ಕೋರೆಯವರು ಸಂಸ್ಥೆಯ ಮಾರ್ಗದರ್ಶಕ ಸ್ಥಾನದಲ್ಲಿ ಮುಂದುವರಿಯುವ ನಿರೀಕ್ಷೆ ಇದೆ.

ನಿರ್ದೇಶಕ ಸ್ಥಾನಕ್ಕೆ ಆಯ್ಕೆಯಾದ ಸದಸ್ಯರು

ಮಹಾಂತೇಶ ಕೌಜಲಗಿ ಅಧ್ಯಕ್ಷರಾಗಿ, ಬಸವರಾಜ ತಟವಟಿ ಉಪಾಧ್ಯಕ್ಷರಾಗಿ, ಅಮಿತ್ ಕೋರೆ, ಪ್ರವೀಣ ಬಾಗೇವಾಡಿ, ಪ್ರೀತಿ ದೊಡವಾಡ, ಮಹಾಂತೇಶ ಕವಟಗಿಮಠ, ಮಲ್ಲಿಕಾರ್ಜುನ ಕೊಳ್ಳಿ, ವಿಜಯ ಮೆಟಗುಡ್, ಜಯಾನಂದ ಮುನವಳ್ಳಿ, ಮಂಜುನಾಥ ಮುನವಳ್ಳಿ, ಬಸವರಾಜ ಪಾಟೀಲ, ವಿಶ್ವನಾಥ ಪಾಟೀಲ, ಯಲ್ಲನಗೌಡ ಪಾಟೀಲ, ಅನಿಲ ಪಟ್ಟೇದ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಕೆಎಸ್‌ಸಿಎ ಮಾಜಿ ಅಧ್ಯಕ್ಷ ಎ. ರಘುರಾಮ್ ಭಟ್ ಮತ್ತು ಅವರ ಪತ್ನಿ, ಶ್ರೀರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರ ಭಾರತೀ ಸ್ವಾಮಿಗಳನ್ನು ಭೇಟಿ ಮಾಡಿ ಆಶೀರ್ವಾದ ಪಡೆದರು.

ಬಳ್ಳಾರಿ ಮತ್ತೆ ಕೆಂಡ: ಮಾಡೆಲ್ ಹೌಸ್‌ಗೆ ಬೆಂಕಿ

ಬಳ್ಳಾರಿ: ನಗರದಲ್ಲಿ ಬ್ಯಾನರ್ ಗಲಾಟೆ ಆರುವ ಮುನ್ನವೇ ಮತ್ತೊಂದು ಘಟನೆ ನಡೆದಿದೆ. ಗಂಗಾವತಿ ಶಾಸಕ ಜನಾರ್ದನ ರೆಡ್ಡಿ ಹಾಗೂ ಮಾಜಿ ಸಚಿವ ಶ್ರೀರಾಮುಲುಗೆ ಸೇರಿದ ಮಾಡೆಲ್ ಹೌಸ್‌ಗೆ ಬೆಂಕಿ ಅವಘಡವಾಗಿದೆ. ಬೆಂಕಿ ಹೊತ್ತಿಕೊಂಡು ಜಿ ಸ್ಕ್ವೇರ್ ಲೇಔಟ್‌ನಲ್ಲಿರುವ ಮಾಡೆಲ್ ಹೌಸ್ ಉರಿದಿದೆ. ಇದು ಕಾಂಗ್ರೆಸಿಗರ ಕೃತ್ಯ ಎಂದು ಮಾಜಿ ಶಾಸಕ ಸೋಮಶೇಖರ್ ರೆಡ್ಡಿ ಆರೋಪಿಸಿದ್ದಾರೆ. ಮೊನ್ನೆ ಬ್ಯಾನರ್ ಗಲಾಟೆಯಾದಾಗ ಬೆಂಕಿ ಹಚ್ಚುತ್ತೇನೆಂದು ಹೇಳಿದರು. ಅಂದಿನ ಘಟನೆಗೆ ಸಾಕ್ಷಿ ಎನ್ನುವಂತೆ ಇದೀಗ ನಮಗೆ ಸೇರಿದ ಮಾಡೆಲ್ ಹೌಸ್‌ಗೆ ಬೆಂಕಿ ಹಚ್ಚಿದ್ದಾರೆ. ನೂರು ಎಕರೆ ಪ್ರದೇಶದಲ್ಲಿ ಲೇಔಟ್ ಮಾಡಲಾಗಿತ್ತು. ಇದರಲ್ಲಿ ಮಾಡೆಲ್ ಹೌಸ್ ಮಾಡಿ ಖರೀದಿ ಮಾಡೋರಿಗೆ ತೋರಿಸಲು ನಿರ್ಮಾಣ ಮಾಡಿದರು. ಸಂಜೆ ಆರುವರೆ ಹೊತ್ತಿಗೆ ಬೆಂಕಿ ಹತ್ತಿದೆ. ಇದನ್ನು ನೋಡಿದ ಕೆಲವರು ಬೆಂಕಿ ಹಚ್ಚಿದವರನ್ನು ಹಿಡಿಯಲು ಪ್ರಯತ್ನ ಪಟ್ಟಿದ್ದಾರೆ. ಇದು ಕಾಂಗ್ರೆಸ್ಸಿಗರ ಕೃತ್ಯ ಎಂದು ದೂರಿದ್ದಾರೆ.

ಪರಿಹಾರ ವಿಳಂಬ ಮಾಸ್ಟರ್ ಕಚೇರಿ ಜಪ್ತಿ

ತುಮಕೂರು: ಭೂಮಿ ಕಳೆದುಕೊಂಡಿದ್ದ ಸಂತ್ರಸ್ತರಿಗೆ ಪರಿಹಾರ ಕೊಡದ ಹಿನ್ನೆಲೆ ಕುಣಿಗಲ್ ರೈಲ್ವೆ ನಿಲ್ದಾಣದ ಸ್ಟೇಷನ್ ಮಾಸ್ಟರ್ ಕಚೇರಿಯನ್ನು ಜಪ್ತಿ ಮಾಡಲಾಗಿದೆ. ನೈರುತ್ಯ ರೈಲ್ವೆ ಇಲಾಖೆ ರೈಲ್ವೆ ಹಳಿ ನಿರ್ಮಾಣ ಕಾಮಗಾರಿಗಾಗಿ ನಿವೇಶನ ಹಾಗೂ ಮನೆ ಸ್ವಾಧೀನ ಮಾಡಿಕೊಂಡಿತ್ತು. ಮಲ್ಲಾಘಟ್ಟದ ಮೂಡಲಗಿರಿ ಹಾಗೂ ಲಕ್ಕಯ್ಯ ಎಂಬವರು ಮನೆ ಹಾಗೂ ನಿವೇಶನ ಕಳೆದುಕೊಂಡಿದ್ದರು. 2020ರಲ್ಲಿ ಇಬ್ಬರೂ ಸಂತ್ರಸ್ತರಿಗೆ 20 ಲಕ್ಷ ರು.ಪರಿಹಾರ ನೀಡುವಂತೆ ನ್ಯಾಯಾಲಯ ಆದೇಶ ಮಾಡಿತ್ತು. ನ್ಯಾಯಾಲಯದ ಆದೇಶದ ಬಳಿಕವೂ ರೈಲ್ವೆ ಇಲಾಖೆ ಸಂತ್ರಸ್ತರಿಗೆ ಪರಿಹಾರ ನೀಡದೇ ನಿರ್ಲಕ್ಷ್ಯ ತೋರಿತ್ತು. ಈ ಹಿನ್ನೆಲೆಯಲ್ಲಿ ಕುಣಿಗಲ್ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರ ಆದೇಶದ ಮೇರೆಗೆ ನ್ಯಾಯಾಲಯದ ಸಿಬ್ಬಂದಿ ಕುಣಿಗಲ್ ರೈಲ್ವೆ ನಿಲ್ದಾಣದ ಸ್ಟೇಷನ್ ಮಾಸ್ಟರ್ ಕಚೇರಿಯನ್ನು ಜಪ್ತಿ ಮಾಡಲಾಗಿದೆ. ಸದ್ಯ ಸಂತ್ರಸ್ತರು ಕಚೇರಿಯ ಪೀಠೋಪಕರಣಗಳನ್ನು ಕೊಂಡೊಯ್ದಿದ್ದಾರೆ.

ಮಾದಪ್ಪನ ಭಕ್ತನ ಕೊಂದ ಚಿರತೆ ಸೆರೆ

ಚಾಮ ರಾಜನಗರ: ಮಲೆ ಮಹದೇಶ್ವರ ವನ್ಯಜೀವಿಧಾಮ ವ್ಯಾಪ್ತಿಯ ತಾಳುಬೆಟ್ಟದಿಂದ ಮಲೆ ಮಹದೇಶ್ವರ ಬೆಟ್ಟಕ್ಕೆ ತೆರಳುತ್ತಿದ್ದ ಪಾದಯಾತ್ರಿಕನ ಮೇಲೆ ದಾಳಿ ಮಾಡಿ ಸಾವಿಗೆ ಕಾರಣವಾಗಿದ್ದ ಚಿರತೆಗೆ ಅರಿವಳಿಕೆ ಚುಚ್ಚುಮದ್ದು ನೀಡಿ ಸೆರೆ ಹಿಡಿಯುವಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಯಶಸ್ವಿಯಾಗಿದ್ದಾರೆ.

- ಚಿರನಹಳ್ಳಿ ಗ್ರಾಮದ ಪ್ರವೀಣ್ ಹಾಗೂ ಸ್ನೇಹಿತರು ಪಾದ ಯಾತ್ರೆಯ ಮೂಲಕ ಜನವರಿ 21ರ ಬುಧ ವಾರ ಪಾದಯಾತ್ರೆ ಹೊರಟಿದ್ದರು
- ಚಿರತೆಗೆ ಅರಿವಳಿಕೆ ಚುಚ್ಚುಮದ್ದು ನೀಡಿ ಸೆರೆ ಹಿಡಿಯುವಲ್ಲಿ ಅರಣ್ಯ ಇಲಾಖೆ ಯಶಸ್ವಿ

ಮಲೆ ಮಹದೇಶ್ವರ ಬೆಟ್ಟಕ್ಕೆ ಮಂಡ್ಯ ತಾಲೂಕಿನ ಚಿರನಹಳ್ಳಿ ಗ್ರಾಮದ ಪ್ರವೀಣ್ ಹಾಗೂ ಸ್ನೇಹಿತರು ಪಾದಯಾತ್ರೆಯ ಮೂಲಕ ಜನವರಿ 21ರ ಬುಧ ವಾರ ಬೆಳಗ್ಗೆ ತಾಳಬೆಟ್ಟದಿಂದ ಪಾದಯಾತ್ರೆ ಹೊರಟಿದ್ದರು. ರಂಗಸ್ವಾಮಿ ಒಡ್ಡಿನ ಸಮೀಪ ಪಾದಯಾತ್ರೆ ತೆರಳುತ್ತಿದ್ದ ಪ್ರವೀಣನ ಮೇಲೆ ಬೃಹತ್ ಗಾತ್ರದ ಚಿರತೆ ದಾಳಿ ನಡೆಸಿ ಅರಣ್ಯಕ್ಕೆ ಎಳೆದೊಯ್ದಿತ್ತು ಪರಿಣಾಮ ಪ್ರವೀಣ್ ಅರಣ್ಯದಲ್ಲಿ ಮೃತಪಟ್ಟಿದ್ದರು. ಚಿರತೆಯು ರಂಗಸ್ವಾಮಿ ಒಡ್ಡಿನ ಸಮೀಪದಲ್ಲಿಯೇ ಸಂಚರಿಸುತ್ತಿರುವುದನ್ನು ಡ್ರೋನ್ ಕ್ಯಾಮರದಲ್ಲಿ ಪತ್ತೆಹಚ್ಚಿ, ಚಿರತೆಯ ಚಲನವಲನದ ಮೇಲೆ ನಿಗಾ ವಹಿಸಲಾಗಿತ್ತು. ಸದ್ಯ ಚಿರತೆ ಸೆರೆಯಾಗಿದೆ.

ಪುರಸಭಾ ಕಾರ್ಯಾಲಯ, ಬೇಲೂರು

E-mail: itstaff_ulb_belur@yahoo.co.in, townmunicipal.belur@gmail.com ದೂರವಾಣಿ: 08177–222221

ಸಂಖ್ಯೆ: ಪು.ಬೇ/ಜೆ.ಇ/ಟೆಂಡರ್–04/2025–26 ದಿನಾಂಕ:21.01.2026

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್)

ಮಾನ್ಯ ಮುಖ್ಯ ಮಂತ್ರಿಗಳ ವಿವೇಚನಾ ನಿಧಿಯಡಿ ಎಸ್.ಎಫ್.ಸಿ. ವಿಶೇಷ ಅನುದಾನ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ದರ್ಜೆಯ ಸಿವಿಲ್ ಗುತ್ತಿಗೆದಾರರುಗಳಿಂದ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ವೇಳಾಪಟ್ಟಿ ವಿವರ ಕೆಳಗಿನಂತಿದೆ 1)ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: ದಿನಾಂಕ: 07.02.2026 ಸಂಜೆ 5.30 ಗಂಟೆಗೆ 2)ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಹಾಗೂ ಸಮಯ: ದಿನಾಂಕ: 09.02.2026 ಬೆಳಿಗ್ಗೆ 11.30 ಗಂಟೆಗೆ 3)ಆರ್ಥಿಕ ಬಿಡ್ ತೆರೆಯುವ ದಿನಾಂಕ ಹಾಗೂ ಸಮಯ: ದಿನಾಂಕ: 13.02.2026 ಬೆಳಿಗ್ಗೆ 11.30 ಗಂಟೆಗೆ 4)ಕೆಲಸ ಮುಗಿಸಲು ಕಾಲಾವಧಿ: 06 ತಿಂಗಳು (ಮಳೆಗಾಲ ಹೊರತುಪಡಿಸಿ) (ಟೆಂಡರ್‌ನ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆಗಳಿದ್ದಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ ಪ್ರಚುರ ಪಡಿಸಲಾಗುವುದು) ಕ್ರ.ಸಂ ಕಾಮಗಾರಿ ವಿವರ 1)DMA/2025-26/RD/WORK_INDENT54255 ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)83,41,350/- ಇ.ಎಂ.ಡಿ. ಮೊತ್ತ 2,10,000/- ಹೆಚ್ಚಿನ ವಿವರಗಳನ್ನು ಈ ಕಛೇರಿಯ ಕಾಮಗಾರಿ ಶಾಖೆಯಲ್ಲಿ ಕೆಲಸದ ವೇಳೆಯಲ್ಲಿ ಮತ್ತು http://kppp.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/–ಅಧ್ಯಕ್ಷರು, ಪುರಸಭೆ, ಬೇಲೂರು — ಸಹಿ/– ಮುಖ್ಯಾಧಿಕಾರಿ, ಪುರಸಭೆ, ಬೇಲೂರು

ವಾಸಾಸಂಇ/ಹಿಸನಿ/ಹಾಸನ/976/ಕೆಎಸ್‌ಎಂಸಿಎ/2025–26

ಪಟ್ಟಣ ಪಂಚಾಯಿತಿ ಕಾರ್ಯಾಲಯ, ನ್ಯಾಮತಿ

(ದಾವಣಗೆರೆ ಜಿಲ್ಲೆ) Phone: 08188-265000

ಕ್ರಮಾಂಕ: ಪಪಂನ್ಯಾ/ತಾಂತ್ರಿಕ/ಸಿಆರ್/04/2025–26 ದಿನಾಂಕ: 21/01/2026

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಪಟ್ಟಣ ಪಂಚಾಯಿತಿ ನ್ಯಾಮತಿ ವ್ಯಾಪ್ತಿಯಲ್ಲಿ 2025–26 ನೇ ಸಾಲಿನ ಮುಖ್ಯಮಂತ್ರಿಗಳ ಮೂಲ ಸೌಕರ್ಯ ಯೋಜನೆಯ ಅನುದಾನದಲ್ಲಿನ ಕಾಮಗಾರಿಗಳ ಅನುಷ್ಠಾನಕ್ಕಾಗಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು 2000 ರಂತೆ ಈ ಕೆಳಗಿನಂತೆ ಕಾಮಗಾರಿಗಳನ್ನು (KW-3 and KW-4) ನಿಯಮವಳಿಗಳಂತೆ ಟೆಂಡರ್ ಕರೆಯಲಾಗಿದ್ದು, ಗುತ್ತಿಗೆದಾರರು (https://kppp.karnataka.gov.in) ನಲ್ಲಿ ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯಲ್ಲಿ ಸಂಪರ್ಕಿಸಬಹುದು. **ಕಾಮಗಾರಿಯ ಹೆಸರು:– 2025–26 ನೇ ಸಾಲಿನ ಮುಖ್ಯಮಂತ್ರಿಗಳ ಮೂಲ ಸೌಕರ್ಯ ಯೋಜನೆ:– (1)** CONSTRUCTION OF CC ROAD AND CC DRINAGE FROM NEHARU ROAD TO SHIVANANDAPPA COLLEGE ENTERNCE IN TP NYAMATHI (DMA/2025-26/OW/WORK_INDENT53696) ಟೆಂಡರ್‌ಗಿಟ್ಟ ಮೊತ್ತ:–150.00 ಲಕ್ಷ. ಇಎಂಡಿ ಮೊತ್ತ:– 1,90,300/– ಕಾಲಾವಧಿ:– 6 ತಿಂಗಳು **(2)** CONSTRUCTION OF CC ROAD AND CC DRINAGE FROM KODIKOPPA ROAD TO THUMBHU HALLA ROADIN TP NYAMATHI (DMA/2025-26/OW/WORK_INDENT54287) ಟೆಂಡರ್‌ಗಿಟ್ಟ ಮೊತ್ತ:–100.00 ಲಕ್ಷ. ಇಎಂಡಿ ಮೊತ್ತ:–1,68,700/– ಕಾಲಾವಧಿ:– 6 ತಿಂಗಳು

(1) ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 04–02–2026 ಸಾಯಂಕಾಲ 5.30 ರವರೆಗೆ (2) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 06–02–2026 ಬೆಳಗ್ಗೆ 11.00 ರಂದು ತೆರೆಯಲಾಗುವುದು. (2) ಆರ್ಥಿಕ ಬಿಡ್ ತೆರೆಯುವ ದಿನಾಂಕ: 09–02–2026 ಬೆಳಗ್ಗೆ 10.30 ರಂದು ತೆರೆಯಲಾಗುವುದು.

ಸಹಿ/– ಆಡಳಿತಾಧಿಕಾರಿಗಳು, ಪಟ್ಟಣ ಪಂಚಾಯಿತಿ, ನ್ಯಾಮತಿ. — ಸಹಿ/– ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯಿತಿ, ನ್ಯಾಮತಿ.

ವಾಸಾಇ/ದಾವಣಗೆರೆ/670/ಕೆಎಸ್‌ಎಂಸಿಎ/2025–26

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಶಿವಮೊಗ್ಗ.

ಸಾಗರ ರಸ್ತೆ, ಶಿವಮೊಗ್ಗ–577204, ಕಛೇರಿ ದೂರವಾಣಿ ಸಂ:08182–250338, AEE, ಕಛೇರಿ ದೂರವಾಣಿ ಸಂ.08182–250173

"ಸಂಕ್ಷಿಪ್ತ ಟೆಂಡರ್ ಪ್ರಕಟಣೆ"

ಸಂ:ಕೃಮಾಇ/ಕೃಉಮಾಸ/ಶಿ/ಅಭಿಕೆ/ 2016 / 2025–26 ದಿ: 21–01–2026, APMC/2025-26/OW/WORK_INDENT797

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಂತೆ Standard Tender Document-KW ಪ್ರಕಾರ KPPP ಮುಖಾಂತರ 2025–26ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿ "PROVIDING GALVOLUME SHEET ROOF TO LEAVE- &-LICENCE SHOPS AND GODOWNS AT MAIN MARKET YARD APMC SHIMOGA" ಕಾಮಗಾರಿ, ಅರ್ಹತೆ: ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ KW-4 ಅರ್ಹ ಸಿವಿಲ್ ಗುತ್ತಿಗೆದಾರರು. ಕಾಮಗಾರಿಯ ಒಟ್ಟು ಮೊತ್ತ ರೂ. 138.23 ಲಕ್ಷಗಳು +ಜಿ.ಎಸ್.ಟಿ, ಇಎಂಡಿ ರೂ. 2,07,400–00 (Two Cover System) ಭರ್ತಿ ಮಾಡಿದ ಟೆಂಡರ್ ಬಿಡ್ಡ್‌ನ್ನು KPPP ಪೋರ್ಟಲ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ: 12–02–2026 ರಂದು ಅಪರಾಹ್ನ 4.00 ಗಂಟೆ. ಟೆಂಡರ್ ಪೂರ್ವಬಾವಿ ಸಭೆ ದಿ: 02–02–2026 ಪೂರ್ವಾಹ್ನ 11.00 ಗಂಟೆಗೆ, ತಾಂತ್ರಿಕ ಬಿಡ್‌ನ್ನು ದಿ: 13–02–2026 ರ ಅಪರಾಹ್ನ 4.00 ಗಂಟೆಗೆ ತೆರೆಯಲಾಗುವುದು. ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ಅರ್ಹ ಗುತ್ತಿಗೆದಾರರ ಆರ್ಥಿಕ ಬಿಡ್ ತರೆಯಲಾಗುವುದು. ಟೆಂಡರ್ ಅಪ್‌ಲೋಡಿಂಗ್‌ಗೆ ಸಂಬಂಧಿಸಿದಂತೆ KPPP–ಪೋರ್ಟಲ್ ಸಹಾಯಕ ದೂರವಾಣಿ 080–46010000 ಅಥವಾ 080–68948777 ಇವರನ್ನು ಸಂಪರ್ಕಿಸಬಹುದು. ಹೆಚ್ಚಿನ ವಿವರಗಳಿಗೆ https://kppp.karnataka.gov.in ವೆಬ್‌ಸೈಟ್‌ನಲ್ಲಿ ಮತ್ತು ಮೇಲಿನ ವಿಳಾಸದಲ್ಲಿ ಕಛೇರಿ ವೇಳೆ ಸಂಪರ್ಕಿಸಬಹುದು. ಟೆಂಡರ್ ನಲ್ಲಿ ಯಾವುದೇ ಪರಿಷ್ಕರಣೆ ಇತ್ಯಾದಿಗಳು ಇದ್ದಲ್ಲಿ KPPP–ಪೋರ್ಟಲ್ ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಪ್ರತ್ಯೇಕ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– ಕಾರ್ಯದರ್ಶಿ (ದರ್ಜೆ–1) ಕೃ.ಉ.ಮಾ.ಸ, ಶಿವಮೊಗ್ಗ — ಸಹಿ/– ಆಡಳಿತಾಧಿಕಾರಿಗಳು ಕೃ.ಉ.ಮಾ.ಸ, ಶಿವಮೊಗ್ಗ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/25–26/185/01/1691

ಎಸ್.ವಿ.ಸಿ. ಕೋ – ಆಪರೇಟಿವ್ ಬ್ಯಾಂಕ್ ಲಿ.

ಪ್ರಧಾನ ಕಚೇರಿ : ಕಾನೂನು ಮತ್ತು ವಸೂಲಾತಿ ವಿಭಾಗ

ಎಸ್.ವಿ.ಸಿ. ಟವರ್, ನೆಹರು ರಸ್ತೆ, ವಕೋಲಾ, ಸಾಂಟಾಕ್ರೂಜ್ (ಪೂರ್ವ), ಮುಂಬೈ–400055. ದೂರವಾಣಿ ಸಂ : 71999980/71999928/71999970.

ಪ್ರಾದೇಶಿಕ ಕಛೇರಿ: ನಂ.1, ಸೆಂಟ್ರಲ್ ಬ್ಯಾಂಕ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560018. ಫೋನ್: 080–71231027/28/29/32. ಶಾಖೆ ವಿಳಾಸ : ಜಿ3 & ಜಿ4, ರಾಜಭೋಸಲೆ ಹೈಟ್ಸ್, ಎಸ್.ಟಿ ಸ್ಟ್ಯಾಂಡ್ ಹಿಂಭಾಗ ಹಳೆಯ ಆರ್‌ಟಿಒ ರಸ್ತೆ, ಸಾದರ್‌ಬಜಾರ್, ಸತಾರಾ. ದೂ: 02162–226868/69

ಸ್ಥಿರಾಸ್ತಿಯ ಮಾರಾಟಕ್ಕಾಗಿ ನೀಡಲಾಗಿರುವ ಇ–ಹರಾಜು ಸೂಚನೆ

ಹಣಕಾಸು ಸ್ವತ್ತು ಆಧಾರೀಕರಣ ಮತ್ತು ಪುನರ್‌ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಅಧಿನಿಯಮ 2002ರ ಅನ್ವಯ ಮತ್ತು ಭದ್ರತಾ ಹಿತಾಸಕ್ತಿ 2002ರ ಅಧಿನಿಯಮದ ನಿಯಮ8(6) ಅನ್ನು ಓದಿಕೊಂಡಂತೆ ಪ್ರಕರಣದ ಅನ್ವಯ ನೀಡಲಾಗಿರುವ ಇ–ಹರಾಜು ಮಾರಾಟ ನೋಟೀಸ್. ಸಮಸ್ತ ಸಾರ್ವಜನಿಕರಿಗೆ ಹಾಗೂ ಸಾಲಗಾರರಿಗೆ ಮತ್ತು ಜಾಮೀನುದಾರರಿಗೆ ಈ ನೋಟೀಸ್ ನೀಡುವ ಮೂಲಕ ತಿಳಿಸುವುದೇನೆಂದರೆ ಈ ಕೆಳಗೆ ತಿಳಿಸಿರುವ ಅಡಮಾನವಿಟ್ಟಿರುವ /ಅಧಿನದಲ್ಲಿರುವ ಸ್ಥಿರಾಸ್ತಿಯನ್ನು ಭದ್ರತಾ ಸಾಲದಾತರಾದ ಎಸ್‌ವಿಸಿ ಕೋ–ಆಪರೇಟೀವ್ ಬ್ಯಾಂಕ್ ಲಿ., (ಈ ಮೊದಲು ದಿ ಶಾಮರಾವ್ ವಿಠಲ್ ಕೋ–ಅಪೇರೇಟಿವ್ ಬ್ಯಾಂಕ್ ಲಿ.,)ನ ಅಧಿಕೃತ ಅಧಿಕಾರಿಗಳು ಭೌತ್ತಿಕವಾಗಿ ಸ್ವಾಧೀನಕ್ಕೆ ತೆಗೆದುಕೊಂಡಿದ್ದು ಸಾಲಗಾರ/ಅಡಮಾನದಾರರು/ಜಾಮೀನುದಾರರು : 1. ಮೆ॥ ಫ್ಲೀಟಿನ್ವೆಲಿ ಸರ್ವ್ ಪ್ರೈ ಲಿಮಿಟೆಡ್, ನೋಂದಾಯಿತ ಕಚೇರಿ ಎಂ –2, ಇನ್ಲ್ಯಾಂಡ್ ಅವೆನ್ಯೂ, ಕಮರ್ಷಿಯಲ್ ಕಾಂಪ್ಲೆಕ್ಸ್ ಬಿಲ್ಡಿಂಗ್, ಕೊಡಿಯಾಲಬೈಲ್, ಮಂಗಳೂರು 575002 ಮತ್ತು 505/ಎ/13, ಎಲ್ ಐ ಸಿ ಕಾಲೋನಿ, ಸಾದರ್ ಬಜಾರ್ ತಾಲೂಕು ಮತ್ತು ಸತಾರ ಜಿಲ್ಲೆ, ಮತ್ತು ಎಸ್ ಟಿ ಪಿ ಐ, 4ನೇ ಮಹಡಿ, ಐ ಟಿ ಪಾರ್ಕ್, ಹುಬ್ಬಳ್ಳಿ – 580020 ಮತ್ತು 825, 12ನೇ ಅಡ್ಡ ರಸ್ತೆ, ಕಲಾಂತ್ರ ಟೆಕ್ನಾಲಜಿ, ಸಿದ್ದಾರ್ಥ್ ಲೇಔಟ್, ಮೈಸೂರು, ಕರ್ನಾಟಕ ಮತ್ತು ಯೂನಿಟ್ ನಂ. 2 ಮತ್ತು 3, ಮೇಲಿನ ನೆಲ ಮಹಡಿ, ರುಕ್ಮಿಣಿ ಕುಂಜ್ ಅಪಾರ್ಟ್ಮೆಂಟ್, ಸಿ ಎಸ್ ನಂ.599 ರಲ್ಲಿ ನಿರ್ಮಾಣಗೊಂಡಿದೆ, ಗುರುವಾರ್ ಪೇಟ್, ಸತಾರ, 2. ಶ್ರೀಮತಿ ಗುಡಿಬಂಡೆ ಸುಬ್ಬ ರಾವ್ ಶಿವರಂಜನಿ, ವಿಳಾಸ : 505/ಎ/13, ಎಲ್ ಐ ಸಿ ಕಾಲೋನಿ, ಸಾದರ್ ಬಜಾರ್ ತಾಲೂಕು ಮತ್ತು ಸತಾರ ಜಿಲ್ಲೆ, ಮತ್ತು 98, ಮೈಕೋ ಲೇಔಟ್, ಅರಕೆರೆ, ಬೆಂಗಳೂರು – 560076. ಮತ್ತು c/o ಸಂದೀಪ್ ಕುಮಾರ್ ಕುಲ್ಕರ್ಣಿ, 78, ಸುಪರ್ಣ, 6ನೇ ಕ್ರಾಸ್, 19ನೇ ಮೇನ್, ಸಿ ಟಿ ಬೆಡ್, ಟಿ ಆರ್ ನಗರ ಪೊಲೀಸ್ ಸ್ಟೇಷನ್ ಹತ್ತಿರ, ಬನಶಂಕರಿ 2ನೇ ಹಂತ, ಬೆಂಗಳೂರು, ಕರ್ನಾಟಕ–560070. 3. ಶ್ರೀಮತಿ ನಾಗಜ್ಯೋತಿ ಗುಡಿಬಂಡೆ ಸುಬ್ಬ ರಾವ್, ವಿಳಾಸ : ನ್ಯೂ ಲಕ್ಷ್ಮೀಪುರ ಎಕ್ಸಟೆನ್ಶನ್, ಮಂಚನಹಳ್ಳಿ, ಗೌರಿಬಿದನೂರು, ಚಿಕ್ಕಬಳ್ಳಾಪುರ – 562211, 4. ಶ್ರೀ ರಘುರಾಮ್ ರಾವ್, ವಿಳಾಸ : 505/ಎ/13, ಎಲ್ ಐ ಸಿ ಕಾಲೋನಿ, ಸಾದರ್ ಬಜಾರ್ ತಾಲೂಕು ಮತ್ತು ಸತಾರ ಜಿಲ್ಲೆ, ಮತ್ತು c/o ಸಂದೀಪ್ ಕುಮಾರ್ ಕುಲ್ಕರ್ಣಿ, 78, ಸುಪರ್ಣ, 6ನೇ ಕ್ರಾಸ್, 19ನೇ ಮೇನ್, ಸಿ ಟಿ ಬೆಡ್, ಟಿ ಆರ್ ನಗರ ಪೊಲೀಸ್ ಸ್ಟೇಷನ್ ಹತ್ತಿರ, ಬನಶಂಕರಿ 2ನೇ ಹಂತ, ಬೆಂಗಳೂರು, ಕರ್ನಾಟಕ–560070 ಮತ್ತು 98, ಮೈಕೋ ಲೇಔಟ್, ಅರಕೆರೆ, ಬೆಂಗಳೂರು–560076. ಬ್ಯಾಂಕಿಗೆ ನೀಡಬೇಕಾದ ಬಾಕಿ ಮೊತ್ತ ದಿನಾಂಕ: 31.12.2024ರಂತೆ ರೂ.10,83,214.50 (ಹತ್ತು ಲಕ್ಷ ಎಂಭತ್ಮೂರು ಸಾವಿರದ ಎರಡುನೂರಾ ಹದಿನಾಲ್ಕು ಮತ್ತು ಪೈಸೆ ಐವತ್ತು ರೂಪಾಯಿಗಳು ಮಾತ್ರ) ಜೊತೆಗೆ 01.01.2025ರಿಂದ ಬಡ್ಡಿ, ಕಾನೂನು ವೆಚ್ಚ ಮತ್ತು ಇತರೆ ಖರ್ಚುಗಳು ಸೇರಿದಂತೆ ಬಾಕಿಮೊತ್ತವನ್ನು ಪಾವತಿಸದೇ ಇರುವ ಕಾರಣ ಅಡಮಾನವಿಟ್ಟಿರುವ ಆಸ್ತಿಯನ್ನು "ಎಲ್ಲಿದೆಯೋ ಹಾಗೆ" "ಏನಿದೆಯೋ ಹಾಗೆ" "ಹೇಗಿದೆಯೋ ಹಾಗೆ" ಮತ್ತು "ಜಾವಾಬ್ದಾರಿ ರಹಿತ" ಆಧಾರದಲ್ಲಿ ದಿನಾಂಕ: 16.02.2026 ರಂದು ಇ–ಹರಾಜಿನ ಮೂಲಕ ಮಾರಾಟ ಮಾಡಲು ಉದ್ದೇಶಿಸಿ ಈ ನೋಟೀಸನ್ನು ನೀಡಿರುತ್ತಾರೆ.

ಆಸ್ತಿಯ ಮೀಸಲು ಬೆಲೆ: ರೂ. 9,90,000/– (ರೂಪಾಯಿಗಳು ಒಂಬತ್ತು ಲಕ್ಷದ ತೊಂಬತ್ತು ಸಾವಿರ ಮಾತ್ರ) ಮತ್ತು ಮುಂಗಡ ಠೇವಣಿ ಹಣ (ಇಎಂಡಿ) ಮೊತ್ತ: ರೂ. 99,000/– (ರೂಪಾಯಿಗಳು ತೊಂಬತ್ತೊಂಬತ್ತು ಸಾವಿರ ಮಾತ್ರ).

ಸ್ಥಿರಾಸ್ತಿಯ ವಿವರ

ಎಲ್ಲ ಭಾಗಗಳು ಮತ್ತು ಭಾಗಾಂಶಗಳು ಸೇರಿ ವಾಣಿಜ್ಯ ಆವರಣ ನಂ. ಎಂ –2, ಕಾರ್ಪೋರೇಶನ್ ಡೋರ್ ನಂ. 4–1–85/18, ವಿಸ್ತೀರ್ಣ ಅಂದಾಜು 190 ಚದರ ಅಡಿಗಳು, ಮೆಜಾನಿನ್ ಮಹಡಿಯಲ್ಲಿದೆ (ನೆಲಮಹಡಿಯ ಒಂದು ಭಾಗ), ಇನ್ಲ್ಯಾಂಡ್ ಅವೆನ್ಯೂ ಕಮರ್ಷಿಯಲ್ ಕಾಂಪ್ಲೆಕ್ಸ್ ನಲ್ಲಿದೆ, ಜೊತೆಗೆ ಶೇ 0.30 ಅವಿಭಜಿತ ಪಾಲು ಸಾಮಾನ್ಯ ಪ್ರದೇಶಗಳಲ್ಲಿ ಮತ್ತು ಕಟ್ಟಡದ ಸೌಲಭ್ಯಗಳಲ್ಲಿ, ಕೆಳಗಿನ ಪಾಲುಗಳು ಸೇರಿ :

Item No.	R.S.No.	T.S.No.	Kissam	Extent A.C.
1	394	227/1(p)	Converted	0-35
2	394-2	227/2(P)	Converted	0-08
3	394-1	227/1(p)	Converted	0-01

ವಿಳಾಸ : ಕೊಡಿಯಾಲಬೈಲ್ ಗ್ರಾಮ, ಮಂಗಳೂರು ತಾಲೂಕು, ಕೊಡಿಯಾಲಬೈಲ್ ವಾರ್ಡ್, ಮಂಗಳೂರು ಮಹಾನಗರ ಪಾಲಿಕೆ ಮತ್ತು ನೋಂದಣಿ ಉಪ ಜಿಲ್ಲಾ, ಮಂಗಳೂರು ವ್ಯಾಪ್ತಿಯಲ್ಲಿ

ಮಾರಾಟದ ಸಂಪೂರ್ಣ ಷರತ್ತು ಮತ್ತು ನಿಯಮಗಳನ್ನು ಭದ್ರತಾ ಸಾಲದಾತರಾದ ಎಸ್‌ವಿಸಿ ಕೋ–ಆಪರೇಟೀವ್ ಬ್ಯಾಂಕ್ ಲಿ., ಒದಗಿಸಿರುವ ವೆಬ್‌ಸೈಟ್: https://www.svcbank.com/Notice-Sale ಲಿಂಕ್‌ನಲ್ಲಿ ಪಡೆಯಲು ಕೋರಲಾಗಿದೆ.

ದಿನಾಂಕ : 23.01.2026
ಸ್ಥಳ : ಬೆಂಗಳೂರು

ಸಹಿ/– (ಸಾರಥಿ ಸೊಮಯ್ಯ) ಅಧಿಕೃತ ಅಧಿಕಾರಿಗಳು & ಸಹಾಯಕ ಮಹಾ ಪ್ರಬಂಧಕರು, ಬೆಂಗಳೂರು ದಕ್ಷಿಣ ಪ್ರದೇಶ

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

"ಜ್ಞಾನ ಸಂಗಮ", ಬೆಳಗಾವಿ – 590018, ಕರ್ನಾಟಕ, ಭಾರತ

ಸಂ.: ವಿ.ತಾ.ವಿ./ಬೆ/ಸ್ಥಾ.ಅ./2025–26 /ಐ.ಎಫ್.ಟಿ.ನಂ.125/5608 ದಿನಾಂಕ: 23–01–2026

ಅಲ್ಪಾವಧಿ ಟೆಂಡರ್ ಪ್ರಕಟಣೆ ದ್ವಿ–ಲಕೋಟೆ ಪದ್ಧತಿ (ಕೆಪಿಪಿ ಪೋರ್ಟಲ್ ಮೂಲಕ)

ಕುಲಸಚಿವರು, ವಿತಾವಿ, ಬೆಳಗಾವಿ ಇವರಿಂದ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ ಡಾಕ್ಯುಮೆಂಟ್ಸ ಕೆ.ಡಬ್ಲ್ಯೂ.ರ ಪ್ರಕಾರ ಕೆಪಿಪಿ ಪೋರ್ಟಲ್ ಮೂಲಕ ಟೆಂಡರನ್ನು ಆಮಂತ್ರಿಸಲಾಗಿದೆ. ಕಾಮಗಾರಿ ಹೆಸರು: ವಿತಾವಿಯ ವಿ.ಆಯ್.ಎ.ಟಿ ಮುದ್ದೇನಹಳ್ಳಿ ಚಿಕ್ಕಬಳ್ಳಾಪುರ ಜಿಲ್ಲೇಯ ಆವರಣದಲ್ಲಿರುವ ಅತಿಥಿ ಗೃಹದ ದುರಸ್ತಿ ಮತ್ತು ನವೀಕರಣ ಕಾಮಗಾರಿ ಮೊತ್ತ ರೂ.2,03,29,923/–(ತೆರಿಗೆ ರಹಿತ) ಇತರೆ ಮಾಹಿತಿಗಳನ್ನು https://kppp.karnataka.gov.in ವೆಬ್‌ಸೈಟ್ ಮೂಲಕ ದಿನಾಂಕ:23–01–2026 ರಿಂದ ಪಡೆದುಕೊಳ್ಳಬಹುದು.

ಸಹಿ/– ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ

ವಾಸಾಸಂಇ/ಬೆಳಗಾವಿ/1688/ಅಡ್ವಟೋರ್/2025–26

ಕರ್ನಾಟಕ ಸರ್ಕಾರ ಕರ್ನಾಟಕ ಅರಣ್ಯ ಇಲಾಖೆ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಹೊನ್ನಾವರ ಉಪವಿಭಾಗ, ಹೊನ್ನಾವರ–581334

ದೂರವಾಣಿ: 08387–295236 E-mail: acf.hon@gmail.com

ಸಂ. ಸಅಸಂ/ಕೆಶೋರ್/ಟೆಂಡರ/2025–26 ದಿನಾಂಕ: 19.01.2026.

ಟೆಂಡರ ಪ್ರಕಟಣೆ

2025–26ನೇ ಸಾಲಿಗೆ ಹೊನ್ನಾವರ ಅರಣ್ಯ ವಿಭಾಗದಲ್ಲಿ ವಿಶ್ವ ಬ್ಯಾಂಕ ನೆರವಿನ ಕೆ–ಶೋರ್ ಯೋಜನೆಯಡಿ ವಿವಿಧ ಮಾದರಿಗಳಲ್ಲಿ ನೆಡುತೋಪು ಮುಂಗಡ ಕಾಮಗಾರಿ ಹಾಗೂ ನರ್ಸರಿ ಕಾಮಗಾರಿ ಕೆಲಸಗಳ ಒಟ್ಟೂ 6 ಯುನಿಟ್ಟುಗಳಿಗೆ ದಿನಾಂಕ: 02.02.2026 ರಂದು ಆರ್ಥಿಕ ಬಿಡ್ ಮರು ಟೆಂಡರ ಕರೆಯಲಾಗಿದೆ.

Pre qualified tender ವಿಜೇತ ಟೆಂಡರುದಾರರು https://kppp.karnataka.gov.in ಮೂಲಕ ಹಾಗೂ ಈ ಕಛೇರಿಯ ದೂರವಾಣಿ ಸಂಖ್ಯೆ 08387–295236 ಮೂಲಕ ಹೆಚ್ಚಿನ ಮಾಹಿತಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಹೊನ್ನಾವರ ಉಪ ವಿಭಾಗ, ಹೊನ್ನಾವರ.

DIPR/ADK/KSMCA/982/25-26 Dt.23.01.2026

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಸಹಾಯಕ ನಿರ್ದೇಶಕರವರ ಕಛೇರಿ, ಬೆಂಗಳೂರು ನಗರ ಜಿಲ್ಲೆ, ಶ್ರೀ ಕಂಠೀರವ ಕ್ರೀಡಾ ಸಂಕೀರ್ಣ, ಬೆಂಗಳೂರು–560001. ದೂರವಣಿ:– 080 22239771. ಮೊಬೈಲ್:– 9480886545. ಇಮೇಲ್ ಐಡಿ: adyssbangaloreurban12@gmail.com

ಸಂ: ಎಡಿ/ಡಿವೈಇಎಸ್/ಬಿಯು/68/ಆರ್‌ಎಸ್‌ಸಿ/2025–26 ದಿನಾಂಕ: 23.01.2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್)
ವಿಷಯ: ನರೇಗಾ ಯೋಜನೆಯ ಕ್ರೀಡಾ ಸಾಮಗ್ರಿಗಳ ಸರಬರಾಜಿಗಾಗಿ ಟೆಂಡರ್ ಆಹ್ವಾನಿಸಲಾಗಿದೆ.
E Tender No. DYES/2025-26/IND0093

ವಿವರ : ಕ್ರೀಡಾ ಸಾಮಗ್ರಿಗಳ ಸರಬರಾಜು. **ಟೆಂಡರ್ ಮೊತ್ತ:** ರೂ.15.00 ಲಕ್ಷ **ಇಎಂಡಿ:** ರೂ. 30,000/– ಟೆಂಡರ್‌ಗಳನ್ನು ಇ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ ಸಲ್ಲಿಸುವುದು. ಸರಬರಾಜುದಾರರು ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಇ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು.

1) ಇ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಬಿಡ್ ಸಲ್ಲಿಸಲು ಕೊನೆಯ ದಿನಾಂಕ & ಸಮಯ: 07/02/2026 ಸಂಜೆ 04.00 ಗಂಟೆಯವರೆಗೆ. 2) ತಾಂತ್ರಿಕ ಬಿಡ್ ತೆರೆಯುವುದು : 09.02.2026 ಸಂಜೆ 04.00 ಗಂಟೆಗೆ. 3) ಆರ್ಥಿಕ ಬಿಡ್ ತೆರೆಯುವುದು : 10/02/2026 ಸಂಜೆ 04.00 ಗಂಟೆಗೆ ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸವನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು.

ಸಹಿ/– ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು ನಗರ ಜಿಲ್ಲೆ (ಟೆಂಡರ್ ಆಹ್ವಾನಿಸುವ ಪ್ರಾಧಿಕಾರ)

ವಾ.ಸಾ.ಸಂ.ಇ/ವಾಪ್ರ/5182/ಆಕಾರ್/2025–26

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN No.U40109KA2004SGC035177)
ಅಧೀಕ್ಷಕ ಇಂಜಿನಿಯರ್(ವಿ) ರವರ ಕಛೇರಿ, ಚಾನಗರ ಮತ್ತು ಕೊಡಗು ವೃತ್ತ ಶ್ರೀಹರ್ಷ ರಸ್ತೆ, ಮೈಸೂರು–570 001. ದೂರವಾಣಿ ಸಂಖ್ಯೆ : 9449598533

ಇ–ಹರಾಜು ಪ್ರಕಟಣೆ (ವಿದ್ಯುನ್ಮಾನ ಸಂಗ್ರಹಣಾ ವೇದಿಕೆ)

ಚಾವಿಸನಿನಿ ವತಿಯಿಂದ ಈ ಕೆಳಕಂಡ ವಿಭಾಗೀಯ ಉಗ್ರಾಣಗಳಲ್ಲಿ ಲಭ್ಯವಿರುವ ರದ್ದಿ 33/11ಕೆವಿ ಶಕ್ತಿ ಪರಿವರ್ಕಗಳು ಹಾಗೂ 11ಕೆವಿ/440ವಿ ವಿತರಣ ಪರಿವರ್ತಕಗಳನ್ನು ಮಾರಾಟ ಹಾಗೂ ವಿಲೇವಾರಿಯನ್ನು 'AS IS WHERE IS BASIS' ಆಧಾರದ ಮೇಲೆ ಇ–ಹರಾಜು ಮಾಡಲು ಬಿಡ್ ಆಹ್ವಾನಿಸಿದೆ.

ರದ್ದಿ ಸಾಮಗ್ರಿಗಳ ಪರಿಮಾಣ ಮತ್ತು ಇತರೆ ವಿವರಗಳನ್ನು ಹಾಗೂ ಹರಾಜಿನ ದಿನಾಂಕ, ಸಮಯ ಮತ್ತು ಅರ್ಹ ಬಿಡ್‌ದಾರರು ಸದರಿ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವ ಬಗ್ಗೆ ವಿವರಗಳನ್ನು **https://kppp.karnataka.gov.in** ನಲ್ಲಿ ದಿನಾಂಕ: **27.01.2026** ಅಥವಾ ನಂತರ ಪಡೆಯಬಹುದಾಗಿರುತ್ತದೆ. ಇ–ಪೋರ್ಟಲ್‌ನ ಬಗ್ಗೆ ಮಾಹಿತಿಗಾಗಿ ಸಹಾಯವಾಣಿ **+91–8046010000, +91–8068948777**ಗೆ ಅಥವಾ ಇ–ಮೇಲ್ ವಿಳಾಸ **support@eprochelpdesk.com** ಗೆ ಸಂಪರ್ಕಿಸಬಹುದಾಗಿದೆ

ಸಹಿ/– ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಚಾಮರಾಜನಗರ–ಕೊಡಗು, ಚಾವಿಸನಿನಿ, ಮೈಸೂರು

ವಾಸಾಸಂಇ/ಮೈಸೂರು/1560/ಎಸ್‌ಎಸ್‌ಸಿ/2025–26

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್, ಕಾರ್ಯಾಲಯ ಹಾಸನ

08172-233824, : 08172-233824, Mail ID: pdnrlmhassan@gmail.com

ಸಂಖ್ಯೆ: ಜಿಪಂಹಾ/ಅಭಿ(3)ಉಖಾಯೋ/ಹೊ.ಸಿ.ನೇ–201/2023–24, ದಿನಾಂಕ: 14–01–2026

ಟೆಂಡರ್ ಪ್ರಕಟಣೆ

ಹಾಸನ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಹೊರಗುತ್ತಿಗೆ ಸಿಬ್ಬಂದಿಗಳ ಸೇವೆ ಪಡೆಯಲು ಜಿಲ್ಲಾ ಮಟ್ಟದಲ್ಲಿ ಇ–ಪ್ರೊಕ್ಯೂರ್ ಮೆಂಟ್ ಮೂಲಕ ಆನ್ ಲೈನ್ ಟೆಂಡ ಆಹ್ವಾನಿಸಲಾಗಿದೆ. ಮಾಸಿಕ ಅಂದಾಜು ಮೊತ್ತ 58.00 ಲಕ್ಷ. ಇ–ಪ್ರೊಕ್ಯೂರ್ ಮೆಂಟ್ ಪೋರ್ಟಲ್ ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 19–01–2026, ಅಂತಿಮ ದಿನಾಂಕ: 24–03–2026, ಸಂಜೆ 5.00 ಗಂಟೆವರೆಗೆ, ತಾಂತ್ರಿಕ ಬಿಲ್ ತೆರೆಯುವ ದಿನಾಂಕ: 25–03–2026 ರ ಬೆಳ್ಳಿಗ್ಗೆ 11.00 ಗಂಟೆಗೆ ತಾಂತ್ರಿಕ ಬಿಡ್ ನಲ್ಲಿ ಅರ್ಹತೆಯಾದ ಆರ್ಥಿಕ ಬಿಡ್ ತೆರೆಯುವ ದಿನಾಂಕ: 27–03–2026 ಬೆಳಿಗ್ಗೆ 11.00 ಗಂಟೆಗೆ.

ಸಹಿ/–ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಹಾಸನ.

ವಾಸಾಸಂಇ/ಹಿಸನಿ/ಹಾಸನ/972/ಕೆಎಸ್‌ಎಂಸಿಎ/2025–26

ತಾಲ್ಲೂಕು ಪಂಚಾಯತ್ ಕಾರ್ಯಾಲಯ, ಗುಬ್ಬಿ

ತುಮಕೂರು ಜಿಲ್ಲೆ–572216
Email ID : teogubbi5@gmail.com

ಸಂ:ತಾಪಂಗು/ಅ.ನಿ.ವಿವ–01/2025–26 ದಿನಾಂಕ: 20.01.2026

(ಇ–ಪ್ರೊಕ್ಯೂರ್‌ಮೆಂಟ್) ಟೆಂಡರ್ ಪ್ರಕಟಣೆ

ವಿಷಯ: 2025–26ನೇ ಸಾಲಿನ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಗುಬ್ಬಿ ವಿಧಾನಸಭಾ ಕ್ಷೇತ್ರದ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕಾಗಿ ಲ್ಯಾಪ್ ಟಾಪ್ ಖರೀದಿಸಲು ಇ–ಪ್ರೊಕ್ಯೂರ್ ಮೆಂಟ್ ಮೂಲಕ ಟೆಂಡರ್ ಆಹ್ವಾನಿಸುವ ಬಗ್ಗೆ.

ಉಲ್ಲೇಖ:– ಮಾನ್ಯ ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ರವರ ಪತ್ರ ಸಂ.ಎಂ.ಎಲ್.ಡಿ.ಎಸ್/ಸಿ.ಆರ್/10/2025–26, ದಿನಾಂಕ:05–11–2025. 2025–26ನೇ ಸಾಲಿನ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಗುಬ್ಬಿ ವಿಧಾನಸಭಾ ಕ್ಷೇತ್ರದ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕಾಗಿ ಲ್ಯಾಪ್ ಟಾಪ್ ಖರೀದಿಸಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಹ ಏಜೆನ್ಸಿಯವರಿಂದ ಟೆಂಡರ್ ಆಹ್ವಾನಿಸಲಾಗಿದೆ. ಈ ಕೆಳಕಂಡಂತೆ ಇ–ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್ ನಲ್ಲಿ (https://kppp.karnataka.gov.in) ಟೆಂಡರ್‌ನ್ನು ಆಹ್ವಾನಿಸಿದೆ. (ಹೆಚ್ಚಿನ ಮಾಹಿತಿಗಳ ಅಗತ್ಯವಿದ್ದಲ್ಲಿ ಕಛೇರಿಯಿಂದ ಪಡೆಯಬಹುದು) ಇ–ಪ್ರಕ್ಯೂರ್ ಮೆಂಟ್ ಇಂಡೆಂಟ್ ಸಂಖ್ಯೆ : 01. ತಾ.ಪಂ.ಗು.ಎಂ.ಎಲ್.ಎ.ಡಿ.ಎಸ್ ಟೆಂಡರ್/ವಿವ/01/2025–26, ದಿ:20–01–2026. ಅಂದಾಜು ಮೊತ್ತ (ಲಕ್ಷಗಳಲ್ಲಿ) : 12.00. ಎಫ್.ಡಿ.ಆರ್/ಬ್ಯಾಂಕ್ ಗ್ಯಾರಂಟಿ (ರೂಗಳಲ್ಲಿ) : 60,000. ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ : 04–02–2026. ಟೆಂಡರ್ ತೆರೆಯುವ ಕಡೆ ದಿನಾಂಕ: 05–02–2026.

ಸಹಿ/– ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಗುಬ್ಬಿ.

DIPR/TUM/417/KSMCA/2025-26

ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು.

ಝಾನ್ಸಿಲಕ್ಷ್ಮೀಬಾಯಿ ರಸ್ತೆ, ಮೈಸೂರು 9 570 005.

ಸಂಖ್ಯೆ:ಮೈಅಪ್ರಾ:ನಯೋಶಾ:ಭೂಉಬ:ನಯೋ–1:ಇ–43553:2025–26
ದಿನಾಂಕ: 16.01.2026

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಪ್ರಕರಣ 14(ಎ)ರನ್ವಯ

ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಕಡಕೊಳ ಗ್ರಾಮದ ಸ.ನಂ.306/4ರ 01ಎಕರೆ 37ಗುಂಟೆ ಪೈಕಿ 01ಎಕರೆ 10ಗುಂಟೆ ವಿಸ್ತೀರ್ಣದ ಜಮೀನನ್ನು ಕೆ.ಟಿ.ಸಿ.ಪಿ. ಕಾಯ್ದೆ 1961ರ ಪ್ರಕರಣ 14(ಎ) ರನ್ವಯ ವ್ಯವಸಾಯ ವಲಯದಿಂದ ವಾಣಿಜ್ಯ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡುವಂತೆ ಶ್ರೀ ಮನೋಜ್‌ಕುಮಾರ್ ಇವರು ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯಿಂದ "ಈ ಜಮೀನಿನಲ್ಲಿ ವಾಣಿಜ್ಯ ಚಟುವಟಿಕೆಯನ್ನು ಪ್ರಾರಂಭಿಸುವುದರಿಂದ ಸ್ಥಳೀಯರಿಗೆ ಉದ್ಯೋಗ ದೊರಕುವಂತಾಗುತ್ತದೆ. ವಾಣಿಜ್ಯ ಚಟುವಟಿಕೆ ಕಾಮಗಾರಿಗಳು ನಡೆಯುವ ಸಂಧರ್ಭದಲ್ಲಿ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶದ ಅಭಿವೃದ್ಧಿಗೆ ಸಹಾಯುವಾಗುತ್ತದೆ ಮತ್ತು ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಪ್ರದೇಶಗಳು ಮತ್ತು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತವೆ" ಎಂದು ಸಾರ್ವಜನಿಕ ಹಿತಾಸಕ್ತಿ ಕುರಿತು ಮನವಿಯಲ್ಲಿ ತಿಳಿಸಿರುತ್ತಾರೆ. ಸದರಿ ಜಮೀನಿನ ಭೂ ಉಪಯೋಗದ ಬದಲಾವಣೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಈ ಪ್ರಕಟಣೆಯ ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ನಗರ ಯೋಜಕ ಸದಸ್ಯರು, ಅಭಿವೃದ್ಧಿ ಪ್ರಾಧಿಕಾರ, ಮೈಸೂರು–570005 ಇವರಿಗೆ ಮುದ್ದಾಂ ಅಥವಾ ನೋಂದಾಯಿತ ಅಂಚೆ ಮೂಲಕ ತಲುಪಿಸಬಹುದಾಗಿದೆ.

KEY PLAN



ಸಹಿ/– ನಗರ ಯೋಜಕ ಸದಸ್ಯರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು.

DIPR/DDMYS/1551/KSMCA/881/2025-26

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ: ಬೆಂಅಪ್ರಾ/ನಯೋಸ/CLU-119/3825/2025–26 ದಿನಾಂಕ: 23.01.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಾಣಿಜ್ಯ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ವಿಜಯಲಕ್ಷ್ಮೀ ಕೋಂ ಡಾ. ಪರಮೇಶ್ ಎಸ್.	ಬೆಂಗಳೂರು ಪೂರ್ವ	ಬಿದರಹಳ್ಳಿ	ಕಣ್ಣೂರು	30/14	0–7.12	ವ್ಯವಸಾಯ	ವಾಣಿಜ್ಯ

ಷರಾ: ಅರ್ಜಿದಾರರು ಪ್ರಶ್ನಿತ ಜಮೀನಿನಲ್ಲಿ ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ ಹಾಗೂ ವಾಣಿಜ್ಯ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಮತ್ತು ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ಮೂಲಭೂತ ಸೌಕರ್ಯಗಳು, ಉತ್ತಮ ರಸ್ತೆಗಳು ಲಭ್ಯವಾಗುವುದಾಗಿ ಹಾಗೂ ಪ್ರಶ್ನಿತ ಜಾಗದಲ್ಲಿ ಬಹುಮಹಡಿಗಳ ವಾಣಿಜ್ಯ ಕಟ್ಟಡಗಳನ್ನು ಕಟ್ಟುವುದರಿಂದ ಸರ್ಕಾರಕ್ಕೆ ತೆರಿಗೆ ಸಂಗ್ರಹವಾಗುತ್ತದೆ ಹಾಗೂ ಜಮೀನುಗಳಲ್ಲಿ ಅಭಿವೃದ್ಧಿಪಡಿಸಿದ ಕಟ್ಟಡಗಳಿಂದ ಹಲವಾರು ಜನರಿಗೆ ಉದ್ಯಮಗಳು ದೊರಕುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶವನ್ನು ತಿಳಿಸುತ್ತಾ ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಾಣಿಜ್ಯ ಉಪಯೋಗಕ್ಕೆ' ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕಲಬುರಗಿ ವಲಯ, ಕಲಬುರಗಿ.

ಮುಖ್ಯ ಅಭಿಯಂತರವರ ಕಛೇರಿ ಕ.ನ.ನೀ.ಸ ಮತ್ತು ಒಚ ಮಂಡಳಿ, ಕಲಬುರಗಿ ವಲಯ, "ಜಲಭವನ", ರಾಜಾಪೂರ, ಕುಸನೂರು ರಸ್ತೆ, ಕಲಬುರಗಿ–585105, ದೂ: 08472–220817, E-mail ID : kwbceklb14@gmail.com

ಕ್ರ.ಸಂ.ಕಜಮ/ಮುಅ.ಕ/ತಾಂತ್ರಿಕ/ನೀ.ಸ/ನಗರೋತ್ಥಾನ ಹಂತ–4/2025–26/1418 ದಿನಾಂಕ: 22–01–2026

:: ಟೆಂಡರ್ ಆಹ್ವಾನಿಸುವ ಸೂಚನೆ – 3ನೇ ಕರೆ ::

1) ಕಾಮಗಾರಿ ವಿವರ: "ನಗರೋತ್ಥಾನ ಹಂತ–4 ರ ಅನುದಾನದಡಿಯಲ್ಲಿ ಲಿಂಗಸುಗೂರು ಪಟ್ಟಣದ ವಲಯ–7 ರಲ್ಲಿ 05 ಲಕ್ಷ ಲೀಟರ್ ಸಾಮರ್ಥ್ಯದ 15 ಮೀಟರ್ ಎತ್ತರದ ಮೇಲ್ಮಟ್ಟದ ಜಲಸಂಗ್ರಹಗಾರ ನಿರ್ಮಾಣದ ಕಾಮಗಾರಿ" (ಲಂಪ್ ಸಮ್– ವೆರಿಯೇಷನ್ ಇರುವುದಿಲ್ಲ). **(ವರ್ಕ ಇಂಡೆಂಟ್ ಸಂಖ್ಯೆ : ಕೆಯುಡಬ್ಲ್ಯೂಎಸ್.ಡಿ.ಬಿ/2025–26/ಡಬ್ಲ್ಯೂ.ಎಸ್/ವರ್ಕ _ಇಂಡೆಂಟ್462/ಕಾಲ್–2),** 2) ಕಾಮಗಾರಿ ಅಂದಾಜು ಮೊತ್ತ: **ರೂ. 101.07 ಲಕ್ಷಗಳು (ಜಿ.ಎಸ್.ಟಿ ಹೊರತುಪಡಿಸಿ),** 3) ಗುತ್ತಿಗೆದಾರರ ಅರ್ಹತೆ ವಿವರ : ಗುತ್ತಿಗೆದಾರರ ಅರ್ಹತೆಯಂತೆ, 4) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತದ ವಿವರ : ರೂ. 2,00,000/–, 5) ಕಾಮಗಾರಿಯ ಅವಧಿ: 12 (ಹನ್ನೆರಡು) ತಿಂಗಳು, 6) ಇ– ಪ್ರಕ್ಯೂರಮೆಂಟ್ ಪೋರ್ಟಲನಲ್ಲಿ ಬಿಡ್ ದಾಖಲೆಗಳನ್ನು ಡೌನ್ ಲೋಡ್ ಮಾಡುವ ದಿನಾಂಕ: 27–01–2026 ಸಮಯ : 17:30 ಗಂಟೆಯ ನಂತರ, 7) ಪೂರ್ವ ಟೆಂಡರ್ ಸಭೆ ದಿನಾಂಕ: 02–02–2026 ಸಮಯ 11:30 ಗಂಟೆಯವರೆಗೆ, 8) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 10–02–2026 ಸಮಯ 17:30 ಗಂಟೆಯವರೆಗೆ, 9) ಟೆಂಡರ್ ತೆರೆಯುವ ದಿನಾಂಕ : 12–02–2026 ಸಮಯ 11:00 ಗಂಟೆಯ ನಂತರ, 10) ಹೆಚ್ಚಿನ ವಿವರಗಳಿಗೆ: ಮುಖ್ಯ ಅಭಿಯಂತರವರ ಕಛೇರಿ, ಕ.ನ.ನೀ.ಸ ಮತ್ತು ಒಚ ಮಂಡಳಿ, ಕಲಬುರಗಿ ವಲಯ, "ಜಲಭವನ", ರಾಜಾಪೂರ, ಕುಸನೂರು ರಸ್ತೆ, ಕಲಬುರಗಿ–585105 ದೂ: 08472-220817, E-mail ID : kwbceklb14@gmail.com 11) ಅಂತರಜಾಲ ತಾಣದ ವಿಳಾಸ: www.kppp.karnataka.gov.in.

ಸಹಿ/– ಮುಖ್ಯ ಅಭಿಯಂತರು, ಕನನೀಸ ಮತ್ತು ಒಳಚರಂಡಿ ಮಂಡಳಿ, ಕಲಬುರಗಿ ವಲಯ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/1015/ಕೆ.ಎಸ್.ಎಂ.ಸಿ.&ಎ/2025–26

ದಿನ ವಿಶೇಷ

24 ಜನವರಿ 2026 ಶನಿವಾರ

» ಸೂರ್ಯೋದಯ : 06-47
» ಸೂರ್ಯಾಸ್ತ : 06-17
» ತಿಥಿ : ಷಷ್ಠಿ
» ನಕ್ಷತ್ರ : ಉ.ಭಾ
» ಸಂವತ್ಸರ : ವಿಶ್ವಾವಸು
» ಆಯನ : ಉತ್ತರಾಯಣ

ಸಮಾಚಾರ ಸಣ್ಣದಲ್ಲ

ಮಾಲ್‌ನಲ್ಲಿ ಬೆಂಕಿ: 60 ಅಂಗಡಿಗಳಿಗೆ ಹಾನಿ

ಹುಬ್ಬಳ್ಳಿ: ಮಾಲ್‌ನಲ್ಲಿ ಬೆಂಕಿ ಕಾಣಿಸಿಕೊಡು 60ಕ್ಕೂ ಅಧಿಕ ಅಂಗಡಿಗಳು ಹೊತ್ತಿಯುರಿದಿರುವ ಘಟನೆ ಹುಬ್ಬಳ್ಳಿಯ ಮರಾಠಗಯಲ್ಲಿ ನಡೆದಿದೆ. ಗುರುವಾರ ಮಧ್ಯರಾತ್ರಿ 12 ಗಂಟೆ ಸುಮಾರಿಗೆ 4ನೇ ಫ್ಲೋರ್‌ನಲ್ಲಿರುವ ಲೈಫ್ ಸ್ಟೈಲ್ ಶಾಪ್‌ನಲ್ಲಿ ಮೊದಲಿಗೆ ಸಣ್ಣದಾಗಿ ಬೆಂಕಿ ಕಿಡಿ ಕಾಣಿಸಿಕೊಂಡಿತ್ತು. ಸ್ಥಳೀಯರು ಮಾಲೀಕರಿಗೆ ತಿಳಿಸಲು ಪ್ರಯತ್ನ ಮಾಡುತ್ತಿದ್ದ ವೇಳೆ ಬೆಂಕಿ ಪ್ರಮಾಣ ಜಾಸ್ತಿಯಾಗಿ ಇಡೀ ಮಾಲ್‌ಗೆ ಬೆಂಕಿ ಹೊತ್ತಿಕೊಂಡಿದೆ. ಅಗ್ನಿಶಾಮಕ ದಳ ಸಿಬ್ಬಂದಿ ಹರಸಾಹಸಪಟ್ಟಿದ್ದು, ಸತತ ನಾಲ್ಕು ಗಂಟೆ ಕಾರ್ಯಾಚರಣೆ ಬಳಿಕ ಸಂಪೂರ್ಣವಾಗಿ ಬೆಂಕಿ ನಂದಿಸಿದ್ದಾರೆ.

ತ್ರಿವಳಿ ಶಿಶುಗಳಿಗೆ ಜನ್ಮ

ಮೈಸೂರು: ಮೈಸೂರಿನ ಖಾಸಗಿ ನರ್ಸಿಂಗ್ ಹೋಂನಲ್ಲಿ ಮಹಿಳೆಯೊಬ್ಬರು ಏಕಕಾಲದಲ್ಲಿ ಮೂರು ಮಕ್ಕಳಿಗೆ ಜನ್ಮ ನೀಡಿದ್ದಾರೆ. ಮಂಡ್ಯ ಜಿಲ್ಲೆ ಅಕ್ಕಿಹೆಬ್ಬಾಳು ಗ್ರಾಮದ 28 ವರ್ಷದ ಮಹಿಳೆಯೇ ತ್ರಿವಳಿಗೆ ಜನ್ಮ ನೀಡಿದ್ದು, ಒಂದು ಹೆಣ್ಣು ಹಾಗೂ ಎರಡು ಗಂಡು ಮಗು ಜನನವಾಗಿವೆ. ಮೈಸೂರಿನ ಎನ್.ಆರ್.ಮೊಹಲ್ಲದ ಶಂಕರ್ ನರ್ಸಿಂಗ್ ಹೋಮ್ ಆಸ್ಪತ್ರೆಯಲ್ಲಿ ತ್ರಿವಳಿ ಮಕ್ಕಳ ಜನನ ಆಗಿದ್ದು, ಹೆಣ್ಣು (1.5 ಕೆಜಿ), ಗಂಡು (1.8ಕೆಜಿ 2.5 ಕೆಜಿ) ತೂಕ ಹೊಂದಿವೆ. ಮೂವರು ಮಕ್ಕಳು ಹಾಗೂ ತಾಯಿ ಆರೋಗ್ಯವಾಗಿದ್ದಾರೆ ಎಂದು ಆಸ್ಪತ್ರೆ ವೈದ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನವವಿವಾಹಿತೆ ಆತ್ಮಹತ್ಯೆ

ಕಲಬುರಗಿ: ಪ್ರೀತಿಸಿ ಮದುವೆಯಾಗಿದ್ದ ನವವಿವಾಹಿತೆ ಯುವತಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಗರದ ಸಿದ್ದೇಶ್ವರ ಕಾಲೋನಿಯಲ್ಲಿ ನಡೆದಿದೆ. ಮೃತಳನ್ನು ಅನುಸೂಯ ಅವಿನಾಶ್ ಆಕಡೆ (26) ಎಂದು ಗುರುತಿಸಲಾಗಿದ್ದು, ಅನುಸೂಯ ತನ್ನ ಅತ್ತೆ ಮಗ ಅವಿನಾಶ್ ಅವರನ್ನು ಪ್ರೀತಿಸಿ, ಎರಡು ತಿಂಗಳ ಹಿಂದೆ ಎರಡು ಕುಟುಂಬಸ್ಥರ ಸಮ್ಮುಖದಲ್ಲಿ ವಿವಾಹವಾಗಿದ್ದರು. ಮದುವೆಯ ನಂತರ ಗಂಡನೊಂದಿಗೆ ಹಳ್ಳಿಯಲ್ಲಿ ವಾಸಿಸುವುದಕ್ಕೆ ಅನುಸೂಯ ಮನಸ್ಸು ಮಾಡಿಕೊಳ್ಳಲಾಗದೆ ಮಾನಸಿಕವಾಗಿ ನೊಂದಿದ್ದಳು ಎನ್ನಲಾಗಿದೆ. ಆಕೆಯ ಮೂವರು ಸಹೋದರಿಯರು ಗಂಡಂದಿರ ಜತೆ ಬೆಂಗಳೂರು ಮುಂಬೈನಲ್ಲಿ ವಾಸವಾಗಿದ್ದರೆ, ತಾನು ಚಿಕ್ಕ ಹಳ್ಳಿಯಲ್ಲಿ ಜೀವನ ನಡೆಸಬೇಕಾಗಿರುವುದರಿಂದ ಬೇಸರಗೊಂಡಿದ್ದಳು ಎನ್ನಲಾಗಿದೆ. ವಿವಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವ್ಯಕ್ತಿ ಮೇಲೆ ಕರಡಿ ದಾಳಿ

ಶಿಕಾರಿಪುರ: ಕರಡಿ ದಾಳಿಯಿಂದಾಗಿ ವ್ಯಕ್ತಿಯೊಬ್ಬರು ಗಂಭೀರವಾಗಿ ಗಾಯಗೊಂಡ ಘಟನೆ ತಾಲೂಕಿನ ಹಾರೋಗೊಪ್ಪ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಸೋಮ್ಲಾನಾಯ್ಕ ಕರಡಿ ದಾಳಿಯಿಂದ ಗಾಯಗೊಳಗಾಗಿದ್ದು, ತಮ್ಮ ಜಮೀನಿನಲ್ಲಿ ಬೆಳಗ್ಗೆ ಪಂಪ್‌ಸೆಟ್ ಮೋಟರ್ ಸ್ವಿಚ್ ಹಾಕಲು ಹೋದಾಗ ಹಿಂದಿ ನಿಂದ ಕರಡಿ ದಿಢೀರ್ ದಾಳಿ ನಡೆಸಿದೆ. ಕುತ್ತಿಗೆ, ಬೆನ್ನು, ಹೊಟ್ಟೆಯ ಭಾಗದಲ್ಲಿ ಗಂಭೀರ ಸ್ವರೂಪದ ಗಾಯಗಳಾಗಿವೆ. ಶಿಕಾರಿಪುರ ಸಾರ್ವಜನಿಕ ಪಟ್ಟಣದ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದ್ದಾರೆ. ಆಸ್ಪತ್ರೆಗೆ ಭೇಟಿ ನೀಡಿ ಡಿಆರ್‌ಎಫ್‌ಓ ಹರೀಶ್ ಸಜ್ಜಪ್ಪ ಮಾಹಿತಿ ಪಡೆದಿದ್ದು, ಕರಡಿ ಸೆರೆಗೆ ಬೋನ್‌ಗಳನ್ನು ಅಳವಡಿಸಲಾಗಿದೆ.

ನಾಡ ಸಮಸ್ಯೆಗೆ ಸಿಎಂ ಪರಿಹಾರ

● **ಸ್ಥಳ : ಅಡವಿ ಬಾವಿ, ಕೊಪ್ಪಳ**

ಸಮಸ್ಯೆಯೇನು..?

● ಅಡವಿಬಾವಿ ಗ್ರಾಮದ ದೊಡ್ಡತಾಂಡದಲ್ಲಿ ಚರಂಡಿ ಸ್ವಚ್ಛಗೊಳಿಸುವ ಕುರಿತು.

● **ಪರಿಹಾರ:** ಕನಕಗಿರಿ ತಾಲೂಕಿನ ಅಡವಿಬಾವಿ ಗ್ರಾಮದ ದೊಡ್ಡತಾಂಡದಲ್ಲಿ ಚರಂಡಿಯಲ್ಲಿ ಹೂಳು ತುಂಬಿ ದುರ್ವಾಸನೆ ಬೀರಿದ್ದು, ಗ್ರಾಮಸ್ಥರಿಗೆ ಕಿರಿಕಿರಿ ಆಗಿತ್ತು. ಚರಂಡಿ ಸ್ವಚ್ಛಗೊಳಿಸುವ ಬಗ್ಗೆ ಸ್ಥಳೀಯರೊಬ್ಬರು ದೂರು ನೀಡಿದ್ದರು. ಗ್ರಾ.ಪಂ.ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ, ಚರಂಡಿ ಸ್ವಚ್ಛ ಮಾಡಿಸಿದ್ದಾರೆ.

ಆಡಳಿತ-ಪ್ರತಿಪಕ್ಷಗಳ ವಾಕ್ಸಮರದಲ್ಲಿ ಕಲಾಪ ಬಲಿ | ರಾಜ್ಯಪಾಲರನ್ನು ಸಮರ್ಥಿಸಿಕೊಂಡ ಬಿಜೆಪಿಗರು | ರಾಜ್ಯಪಾಲರು ರಾಜ್ಯದ ಜನರ ಕ್ಷಮೆಯಾಚಿಸಲಿ: ಎಚ್‌ಕೆಪಿ ಆಗ್ರಹ | ಈ ಹಿಂದೆ ಭಾರದ್ವಾಜ್ ಮಾಡಿದ್ದೇನು: ಸುರೇಶ್‌ಕುಮಾರ್ ಪ್ರಶ್ನೆ

ಗದ್ದಲದಲ್ಲಿಯೇ ಇಡೀ ದಿನ ಕಳೆದ ಸಭೆ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ನಿರೀಕ್ಷೆಯಂತೆ ಜಂಟಿ ಅಧಿವೇಶನದ ಮೊದಲ ದಿನದ ಹೈಡ್ರಾಮವೇ ಶುಕ್ರವಾರವೂ ವಿಧಾನ ಸಭೆಯಲ್ಲಿ ಮುಂದುವರಿದಿದ್ದು, ಆಡಳಿತ-ಪ್ರತಿಪಕ್ಷಗಳ ನಡುವೆ ವಾಕ್ಸಮರಕ್ಕೆ ಇಡೀ ದಿನದ ಕಲಾಪ ಬಲಿಯಾಯಿತು.

ರಾಜ್ಯಪಾಲರು ಭಾಷಣ ಮಾಡದೇ ತೆರಳಿದ್ದಕ್ಕೆ ಕಾಂಗ್ರೆಸಿಗರು ಅಸಮಾಧಾನ ವ್ಯಕ್ತಪಡಿಸಿದರೆ, ಬಿಜೆಪಿಗರು ರಾಜ್ಯಪಾಲರು ತೆರಳುವ ವೇಳೆ ಕಾಂಗ್ರೆಸಿಗರು ನಡೆದುಕೊಂಡ ರೀತಿಗೆ ಆಕ್ಷೇಪ ವ್ಯಕ್ತಪಡಿಸಿದರು. ರಾಜ್ಯಪಾಲರು ತಮ್ಮ 'ಕೆಲಸ' ಮುಗಿಸಿ ತೆರಳುವಾಗ ಅಡ್ಡಲಾಗಿ ನಿಂತು ಘೋಷಣೆ ಕೂಗಿರುವ ಶಾಸಕರನ್ನು ಅಮಾನತುಗೊಳಿಸಬೇಕು ಎನ್ನುವ ಆಗ್ರಹವನ್ನು ಪ್ರತಿಪಕ್ಷ ನಾಯಕ ಆರ್.ಅಶೋಕ್ ಸೇರಿದಂತೆ ಹಲವು ಶಾಸಕರು ಮಾಡಿದರು. ಇನ್ನು ರಾಷ್ಟ್ರಗೀತೆ ಮೊಳಗುವ ಮೊದಲೇ ಥಾವರ್‌ಚಂದ್ ಗೆಹ್ಲೋಥ್ ಕಲಾಪದಿಂದ ತೆರಳುವ ಮೂಲಕ ಸಂವಿಧಾನ ಪೀಠದಲ್ಲಿರುವ ರಾಜ್ಯಪಾಲರಿಂದಲೇ ರಾಷ್ಟ್ರಗೀತೆಗೆ ಅಪಮಾನ ಮಾಡಿದಂತಾಗಿದೆ ಎಂದು ಆರೋಪಿಸಿ, ರಾಜ್ಯಪಾಲರ ವಿರುದ್ಧ ಖಂಡನಾ ನಿರ್ಣಯಕ್ಕೆ ಆಗ್ರಹಿಸಿದರು.

ಗುರುವಾರ ಮಧ್ಯಾಹ್ನದಿಂದಲೇ ಶುರುವಾಗಿದ್ದ ಈ ಜಟಾಪಟಿ ಶುಕ್ರವಾರ ಇಡೀ ದಿನ ಮುಂದುವರಿಯಿತು. ಈ ನಡುವೆಯೇ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ ಮಂಡಿಸಲು ಮುಂದಾಗುತ್ತಿದ್ದಂತೆ, ಬಿಜೆಪಿಗರು ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ ರಾಜೀನಾಮೆಗೆ ಆಗ್ರಹಿಸಿ ಬಾವಿಗಿಳಿದು ಪ್ರತಿಭಟನೆ ನಡೆಸಿದರು. ಎರಡು ಬಾರಿ ಸದನವನ್ನು ಮುಂದೂಡಿದರೂ, ಪರಿಸ್ಥಿತಿ ತಿಳಿಯಾಗದೇ ಇದಿದ್ದರಿಂದ ವಿಧಾನಸಭೆಯನ್ನು ಮಂಗಳವಾರಕ್ಕೆ ಮುಂದೂಡಲಾಯಿತು.

ಇದಕ್ಕೂ ಮೊದಲು ಕಲಾಪ ಆರಂಭವಾಗುತ್ತಿದ್ದಂತೆ ಪ್ರತಿಪಕ್ಷ ನಾಯಕ ಆರ್. ಅಶೋಕ್ ಮಾತನಾಡಿ, ಜಂಟಿ ಅಧಿವೇಶನದಲ್ಲಿ ರಾಜ್ಯಪಾಲರಿಗೆ ಕಾಂಗ್ರೆಸ್ ಸದಸ್ಯರು ಅಗೌರವ ತೋರಿದ್ದಾರೆ. ಅವರ ವಿರುದ್ಧ ಶಿಸ್ತುಕ್ರಮವಾಗಬೇಕು. ಈ ಹಿಂದೆ ಬಿಜೆಪಿಯ 18 ಶಾಸಕರು ಸ್ಪೀಕರ್ ಪೀಠಕ್ಕೆ ಅಗೌರವ ತೋರಿಸಿದ್ದಾರೆ ಎಂದು ಅಮಾನತು ಮಾಡಲಾಗಿತ್ತು. ಈಗ ರಾಜ್ಯಪಾಲರಿಗೆ ಅಗೌರವ ತೋರಿದವರ ವಿರುದ್ಧ ಏನು ಕ್ರಮ? ಈ ಬಗ್ಗೆ ವಿಧಾನ ಸಭಾಧ್ಯಕ್ಷರು ರೂಲಿಂಗ್ ನೀಡಬೇಕು ಎಂದು ಆಗ್ರಹಿಸಿದರು.

ರಾಜ್ಯಪಾಲರು ವಿವೇಚನೆಯಿಂದಲೇ ಭಾಷಣ ಮಾಡಿದ್ದಾರೆ. ಆದರೆ ಎಚ್.ಕೆ.ಪಾಟೀಲರು ರಾಜ್ಯಪಾಲರಿಗೆ ಓಡಿ ಹೋದರು ಎಂದಿರುವುದು ಸರಿಯಲ್ಲ. ಒಂದು ವೇಳೆ ರಾಷ್ಟ್ರಗೀತೆ ಶುರುವಾಗಿದ್ದರೆ, ರಾಜ್ಯಪಾಲರು ಇರುತ್ತಿದ್ದರು ಎಂದು ಗೆಹ್ಲೋಥ್ ನಡೆಯನ್ನು ಸಮರ್ಥಿಸಿಕೊಂಡರು.

ಅಶೋಕ್ ಅವರ ಮಾತಿಗೆ ಶಾಸಕ ಅಶ್ವತ್ಥ್ ನಾರಾಯಣ್, ಸುನೀಲ್ ಕುಮಾರ್ ಸೇರಿದಂತೆ ಬಿಜೆಪಿಯ ಹಲವು ಶಾಸಕರು ರಾಜ್ಯಪಾಲರಿಗೆ ಅಗೌರವ ತೋರಿದ ಕಾಂಗ್ರೆಸ್ ಶಾಸಕರ ವಿರುದ್ಧ ಶಿಸ್ತು ಕ್ರಮಕ್ಕೆ ಆಗ್ರಹಿಸಿದರು. ಈ ವೇಳೆ ಸುನೀಲ್ ಕುಮಾರ್ ಅವರು, ಇದು ಗೂಂಡಾ ಸರಕಾರ ಅಂದಿದ್ದು ಕಾಂಗ್ರೆಸ್ ಶಾಸ ಕರು ಕೆರಳಿಸಿತು. ಈ ವೇಳೆ ಆಡಳಿತ-ಪ್ರತಿಪಕ್ಷ ನಡುವೆ ವಾಕ್ಸಮರ ನಡೆಯಿತು.

ಗದ್ದಲಕ್ಕೆ ಕಾರಣವಾದ ಸುರೇಶ್ ಕುಮಾರ್ ಹೇಳಿಕೆ

ಬಿಜೆಪಿ ಶಾಸಕ ಸುರೇಶ್ ಕುಮಾರ್ ಮಾತನಾಡುವ ವೇಳೆ, ದುರಾದೃಷ್ಟವಶಾತ್ ರಾಜ್ಯಪಾಲರು ಇಲ್ಲಿ ಬಂದು ಸಮರ್ಥನೆ ಮಾಡಲು ಸಾಧ್ಯವಿಲ್ಲ. ಅವರ ವಿರುದ್ಧದ ಆರೋಪಗಳ ಬಗ್ಗೆ ಸಮರ್ಥನೆ ಮಾಡಲು ಸಾಧ್ಯವಿಲ್ಲ. ಪೂರ್ತಿ ಭಾಷಣ ಓದಿದ ರೀತಿಯಾಗಿದೆ ಎಂದು ಸ್ಪೀಕರ್ ಹೇಳಿದ್ದಾರೆ. ಎರಡೇ ಸಾಲಲ್ಲಿ ಭಾಷಣ ಮುಕ್ತಾಯ! ಸರಕಾರದ ಭಾಷಣ ಓದಲ್ಲ ಅನ್ನೋಕೆ ಆಗುತ್ತಾ ರಾಜ್ಯ ಪಾಲರು? ಸಂವಿಧಾನ ಏನು ಹೇಳುತ್ತೆ? ಎಂದು ಮಾತನಾಡುತ್ತಿದ್ದರು. ಈ ವೇಳೆ ಸಚಿವ ಬೈರತಿ ಸುರೇಶ್ ಮಧ್ಯಪ್ರವೇಶ ಮಾಡಿದ್ದಕ್ಕೆ ಸುರೇಶ್ ಕುಮಾರ್, 'ಏಳು ತಿಂಗಳಿಗೆ ಹುಟ್ಟಿದ್ದೀರಾ' ಎನ್ನುವ ಮಾತು ಭಾರಿ ಗದ್ದಲ, ವಾಗ್ವಾದಕ್ಕೆ ಕಾರಣವಾಯಿತು. ಸುರೇಶ್ ಕುಮಾರ್ ಹೇಳಿಕೆಗೆ ಕೆರಳಿದ ಬೈರತಿ ಸುರೇಶ್, ಪ್ರಿಯಾಂಕ್ ಖರ್ಗೆ ಹಾಗೂ ಕಾಂಗ್ರೆಸ್ ಸದಸ್ಯರು ಸುರೇಶ್ ಕುಮಾರ್ ವಿರುದ್ಧ ಮುಗಿಬಿದ್ದರು. ಸುರೇಶ್ ಕುಮಾರ್ ಮಾತಿಗೆ ಸಚಿವ ಬೈರತಿ ಸುರೇಶ್ ಮಧ್ಯಪ್ರವೇಶ ಮಾಡಿದಾಗ ಒಂಬತ್ತು ತಿಂಗಳಿಗೆ ಹುಟ್ಟಿದ್ದರೆ ಸರಿಯಾಗುತ್ತಿತ್ತು. ಏಳು ತಿಂಗಳಿಗೆ ಹುಟ್ಟಿದ್ದೀರಾ ಎಂದರು. ಇದಕ್ಕೆ ಕಾಂಗ್ರೆಸ್ ಸದಸ್ಯರು ಆಕ್ರೋಶ ವ್ಯಕ್ತಪಡಿಸಿ, ಸುರೇಶ್ ಕುಮಾರ್ ಕ್ಷಮೆ ಕೇಳಬೇಕು ಎಂದು ಒತ್ತಾಯಿಸಿದರು. ಈ ವೇಳೆ ಸಿಎಂ ಸಿದ್ದರಾಮಯ್ಯ ಮಧ್ಯಪ್ರವೇಶ ಮಾಡಿ, ರಾಜ್ಯಪಾಲರ ಕುರಿತಾಗಿ ಸುರೇಶ್ ಕುಮಾರ್ ಮಾತಿಗೆ ತಕರಾರು ಇಲ್ಲ. ಬೈರತಿ ಸುರೇಶ್‌ಗೆ ಏಳು ತಿಂಗಳಿಗೆ ಹುಟ್ಟಿದ್ದಾರೆ ಎಂದು ಹೇಳಿರುವುದು ಸರಿಯಲ್ಲ. ಅದನ್ನು ಕಡತದಿಂದ ತೆಗೆದು ಹಾಕಬೇಕು. ಚರ್ಚೆ ಮುಂದು ವರಿಸುವುದು ಬೇಡ ಎಂದು ಸಲಹೆ ಕೊಟ್ಟರು. ಬಳಿಕ ಸ್ಪೀಕರ್ ಈ ಪದವನ್ನು ಕಡತದಿಂದ ತೆಗೆಯಲು ಸೂಚಿಸಿದರು.

ರಾಜಭವನಕ್ಕೆ ಫೋನ್ ಕರೆ ಬರು ತ್ತಿದೆ ಎಂದು ಎಚ್. ಕೆ. ಪಾಟೀಲ್ ಹೇಳಿದ್ದಾರೆ. ಅದು ಹಂಸರಾಜ ಭಾರದ್ವಾಜ್ ರಾಜ್ಯಪಾಲರಾಗಿದ್ದಾಗ ಬಂದಿದ್ದ ಫೋನ್ ಕರೆಯೂ ಒಳಗೊಂಡಿದೆಯಾ?

ಎಸ್.ಸುರೇಶ್ ಕುಮಾರ್
ಶಾಸಕ

ಲೋಕಸಭೆಯಲ್ಲಿ ಕೇಂದ್ರ ಗೃಹಸಚಿವರು ನೀಡಿರುವ ಹೇಳಿಕೆ, ಸಂಸತ್‌ನಲ್ಲಿ ರಾಷ್ಟ್ರಪತಿಗಳ ಭಾಷಣದ ಸಂಪ್ರದಾಯ ಪರಿಗಣಿಸಿ ನೋಡಿದರೆ ರಾಜ್ಯಪಾಲರು ಸಂವಿಧಾನ ಉಲ್ಲಂಘಿಸಿದ್ದಾರೆ.

ಎಚ್.ಕೆ. ಪಾಟೀಲ್
ಸಚಿವ

ಹರಿಪ್ರಸಾದರ ಜುಬ್ಬ ಹರಿದಿದ್ಯಾರು? ಗವರ್ನರ್‌ಗೆ ಅಡ್ಡ ನಿಂತು ಮಾರ್ಷಲ್ ಜತೆ ಜಗ್ಗಾಡಿದ್ದು, ತವರು ಕಾಂಗ್ರೆಸ್‌ನವರೇ. ಆರೋಪ ಬಿಜೆಪಿಗೆ. ವಿಡಿಯೊ ಪರಿಶೀಲಿಸಿ ಕ್ರಮ ಕಕ್ಕೈಗೊಳ್ಳಬೇಕು.

ಆರ್. ಅಶೋಕ್
ಪ್ರತಿಪಕ್ಷ ನಾಯಕ



ಸ್ಪೀಕರ್ ಸದನದ ಘನತೆ, ಗೌರವವನ್ನು ಎತ್ತಿಹಿಡಿಯಬೇಕು. ರಾಜ್ಯಪಾಲರಿಗೆ ಅಡಚಣೆ ಮಾಡಿದವರ ವಿರುದ್ಧ ಕ್ರಮ ಆಗಬೇಕು. ಗಲಾಟೆ ಪ್ರಕರಣ ಖಂಡಿಸುವ ನಿರ್ಣಯ ಕೈಗೊಳ್ಳಬೇಕು.

ಡಾ.ಅಶ್ವತ್ಥನಾರಾಯಣ
ಶಾಸಕ

ರಾಜ್ಯಪಾಲರನ್ನು ಗೌರವ ಪೂರ್ವಕವಾಗಿ ಸರಕಾರ ಸ್ವಾಗತಿಸಿದೆ. ಭಾಷಣ ಮುಗಿಸಿ ಹೋಗುವ ವೇಳೆ ರಾಷ್ಟ್ರಗೀತೆಗೆ ಅಗೌರವ ತೋರಿಸಿದ್ದು, ಇದನ್ನು ಸಹಿಸಲು ಸಾಧ್ಯವಿಲ್ಲ.

ಶಿವಲಿಂಗೇಗೌಡ
ಶಾಸಕ

ರಾಜ್ಯಪಾಲರು ಸದನಕ್ಕೆ ಅಪಮಾನ ಮಾಡಿದ್ದಾರೆ

ಇನ್ನು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್ ಮಾತನಾಡಿ, ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಥ್ ಸಂಪುಟದಲ್ಲಿ ಒಪ್ಪಿಗೆ ನೀಡಿದ ಭಾಷಣವನ್ನು ಪೂರ್ತಿಯಾಗಿ ಓದದೆ ಸದನಕ್ಕೆ ಅಪಮಾನ ಮಾಡಿದ್ದಾರೆ. ಈ ಕಾರಣಕ್ಕೆ ಜನತೆಯ ಬಳಿ ಕ್ಷಮೆ ಕೇಳಬೇಕು ಎಂದು ಆಗ್ರಹಿಸಿದರು. ಈ ಹಿಂದೆ ಬಿಜೆಪಿ ಶಾಸಕರು ವಿಧಾನಸಭೆಯಲ್ಲಿ ಗದ್ದಲ ಮಾಡಿ ಕಾಗದಪತ್ರಗಳನ್ನು ಹರಿದು ಸ್ಪಿಕರ್ ಮುಖಕ್ಕೆ ತೂರಿ ಪೀಠದ ಬಳಿಗೆ ಹೋಗಿ ಭುಜಕ್ಕೆ ಭುಜಕೊಟ್ಟು ನಿಂತಿದ್ದರು. ಆ ಮಹಾಪರಾಧಕ್ಕಾಗಿ 18 ಜನರನ್ನು ಅಮಾನತುಗೊಳಿಸಲಾಗಿತ್ತು. ಅಂದಿನ ಘಟನೆಯನ್ನು ಗುರುವಾರದ ಜಂಟಿ ಅಧಿವೇಶನದ ಬಳಿಕ ನಡೆದ ಬೆಳವಣಿಗೆಗಳಿಗೆ ಹೋಲಿಕೆ ಮಾಡಿ ಸಮರ್ಥಿಸಿಕೊಳ್ಳುವ ಪ್ರಯತ್ನವನ್ನು ಬಿಜೆಪಿ ಮಾಡುತ್ತಿದೆ. ಇದು ಸರಿಯಲ್ಲ. ಬಿಜೆಪಿ ಶಾಸಕರು ಮಾಡಿದ್ದು ಅಪರಾಧ. ಆದರೆ ಗುರುವಾರ ನಡೆದ ಘಟನೆ ಸಂವಿಧಾನ ರಕ್ಷಣೆಗಾಗಿ ನಡೆದಿರುವುದು ಎಂದು ಸಮರ್ಥಿಸಿಕೊಂಡರು. ಬಿಜೆಪಿಯವರು ಹಿಂದಿನ ಘಟನೆಗೆ ಹೋಲಿಕೆ ಮಾಡಿಕೊಂಡು ಜನರ ಮನಸ್ಸಿನಿಂದ ತಮ್ಮ ಅಪರಾಧವನ್ನು ಅಳಿಸುವ ತೇಪೆ ಪ್ರಯತ್ನ ಮಾಡುತ್ತಿದ್ದಾರೆ. ಬಿಜೆಪಿಯ ಅಶ್ವತ್ಥ ನಾರಾಯಣ ಅವರು ನಿಯಮ 27 ಅನ್ನು ಉಲ್ಲೇಖಿಸಿದ್ದಾರೆ. ಈ ಎಲ್ಲಾ ನಿಯಮಗಳಿಗೂ ತಾಯಿಯಾಗಿ ಸಂವಿಧಾನವಿದೆ. ಅದರಲ್ಲಿನ ಕಲಂ 176(1) ಪ್ರಕಾರ, ರಾಜ್ಯಪಾಲರು ವಿಧಾನಸಭೆಯ ವರ್ಷದ ಮೊದಲ ಅಧಿವೇಶನದಲ್ಲಿ ಭಾಷಣ ಮಾಡು ವುದು ಕಡ್ಡಾಯ. ಆದರೆ ರಾಜ್ಯಪಾಲರು ಸಂವಿಧಾನದ ನಿಯಮ ಗಳನ್ನು ಉಲ್ಲಂಘಿಸಿದ್ದಾರೆ. ಅವರಿಗೆ ಯಾವ ಒತ್ತಡ ಇತ್ತು ಎಂಬುದು ಗೊತ್ತಿಲ್ಲ. ರಾಜಭವನಕ್ಕೆ ಕೇಂದ್ರ ಸರಕಾರದಿಂದ ಯಾವ ರೀತಿಯ ಕರೆ ಬರುತ್ತವೆ ಎಂದು ನಾನು ವಿವರಣೆ ನೀಡಲು ಬಯಸುವುದಿಲ್ಲ ಎಂದರು.

ಗವರ್ನರ್ ವಿರೋಧಿಸಿ ಸರಕಾರ ಏನು ಸಾಧಿಸಲ್ಲ

ಮಂಡ್ಯ: ರಾಜ್ಯಪಾಲರ ವಿರುದ್ಧ ಗೋ ಬ್ಯಾಕ್, ಗೋ ಬ್ಯಾಕ್ ಎನ್ನುತ್ತಿರುವ ರಾಜ್ಯ ಕಾಂಗ್ರೆಸ್ ಏನು ಸಾಧಿಸುವುದಿಲ್ಲ. ಗೋ ಬ್ಯಾಕ್ ಗವರ್ನರ್ ಅನ್ನೋದು ಕೇವಲ ರಾಜಕೀಯ ನಾಟಕ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಗಂಭೀರ ಆರೋಪ ಮಾಡಿದರು. ಮಂಡ್ಯದಲ್ಲಿ ಮಾತನಾಡಿದ ಅವರು, ಈ ಹಿಂದೆ ಕಾಂಗ್ರೆಸ್ ರಾಜ್ಯಪಾಲರುಗಳ ವಿಷಯದಲ್ಲಿ ಹೇಗೆ ನಡೆದು ಕೊಂಡಿತ್ತು ಎಂಬುದರ ಬಗ್ಗೆ ಒಮ್ಮೆ ನೆನಪು ಮಾಡಿಕೊಂಡರೆ ಅವರ ಬಣ್ಣ ಏನೆಂದು ಗೊತ್ತಾಗುತ್ತದೆ. ವಿಶೇಷ ಅಧಿವೇಶನ ಕರೆದು ಅಲ್ಲಿ ಸಮಯ ಪೋಲು ಮಾಡುತ್ತಿದ್ದಾರೆ. ರಾಜ್ಯಪಾಲರು ಭಾಷಣ ಓದದಿ ರುವ ಅಥವಾ ಮೊಟಕುಗೊಳಿಸಿರುವ ಘಟನೆ ಇದೇ ಮೊದಲ ಬಾರಿ ನಡೆದಿದ್ದು ಅಲ್ಲ. ಜೆ.ಎಚ್.ಪಟೇಲರು ಸಿಎಂ ಆಗಿದ್ದಾಗ ಡಿಸಿಎಂ ಆಗಿದ್ದ ಸಿದ್ದರಾಮಯ್ಯ ಅವರು ಅಂದಿನ ಸಂದರ್ಭವನ್ನು ನೆನಪು ಮಾಡಿಕೊಳ್ಳಬೇಕುಎಂದರು.

ಜನ ಬಯಸುವ ಕಡೆ ಸ್ಪರ್ಧೆ

ಕರ್ನಾಟಕ ರಾಜ್ಯವೇ ನನ್ನ ಪರಿಮಿತಿ. ಜನರು ಎಲ್ಲಿ ಅಪೇಕ್ಷೆ ಮಾಡುತ್ತಾರೆ ಅಲ್ಲಿಂದ ನನ್ನ ಸ್ಪರ್ಧೆ ಮಾಡುತ್ತೇನೆ ಎಂದು ಕುಮಾರಸ್ವಾಮಿ ಹೇಳಿದರು. ಮಂಡ್ಯದಿಂದ ಲೋಕಸಭೆ ಚುನಾವಣೆಗೆ ನಿಲ್ಲುವ ಉದ್ದೇಶ ಇರಲಿಲ್ಲ. ಅನಿವಾರ್ಯವಾಗಿ ಎಲೆಕ್ಷನ್‌ಗೆ ನಿಂತೆ. ಸಂಸದನಾಗ್ತೀನಿ, ಕೇಂದ್ರ ಮಂತ್ರಿ ಆಗ್ತೀನಿ ಎಂದು ಗೊತ್ತಿರಲಿಲ್ಲ. ನಮ್ಮ ಪಕ್ಷದಿಂದ ಹೋದವರು ಜೆಡಿಎಸ್ ಕಥೆ ಮುಗಿಯಿತು ಎಂದರು. ಆದರೆ, ಪಕ್ಷ ಹೇಗೆಗಟ್ಟಿಯಾಗುತ್ತಿದೆ ಎನ್ನುವುದು ಅವರಿಗೆ ಗೊತ್ತಿಲ್ಲ ಎಂದರು.

ಸಾರಿಗೆ ಬಸ್ ಹರಿದು 4 ವರ್ಷದ ಮಗು ಸಾವು

ರಾಯಚೂರು: ಕೆಕೆಆರ್‌ಟಿಸಿ ಬಸ್ ಹರಿದು ನಾಲ್ಕು ವರ್ಷದ ಮಗು ಸಾವನ್ನಪ್ಪಿದ ಘಟನೆ ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಮದರಕಲ್ ಗ್ರಾಮದಲ್ಲಿ ನಡೆದಿದೆ. ಗಬ್ಬೂರು ಗ್ರಾಮದ ವಿದ್ಯಾಶ್ರೀ (4) ಮೃತ ಕಂದಮ್ಮ. ಸಾರಿಗೆ ಬಸ್ ಗೂಗಲ್‌ನಿಂದ ದೇವದುರ್ಗಕ್ಕೆ ತೆರಳುತ್ತಿತ್ತು. ಈ ವೇಳೆ ಅಚಾನಕ್ಕಾಗಿ ಅಡ್ಡ ಬಂದ ಕಾರಣ ಮಗುವಿನ ಮೇಲೆ ಬಸ್ ಹರಿದು ದುರ್ಘಟನೆ ಸಂಭವಿಸಿದೆ. ಬಸ್ ಬರುವುದನ್ನು ಗಮನಿಸದೆ ಮಗು ರಸ್ತೆ ದಾಟಲು ಮುಂದಾದಾಗ ಅಪಘಾತ ನಡೆದಿದೆ. ದಿಢೀರ್ ಆಗಿ ಅಡ್ಡ ಬಂದ ಕಾರಣ ಬಸ್ಸಿನ ಚಕ್ರದಡಿಗೆ ಸಿಲುಕಿ ಮಗು ಮೃತಪಟ್ಟಿದೆ. ಘಟನೆ ಸಂಬಂಧ ಗಬ್ಬೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿದ್ಯಾರ್ಥಿ ಸಾವು: 6 ಶಿಕ್ಷಕರ ವಿರುದ್ಧ ಕೇಸ್

ಯಾದಗಿರಿ: ಶಿಕ್ಷಕರು ಬೈದಿದಕ್ಕೆ ಮನನೊಂದು ವಿದ್ಯಾರ್ಥಿ ಆತ್ಮಹತ್ಯೆ ಕೇಸ್‌ಗೆ ಟ್ವಿಸ್ಟ್ ಸಿಕ್ಕಿದ್ದು, ಶಾಲೆಯ ಮುಖ್ಯ ಶಿಕ್ಷಕ ಅಯ್ಯಪ್ಪ ಸೇರಿ 6 ಜನರ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಯಾದಗಿರಿ ಜಿಲ್ಲೆಯ ವಡಗೇರಾ ಪಟ್ಟಣದ ಸರ್ಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿ ಪವನ್ (15) ಮೃತ ಬಾಲಕ. 9ನೇ ತರಗತಿಯಲ್ಲಿ ಓದುತ್ತಿದ್ದ ಎನ್ನಲಾಗಿದೆ. ಶಿಕ್ಷಕರು ಬೈದಿದ್ದಕ್ಕೆ ಮನನೊಂದು ಜ.21 ರಂದು ಶಾಲೆ ಆವರಣದ ಹಿಂಭಾಗದಲ್ಲಿರುವ ಗಿಡಕ್ಕೆ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದ. ಬಳಿಕ ಮಗನ ಸಾವಿನ ಬಗ್ಗೆ ಪೋಷಕರು ಅನುಮಾನ ವ್ಯಕ್ತಪಡಿಸಿದ್ದರು. ಈ ಹಿನ್ನೆಲೆ ಪವನ್ ತಂದೆ ಮಲ್ಲಪ್ಪ ವಡಗೇರಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಶಿಕ್ಷಕರು ಬೈದಿದಕ್ಕೆ ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಂಡನಾ? ಅಥವಾ ಬೇರೆ ಏನಾದರೂ ಕಾರಣ ಇದ್ಯಾ ಎಂದು ತನಿಖೆ ನಡೆಸುತ್ತಿದ್ದಾರೆ.

20 ಲಕ್ಷ ಬಾಂಗ್ಲಾ ನುಸುಳುಕೋರರು

ಕಲಬುರಗಿ: ರಾಜ್ಯದ ಒಕ್ಕೂಟ ವ್ಯವಸ್ಥೆಯನ್ನೇ ಬುಡ ಮೇಲು ಮಾಡುವ ರೀತಿಯಲ್ಲಿ ಬಾಂಗ್ಲಾ ನುಸುಳುಕೋರರು ರಾಜ್ಯಾದ್ಯಂತ ವ್ಯಾಪಕವಾಗಿ ನೆಲೆಸಿದ್ದು, ಅವರ ಸಂಖ್ಯೆ 20 ಲಕ್ಷಕ್ಕೂ ಅಧಿಕವಾಗಿದೆ ಎಂದು ಏಕನಾಥ್ ಶಿಂಧೆ ನೇತೃತ್ವದ ಶಿವಸೇನೆ ಪಕ್ಷದ ರಾಜ್ಯಾಧ್ಯಕ್ಷ ಸಿದ್ದಲಿಂಗ ಸ್ವಾಮೀಜಿ ಗಂಭೀರ ಆರೋಪ ಮಾಡಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, ಬೆಂಗಳೂರು ಸುತ್ತಮುತ್ತ ಸುಮಾರು 6 ಲಕ್ಷಕ್ಕೂ ಅಧಿಕ ಬಾಂಗ್ಲಾ ನುಸುಳುಕೋರರು ವಾಸವಾಗಿದ್ದು, ಉಳಿದ ಜಿಲ್ಲೆಗಳಲ್ಲಿ ಸುಮಾರು 10 ಲಕ್ಷಕ್ಕೂ ಹೆಚ್ಚು ಮಂದಿ ಅನಧಿಕೃತವಾಗಿ ನೆಲೆಸಿರುವ ವರದಿಗಳು ಲಭ್ಯವಿವೆ.

> ಅನಧಿಕೃತ ನುಸುಳುಕೋರರು ವಿಷಸರ್ಪದಂತೆ ಅಪಾಯಕಾರಿ. ಇಂತಹವರಿಗೆ ಆಶ್ರಯ ನೀಡಿದರೆ ರಾಜ್ಯದ ಅಭಿವೃದ್ಧಿಗೆ ತೀವ್ರ ಧಕ್ಕೆಯಾಗಲಿದೆ. ಬಾಂಗ್ಲಾದಲ್ಲಿ ಹಿಂದೂಗಳ ಮೇಲೆ ನಿರಂತರ ಹಲ್ಲೆ ಹಾಗೂ ಕೊಲೆಗಳು ನಡೆಯುತ್ತಿರುವ ಸಂದರ್ಭದಲ್ಲಿ ರಾಜ್ಯ ಸರಕಾರ ಜಯಂತಿಗಳಲ್ಲೇ ಕಾಲಹರಣ ಮಾಡುತ್ತಿದೆ.
> **-ಸಿದ್ದಲಿಂಗ ಸ್ವಾಮೀಜಿ,** ಶಿವಸೇನೆ ರಾಜ್ಯಾಧ್ಯಕ್ಷ

ಇವರು ರೇಷನ್ ಕಾರ್ಡ್ ಸೇರಿದಂತೆ ಸರಕಾರಿ ದಾಖಲೆಗಳನ್ನು ಅಕ್ರಮವಾಗಿ ಪಡೆದು ಬದುಕುತ್ತಿರುವುದು ಆತಂಕಕಾರಿ ವಿಷಯವಾಗಿದೆ. ಗುಜರಾತ್ ಹಾಗೂ ಅಸ್ಸಾಂ ರಾಜ್ಯಗಳಲ್ಲಿ ಕೈಗೊಂಡಿರುವ ಕ್ರಮಗಳ ಮಾದರಿಯಲ್ಲಿ ರಾಜ್ಯ ಸರಕಾರ ನುಸುಳು ಕೋರರನ್ನು ರಾಜ್ಯದಿಂದ ಹೊರಹಾಕ ಬೇಕೆಂದು ಆಗ್ರಹಿಸಿದರು.

ಹುಬ್ಬಳ್ಳಿಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ 42,345 ಮನೆಗಳ ಹಸ್ತಾಂತರಿಸಲಿರುವ ಸಿಎಂ ಸಿದ್ದರಾಮಯ್ಯ

ಬಡವರಿಗೆ ಕೊಳಗೇರಿ ಅಭಿವೃದ್ಧಿ ಮಂಡಳಿ ಸೂರು

ಹುಬ್ಬಳ್ಳಿ: ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ನಿರ್ಮಾಣ ಮಾಡಲಾಗಿರುವ 42,345 ಮನೆಗಳನ್ನು ಜ. 24 ರಂದು ರಂದು ನಗರದ ಮಂಟೂರು ರಸ್ತೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಬಡವರಿಗೆ ಹಸ್ತಾಂತರ ಮಾಡಲಾಗುವುದು.

ಸುಮಾರು 2 ಲಕ್ಷಕ್ಕೂ ಹೆಚ್ಚು ಜನ ಪಾಲ್ಗೊಳ್ಳುವ ನಿರೀಕ್ಷೆ ಇದೆ. ಈ ಹಿನ್ನೆಲೆ ನಗರದ ಪ್ರಮುಖ ರಸ್ತೆಗಳಲ್ಲಿ ಕಾಂಗ್ರೆಸ್ ನಾಯಕರ ಬ್ಯಾನರ್, ಕಟೌಟ್‌ಗಳು ರಾರಾಜಿಸುತ್ತಿವೆ. ಕಾರ್ಯಕ್ರಮಕ್ಕೆ ಸಿಎಂ ಸಿದ್ದರಾಮಯ್ಯ ಚಾಲನೆ ನೀಡಲಿದ್ದು, ಬಳಿಕ ಬಡವರಿಗೆ ಮನೆಗಳ ಹಕ್ಕು ಪತ್ರಗಳನ್ನು ವಿತರಣೆ ಮಾಡಲಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಗೃಹ ಸಚಿವ ಡಾ.ಜಿ.ಪರಮೇಶ್ವರ, ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ, ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಸೇರಿದಂತೆ ಸಚಿವರು, ಶಾಸಕರು, ಜನಪ್ರತಿನಿಧಿಗಳು ಭಾಗಿಯಾಗಲಿದ್ದಾರೆ.

ಈ ಯೋಜನೆಯಲ್ಲಿ ಒಟ್ಟು 1,80,253 ಮನೆಗಳ ನಿರ್ಮಾಣವಾಗುತ್ತಿದೆ. ರಾಜ್ಯ ಸರಕಾರ ತಲಾ 4 ಲಕ್ಷ ರು. ಕೊಡುತ್ತಿದ್ದು, ಜತೆಗೆ ಕೇಂದ್ರ ಮತ್ತು ರಾಜ್ಯ ಸರಕಾರದ ಸಬ್ಸಿಡಿ ಸಿಗಲಿದೆ. ಫಲಾನುಭವಿಗಳು ಕೇವಲ ಒಂದು ಲಕ್ಷ ರು. ಪಾವತಿಸಬೇಕು. ಕೊಳಗೇರಿ ವಾಸಿಗಳಿಗೆ 20,363 ಹಕ್ಕುಪತ್ರಗಳನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ನೀಡಲು ವ್ಯವಸ್ಥೆ ಮಾಡಲಾಗಿದೆ.

ಕೊಳಗೇರಿ ಪ್ರದೇಶ ಅಭಿವೃದ್ಧಿ ಮಂಡಳಿ ನಿರ್ಮಿಸಿರುವ ವಸತಿ ಸಮುಚ್ಚಯ.

ಕಾರ್ಯಕ್ರಮಕ್ಕೆ ಆಗಮಿಸುವ ಸಾರ್ವಜನಿಕರ ಸುಗಮ ಸಂಚಾರಕ್ಕಾಗಿ ಕಾರ್ಯಕ್ರಮ ಸ್ಥಳದಲ್ಲಿ 6 ಕಡೆಯಿಂದ ಆಗಮಿಸಲು ರಸ್ತೆ, ಪ್ರವೇಶ ವ್ಯವಸ್ಥೆ ಮಾಡಲಾಗಿದೆ. ಸುಮಾರು 2 ಸಾವಿರಕ್ಕೂ ಅಧಿಕ ಬಸ್‌ಗಳು, 7 ಸಾವಿರಕ್ಕೂ ಹೆಚ್ಚು ಕಾರ, ಟ್ಯಾಕ್ಸಿಗಳು ಸೇರಿದಂತೆ ದ್ವಿ ಚಕ್ರ ವಾಹನಗಳಲ್ಲಿ ಫಲಾನುಭವಿಗಳು, ಸಾರ್ವಜನಿಕರು ಕಾರ್ಯಕ್ರಮಕ್ಕೆ ಆಗಮಿಸಲಿದ್ದಾರೆ.

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಪ್ರಸಾದ ಅಬ್ಬಯ್ಯ ಉಸ್ತುವಾರಿಯಲ್ಲಿ ಪೂರ್ವಸಿದ್ಧತಾ ಕಾರ್ಯಗಳು ಅಚ್ಚುಕಟ್ಟಾಗಿ ನಡೆದಿವೆ. 300ಕ್ಕೂ ಹೆಚ್ಚು ಊಟದ ಕೌಂಟರ್‌ಗಳನ್ನು ತೆರೆಯಲಾಗಿದೆ. ಸಾವಿರಾರು ಸಂಖ್ಯೆಯಲ್ಲಿ ಫಲಾನುಭವಿಗಳು ಪಾಲ್ಗೊಳ್ಳುತ್ತಿದ್ದಾರೆ. ಅದರ ಜೊತೆಗೆ ನಾಲ್ಕು ಜಿಲ್ಲೆಗಳಿಂದ ಫಲಾನುಭವಿಗಳು, ಅಭಿಮಾನಿಗಳು, ಕಾರ್ಯಕರ್ತರು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವರು.

> ಈಗಾಗಲೇ ಮೊದಲ ಹಂತದಲ್ಲಿ 36,789 ಮನೆಗಳನ್ನು ವಿತರಿಸಲಾಗಿದೆ. ಎರಡನೇ ಹಂತದಲ್ಲಿ 42,345 ಮನೆಗಳನ್ನು ಹಂಚಿಕೆ ಮಾಡಲಾಗುತ್ತಿದೆ. ಮೂರನೇ ಹಂತದಲ್ಲಿ ಸುಮಾರು 30 ಸಾವಿರ ಮನೆಗಳನ್ನು ಹಂಚಿಕೆ ಮಾಡುವ ಗುರಿ ಹೊಂದಲಾಗಿದೆ. ಹುಬ್ಬಳ್ಳಿಯಲ್ಲಿ 1,008 ಸೇರಿ ಧಾರವಾಡ ಜಿಲ್ಲೆಯಲ್ಲಿ 2,767 ಮನೆ ಹಂಚಿಕೆ ಮಾಡಲಾಗುತ್ತಿದೆ.
> **-ಜಮೀರ್ ಅಹ್ಮದ್ ಖಾನ್,** ಅಲ್ಪಸಂಖ್ಯಾತರ ಕಲ್ಯಾಣ ಸಚಿವ

> ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ಬಡವರಿಗೆ ಉತ್ತಮ ಮನೆಗಳನ್ನು ನಿರ್ಮಿಸಿ, ವಿತರಣೆ ಮಾಡಲಾಗುತ್ತಿದೆ. ಆಸ್ಪತ್ರೆ, ಗ್ರಂಥಾಲಯ, ಶಾಪಿಂಗ್ ಮಾಲ್ ಸಹ ಇದು ಒಳಗೊಂಡಿರಲಿದೆ. ಬಾಲ್ಕನಿ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಬಹಳ ಸುಂದರವಾಗಿ ಮನೆಗಳನ್ನು ನಿರ್ಮಿಸಲಾಗಿದೆ. ಮನೆಗಳ ನಿರ್ಮಾಣದ ಶೈಲಿ ನನಗೆ ತೃಪ್ತಿ ತಂದಿದೆ. ಬೆಂಗಳೂರಿನ ಗೇಟೆಡ್ ಕಮ್ಯುನಿಟಿ ಮಾದರಿ ಮನೆಗಳನ್ನು ಕಟ್ಟಲಾಗಿದೆ.
> **-ಸಂತೋಷ ಲಾಡ್,** ಜಿಲ್ಲಾ ಉಸ್ತುವಾರಿ ಸಚಿವ

> ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ಬಡವರಿಗೆ ಸೂರು ಕಲ್ಪಿಸುವ ದೂರದೃಷ್ಟಿಯೊಂದಿಗೆ ಮನೆಗಳನ್ನು ನಿರ್ಮಿಸಿ, ವಿತರೆ ಮಾಡಲಾಗುತ್ತಿದೆ. ಆಸ್ಪತ್ರೆ, ಗ್ರಂಥಾಲಯ ಹಾಗೂ ಸಮುದಾಯ ಭವನವನ್ನು ಸಹ ಇದು ಒಳಗೊಂಡಿರಲಿದೆ. ಈಗಾಗಲೇ 860 ಮನೆಗಳನ್ನು ಆಶ್ರಯ ಯೋಜನೆಯಡಿಯಲ್ಲಿ ನಿರ್ಮಾಣ ಮಾಡಲಾಗಿದೆ.
> **-ಪ್ರಸಾದ ಅಬ್ಬಯ್ಯ,** ಕೊಳಗೇರಿ ಅಭಿವೃದ್ಧಿ ಮಂಡಳಿ ಅಧ್ಯಕ್ಷ

ತುಮಕೂರಿನಲ್ಲಿ ಟೆನಿಸ್ ಅಕಾಡೆಮಿ: ಪರಮೇಶ್ವರ್

ತುಮಕೂರು: ನಗರದಲ್ಲಿ ಟೆನಿಸ್ ಅಕಾಡೆಮಿ ಸ್ಥಾಪಿಸಲು ಕ್ರಮವಹಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಜಿ.ಪರಮೇಶ್ವರ್ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಗರದಲ್ಲಿ ಮುಂದಿನ ದಿನಗಳಲ್ಲಿ ಹಾಕಿ ಕ್ರೀಡಾಂಗಣ, ಈಜುಕೊಳ, ಟೆನಿಸ್ ಕೋರ್ಟ್ ನಿರ್ಮಾಣವಾದರೆ ಕ್ರೀಡೆಗೆ ಬೇಕಾದ ಅಗತ್ಯ ಸೌಕರ್ಯ ಕಲ್ಪಿಸಿದಂತಾಗುತ್ತದೆ. ಜಿಲ್ಲೆ ಮುಂದೆ ಕ್ರೀಡಾ ಕೇಂದ್ರವಾಗಿ ರೂಪುಗೊಳ್ಳಲಿದೆ. ಹಾಕಿ ಕ್ರೀಡಾಂಗಣ, ಈಜುಕೊಳ ನಿರ್ಮಾಣಕ್ಕೆ 6 ಕೋಟಿ ಅನುದಾನ ಕೊಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಮುಂದಿನ ಬಜೆಟ್‌ನಲ್ಲಿ ಇನ್ನೂ ಹೆಚ್ಚುವರಿಯಾಗಿ 2 ಕೋಟಿ ಒದಗಿಸುವಂತೆ ಮನವಿ ಮಾಡಲಾಗುವುದು. ಅಂತಾರಾಷ್ಟ್ರೀಯ ಮಟ್ಟದ ಕ್ರಿಕೆಟ್ ಕ್ರೀಡಾಂಗಣವನ್ನು 42 ಎಕರೆಯಲ್ಲಿ 160 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಲು ಚಾಲನೆ ನೀಡಲಾಗಿದೆ. ಶೀಘ್ರ ಕಾಮಗಾರಿ ಆರಂಭವಾಗಲಿದೆ ಎಂದು ಹೇಳಿದರು.

ಗುಂಡಿಕ್ಕಿಕೊಂಡು ಆತ್ಮಹತ್ಯೆ

ಅಂಕೋಲಾ: ತಾಲೂಕಿನ ಹಟ್ಟಿಕೇರಿಯಲ್ಲಿರುವ ತಮ್ಮ ನಿವಾಸದ ಎದುರಿನ ತುಳಸಿ ಕಟ್ಟೆಯ ಬಳಿ ಫಾರ್ಮಾಸಿಸ್ಟ್ ರಾಜೀವ ಪಿಕಳೆ ಅವರು ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ನಡೆದಿದೆ. ಹಟ್ಟಿಕೇರಿಯ ತಮ್ಮ ನಿವಾಸದ ಎದುರು ತುಳಸಿಕಟ್ಟೆ ಬಳಿ ಡಬಲ್ ಬ್ಯಾರಲ್ ಗನ್ ನಿಂದ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಾರವಾರದ ಖಾಸಗಿ ಆಸ್ಪತ್ರೆಯಲ್ಲಿ ಫಾರ್ಮಾಸಿಸ್ಟ್ ಆಗಿರುವ ಅವರು ಕೆಲ ದಿನಗಳ ಹಿಂದೆ ಅವಧಿ ಮೀರಿದ ಮಾತ್ರೆ ನೀಡಿದ ಬಗ್ಗೆ ವಿಡಿಯೊ ವೈರಲ್ ಆಗಿತ್ತು. ಘಟನೆಗೆ ಇದೇ ಕಾರಣ ಎನ್ನಲಾಗಿದೆ. ಘಟನೆ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ, ತನಿಖೆ ಕೈಗೊಂಡಿದ್ದಾರೆ.

ವಿಶ್ವವಾಣಿ

ಸಂಪಾದಕೀಯ

ಮಾಡೋದು ಅನಾಚಾರ, ಮನೆಮುಂದೆ..

ಗಾಜಾಪಟ್ಟಿ ಪ್ರದೇಶದಲ್ಲಿ ಶಾಶ್ವತವಾಗಿ ಶಾಂತಿ ನೆಲೆಸುವಂತಾಗಲು ಮತ್ತು ಸಂಭಾವ್ಯ ಜಾಗತಿಕ ಬಿಕ್ಕಟ್ಟನ್ನು ಪರಿಹರಿಸಲೆಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು 'ಶಾಂತಿ ಮಂಡಳಿ'ಯನ್ನು ಅನಾವರಣಗೊಳಿಸಿದ್ದಾರಂತೆ! ನಿರೀಕ್ಷೆಯಂತೆ ಪಾಕಿಸ್ತಾನವು ಈ ಮಂಡಳಿಯ ನಿಯಮಗಳಿಗೆ ಸಹಿ ಹಾಕಿದ್ದರೆ, ಭಾರತ ಸೇರಿದಂತೆ ಸಾಕಷ್ಟು ರಾಷ್ಟ್ರಗಳು ಈ ನಿಟ್ಟಿನಲ್ಲಿ ದೂರ ಉಳಿದಿವೆ. ಈ ಬೆಳವಣಿಗೆಯನ್ನು ಕಂಡು ಟ್ರಂಪ್ ಮಹಾಶಯರು ಒಳಗೊಳಗೇ ಗೊಂದಲಕ್ಕೆ ಈಡಾಗಿರಬೇಕು. ಟ್ರಂಪ್‌ರ ಈ ಜಗನ್ನಾಟಕವು 'ಕುರಿಯ ಚರ್ಮವನ್ನು ಹೊದ್ದ ತೋಳದ'ದ ಕಥೆಯನ್ನು ನೆನಪಿಸುವಂತಿದೆ. 'ಕಂಕುಳಲ್ಲಿ ದೊಣ್ಣೆ, ಕೈಯಲ್ಲಿ ಶರಣಾರ್ಥಿ' ಎಂಬ ಮಾತಿನಂತೆ, ಶಾಂತಿಮಂತ್ರ ಪಠಿಸುತ್ತಲೇ ತನಗಾಗದ ದೇಶಗಳ ಮೇಲೆ ಯುದ್ಧಕ್ಕೆ ತೆರಳುವ ಅಥವಾ ಯಾವುದಾದರೂ ಎರಡು ರಾಷ್ಟ್ರಗಳ ನಡುವೆ ಹಿತಾಸಕ್ತಿಯ ಸಂಘರ್ಷ ತಲೆದೋರಿದ್ದರೆ ಅವುಗಳ ನಡುವೆ ಯುದ್ಧಕ್ಕೆ ತಿದಿಯೂದುವ ಟ್ರಂಪ್, ತಮ್ಮನ್ನು ತಾವು 'ಶಾಂತಿದೂತ' ಎಂದು ಭ್ರಮಿಸಿದ್ದು, ನೊಬೆಲ್ ಶಾಂತಿ ಪುರಸ್ಕಾರಕ್ಕಾಗಿ ಹಟಮಾಡಿದ್ದು ಕಳೆದ ವರ್ಷದ ದೊಡ್ಡ ಜೋಕ್. ಇಷ್ಟು ಸಾಲದೆಂಬಂತೆ ಈಗ 'ಶಾಂತಿಮಂಡಳಿ' ಎಂಬ ಅಡ್ಡಾವನ್ನು ಹುಟ್ಟುಹಾಕಿ, ನಗೆಪಾಟಲಿನ ಸಂಪುಟಕ್ಕೆ ಮತ್ತೊಂದು ಅಧ್ಯಾಯವನ್ನು ಸೇರಿಸಿದ್ದಾರಷ್ಟೇ. ತನಗೆ ದುಡ್ಡು-ಕಾಸು ಸೇರಿದಂತೆ ಸಾಕಷ್ಟು ನೆಲೆಯಲ್ಲಿ ಅಮೆರಿಕ ನೆರವಾಗುತ್ತಿದೆ ಎಂಬ ದಾಕ್ಷಿಣ್ಯಕ್ಕೆ ಸಿಲುಕಿ ಪಾಕಿಸ್ತಾನವು ಈ ಮಂಡಳಿಯ ನಿಯಮಗಳಿಗೆ ಸಹಿಹಾಕಿರಬೇಕಷ್ಟೇ. ಮಿಕ್ಕಂತೆ, ಭಾರತ ಸೇರಿದಂತೆ ಅನೇಕ ರಾಷ್ಟ್ರಗಳು ಈ ನಿಟ್ಟಿನಲ್ಲಿ 'ತಾರಮ್ಮಯ್ಯ' ಮಾಡಿರುವುದು ಟ್ರಂಪ್‌ಗೆ ಒದಗಿದ 'ರಾಜತಾಂತ್ರಿಕ ತಪರಾಕಿ' ಎಂದರೆ ಅತಿಶಯೋಕ್ತಿಯೇನಲ್ಲ. ಇದರ ಅರಿವಿದ್ದೂ ಟ್ರಂಪ್ ತಮಗೇನೂ ಆಗಿಲ್ಲ ಎಂಬಂತೆ ನಾಟಕವಾಡುತ್ತಿದ್ದಾರೆ ಎನಿಸುತ್ತದೆ. ಆಡಲಿಬಿಡಿ, ಎಷ್ಟೇ ಆದರೂ ಅವರು 'ಜಗನ್ನಾಟಕ ಸೂತ್ರಧಾರಿ'ಯಲ್ಲವೇ?!

ಸೊಂಪಾದಕೀಯ

ಪ್ರೀತಿ ಕೊಂದ ಕೊಲೆಗಾತಿ/ರ

ಇತ್ತೀಚಿನ ದಿನಗಳಲ್ಲಿ ಕೊಲೆ ಸುದ್ದಿಗಳಲ್ಲಿ ಅತಿ ಹೆಚ್ಚು ಕೇಳಿಬರುತ್ತಿರೋದು 'ಗಂಡನನ್ನೇ ಕೊಂದ ಹೆಂಡತಿ', 'ಹೆಂಡತಿಯನ್ನೇ ಕೊಂದ ಗಂಡ' ಅನ್ನೋದು. ಈಗಿನ ಸಮಾಜದಲ್ಲಿ ಕ್ಷುಲ್ಲಕ ಕಾರಣಗಳಿಗೆ ಕೊಲೆಗಳು ಆಗುತ್ತಿವೆ. ರಸ್ತೆಯಲ್ಲಿ ಗಾಡಿ ಓಡಿಸುವಾಗ ತನ್ನ ಗಾಡಿಯನ್ನು ಓವರ್‌ಟೇಕ್ ಮಾಡಿದ ಅನ್ನೋ ಕಾರಣಕ್ಕೆ, ನನಗೆ ಹಾರ್ನ್ ಮಾಡಿದ ಅನ್ನೋ ಕಾರಣಕ್ಕೆ ತಗಾದೆ ತೆಗೆದು ಕೊನೆಗೆ ಅದು ಕೊಲೆಯಲ್ಲಿ

ಅಂತ್ಯ ಆಗಿರೋದನ್ನ ನಾವು ನೋಡಿದ್ದೇವೆ, ಕೇಳಿದ್ದೇವೆ. ಇನ್ನು ರಸ್ತೆಯಲ್ಲಿ ಮೆಟ್ರೋ ಕಾಮಗಾರಿಯಲ್ಲೂ ಅವಘಡಗಳು ಆಗಿ ಪ್ರಾಣ ಹೋಗಿವೆ. ಇನ್ನು ಅಪಘಾತಗಳಂತೂ ಕೇಳಲೇಬೇಡಿ. ನಾವು ಸುಮ್ಮನೇ ನಿಂತಿದ್ದರೂ ಬಂದು ಗುದ್ದಿ ಸಾಯಿಸುವ ಯಮಸ್ವರೂಪಿ ವಾಹನಗಳು ಇವೆ. ಹಾಗಾಗಿ ಈಗ ಮನುಷ್ಯ ಹೊರಗೆ ಹೋದರೆ ಜೀವಸಮೇತ ಮನೆಗೆ ವಾಪಸ್ ಬರೋದು ಖಾತ್ರಿಯಿಲ್ಲ ಅನ್ನೋ ಮಾತಿಗೆ ಸಾಕಷ್ಟು ಪುಷ್ಟಿ ದೊರೆತಿದೆ. ಆದರೆ ಹಾಗಂತ ಮನೆಯಲ್ಲೇ ಇದ್ದರೆ ಸೇಫ್ ಅನ್ನೋ ಭಾವನೆಗೂ ಈ ಗಂಡ-ಹೆಂಡಿರ ಕೊಲೆಗಳಿಂದ ಸಂಚಕಾರ ಬಂದಿದೆ. ಮನೆಯಲ್ಲೇ ಇದ್ದರೂ ಸಂಗಾತಿಯಿಂದಲೇ ಒಂದು ಗತಿ ಕಾಣಿಸಿಕೊಂಡ ಅನೇಕರು ಪ್ರತಿದಿನ ಕಾಣಿಸುತ್ತಿದ್ದಾರೆ. ಮೊದಲು ಇವೆಲ್ಲ ಕೂಲಿ ಕೆಲಸ ಮಾಡೋ ಗಂಡ ಕುಡಿದು ಬಂದು ಹೆಂಡತಿಯನ್ನು ಹೊಡೆದು ಸಾಯಿಸಿದ ಅನ್ನೋ ಮಟ್ಟಕ್ಕೆ ನಿಂತಿದ್ದವು. ಆದರೆ ಈಗ ಸೊಫಿಸ್ಟಿಕೇಟೆಡ್ ಅನಿಸಿಕೊಂಡ ಫ್ಯಾಮಿಲಿಗಳಲ್ಲೇ ಕೊಲೆಗಳು ಆಗುತ್ತಿವೆ. ಹಾಗಂತ ಇವು ಅಪರೂಪದ ಕೇಸುಗಳು ಅಂತೇನಲ್ಲ. ಗಂಡನನ್ನು ಕೊಲೆ ಮಾಡಿ ಸೂಟ್‌ಕೇಸಿನಲ್ಲಿ ತುಂಬಿಡೋದು, ಹೆಂಡತಿಯನ್ನು ಕೊಲೆ ಮಾಡಿ ಫ್ರಿಜ್‌ನಲ್ಲಿ ತುಂಬೋದು ಇವೆಲ್ಲಾ ಈಗ ಕಾಮನ್ ಆಗಿವೆ. ಇವುಗಳಲ್ಲಿ ಆಸ್ತಿ ಮತ್ತು ಅನೈತಿಕ ಸಂಬಂಧಗಳದ್ದೇ ಪಾರುಪತ್ಯ. ಇನ್ನು ಹೆಂಡತಿ ಮತ್ತು ಗಂಡನ ಮೇಲೆ ಆಪಾದನೆ ಹೊರಿಸಿ ಆತ್ಮಹತ್ಯೆ ಮಾಡಿಕೊಳ್ಳುವವರ ಸಂಖ್ಯೆಯೂ ಕಡಿಮೆ ಏನಿಲ್ಲ. ಒಟ್ಟಿನಲ್ಲಿ ಇವನ್ನೆಲ್ಲಾ ನೋಡಿ 'ನಮಗೆಲ್ಲಾ ಯಾರ್ ಬೀಳ್ತಾರೆ' ಅಂತ ಕೊರಗುತ್ತಿದ್ದ ಸಿಂಗಲ್‌ಗಳು ಮಾತ್ರ 'ಸದ್ಯ ಯಾರೂ ಬೀಳದೇ ಇದ್ದಿದ್ದೇ ಒಳ್ಳೇದಾಯ್ತು, ಇಲ್ಲಾಂದ್ರೆ ನಮ್ಮ ಹೆಣ ಬೀಳುತ್ತಿತ್ತು' ಅಂತ ಸಮಾಧಾನ ಮಾಡಿಕೊಳ್ಳುತ್ತಿದ್ದಾರೆ.

ಸಂಪಾದಕರ ಸದ್ಯಶೋಧನೆ

ಶ್ವಾನರಕ್ಷಕ ಪಟ್ಟಿ

ನಾನು ಹಿಂದಿನ ವರ್ಷ ಆಫ್ರಿಕಾದ ಕೀನ್ಯಾದ ರಸ್ತೆಗಳಲ್ಲಿ ಒಂದು ಅಪರೂಪದ ದೃಶ್ಯ ನೋಡಿದೆ. ಕತ್ತಲೆಯಲ್ಲಿ ನಿಶ್ಶಬ್ದವಾಗಿ ಓಡಾಡುವ ಬೀದಿನಾಯಿಗಳ ಕೊರಳಿನಲ್ಲಿ ಕೆಂಪು ಬಣ್ಣದ ಬೆಳಕು ಮಿನುಗುವುದು ಕಾಣಿಸಿತು. ಇದು ಕೇವಲ ಅಲಂಕಾರವಲ್ಲ, ಬದಲಾಗಿ ಆ ಮೂಕ ಪ್ರಾಣಿಗಳ ಜೀವ ಉಳಿಸುವ ಒಂದು ಅದ್ಭುತ ತಂತ್ರಜ್ಞಾನ ಎಂಬುದು ಗೊತ್ತಾಯಿತು. ಸೌರಶಕ್ತಿಯಿಂದ ನಡೆಯುವ ಈ 'ಮಿನುಗುವ ಪಟ್ಟಿ'ಗಳು ಇಂದು ಕೀನ್ಯಾದ ಬೀದಿನಾಯಿಗಳ ಪಾಲಿಗೆ ರಕ್ಷಾಕವಚವಾಗಿವೆ. ಏನಿದು ಮಿನುಗುವ ಪಟ್ಟಿಯ ತಂತ್ರಜ್ಞಾನ? ಕೀನ್ಯಾದ ನಗರ ಮತ್ತು ಗ್ರಾಮೀಣ ಭಾಗಗಳಲ್ಲಿ ಬೀದಿನಾಯಿಗಳ ಸಂಖ್ಯೆ ಹೆಚ್ಚಿದೆ. ಕತ್ತಲೆಯಲ್ಲಿ ಈ ನಾಯಿಗಳು ರಸ್ತೆ ದಾಟುವಾಗ ವಾಹನ ಸವಾರರಿಗೆ ಕಾಣಿಸುವುದಿಲ್ಲ, ಇದರಿಂದಾಗಿ ಅಪಘಾತಗಳು ಸಂಭವಿಸುತ್ತಿದ್ದವು. ಈ ಸಮಸ್ಯೆಗೆ ಪರಿಹಾರವಾಗಿ 'ಸೋಲಾರ್ ಕಾಲರ್'ಗಳನ್ನು ಪರಿಚಯಿಸಲಾಗಿದೆ. ಈ ಪಟ್ಟಿಗಳು ಸೌರಶಕ್ತಿಯಿಂದ ಚಾರ್ಜ್ ಆಗುತ್ತವೆ. ಸೂರ್ಯನ ಬೆಳಕಿರುವಾಗ ಶಕ್ತಿಯನ್ನು ಸಂಗ್ರಹಿಸಿಟ್ಟುಕೊಳ್ಳುವ ಇವು, ರಾತ್ರಿಯಾಗುತ್ತಿದ್ದಂತೆ ಕಾರ್ಯಾರಂಭ ಮಾಡುತ್ತವೆ. ವಿಶೇಷವೆಂದರೆ, ಇವುಗಳಲ್ಲಿ ಯಾವುದೇ ಸ್ವಿಚ್ ಅಥವಾ ಬಟನ್‌ಗಳಿಲ್ಲ. ನಾಯಿಗಳು ಚಲಿಸಲು ಪ್ರಾರಂಭಿಸಿದಾಗ ಅದರ ಸಂವೇದಕಗಳು (ಸೆನ್ಸರ್) ಸಕ್ರಿಯಗೊಂಡು ಕೆಂಪು ಬೆಳಕನ್ನು ಹೊರಸೂಸುತ್ತವೆ. ದೂರದಿಂದ ಬರುವ ವಾಹನ ಸವಾರರಿಗೆ ಕತ್ತಲೆಯಲ್ಲಿ ಕಪ್ಪು ಅಥವಾ ಕಂದು ಬಣ್ಣದ ನಾಯಿಗಳು ರಸ್ತೆಯ ಮೇಲೆ ಇರುವುದು ಗೋಚರಿಸುವುದಿಲ್ಲ. ಆದರೆ ಈ ಮಿನುಗುವ ಪಟ್ಟಿಗಳಿಂದಾಗಿ, ನಾಯಿಗಳು ರಸ್ತೆ ಸಮೀಪ ಬಂದ ತಕ್ಷಣ ಕೆಂಪು ಬೆಳಕು ಮಿನುಗುತ್ತದೆ. ಇದು ವಾಹನ ಚಾಲಕರಿಗೆ ಮುನ್ನೆಚ್ಚರಿಕೆ ನೀಡುತ್ತದೆ. ನೂರಾರು ಮೀಟರ್ ದೂರದಿಂದಲೇ ಬೆಳಕು ಕಾಣಿಸುವುದರಿಂದ ಚಾಲಕರು ವೇಗವನ್ನು ಕಡಿಮೆ ಮಾಡಬಹುದು ಅಥವಾ ವಾಹನವನ್ನು ನಿಲ್ಲಿಸಬಹುದು. ಇದರಿಂದ ಪ್ರಾಣಿಗಳ ಜೀವ ಉಳಿಯುವುದಲ್ಲದೇ, ಚಾಲಕರಿಗೂ ಆಗುವ ಅಪಘಾತದ ಅಪಾಯ ತಪ್ಪುತ್ತದೆ. ಬೀದಿ ಪ್ರಾಣಿಗಳ ಆರೈಕೆ ಮಾಡುವವರು ಪ್ರತಿದಿನ ಅವುಗಳ ಬಳಿ ಹೋಗಿ ಬ್ಯಾಟರಿ ಬದಲಾಯಿಸುವುದು ಅಥವಾ ಲೈಟ್ ಆನ್ ಮಾಡುವುದು ಅಸಾಧ್ಯದ ಮಾತು. ಈ ತಂತ್ರಜ್ಞಾನದ ದೊಡ್ಡ ಗುಣವೆಂದರೆ ಇದರ ಸ್ವಾವಲಂಬನೆ. ಹಗಲಿನಲ್ಲಿ ಪ್ರಕೃತಿಯಿಂದಲೇ ಚಾರ್ಜ್ ಆಗುತ್ತದೆ. ನಾಯಿ ಮಲಗಿದ್ದಾಗ ಬೆಳಕು ಆಫ್ ಆಗಿರುತ್ತದೆ, ಚಲಿಸಿದಾಗ ಮಾತ್ರ ಉರಿಯುತ್ತದೆ. ಇದರಿಂದ ಶಕ್ತಿಯ ಉಳಿತಾಯವಾಗುತ್ತದೆ. ಮಳೆ ಮತ್ತು ಧೂಳನ್ನು ತಡೆದುಕೊಳ್ಳುವ ಸಾಮರ್ಥ್ಯ ಈ ಪಟ್ಟಿಗಳಿಗಿದೆ. ನಿಮಗೆ ತಿಳಿದಿರುವಂತೆ, ಪ್ರವಾಸೋದ್ಯಮದಲ್ಲಿ ಕೀನ್ಯಾ ವಿಶ್ವಪ್ರಸಿದ್ಧ. ಸಫಾರಿಗಳಿಗೆ ಹೋಗುವ ಪ್ರವಾಸಿಗರು ರಾತ್ರಿ ವೇಳೆ ರಸ್ತೆಗಳಲ್ಲಿ ಪ್ರಯಾಣಿಸುವಾಗ ಇಂಥ ದೃಶ್ಯಗಳನ್ನು ಕಂಡು ಆಶ್ಚರ್ಯಚಕಿತರಾಗುತ್ತಿದ್ದಾರೆ. ಇದು ಕೇವಲ ತಂತ್ರಜ್ಞಾನದ ಪ್ರದರ್ಶನವಲ್ಲ, ಬದಲಾಗಿ ಒಂದು ದೇಶ ತನ್ನ ಪ್ರಾಣಿ ಸಂಕುಲವನ್ನು ಹೇಗೆ ಗೌರವಿಸುತ್ತದೆ ಎಂಬುದಕ್ಕೆ ಸಾಕ್ಷಿ. ಬೀದಿನಾಯಿಗಳನ್ನು ಕೇವಲ 'ಉಪದ್ರವಿ'ಗಳು ಎಂದು ನೋಡುವ ಬದಲು, ಅವುಗಳಿಗೂ ಬದುಕುವ ಹಕ್ಕಿದೆ ಎಂದು ತೋರಿಸಿಕೊಡುವ ಮಾನವೀಯ ಪ್ರಯತ್ನವಿದು. ಈ ಯೋಜನೆಯು ಕೀನ್ಯಾದಲ್ಲಿ ಪ್ರಾಣಿಗಳ ಬಗೆಗಿನ ಜನರ ದೃಷ್ಟಿಕೋನವನ್ನೇ ಬದಲಿಸಿದೆ. ಹಿಂದೆ ನಾಯಿಗಳನ್ನು ಕೇವಲ ಕಾವಲಿಗೆ ಅಥವಾ ಹೊರೆ ಎಂದು ಭಾವಿಸುತ್ತಿದ್ದವರು, ಈಗ ಅವುಗಳ ಸುರಕ್ಷತೆಯ ಬಗ್ಗೆ ಯೋಚಿಸುತ್ತಿದ್ದಾರೆ. ಈ ನಾಯಿಗಳು ತಮಗಾಗಿ ರಕ್ಷಣೆ ಬೇಡುವುದಿಲ್ಲ ಅಥವಾ ಬೊಗಳಿ ಎಚ್ಚರಿಸುವುದಿಲ್ಲ. ಆದರೆ ಅವುಗಳ ಕೊರಳಿನ ಬೆಳಕು ಅವುಗಳ ಪರವಾಗಿ ಮಾತನಾಡುತ್ತದೆ. ದೊಡ್ಡ ದೊಡ್ಡ ರಸ್ತೆದೀಪಗಳನ್ನು ಅಳವಡಿಸಲು ಸಾಧ್ಯವಾಗದ ಗ್ರಾಮೀಣ ಭಾಗಗಳಲ್ಲಿ ಈ ಪಟ್ಟಿಗಳು ಅತ್ಯಂತ ಕಡಿಮೆ ವೆಚ್ಚದಲ್ಲಿ ಜೀವಗಳನ್ನು ಉಳಿಸುತ್ತಿವೆ. ಭಾರತದಂಥ ದೇಶಗಳಲ್ಲಿ, ವಿಶೇಷವಾಗಿ ಬೆಂಗಳೂರಿನಂಥ ನಗರಗಳಲ್ಲಿ ಬೀದಿನಾಯಿಗಳ ಸಂಖ್ಯೆ ಅಪಾರವಾಗಿದೆ. ರಾತ್ರಿ ಹೊತ್ತು ಹೆದ್ದಾರಿಗಳಲ್ಲಿ ನಾಯಿಗಳು ಸಿಲುಕಿ ಸಾಯುವ ಪ್ರಕರಣಗಳು ನಿತ್ಯ ನಡೆಯುತ್ತವೆ. ಕೀನ್ಯಾದ ಈ 'ಸೋಲಾರ್ ಕಾಲರ್' ಮಾದರಿಯನ್ನು ಭಾರತದಲ್ಲೂ ಅಳವಡಿಸಿಕೊಂಡರೆ ಸಾವಿರಾರು ಮೂಕಜೀವಿಗಳನ್ನು ರಕ್ಷಿಸಬಹುದು. ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಬೆಳಕಿನ ಸೌಲಭ್ಯವಿಲ್ಲದ ಹಳ್ಳಿಗಳಲ್ಲಿ ಇದು ಕ್ರಾಂತಿಕಾರಿ ಬದಲಾವಣೆ ತರಬಲ್ಲದು.

ದಕ್ಷಿಣ ಭಾರತದ ಸಿನಿಮಾಗಳ ನಾಗಾಲೋಟ

ವೀಕೆಂಡ್ ವಿತ್ ಮೋಹನ್

ಮೋಹನ್ ವಿಶ್ವ
camohanbn@gmail.com

ಒಂದಾನೊಂದು ಕಾಲದಲ್ಲಿ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಭಾರತೀಯ ಚಿತ್ರರಂಗವೆಂದರೆ 'ಬಾಲಿವುಡ್'ಗೆ ಮಾತ್ರ ಸೀಮಿತವಾಗಿತ್ತು. ನ್ಯೂಯಾರ್ಕ್ ನಗರದ ಕೆಂಪುಹಾಸಿನ ಮೇಲೆ ನಡೆಯುವ 'ಆಸ್ಕರ್' ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ ಬಾಲಿವುಡ್ ಗಣ್ಯರು ಮಾತ್ರ ಕಾಣಿಸಿಕೊಳ್ಳುತ್ತಿದ್ದರು. ಎ. ಆರ್.ರೆಹಮಾನ್ ಸಂಗೀತ ನೀಡಿದ್ದ 'ಸ್ಲಂ ಡಾಗ್ ಮಿಲೇನಿಯರ್' ಚಿತ್ರಕ್ಕೆ ಆಸ್ಕರ್ ಬಂದಿತ್ತು. ಆದರೆ ಆ ಚಿತ್ರವನ್ನು ನಿರ್ಮಾಣ ಮಾಡಿದ್ದು ಭಾರತೀಯ ನಿರ್ಮಾಪಕನಲ್ಲ. ಪಾಶ್ಚಿಮಾತ್ಯ ಚಿತ್ರರಂಗದ ಅನೇಕರು ತಮ್ಮ ಚಲನಚಿತ್ರಕ್ಕೆ ಸಿಗಬೇಕಾದ ಆಸ್ಕರ್ ಪ್ರಶಸ್ತಿಗಾಗಿ ಲಾಬಿ ಮಾಡುವ ವಿಷಯ ರಹಸ್ಯವಾಗಿ ಉಳಿದಿಲ್ಲ. ಬಹುತೇಕ ಬಾರಿ ಹಾಲಿವುಡ್ ಚಲನಚಿತ್ರಗಳಿಗೆ ಮಾತ್ರ ಆಸ್ಕರ್ ಪ್ರಶಸ್ತಿ ಸಿಗುವಂತೆ ಮಾಡಿ ಅಲ್ಲಿನ ಚಿತ್ರರಂಗವನ್ನು ಜಗತ್ತಿನ 'ನಂಬರ್-1' ಮಾಡಿರುವ ಇತಿಹಾಸವಿದೆ. ಮಹಾಭಾರತದ ಅನೇಕ ಪಾತ್ರಗಳನ್ನು ಬಳಸಿಕೊಂಡು, ಆ ಪಾತ್ರಗಳಿಗೆ ಮರುನಾಮಕರಣ ಮಾಡಿ ಹಾಲಿವುಡ್ ಚಿತ್ರಗಳನ್ನು ನಿರ್ಮಿಸಿ ಆಸ್ಕರ್ ಪ್ರಶಸ್ತಿ ಪಡೆದುಕೊಂಡಿರುವ ಉದಾಹರಣೆಗಳು ಇವೆ.

ಭಾರತದಲ್ಲಿಯೂ ಅವರು ಸೃಷ್ಟಿಸುವ ಪಾತ್ರಗಳ ಬಗ್ಗೆ ಮೆಚ್ಚುಗೆ ವ್ಯಕ್ತವಾಗುತ್ತಿತ್ತು. ಆದರೆ ನಮ್ಮದೇ ಪಾತ್ರಗಳನ್ನು ಬಳಸಿಕೊಂಡು ಆಧುನಿಕ ಸ್ಪರ್ಶ ನೀಡಿ ನಮ್ಮ ಮುಂದಿಟ್ಟಿರುವುದು ಅನೇಕ ಭಾರತೀಯರ ಅರಿವಿಗೆ ಬರುತ್ತಿರಲಿಲ್ಲ. 'ಹಲ್ಕ್' ಎಂಬ ಪಾತ್ರಧಾರಿಯನ್ನು ಮಹಾನ್ ದೈತ್ಯನನ್ನಾಗಿ ಬಿಂಬಿಸಿ ಆಧುನಿಕ ಸ್ಪರ್ಶ ನೀಡಿ ದೊಡ್ಡ ಚಿತ್ರವನ್ನು ನಿರ್ಮಾಣ ಮಾಡಿದರು. ಈ ಪಾತ್ರಕ್ಕೆ ಸ್ಫೂರ್ತಿ ಮಹಾಭಾರತದ 'ಭೀಮ'ನೆಂಬುದು ಸ್ಪಷ್ಟ. ಭಾರತೀಯರು 'ಹಲ್ಕ್' ಪಾತ್ರಕ್ಕೆ ಶಿಳ್ಳೆ ಹೊಡೆದರು. ಭಾರತೀಯರ ಮಕ್ಕಳ ಆಟಿಕೆಗಳಲ್ಲಿ ಹಲ್ಕ್ ಗೊಂಬೆ ಸಾಮಾನ್ಯವಾಗಿಬಿಟ್ಟಿದೆ. ವಿದೇಶಗಳಲ್ಲಿ 'ಹಾಲೋವೀನ್' ಹಬ್ಬ ಆಚರಿಸಿ ದೆವ್ವದ ವೇಷಧಾರಿಗಳನ್ನು ಸೃಷ್ಟಿಸಲಾಗುತ್ತದೆ. ಇಂದು ಇಡೀ ಜಗತ್ತಿಗೆ ಈ ಆಚರಣೆ ಹಬ್ಬಿದೆ. ಭಾರತೀಯರು ಕೂಡ ತಮ್ಮ ಮಕ್ಕಳಿಗೆ ದೆವ್ವಗಳ ವೇಷ ಧರಿಸಿ ರಸ್ತೆಗೆ ಇಳಿಸುತ್ತಾರೆ. ಹಾಗಾಗಿ ನಮ್ಮ ಪೋಷಕರು ಮಹಾಭಾರತದ ಭೀಮನ ಬಗ್ಗೆ ಸಣ್ಣ ವಯಸ್ಸಿನಿಂದಲೂ ಮಕ್ಕಳಿಗೆ ಹೇಳಿಕೊಡಬೇಕು. ಮಹಾಲಯ ಅಮಾವಾಸ್ಯೆಯ ಸಂದರ್ಭದ ಪಿತೃ ಪಕ್ಷದ ಮಹತ್ವವನ್ನು ಮಕ್ಕಳಿಗೆ ಹೇಳಿಕೊಡಬೇಕು.

1980ರಿಂದ 2010ರ ನಡುವಿನ ಅವಧಿಯನ್ನು ಗಮನಿಸಿದರೆ, ಬಾಲಿವುಡ್ ಅಂಗಳದಲ್ಲಿ ಭಾರತೀಯ ಇತಿಹಾಸ ಮತ್ತು ಪರಂಪರೆಯನ್ನು ಬಿಂಬಿಸುವ ಚಿತ್ರಗಳು ಹೆಚ್ಚಾಗಿ ನಿರ್ಮಾಣವಾಗಲಿಲ್ಲ. ಹೆಚ್ಚಾಗಿ ಪ್ರೇಮಕಥೆಗಳು, ಭೂಗತ ಲೋಕದ ಕಥೆಗಳು, ಮುಸಲ್ಮಾನರನ್ನು ಓಲೈಸುವ ಪಾತ್ರಗಳು, ಗ್ರಾಫಿಕ್ ಹೆಚ್ಚಾಗಿರುವ ಕಥಾಹಂದರದ ಚಿತ್ರಗಳು ನಿರ್ಮಾಣವಾಗಿದ್ದವು. ನೂರಾರು ಕೋಟಿ ಸಂಭಾವನೆ ಪಡೆಯುತ್ತಿದ್ದ 'ಖಾನ್'ಗಳು ಭಾರತೀಯ ಸಂಸ್ಕೃತಿಯನ್ನು ಬಿಂಬಿಸುವ ಚಿತ್ರಗಳಲ್ಲಿ ಹೆಚ್ಚಾಗಿ ಅಭಿನಯಿಸಲಿಲ್ಲ. ಆಸ್ಕರ್ ಅಂಗಳಕ್ಕೆ ಭಾರತ ಚಿತ್ರರಂಗದ ಚೆಂಡು ಬಿದ್ದದ್ದು ಬಹಳ ಕಡಿಮೆ. ಒಂದು ಕಾಲದಲ್ಲಿ ಹಾಲಿವುಡ್ ಮೋಹಕ್ಕೊಳಗಾದ ಬಾಲಿವುಡ್ ಮಂದಿ ಅದೇ ಮಾದರಿಯ ಚಿತ್ರಗಳನ್ನು ನಿರ್ಮಾಣ ಮಾಡ ಹೊರಟು ಕೈ ಸುಟ್ಟುಕೊಂಡಿದ್ದರು. ಈಗ ಕಾಲ ಬದಲಾಗಿದೆ. ದಕ್ಷಿಣ ಭಾರತದ ಚಿತ್ರಗಳು ನೂರಾರು ಕೋಟಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿವೆ. ಭಾರತೀಯ ಇತಿಹಾಸ ಮತ್ತು ಪರಂಪರೆಯನ್ನು ಒಳಗೊಂಡಂಥ ಚಿತ್ರಗಳ ನಿರ್ಮಾಣವಾಗುತ್ತಿದೆ. ದೇಶದಾದ್ಯಂತ ಪ್ರೇಕ್ಷಕರು ಸಿನಿಮಾ ಮಂದಿರಕ್ಕೆ ಬರುತ್ತಿದ್ದಾರೆ, ದಕ್ಷಿಣ ಭಾರತದ 'ಪ್ಯಾನ್ ಇಂಡಿಯಾ' ಸಿನಿಮಾಗಳು ಉತ್ತರ ಭಾರತದಲ್ಲಿಯೂ ಹಣ ಗಳಿಸುತ್ತಿವೆ. ರಾಜಮೌಳಿ ನಿರ್ದೇಶಿಸಿದ 'ಬಾಹುಬಲಿ' ಚಿತ್ರದ ಎರಡೂ ಅವತರಣಿಕೆಗಳು ಸಾವಿರ ಕೋಟಿಗೂ ಅಧಿಕ ಹಣವನ್ನು ಗಳಿಸಿದ್ದವು. ರಾಜಮೌಳಿ ನಿರ್ದೇಶನದ ಮತ್ತೊಂದು ಚಿತ್ರ 'ಆರ್.ಆರ್.ಆರ್' ಚಿತ್ರದ ಗೀತೆಯು ಆಸ್ಕರ್ ಪ್ರಶಸ್ತಿ ಪಡೆಯುವ ಮೂಲಕ ಇಡೀ ಜಗತ್ತಿಗೆ ದಕ್ಷಿಣ ಭಾರತದ ಸಿನಿಮಾಗಳ ತಾಕತ್ತನ್ನು ತೋರಿಸಿತ್ತು. ಆ ಚಿತ್ರದ 'ನಾಟು ನಾಟು' ಹಾಡನ್ನು ಒಮ್ಮೆ ಕೇಳಿದರೆ ಪುನಃ ಕೇಳಬೇಕೆನಿಸುತ್ತದೆ. ಬ್ರಿಟಿಷರ ಗುಲಾಮಿ ಮನಸ್ಥಿತಿಯನ್ನು ಬಿಚ್ಚಿಡುವ ಚಿತ್ರ ಅದಾಗಿತ್ತು. ಅಂಥ ಚಿತ್ರದ ಹಾಡನ್ನು ಪಾಶ್ಚಿಮಾತ್ಯರು ಆಸ್ಕರ್ ಪ್ರಶಸ್ತಿಗೆ ಆಯ್ಕೆ ಮಾಡಿದ್ದರು. ಆ ಚಿತ್ರದಲ್ಲಿ ಬಾಲಿವುಡ್ ಶೈಲಿಯ ಕಥೆಯಿಲ್ಲ, ಆಂಧ್ರಪ್ರದೇಶದ ಇಬ್ಬರು ಸ್ವಾತಂತ್ರ್ಯ ಹೋರಾಟಗಾರರ ನೈಜ ಕಥೆಯನ್ನಾಧರಿಸಿ ಮಾಡಲಾಗಿತ್ತು. ಹಾಡಿನ ಸಾಹಿತ್ಯವು ಟೈಟಾನಿಕ್ ಸಿನಿಮಾ ರೀತಿಯಲ್ಲಿ ನಿರ್ಮಾಣವಾಗಿಲ್ಲ. ಸ್ಥಳೀಯ ಪರಂಪರೆಯನ್ನು ಬಿಂಬಿಸುವ ವಿಷಯಗಳನ್ನು ಹಾಡಿನಲ್ಲಿ ಸಾಹಿತ್ಯದ ಮೂಲಕ ಹೇಳಲಾಗಿದೆ. ಆಂಧ್ರಪ್ರದೇಶದ ಬುಡಕಟ್ಟು ಜನಾಂಗದವರನ್ನು ಪ್ರತಿನಿಧಿಸುವ ಸಾಹಿತ್ಯವನ್ನು ಬಳಸಿಕೊಂಡು ಎಂ.ಎಂ ಕೀರವಾಣಿ ಅದ್ಭುತವಾಗಿ ಹಾಡನ್ನು ಸಂಯೋಜಿಸಿದ್ದರು. ಒಂದು ಸಣ್ಣ ಬುಡಕಟ್ಟು ಜನಾಂಗದ ಕಥೆಯನ್ನಾಧರಿಸಿದ ಈ ಚಿತ್ರ ನ್ಯೂಯಾರ್ಕ್ ಅಂಗಳದಲ್ಲಿ ಜಗತ್ತಿನ ಅತ್ಯುನ್ನತ ಪ್ರಶಸ್ತಿ ಎನಿಸಿಕೊಂಡಿರುವ ಆಸ್ಕರ್ ಪಡೆಯುವುದು ಸಾಮಾನ್ಯದ ಮಾತಲ್ಲ.

ಕನ್ನಡದ 'ಕಾಂತಾರ' ಸಿನಿಮಾ ದಕ್ಷಿಣ ಕನ್ನಡದ ದೈವಾರಾಧನೆಯನ್ನು ಬಿಂಬಿಸುತ್ತದೆ. ಪ್ರಕೃತಿ ಮತ್ತು ಮನುಷ್ಯನ ನಡುವಿನ ಒಡನಾಟವನ್ನು ಬಿಂಬಿಸುವ ಈ ಸಿನಿಮಾ ದೇಶದಾದ್ಯಂತ 400 ಕೋಟಿಗೂ ಅಧಿಕ ಗಳಿಕೆಯನ್ನು ಮಾಡಿತ್ತೆಂಬ ವರದಿಯಿದೆ. ಈ ಚಿತ್ರದಲ್ಲಿ ಬಾಲಿವುಡ್ ಮಾದರಿಯಲ್ಲಿ ಪ್ರೇಮಕಥೆಯನ್ನು ಅತಿಯಾಗಿ ತೋರಿಸಿರಲಿಲ್ಲ. ವೀಕ್ಷಕರಿಗೆ ಇಷ್ಟವಾದದ್ದು ದೈವಾರಾಧನೆಯೇ ಹೊರತು ಪ್ರೇಮಕಥೆಯಲ್ಲ. ಕಾಡಂಚಿನ ಸಣ್ಣ ಹಳ್ಳಿಯಲ್ಲಿ ನಡೆಯುವ ಚಿತ್ರಕತೆ ಭಾರತದಾದ್ಯಂತ ಈ ಮಟ್ಟದ ಯಶಸ್ಸನ್ನು ಗಳಿಸುತ್ತದೆಯೆಂದು ಯಾರೂ ಊಹಿಸಿರಲಿಲ್ಲ. ನಂತರ ಬಿಡುಗಡೆಯಾದ ಕಾಂತಾರದ ಮತ್ತೊಂದು ಪಾರ್ಟ್ ದೇಶದಾದ್ಯಂತ ಜನರ ಮೆಚ್ಚುಗೆ ಗಳಿಸಿತು. ಸ್ಥಳೀಯ ಪಾಳೇಗಾರ ಮತ್ತು ಕಾಡಿನಲ್ಲಿ ವಾಸಿಸುವ ಆದಿವಾಸಿಗಳ ನಡುವೆ ನಡೆಯುವ ತಿಕ್ಕಾಟದಲ್ಲಿ, ದೈವಬಲವನ್ನು ಅದ್ಭುತವಾಗಿ ತೋರಿಸಲಾಗಿತ್ತು. ಉತ್ತರ ಭಾರತದ ಪ್ರೇಕ್ಷಕರು ಕೂಡ ಕಾಂತರಾದ ಎರಡೂ ಭಾಗಗಳನ್ನು ಶ್ಲಾಘಿಸಿದರು.

'ಕೆ.ಜಿ.ಎಫ್' ಮತ್ತೊಂದು ಮೈಲಿಗಲ್ಲನ್ನು ಮುಟ್ಟಿಸಿದ ಕನ್ನಡದ ಚಿತ್ರ. ಮೊದಲ ಭಾಗ ಸುಮಾರು 400 ಕೋಟಿ ಗಳಿಸಿತ್ತೆಂಬ ವರದಿಯಿದೆ. ಮತ್ತೊಂದೆಡೆ ಬಾಲಿವುಡ್ ಅಂಗಳದಲ್ಲಿ ಎರಡನೇ ಭಾಗವು ಹಿಂದಿ ಮಾರುಕಟ್ಟೆಯಲ್ಲಿ ಸುಮಾರು 400 ಕೋಟಿ ಬಾಚಿಕೊಂಡಿದ್ದ ವರದಿಗಳಿವೆ. ಬಾಲಿವುಡ್ ಅನ್ನು ಮೀರಿಸುವಂತೆ ಭೂಗತ ಜಗತ್ತನ್ನು ಈ ಚಿತ್ರದಲ್ಲಿ ಬಿಂಬಿಸಲಾಗಿತ್ತು. ಬಾಲಿವುಡ್ ಸಾಮ್ರಾಜ್ಯದ ರಾಜಧಾನಿ ಎನಿಸಿಕೊಂಡಿರುವ ಮುಂಬೈ ನಗರದ ಪ್ರೇಕ್ಷಕರಿಗೆ ಕನ್ನಡದ ನಟ 'ಯಶ್' ನೂತನ ಹೀರೋ ಆಗಿ ಹೊರಹೊಮ್ಮಿದ್ದರು. ನಿರ್ದೇಶಕ ಪ್ರಶಾಂತ್ ನೀಲ್ ಅವರ ಅದ್ಭುತ ಕಾರ್ಯವೈಖರಿ ತೆರೆಯ ಮೇಲೆ ಎದ್ದು ಕಂಡಿದ್ದು ಸುಳ್ಳಲ್ಲ. ಈ ಚಿತ್ರಗಳು ಒಂದಕ್ಕಿಂತ ಒಂದು ವಿಭಿನ್ನ ಕಥಾಹಂದರವನ್ನು ಹೊಂದಿವೆ. ಒಂದಕ್ಕೊಂದು ಸಂಬಂಧವಿಲ್ಲದಿದ್ದರೂ ಬಾಲಿವುಡ್ ಚಿತ್ರಗಳನ್ನು ಮೀರಿಸುವ ಗಳಿಕೆಯನ್ನು ಮಾಡಿವೆ. ಬಾಲಿವುಡ್ ನಿರ್ಮಾಪಕರು ದಕ್ಷಿಣ ಭಾರತದ ನಿರ್ದೇಶಕರ ಮನೆಯ ಮುಂದೆ ನಿಂತು ತಮ್ಮ ಸಿನಿಮಾಗಳಿಗೆ ದಿನಾಂಕ ನಿಗದಿಮಾಡುವಂತೆ ಮಾಡಿವೆ.

ಭಾರತೀಯ ಚಿತ್ರರಂಗವೆಂದರೆ ಈಗ ಸ್ಯಾಂಡಲ್‌ವುಡ್, ಟಾಲಿವುಡ್, ಕಾಲಿವುಡ್ ಸಿನಿಮಾಗಳೆಂಬುದು ಜಗತ್ತಿಗೆ ತಿಳಿದಿದೆ. ಒಂದು ಕಾಲದಲ್ಲಿ ಖಾನ್ ಬಳಗದ ನಾಯಕರು ಚಿತ್ರ ನಿರ್ಮಿಸುತ್ತಿದ್ದರು, ಅವರ ಚಿತ್ರಗಳಲ್ಲಿ ಭಾರತೀಯತೆ ಹೆಚ್ಚಾಗಿ ಕಾಣಿಸುತ್ತಿರಲಿಲ್ಲ. ಭಾರತೀಯ ಪುರಾತನ ಆಚರಣೆಗಳು ಅವರಿಗೆ ಕೆಳಮಟ್ಟದಲ್ಲಿ ಇದ್ದಂತೆ ಕಾಣುತ್ತಿತ್ತು. ಆ ಆಚರಣೆಗಳನ್ನೊಳಗೊಂಡ ಚಿತ್ರಗಳು ನಿರ್ಮಾಣವಾದರೆ ಹಣ ಗಳಿಸಲಾಗುವುದಿಲ್ಲವೆಂಬ ಮನಸ್ಥಿತಿ ಅವರಲ್ಲಿತ್ತು. ಈಗ ಕಾಲ ಬದಲಾಗಿ ಬಾಲಿವುಡ್ ಅಂಗಳದಲ್ಲಿ ದೇಶ, ಭಾಷೆ, ಸಂಸ್ಕೃತಿ, ಹಿಂದುತ್ವ, ಮಿಲಿಟರಿ ಆಧಾರಿತ ಸಿನಿಮಾಗಳು ತೆರೆಗೆ ಬರುತ್ತಿರುವುದನ್ನು ಕಾಣಬಹುದು.

ಬದಲಾದ ಕಾಲಘಟ್ಟದಲ್ಲಿ ದಕ್ಷಿಣ ಭಾರತದ ಸಿನಿಮಾಗಳು ಭಾರತೀಯ ಪುರಾತನ ಸಂಸ್ಕೃತಿಯನ್ನು ಜಗತ್ತಿನ ಮುಂದೆ ತೆರೆದಿಡುತ್ತಿವೆ. ದಕ್ಷಿಣ ಭಾರತದ ಸಿನಿಮಾಗಳಿಂದ ಪ್ರೇರೇಪಿತರಾಗಿ ಬಾಲಿವುಡ್ ನಿರ್ದೇಶಕರುಗಳು ದಕ್ಷಿಣದ ಸೊಗಡಿನ ಸಿನಿಮಾಗಳ ನಿರ್ದೇಶನಕ್ಕೆ ಕೈ ಹಾಕಿದ್ದಾರೆ. ದಕ್ಷಿಣ ಭಾರತದ ಸಿನಿಮಾಗಳು ಕೇವಲ ಸಂಸ್ಕೃತಿಯ ಬಿಂಬನಕ್ಕೆ ಸೀಮಿತವಾಗದೆ ಉತ್ತಮ ಗಳಿಕೆಯಲ್ಲೂ ಮುಂದಿರುವುದನ್ನು ಸಾಬೀತುಪಡಿಸಿವೆ. ಕರೋನ ನಂತರದ ಕಾಲಘಟ್ಟದಲ್ಲಿ ಮನೆಯಲ್ಲಿ ಕುಳಿತು ಸಿನಿಮಾ ನೋಡುವವರ ಸಂಖ್ಯೆಯಲ್ಲಿ ಗಣನೀಯ ಏರಿಕೆಯಾಗಿದೆ. 1970 ಮತ್ತು 1980ರ ದಶಕದಲ್ಲಿ ಕನ್ನಡದಲ್ಲಿ ಪುಟ್ಟಣ್ಣ ಕಣಗಾಲ್ ಅತ್ಯುತ್ತಮ ಚಿತ್ರಗಳನ್ನು ನಿರ್ದೇಶಿಸಿದ್ದರು. ಒಂದೊಂದು ಸಿನಿಮಾ ಒಂದೊಂದು ಕಥೆಯನ್ನು ಹೇಳುತ್ತಿತ್ತು. ಒಂದು ಸಿನಿಮಾಕ್ಕೂ ಮತ್ತೊಂದು ಸಿನಿಮಾಕ್ಕೂ ಸಂಬಂಧವೇ ಇರುತ್ತಿರಲಿಲ್ಲ. 'ರಂಗನಾಯಕಿ'ಯಂಥ ಸಿನಿಮಾವನ್ನು 1980ರ ದಶಕದಲ್ಲಿ ನಿರ್ಮಿಸುವುದು ಸುಲಭದ ಮಾತಾಗಿರಲಿಲ್ಲ. ತಾವು ನಿರ್ದೇಶಿಸಿದ ಚಿತ್ರಗಳನ್ನು ಕನ್ನಡಿಗರ ಮನೆಗೆ ತಲುಪಿಸುವಲ್ಲಿ ಪುಟ್ಟಣ್ಣ ಕಣಗಾಲ್ ಅಂದೇ ಯಶಸ್ವಿಯಾಗಿದ್ದರು. ಪುಟ್ಟಣ್ಣ ಕಣಗಾಲ್ ನಿರ್ದೇಶನದ ಚಿತ್ರಗಳು ಇಂದೇನಾದರೂ ತೆರೆಗೆ ಅಪ್ಪಳಿಸಿದ್ದರೆ ಅದೆಷ್ಟು ಪ್ರಶಸ್ತಿಗಳನ್ನು ಬಾಚಿಕೊಳ್ಳುತ್ತಿದ್ದವೋ ದೇವರೇ ಬಲ್ಲ. ದಿವಂಗತ ಶಂಕರ್ ನಾಗ್ ಅವರು ಅಂದಿನ ಕಾಲದಲ್ಲಿ ಮಾಲ್ಡೀವ್ಸ್‌ನಲ್ಲಿ ಸಮುದ್ರದ ನೀರಿನ ಒಳಗಡೆ ರಾಜಕುಮಾರ್ ಅವರು ದೈತ್ಯ ಆಕ್ಟೋಪಸ್ ಜತೆ ಸೆಣಸುವ ದೃಶ್ಯವನ್ನು ಚಿತ್ರೀಕರಿಸಿದ್ದರು. ಒಂದು ಕಾಲದಲ್ಲಿ ಬಾಲಿವುಡ್‌ನಲ್ಲಿದ್ದ ಕೆಲವು ಮಾಫಿಯಾ ದೊರೆಗಳು ದಕ್ಷಿಣ ಭಾರತದ ಚಿತ್ರಗಳು ಮುನ್ನೆಲೆಗೆ ಬರುವುದನ್ನು ತಡೆದಿದ್ದರು. ಬದಲಾದ ಕಾಲಘಟ್ಟದಲ್ಲಿ ದಕ್ಷಿಣದ ಸಿನಿಮಾಗಳು ಹಿಂದಿ ಚಿತ್ರರಂಗವನ್ನು ಮೀರಿಸುವಂತೆ ಬೆಳೆಯುತ್ತಿವೆ. 'ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ' ಎಂಬಂತೆ ದಕ್ಷಿಣ ಭಾರತದ ಸಿನಿಮಾಗಳು ಇಂದು ಜಗತ್ತಿನೆಲ್ಲೆಡೆ ಹೆಸರು ಮಾಡುತ್ತಿರುವುದು ಭಾರತೀಯರಿಗೆ ಹೆಮ್ಮೆಯ ಸಂಗತಿ. ನ್ಯೂಯಾರ್ಕ್ ನಗರದ ಕೆಂಪುಹಾಸಿನ ಮೇಲೆ ತೆಲುಗು ಚಿತ್ರರಂಗದ ಸಂಗೀತಗಾರನೊಬ್ಬ ಹೆಜ್ಜೆ ಹಾಕಿ ಆಸ್ಕರ್ ಪ್ರಶಸ್ತಿ ಸ್ವೀಕರಿಸುವುದು ಸಾಮಾನ್ಯದ ವಿಷಯವಲ್ಲ. ಕೆಲವು ಬಾಲಿವುಡ್ ಮಂದಿ 'ಆರ್.ಆರ್.ಆರ್' ಚಿತ್ರಕ್ಕೆ ಆಸ್ಕರ್ ಬಂದಿರುವುದನ್ನು ಸಹಿಸಲಾಗದೆ ಬಾಯಿಗೆ ಬಂದಂತೆ ಮಾತನಾಡಿದ್ದರು. ಭಾರತೀಯ ಸಂಸ್ಕೃತಿಯನ್ನು ಪ್ರತಿನಿಧಿಸುವ ಚಿತ್ರಗಳು ಅವರಿಗೆ ಬೇಕಿಲ್ಲ, ಭಾರತೀಯ ಚಿತ್ರರಂಗದ ಅಡಿಪಾಯವೇ ತಾವೆಂಬಂತೆ ಬಿಂಬಿಸಿಕೊಂಡು ಬಂದಂಥ ಈ ಮಂದಿಯ ಚಿತ್ರಗಳನ್ನು ಜನರು ನೋಡುತ್ತಿಲ್ಲ. 'ಕಾಶ್ಮೀರ್ ಫೈಲ್ಸ್' ಚಿತ್ರ ದೇಶದಾದ್ಯಂತ ಪ್ರಶಂಸೆ ಪಡೆಯಲು ಕಾರಣ ಇತಿಹಾಸದಲ್ಲಿ ಮುಚ್ಚಿಟ್ಟ ಕರಾಳ ಅಧ್ಯಾಯವೊಂದರ ಅನಾವರಣ. ಇತಿಹಾಸದ ಒಂದು ಮಜಲನ್ನು ಮಾತ್ರ ಭಾರತೀಯರಿಗೆ ತೋರಿಸುತ್ತಿದ್ದ ಬಾಲಿವುಡ್ ಈಗ ಬದಲಾಗಿದೆ. ದೀಪಿಕಾ ಪಡುಕೋಣೆ ಅವರು ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ನಡೆದ ಪ್ರತಿಭಟನೆಯಲ್ಲಿ ದೇಶವಿರೋಧಿಗಳ ಪರವಾಗಿ ನಿಂತಿದ್ದನ್ನು ಕಂಡಂಥ ಭಾರತೀಯ ಆಕೆಯ 'ಚೆಪಾಕ್' ಸಿನಿಮಾವನ್ನು ಮೂಲೆಗುಂಪುಮಾಡಿದ. ಒಟ್ಟಿನಲ್ಲಿ ದಕ್ಷಿಣ ಭಾರತದ ಚಲನಚಿತ್ರಗಳು ಇಡೀ ದೇಶದ ಪ್ರೇಕ್ಷಕರನ್ನು ತಮ್ಮೆಡೆಗೆ ಸೆಳೆಯುತ್ತಿರುವುದು ಹೆಮ್ಮೆಯ ವಿಷಯ.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಇದೂ ನಮ್ಮ ಸಾಧನೆಯೇ!

ಜನಸಂಖ್ಯೆಯಲ್ಲಿ ಪ್ರಥಮ ಸ್ಥಾನದಲ್ಲಿದ್ದ ಚೀನಾ ದೇಶವನ್ನು ಭಾರತವು ಹಿಂದಿಕ್ಕಿದ್ದಕ್ಕೆ ಹೆಮ್ಮೆ(!) ಪಡುವಷ್ಟರಲ್ಲೇ, ಹೆಚ್ಚು ಟ್ರಾಫಿಕ್ ಜಾಮ್ ಆಗುವ ಜಗತ್ತಿನ ನಗರಗಳ ಪಟ್ಟಿಯಲ್ಲಿ ಮೆಕ್ಸಿಕೋ ಮೊದಲ ಸ್ಥಾನದಲ್ಲಿದ್ದು, ಬೆಂಗಳೂರು ಎರಡನೆಯ ಸ್ಥಾನಕ್ಕೇರಿರುವುದು ವರದಿಯಾಗಿದೆ. ಈ ಟ್ರಾಫಿಕ್ ಜಾಮ್‌ಗೆ ರಸ್ತೆಗುಂಡಿಗಳು, ಅವೈಜ್ಞಾನಿಕ ಕಾಮಗಾರಿಗಳು ಮಾತ್ರವಲ್ಲದೆ, ಸಂಚಾರ ನಿಯಮವನ್ನು ಉಲ್ಲಂಘಿಸುವ ವಾಹನ ಚಾಲಕರ ಕೊಡುಗೆಯೂ ಸಾಕಷ್ಟಿದೆ. ಹೀಗಾಗಿ ಸಂಚಾರ ದಟ್ಟಣೆಯಲ್ಲಿ ಬೆಂಗಳೂರು ಸದ್ಯದಲ್ಲೇ ಮೊದಲ ಸ್ಥಾನಕ್ಕೆ ಏರುವ ಎಲ್ಲ ಲಕ್ಷಣಗಳೂ ಕಾಣುತ್ತಿವೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ನಮ್ಮ ಬೆಂಗಳೂರು ನಗೆಪಾಟಲಿಗೆ ಈಡಾಗುವುದಕ್ಕೆ ಮೊದಲೇ ಆಳುಗರು ಎಚ್ಚೆತ್ತುಕೊಂಡು ಸುಗಮ ಸಂಚಾರಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಿ ಎಂಬುದು ನಮ್ಮ ನಿರೀಕ್ಷೆ.

- ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಗಂಧ-ಹೂವುಗಳ ತಿಕ್ಕಾಟ!

ರಷ್ಯನ್ ಸಾಹಿತ್ಯಲೋಕದ ದಿಗ್ಗಜರಾದ ಲಿಯೋ ಟಾಲ್‌ಸ್ಟಾಯ್ ಮತ್ತು ಇವಾನ್ ತುರ್ಗೆನೆವ್ ನಡುವಿನ ಜಗಳವನ್ನು ವಿಶ್ವೇಶ್ವರ ಭಟ್ಟರು ತಮ್ಮ ಅಂಕಣದಲ್ಲಿ (ಜ.22) ಮನಮುಟ್ಟುವಂತೆ ವಿವರಿಸಿ ಉತ್ತಮವಾಗಿ ವಿಶ್ಲೇಷಿಸಿದ್ದಾರೆ. ಆ ಜಗಳವು ಟಾಲ್‌ಸ್ಟಾಯ್ ಅವರ ಉಗ್ರ ನೈತಿಕತೆ ಮತ್ತು ತುರ್ಗೆನೆವ್ ಅವರ ಉದಾರವಾದಿ ದೃಷ್ಟಿಕೋನದ ನಡುವಿನ ಘರ್ಷಣೆಯಾಗಿತ್ತು ಎಂದು ಭಟ್ಟರು ಹೇಳಿರುವ ಮಾತು ಬಹು ಮೌಲಿಕವಾದ ಸತ್ಯ. ಹಾಗೆ ನೋಡಿದರೆ, ಭಟ್ಟರು ಆರೋಪಿಸಿರುವ ದೋಷಗಳಾದ ದ್ವೇಷ, ಅಹಂಕಾರ, ಅಸೂಯೆ ಇವು ಆ ಇಬ್ಬರ ಘರ್ಷಣೆಗೆ ಕಾರಣವಾಗಿರಲೇ ಇಲ್ಲ. ಅವರಿಬ್ಬರೂ ಪರಸ್ಪರ ಸಿಟ್ಟಿನಿಂದ ಜಗಳ ಕಾದು ವರ್ಷಗಳ ಕಾಲ ಶತ್ರುಗಳಂತೆ ಉಳಿದದ್ದು ಸಮಾಜ-ದೇಶ-ಜೀವನ ಇವುಗಳನ್ನು ಕುರಿತ ತಂತಮ್ಮ ಸಿದ್ಧಾಂತ-ವಿಚಾರ-ಅಭಿಪ್ರಾಯಗಳನ್ನು ಎದುರಿನವರು ಒಪ್ಪಲಿಲ್ಲವೆಂಬ ಕಾರಣಕ್ಕೆ ಮಾತ್ರ. ತಮ್ಮ ಸಿದ್ಧಾಂತದ ಬಗ್ಗೆ ಅವರಿಗೆ ಆ ಮಟ್ಟಿಗಿನ ಸ್ಪಷ್ಟತೆ, ದೃಢತೆ ಮತ್ತು ನಂಬಿಕೆ ಇತ್ತೆಂಬುದು, ಜತೆಗೆ, ಸಮಾಜದ, ಜನರ ಬಾಳ್ವೆಯ ಒಳಿತಿನ ಕುರಿತು ಅತೀವ ಕಳಕಳಿ ಇತ್ತೆಂಬುದು ಅವರ ಈ ವೈಚಾರಿಕ ಘರ್ಷಣೆಯಿಂದ ವೇದ್ಯ. ಪರಸ್ಪರ ಕೊಲ್ಲುವ ಯೋಚನೆಯವರೆಗೂ ಅವರ ಕೋಪ ಏರಿದ್ದು ಅವರ ವಜ್ರಪ್ರಾಯ ಸಿದ್ಧಾಂತಬದ್ಧತೆ ಮತ್ತು ಸಾಮಾಜಿಕ ಕಳಕಳಿಯ ದೆಸೆಯಿಂದಾಗಿ. ಆದ್ದರಿಂದ ನನಗೇನೋ ಅವರ ಸಂಘರ್ಷದಲ್ಲಿ ಇತ್ಯಾತ್ಮಕತೆ ಮಾತ್ರ ಕಂಡುಬರುತ್ತದೆ. ಬರಹಗಾರನಾದ ನನ್ನ ಸ್ವಭಾವವೂ ಇದೇ ರೀತಿ ಇರುವುದು ನನ್ನ ಈ ಭಾವನೆಗೆ ಕಾರಣವಾಗಿರಬಹುದು.

- ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

ಪ್ರಹಸನವಾಗಬಾರದು

ರಾಜಧಾನಿಯಲ್ಲಿ ನಡೆಯುತ್ತಿರುವ ಒತ್ತುವರಿ ತೆರವು ಕಾರ್ಯಾಚರಣೆಗಳ ಬಗ್ಗೆ ಸಾರ್ವಜನಿಕರಲ್ಲಿ ಗಂಭೀರ ಪ್ರಶ್ನೆಗಳು ಮೂಡುತ್ತಿವೆ. ಈ ಹಿಂದೆ, ವರ್ಷಗಳ ಹಿಂದೆ ಒತ್ತುವರಿ ಮಾಡಿಕೊಂಡ ಅನೇಕ ಕಟ್ಟಡಗಳಿಗೆ ಕೇವಲ ನೋಟಿಸ್ ನೀಡಿ ಸುಮ್ಮನಿದ್ದ ರಾಜ್ಯಸರಕಾರ, ಇದೀಗ ತನ್ನಿಷ್ಟದಂತೆ ಆಯ್ದ ಕೆಲವು ಒತ್ತುವರಿಗಳನ್ನು ಮಾತ್ರ ತೆರವುಗೊಳಿಸುತ್ತಿರುವುದು ಅಸಮಾಧಾನಕ್ಕೆ ಕಾರಣವಾಗಿದೆ. ಒತ್ತುವರಿ ಅಕ್ರಮವೇ ಆಗಿದ್ದರೆ, ಅದು ಯಾರಿಂದಲೇ ನಡೆದಿರಲಿ ಎಲ್ಲರಿಗೂ ಒಂದೇ ನಿಯಮ ಅನ್ವಯಿಸಬೇಕು. ಆಯ್ಕೆಮಾಡಿದ ರೀತಿಯಲ್ಲಿ ನಡೆಯುವ ತೆರವು ಕಾರ್ಯಾಚರಣೆಗಳಿಂದ ಒತ್ತುವರಿ ಎಂಬ ಅಕ್ರಮದ ವಿರುದ್ಧದ ಕ್ರಮವೇ ಒಂದು ಪ್ರಹಸನವಾಗುವ ಭೀತಿ ಇದೆ. ವಿಶೇಷವಾಗಿ ಇತ್ತೀಚೆಗೆ ನಿರ್ಮಿಸಲಾದ ಕಟ್ಟಡಗಳನ್ನು ಮಾತ್ರ ಗುರಿಯಾಗಿಸಿ, ವರ್ಷಗಳಿಂದ ನಿಂತಿರುವ ದೊಡ್ಡ ಹಾಗೂ ಪ್ರಭಾವಿ ಒತ್ತುವರಿಗಳನ್ನು ಬಿಟ್ಟಿರುವುದು ನ್ಯಾಯ ಸಮ್ಮತವಲ್ಲ. ಇದರಿಂದ ಕಾನೂನಿನ ಮೇಲಿನ ಜನರ ನಂಬಿಕೆ ಕುಸಿಯುತ್ತದೆ. ಆದ್ದರಿಂದ, ಒತ್ತುವರಿ ತೆರವು ಕಾರ್ಯವನ್ನು ಜೇಷ್ಠತಾ ಆಧಾರದ ಮೇಲೆ, ಪಾರದರ್ಶಕವಾಗಿ ಹಾಗೂ ಸಮಾನವಾಗಿ ಜಾರಿಗೊಳಿಸುವುದು ಅತ್ಯವಶ್ಯ. ಸಂಬಂಧಿಸಿದ ಅಧಿಕಾರಿಗಳು ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸುತ್ತಾರೆಂದು ಆಶಿಸುತ್ತೇನೆ.

- ಜಿ.ನಾಗೇಂದ್ರ, ಕಾವೂರು, ಸಂಡೂರು

ಒಂದು ದೃಷ್ಟಿ, ಒಂದು ಭವಿಷ್ಯ: ಇದು ಸಾಧ್ಯವೇ?

ಯಕ್ಷಪ್ರಶ್ನೆ

ಲೀನಾ ಜೋಶಿ
vveditoped@gmail.com

ದಶಕಗಳಿಂದ ಜಗತ್ತಿನ ಹಣಕಾಸು ವ್ಯವಸ್ಥೆಯ ರಾಜ ಅಮೆರಿಕದ ಡಾಲರ್. ಅಂತಾರಾಷ್ಟ್ರೀಯ ವ್ಯಾಪಾರದಿಂದ ಹಿಡಿದು ತೈಲ ಮಾರುಕಟ್ಟೆಯವರೆಗೆ, ಬಹುಪಾಲು ದೇಶಗಳ ವಿದೇಶಾಂಗ ವಿನಿಮಯ ಮೀಸಲು (Forex Reserve) ಡಾಲರ್‌ನಲ್ಲಿಯೇ ಇದೆ. ಈ ಪ್ರಾಬಲ್ಯವು ಅನೇಕ ಸಣ್ಣ ಮತ್ತು ಮಧ್ಯಮ ಆರ್ಥಿಕತೆಗಳನ್ನು ಏಕಪಕ್ಷೀಯ ಸಮಸ್ಯೆಗಳು ಹಾಗೂ ಆರ್ಥಿಕ ಒತ್ತಡಗಳಿಗೆ ಈಡುಮಾಡಿದೆ. ಆದರೆ, ಈ ಏಕಧ್ರುವೀಯ ವ್ಯವಸ್ಥೆಗೆ ಸವಾಲು ಹಾಕಲು ಒಂದು ಹೊಸ ಆಲೋಚನೆ ಬಲವಾಗುತ್ತಿದೆ. ಅದೆಂದರೆ, ಭಾರತದ 'ರುಪಾಯಿ', ಚೀನಾದ 'ರೆನ್ಮಿನ್ಬಿ', ರಷ್ಯಾದ 'ರೂಬಲ್', ಬ್ರೆಜಿಲ್‌ನ 'ರಿಯಲ್ 'ಮತ್ತು ದಕ್ಷಿಣ ಆಫ್ರಿಕಾದ 'ರ್‍ಯಾಂಡ'- ಈ ಐದು ಪ್ರಮುಖ ಕರೆನ್ಸಿಗಳ (RRRRR) ಒಕ್ಕೂಟ. ಇವುಗಳು ಒಟ್ಟಾಗಿ ಒಂದು ಸಾಮಾನ್ಯ ವ್ಯಾಪಾರ ಕರೆನ್ಸಿಗೆ, ಒಗ್ಗಟ್ಟಿನ ಹಣಕಾಸು ವ್ಯವಸ್ಥೆಗೆ ಒಳಪಟ್ಟರೆ ಡಾಲರ್ ಆಧಿಪತ್ಯಕ್ಕೆ 'ಬೈ' ಅಂದಂತೆಯೇ!

- ಈ ಐಕ್ಯತೆಯಿಂದ ಆಗುವುದೇನೆಂದರೆ:

– ತೃತೀಯ ರಾಷ್ಟ್ರಗಳು ಡಾಲರ್‌ನ ಅತಿರೇಕದ ಆಶ್ರಯದಿಂದ ಮುಕ್ತಿ ಪಡೆಯಬಹುದು.

– ಪ್ರಾದೇಶಿಕ ವ್ಯಾಪಾರವು ಹೆಚ್ಚು ಸ್ಥಿರವಾಗಿ ಮತ್ತು ಶುಲ್ಕರಹಿತವಾಗಿರಬಹುದು.

– ಹಣಕಾಸು ವಂಚನೆ, ಅನಿಶ್ಚಿತತೆ ಮತ್ತು ರಾಜಕೀಯ ಒತ್ತಡಗಳಿಂದ ರಕ್ಷಣೆ ಲಭ್ಯವಾಗಬಹುದು.

– ಡಿಜಿಟಲ್ ಕರೆನ್ಸಿಗಳ ಮೂಲಕ CBDC (Central Bank Digital Currency) ಸೃಷ್ಟಿ.

- **ವಿಶ್ವದ ಅರ್ಧದಷ್ಟು ಜನರ ಒಗ್ಗಟ್ಟು:** ಭಾರತ, ಚೀನಾ, ರಷ್ಯಾ, ಬ್ರೆಜಿಲ್ ಮತ್ತು ದಕ್ಷಿಣ ಆಫ್ರಿಕಾ- ಈ ದೇಶಗಳಲ್ಲಿ ವಿಶ್ವದ ಸುಮಾರು ಶೇ.40ಕ್ಕೂ ಹೆಚ್ಚು ಜನ ವಾಸಿಸುತ್ತಾರೆ. ಇದು ಕೇವಲ ಸಂಖ್ಯೆಯಲ್ಲ, ಜತೆಗೆ ಅಪಾರ ಮಾರುಕಟ್ಟೆ, ಬೃಹತ್ ಉತ್ಪಾದನಾ ಸಾಮರ್ಥ್ಯ ಮತ್ತು ವಿಪುಲ ನೈಸರ್ಗಿಕ ಸಂಪನ್ಮೂಲಗಳ ಆಗರ. ಈ ದೇಶಗಳು ಒಟ್ಟಾಗಿ ನಿಂತರೆ, ಜಗತ್ತಿನ ಅತಿದೊಡ್ಡ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಬಹುದು. ಈ ಒಕ್ಕೂಟದ ಹಿಂದೆ ಇರುವ ಮುಖ್ಯ ಉದ್ದೇಶವೇ ಡಾಲರ್‌ನ ಏಕಸ್ವಾಮ್ಯವನ್ನು ಮುರಿದು, ಬಹುಧ್ರುವೀಯ (multipolar) ಪ್ರಪಂಚವನ್ನು ನಿರ್ಮಿಸುವುದು.

- **ಭಾರತಕ್ಕಿರುವ ಪ್ರಯೋಜನಗಳು:** ಈ ಹಣಕಾಸು ಒಕ್ಕೂಟದಿಂದ ಭಾರತಕ್ಕೆ ದೊರೆಯುವ ಲಾಭಗಳು ಅಪಾರ. ಮೊದಲನೆಯದು, ಡಾಲರ್ ಮೇಲಿನ ಅವಲಂಬನೆ ಕಡಿಮೆಯಾಗುತ್ತದೆ. ಇಂದು, ನಮ್ಮ ದೇಶವು ತೈಲ, ಚಿನ್ನ ಅಥವಾ ಇತರೆ ಅತ್ಯವಶ್ಯಕ ವಸ್ತುಗಳನ್ನು ಆಮದು ಮಾಡಿಕೊಳ್ಳಲು ಡಾಲರ್‌ನ ಮೇಲೆ ಸಂಪೂರ್ಣವಾಗಿ ಅವಲಂಬಿತವಾಗಿದೆ. ಅಮೆರಿಕದ ಆರ್ಥಿಕ ನೀತಿಗಳು ಮತ್ತು ಅಲ್ಲಿನ ಹಣದುಬ್ಬರದಿಂದ ನಮ್ಮ ರುಪಾಯಿಯ ಮೌಲ್ಯ ಏರಿಳಿತಗೊಳ್ಳುತ್ತಲೇ ಇರುತ್ತದೆ. ಆದರೆ, ನಮ್ಮ ಒಕ್ಕೂಟದ ಒಳಗೆ ವ್ಯಾಪಾರ ನಡೆಸಿದರೆ, ನಾವು ನಮ್ಮ ಕರೆನ್ಸಿ ಅಥವಾ ಒಂದು common ಕರೆನ್ಸಿಯನ್ನು ಬಳಸಬಹುದು. ಇದರಿಂದ ವಿನಿಮಯ ದರದ ಅಪಾಯ ಕಡಿಮೆಯಾಗುತ್ತದೆ ಮತ್ತು ವ್ಯವಹಾರ ವೆಚ್ಚ ಸಹ ಕಡಿಮೆಯಾಗುತ್ತದೆ.

ಎರಡನೆಯದು, ರುಪಾಯಿಯ ಮೌಲ್ಯವರ್ಧನೆಯಾಗುತ್ತದೆ. ಪ್ರಪಂಚದ ಶೇ.40ಕ್ಕೂ ಹೆಚ್ಚು ಜನರು ವ್ಯವಹರಿಸುವ ಒಕ್ಕೂಟದಲ್ಲಿ ರುಪಾಯಿಗೆ ಪ್ರಮುಖ ಪಾತ್ರ ಸಿಕ್ಕರೆ, ಅದರ ಬೇಡಿಕೆ ಗಗನಕ್ಕೇರುತ್ತದೆ. ಇದು ಹಣದುಬ್ಬರವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ ಮತ್ತು ನಮ್ಮ ಆಮದು ಬಿಲ್ಲುಗಳನ್ನು ಕಡಿಮೆ ಮಾಡುತ್ತದೆ. ಮೂರನೆಯದು, ಜಾಗತಿಕ ವ್ಯಾಪಾರದಲ್ಲಿ ಭಾರತದ ಪ್ರಭಾವ ಹೆಚ್ಚುತ್ತದೆ. ನಾವು ಕೇವಲ ಬೆಲೆ ಪಾವತಿಸುವವರಾಗಿ ಉಳಿಯದೇ, ವ್ಯಾಪಾರ ನಿಯಮಗಳನ್ನು ರೂಪಿಸುವ ನಿರ್ಣಾಯಕ ಶಕ್ತಿಯಾಗಿ ಮಾರ್ಪಡುತ್ತೇವೆ.

ಈ ಏಕೀಕರಣವು ಭಾರತಕ್ಕೆ ಮಾತ್ರವಲ್ಲದೆ, ಎಲ್ಲಾ ಏಷ್ಯಾ ದೇಶಗಳು ಮತ್ತು ಒಕ್ಕೂಟದ ಸದಸ್ಯರಿಗೂ ಬಲ ಒದಗಿಸುತ್ತದೆ. ಅಮೆರಿಕದ ಫೆಡರಲ್ ರಿಸರ್ವ್ ಹಣಕಾಸು ನೀತಿಗಳನ್ನು ಬದಲಾಯಿಸಿದಾಗ, ನಾವು ಪ್ರತಿ ಬಾರಿ ಆರ್ಥಿಕ ಬಿಕ್ಕಟ್ಟನ್ನು ಎದುರಿಸಬೇಕಾಗುತ್ತದೆ. ಈ ಹೊಸ ವ್ಯವಸ್ಥೆಯು ಅಂಥ ಬಾಹ್ಯ ಆಘಾತಗಳಿಂದ ಒಂದು ರಕ್ಷಾಕವಚವನ್ನು ನೀಡುತ್ತದೆ. ಒಕ್ಕೂಟದೊಳಗಿನ ವ್ಯಾಪಾರ ಸುಲಭ ಮತ್ತು ಅಗ್ಗವಾಗುತ್ತದೆ. ಉದಾಹರಣೆಗೆ, ಒಂದು ಚೈನೀಸ್ ಕಂಪನಿಯು ಭಾರತದಿಂದ ಸರಕು ಖರೀದಿಸಲು ಬಯಸಿದರೆ, ರೆನ್ಮಿನ್ಬಿ (ಯುವಾನ್) ಅನ್ನು ರುಪಾಯಿಗೆ ಪರಿವರ್ತಿಸಿ ಡಾಲರ್ ಮಾರ್ಗವನ್ನು ಅನುಸರಿಸುವ ಅಗತ್ಯವಿರುವುದಿಲ್ಲ. ಇದು ಸಮಯ ಮತ್ತು ಹಣ ಎರಡನ್ನೂ ಉಳಿಸುತ್ತದೆ. ಜತೆಗೆ, ರಾಜಕೀಯವಾಗಿಯೂ ಈ ದೇಶಗಳು ಒಂದುಗೂಡಿದರೆ, ವಿಶ್ವಸಂಸ್ಥೆ (UN), ವಿಶ್ವ ವ್ಯಾಪಾರ ಸಂಸ್ಥೆ (WTO) ಮುಂತಾದ ವಿಶ್ವ ಮಟ್ಟದ ಸಂಘಟನೆಗಳಲ್ಲಿ ಪಶ್ಚಿಮ ದೇಶಗಳ ಪ್ರಭಾವವನ್ನು ಎದುರಿಸಲು ಒಂದು ಬಲಿಷ್ಠ ಧ್ವನಿ ಸಿಗುತ್ತದೆ.

- **ಎದುರಾಗುವ ಸವಾಲುಗಳು:** ಇಷ್ಟೆಲ್ಲಾ ಪ್ರಯೋಜನಗಳಿದ್ದರೂ, ಈ ಪರಿಕಲ್ಪನೆಯನ್ನು ಜಾರಿಗೆ ತರುವ ಮಾರ್ಗ ಸುಲಭವಲ್ಲ. ಪ್ರತಿಯೊಂದು ದೇಶವೂ ತನ್ನ ಹಣಕಾಸು ಸಾರ್ವಭೌಮತ್ವವನ್ನು ಬಿಡಲು ಸಿದ್ಧವಿರುವುದಿಲ್ಲ. ಚೀನಾ, ಭಾರತ ಮತ್ತು ರಷ್ಯಾದ ಆರ್ಥಿಕತೆಗಳ ನಡುವೆ ದೊಡ್ಡ ಅಂತರವಿದೆ. ಹೊಸ ಕರೆನ್ಸಿಯ ಮೌಲ್ಯವನ್ನು ಹೇಗೆ ನಿರ್ಧರಿಸುತ್ತಾರೆ? ಒಂದು ದೇಶದ ಆರ್ಥಿಕತೆ ಕುಸಿದರೆ, ಇತರ ದೇಶಗಳ ಮೇಲೆ ಅದರ ಪರಿಣಾಮ ಏನಾಗಬಹುದು? ಎಂಬ ಪ್ರಶ್ನೆಗಳಿವೆ. ಯುರೋಪ್‌ನ 'ಯುರೋ' ವಲಯದಲ್ಲಿ ಗ್ರೀಸ್‌ನಂಥ ದೇಶಗಳು ಎದುರಿಸಿದ ಸಮಸ್ಯೆಗಳು ಇಲ್ಲೂ ಪುನರಾವರ್ತನೆಯಾಗಬಹುದು. ಇದಕ್ಕೆ ಹೆಚ್ಚಿನ ರಾಜಕೀಯ ನಂಬಿಕೆ ಮತ್ತು ಪಾರದರ್ಶಕತೆ ಅತ್ಯಗತ್ಯ.

- **ಹೊಸ ಆರ್ಥಿಕ ವ್ಯವಸ್ಥೆಯತ್ತ:** ಡಾಲರ್‌ನ ಆಧಿಪತ್ಯವನ್ನು ಕೊನೆಗಾಣಿಸುವುದು ಒಂದು ದಿನದ ಕೆಲಸವಲ್ಲ. ಆದರೆ, ಭಾರತ, ಚೀನಾ, ರಷ್ಯಾ, ಬ್ರೆಜಿಲ್ ಮತ್ತು ದಕ್ಷಿಣ ಆಫ್ರಿಕಾದಂಥ ಪ್ರಬಲ ದೇಶಗಳು ಒಟ್ಟಾಗಿ ಈ ಚರ್ಚೆಯನ್ನು ಶುರುಮಾಡಿರುವುದೇ ಒಂದು ದೊಡ್ಡ ಬದಲಾವಣೆಗೆ ಸಂಕೇತ. ಈ ಒಕ್ಕೂಟವು ಯಶಸ್ವಿಯಾದರೆ, ಅದು ಡಾಲರ್‌ನ ಆಧಿಪತ್ಯವನ್ನು ಅಂತ್ಯಗೊಳಿಸುವುದಲ್ಲದೆ, ಹೆಚ್ಚು ಸಮತೋಲಿತ, ನ್ಯಾಯಯುತ ಮತ್ತು ಬಹುಧ್ರುವೀಯ ಹಣಕಾಸು ವ್ಯವಸ್ಥೆಯನ್ನು ರೂಪಿಸುತ್ತದೆ. ಅಂಥ ವ್ಯವಸ್ಥೆಯಲ್ಲಿ ಭಾರತವು ಕೇವಲ ಓರ್ವ ಸಹಭಾಗಿಯಾಗದೇ, ನಾಯಕತ್ವದ ಪಾತ್ರವನ್ನು ವಹಿಸಲು ಸಿದ್ಧವಾಗಿದೆ. ಭವಿಷ್ಯದ ಆರ್ಥಿಕ ನಕ್ಷೆ ಬದಲಾಗುತ್ತಿದೆ ಮತ್ತು ಭಾರತ ಅದರ ಮಧ್ಯದಲ್ಲಿ ನಿಂತಿದೆ.

ಇಂದು, ಡಾಲರ್ ಅಂತಾರಾಷ್ಟ್ರೀಯ ವ್ಯವಹಾರ, ಸಾಲ ಪೂರೈಕೆ, ಶಕ್ತಿ ಮತ್ತು ಸಂಪನ್ಮೂಲಗಳ ವ್ಯಾಪಾರವನ್ನು ನಿಯಂತ್ರಿಸುತ್ತದೆ. ಆದರೆ, ಈ ವ್ಯವಸ್ಥೆಯಿಂದ ಅನೇಕ ದೇಶಗಳಿಗೆ ಅನ್ಯಾಯವಾಗಿದೆ. ಅಮೆರಿಕ ತನ್ನ ಆರ್ಥಿಕ ಶಕ್ತಿಯನ್ನು ಬಳಸಿ ಶಾಂತಿಯ ಸಮಯದಲ್ಲೂ ದಂಡ

ಹಾಕುವ, ವ್ಯಾಪಾರ ನಿರ್ಬಂಧಗಳನ್ನು ಹೇರುವ ಮತ್ತು ಇತರ ರಾಷ್ಟ್ರಗಳ ಆರ್ಥಿಕತೆಯ ಮೇಲೆ ಹಿಡಿತ ಸಾಧಿಸುವ ಚಾಳಿಗೆ ಮುಂದಾಗಿದೆ. ಇದನ್ನು ತಡೆಗಟ್ಟಲು, BRICS ದೇಶಗಳು ಒಟ್ಟಾಗಿ ಒಂದು ಸ್ವತಂತ್ರ, ಸಮತೋಲಿತ ಹಣಕಾಸು ವ್ಯವಸ್ಥೆಯನ್ನು ರೂಪಿಸಬೇಕಾಗಿದೆ.

ಭಾರತದ ರುಪಾಯಿ ಈ ಹೊಸ ಆರ್ಥಿಕ ವಿಶ್ವದಲ್ಲಿ ಪ್ರಮುಖ ಪಾತ್ರವನ್ನು ವಹಿಸಬಲ್ಲದು. ಭಾರತವು ವಿಶ್ವದ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಿದೆ. 140+ ಕೋಟಿ ಜನರ ಬಲವುಳ್ಳ ದೇಶವಾಗಿದ್ದು, ತನ್ನ ಯುವ ಜನಸಂಖ್ಯೆ, ತಂತ್ರಜ್ಞಾನದ ಬೆಳವಣಿಗೆ ಮತ್ತು ಮಧ್ಯಮ ವರ್ಗದ ಶಕ್ತಿಯಿಂದ ವಿಶ್ವದಲ್ಲಿ ಮಹತ್ವದ ಆರ್ಥಿಕ ಮುನ್ನಡೆಯನ್ನು ಪಡೆಯುತ್ತಿದೆ. ರುಪಾಯಿಯು ಅಂತಾರಾಷ್ಟ್ರೀಯ ಮಟ್ಟದಲ್ಲಿ ಬಳಕೆಯಾಗಲು ಪ್ರಾರಂಭವಾದರೆ, ಭಾರತವು ವಿದೇಶಿ ವಿನಿಮಯದ ಅಗತ್ಯವನ್ನು ಕಡಿಮೆ ಮಾಡಿ, ಆಮದು-ರಫ್ತುಗಳಲ್ಲಿ ಹೆಚ್ಚು ಸ್ವಾತಂತ್ರ್ಯವನ್ನು ಗಳಿಸುತ್ತದೆ. ಅದೇ ರೀತಿ, ರಷ್ಯಾದ ರೂಬಲ್ ಮತ್ತು ದಕ್ಷಿಣ ಆಫ್ರಿಕಾದ 'ರ್‍ಯಾಂಡ' ಕೂಡ ತಮ್ಮ ಪ್ರಾದೇಶಿಕ ಪ್ರಭಾವವನ್ನು ಹೆಚ್ಚಿಸಬಹುದು. ರಷ್ಯಾ ದೇಶವು ಇಂಧನ, ಅಣುಶಕ್ತಿ ಮತ್ತು ಖನಿಜಗಳ ಪ್ರಮುಖ ಪೂರೈಕೆದಾರ; ಆಫ್ರಿಕಾ ದೇಶವು ಲೋಹಗಳು, ಕೃಷಿ ಉತ್ಪನ್ನಗಳು ಮತ್ತು ಪ್ರಕೃತಿ ಸಂಪನ್ಮೂಲಗಳ ಕಣಜ. ಇವುಗಳೆಲ್ಲಾ ಒಂದು ಏಕೀಕೃತ ಹಣದಲ್ಲಿ ವ್ಯಾಪಾರವಾದರೆ, ಅಮೆರಿಕದ ಡಾಲರ್‌ನ ಮೇಲಿನ ಅವಲಂಬನೆ ಸೊನ್ನೆಯಾಗುತ್ತದೆ.

ಈ ಕಲ್ಪನೆಯಲ್ಲಿರುವ ದೊಡ್ಡ ಸವಾಲು: ಚೀನಾವು BRICS ಗುಂಪಿನಲ್ಲಿ ಅತ್ಯಂತ ಶಕ್ತಿಶಾಲಿ ಆರ್ಥಿಕತೆಯಾಗಿದೆ. ಅದು ಶೀಘ್ರವಾಗಿ ಪ್ರಪಂಚದ ಅತಿದೊಡ್ಡ ಜಿಡಿಪಿ ಹೊಂದಿದ ದೇಶವಾಗುವ ಸಂಭವವಿದೆ. ಅದು ತನ್ನ ಯುವಾನ್ ಅನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಜಾರಿಗೆ ತರಲು ಪ್ರಯತ್ನಿಸುತ್ತಿದೆ. ಇದು ಭಾರತದಂಥ ಇತರ ದೇಶಗಳಿಗೆ ಅಪಾಯವಾಗಬಹುದು. ಯಾಕೆಂದರೆ, ಚೀನಾವು ತನ್ನ ಆರ್ಥಿಕ ಶಕ್ತಿಯನ್ನು ಬಳಸಿ, ಇತರ ರಾಷ್ಟ್ರಗಳ ಮೇಲೆ ರಾಜಕೀಯ ಮತ್ತು ಆರ್ಥಿಕ ಒತ್ತಡ ಹೇರಲು ಪ್ರಯತ್ನಿಸಬಹುದು, ಅಮೆರಿಕದ ಡಾಲರ್ ಇಂದು ಮಾಡುತ್ತಿರುವುದನ್ನೇ ಚೀನಾ ನಾಳೆ ಮಾಡಬಹುದು. ಚೀನಾದ ವಿಶ್ವಾಸಾರ್ಹತೆಯ ಕುರಿತು ಸಂಶಯಗಳಿವೆ. ಅದು ಭಾರತದ ಅರುಣಾಚಲಪ್ರದೇಶ ಸೇರಿದಂತೆ ಗಡಿ ಪ್ರದೇಶಗಳಲ್ಲಿ ತನ್ನ ಪ್ರಭಾವವನ್ನು ವಿಸ್ತರಿಸುತ್ತಿದೆ, ಪಾಕಿಸ್ತಾನದ ಮೂಲಕ ಭಾರತದ ಮೇಲೆ ಒತ್ತಡ ಹೇರುತ್ತಿದೆ ಮತ್ತು ಹಿಮಾಲಯದಲ್ಲಿ ಸೀಮೆ ಗುರುತಿಸದ ಭಾಗಗಳಲ್ಲಿ ಸೈನ್ಯವನ್ನು ನೆಲೆಗೊಳಿಸಿದೆ. ಹೀಗಿರುವಾಗ, ಚೀನಾದ ಮುಖಾಂತರ ಹೊಸ ಹಣಕಾಸು ವ್ಯವಸ್ಥೆಯನ್ನು ನಿರ್ವಹಿಸುವುದು ಅಪಾಯಕಾರಿ.

ಆದ್ದರಿಂದ, ಒಂದು ವೇಳೆ ರುಪಾಯಿ, ರಿಯಲ್, ರ್‍ಯಾಂಡ, ರೂಬಲ್ ಮತ್ತು ರೆನ್ಮಿನ್ಬಿ ಐಕ್ಯವಾಗಬೇಕಾದರೆ, ಅದು ಭಾರತ ನೇತೃತ್ವದ ಸಮತೋಲಿತ ವ್ಯವಸ್ಥೆಯಾಗಿರಬೇಕು. ಚೀನಾವನ್ನು ಒಳಗೊಳ್ಳಬೇಕೇ ಹೊರತು, ಅದರಡಿಯಲ್ಲಿ ವ್ಯವಹಾರ ನಡೆಯುವಂತಾಗಬಾರದು. ಹೊಸ ಹಣಕಾಸು ವ್ಯವಸ್ಥೆಯ ಉದಯದಿಂದಾಗಿ, ಏಷ್ಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕದ ಅನೇಕ ದೇಶಗಳಿಗೆ ಆರ್ಥಿಕ ಸ್ವಾತಂತ್ರ್ಯ ಸಿಗುತ್ತದೆ. ಅವುಗಳ ಜನರು ಹೆಚ್ಚು ಉದ್ಯೋಗ, ಸ್ಥಿರ ಬೆಲೆಗಳು ಮತ್ತು ಸಮಾವೇಶಕಾರಿ (Inclusive) ಆರ್ಥಿಕತೆಯನ್ನು ನೋಡಬಹುದು. ಭಾರತಕ್ಕೆ ಹೆಚ್ಚು ರಫ್ತು ಅವಕಾಶ, ತಂತ್ರಜ್ಞಾನದ ವಿನಿಮಯ ಮತ್ತು ಆಂತರಿಕ ಸ್ಥಿರತೆ ಲಭಿಸುತ್ತದೆ. ಭಾರತವು ಈ ಬದಲಾವಣೆಯ ನಾಯಕತ್ವ ವಹಿಸಬೇಕು. ಆದರೆ, ಚೀನಾದ ಸೆಳೆತಕ್ಕೆ ಸಿಲುಕದಂತೆ ಜಾಗೃತರಾಗಿರಬೇಕು.

ಐಕ್ಯತೆಯೇ ಶಕ್ತಿ, ಆದರೆ ನಾಯಕತ್ವವೇ ನಿಯಂತ್ರಣ. ಭಾರತವು ಈ ಹೊಸ ಯುಗದಲ್ಲಿ ತನ್ನ ಜನಸಂಖ್ಯೆ, ತಂತ್ರಜ್ಞಾನ ಮತ್ತು ನೈತಿಕತೆಯ ಬಲದಿಂದ ಏಷ್ಯಾವನ್ನು ಮುನ್ನಡೆಸಬೇಕು. ಡಾಲರ್ ಅಂತ್ಯವಲ್ಲ, ಆದರೆ ಅದರ ಏಕಾಧಿಪತ್ಯಕ್ಕೆ ಅಂತ್ಯ ಬರುವುದು! ರುಪಾಯಿ ತನ್ನ ಹೊಸ ಮೌಲ್ಯವನ್ನು ಲೋಕಕ್ಕೆ ಬಹು ಬೇಗ ತೋರಿಸಲಿ.

(ಲೇಖಕಿ ಬಹುರಾಷ್ಟ್ರೀಯ ಕಂಪನಿಯಲ್ಲಿ ಉದ್ಯೋಗಿ)

ಭಟ್ಟರ್ ಸ್ಕಾಚ್

- ಶೇಖರ ಪಿ. ಶಂಕರ, ಬೆಂಗಳೂರು
ಭಟ್ರೇ, ಮದುವೆಗೂ ಮತ್ತು ಮ್ಯಾಗಿ ನೂಡಲ್ಸ್‌ಗೂ ಸಾಮ್ಯತೆ ಏನು?
– **ಎರಡೂ 'ಎರಡೇ ನಿಮಿಷದಲ್ಲಿ ಆಗುತ್ತೆ' ಅಂತ ನಂಬಿಸಿ ಗಂಟೆಗಟ್ಟಲೆ ಕಾಯಿಸುತ್ತವೆ!**

- ಸಾವಿತ್ರಿ, (ಇಮೇಲ್ ಮೂಲಕ)
ಭಟ್ರೇ, ಜೀವನದಲ್ಲಿ ಯಾವುದನ್ನು ಸುಲಭವಾಗಿ ನಂಬಬಾರದು?
– **ಫೋಟೋ ಎಡಿಟಿಂಗ್ ಆ್ಯಪ್ ಇರುವವರ ಮುಖವನ್ನು ಮತ್ತು ಎಲೆಕ್ಷನ್ ಹತ್ತಿರವಿರುವಾಗ ರಾಜಕಾರಣಿಗಳ ಮಾತನ್ನು!**

- ಚೇತನ್ ಶ್ರೀನಿವಾಸ, ತುರುವೇಕೆರೆ
ಭಟ್ರೇ, ಶಾಲೆಗೂ ಮತ್ತು ವಾಟ್ಸಾಪ್‌ಗೂ ಇರುವ ವ್ಯತ್ಯಾಸವೇನು?
– **ಶಾಲೆಯಲ್ಲಿ ಮೊದಲು ಪಾಠ ಮಾಡಿ ಆಮೇಲೆ ಪರೀಕ್ಷೆ ಮಾಡ್ತಾರೆ, ವಾಟ್ಸಾಪ್‌ನಲ್ಲಿ ಮೊದಲು ಮೆಸೇಜ್ ಮಾಡಿ ಆಮೇಲೆ ಪಶ್ಚಾತ್ತಾಪಪಡುತ್ತಾರೆ!**

- ಜಿತೇಂದ್ರ ನಾಡಿಗ, ಉಡುಪಿ
ಭಟ್ರೇ, ಸಂಬಳ ಮತ್ತು ಚಂದ್ರನಿಗೆ ಇರುವ ಹೋಲಿಕೆ ಏನು?
– **ಎರಡೂ ತಿಂಗಳಿಗೊಮ್ಮೆ ಬರುತ್ತವೆ, ಆದರೆ ಕೆಲವೇ ದಿನಗಳಲ್ಲಿ ಕಾಣೆಯಾಗಿಬಿಡುತ್ತವೆ!**

- ರಾಜೇಶ ನಾಯಕ, ಗುಬ್ಬಿ
ಭಟ್ರೇ, ಗಂಡಸರಿಗೆ ಮದುವೆಯಾದ ಮೇಲೆ ಕಿವಿಯ ಕೇಳುವ ಶಕ್ತಿ ಕಡಿಮೆಯಾಗುತ್ತದಲ್ಲ?
– **ಯಾಕೆಂದರೆ ಅವರಿಗೆ ಮನೆಯ 'ರೇಡಿಯೋ' ಯಾವತ್ತೂ ಆಫ್ ಆಗುವುದಿಲ್ಲ ಎಂಬ ಸತ್ಯ ಅರ್ಥವಾಗಿರುತ್ತದೆ!**

- ಶ್ರೀನಿವಾಸ ರೆಡ್ಡಿ, ಕೋರಮಂಗಲ
ಭಟ್ರೇ, ವಿಮಾನದ ಒಳಗಿರುವ ಏಕೈಕ ದೊಡ್ಡ ಸುಳ್ಳು ಯಾವುದು?
– **'ನಮ್ಮ ವಿಮಾನವು ಸರಿಯಾದ ಸಮಯಕ್ಕೆ ಹೊರಡಲಿದೆ' ಎಂಬ ಅನೌನ್ಸ್‌ಮೆಂಟ್!**

- ರಾಜು ಪತ್ತಾರ, ಹುಬ್ಬಳ್ಳಿ
ಭಟ್ರೇ, ಅನುಭವ ಅಂದರೇನು?
– **ಮಾಡಿದ ತಪ್ಪುಗಳನ್ನೇ ಮತ್ತೆ ಮಾಡುವಾಗ ನಮಗೆ ಸಿಗುವ ಒಂದು ಸುಂದರವಾದ ಹೆಸರು!**

- ಶೈಲಾ ಸಿದ್ದಿ, ಚಿಕ್ಕಮಗಳೂರು
ಭಟ್ರೇ, ಸಾಲ ಮತ್ತು ಹೆಂಡತಿಯ ಕೋಪಕ್ಕೆ ಇರುವ ಹೋಲಿಕೆ ಏನು?
– **ಎರಡನ್ನೂ ಎಷ್ಟು ತೀರಿಸಿದರೂ ಕಮ್ಮಿ ಅನಿಸುವುದೇ ಇಲ್ಲ!**

ಆಹಾರ-ಆಸನ-ಆಯುಷ್ಯ: ನಮ್ಮ ಸಂಸ್ಕೃತಿಯ ಆರೋಗ್ಯ ವಿಜ್ಞಾನ

ನೆಲದಲ್ಲಿ ಕುಳಿತು ಊಟ ಮಾಡುವ ಪದ್ಧತಿ ಕೇವಲ ಪುರಾತನ ಭಾರತೀಯ ಆಚರಣೆ ಎಂದು ಹಲವರು ಭಾವಿಸುತ್ತಾರೆ. ಆದರೆ ನಮ್ಮಲ್ಲಿ ರೂಢಿಯಾಗಿರುವ ಬಹುತೇಕ ಪದ್ಧತಿಗಳು ದೀರ್ಘ ಅನುಭವ ಮತ್ತು ಸೂಕ್ಷ್ಮ ಅವಲೋಕನದಿಂದ ರೂಪುಗೊಂಡಂಥವು. ಊಟ ಮಾಡುವ ವಿಧಾನವೂ ಅದಕ್ಕೆ ಹೊರತಲ್ಲ. ಆಹಾರ ಸೇವಿಸುವ ರೀತಿಯು ದೇಹದ ಒಳಾಂಗಗಳ ಕಾರ್ಯಕ್ಷಮತೆ ಹಾಗೂ ಒಟ್ಟು ಆರೋಗ್ಯದ ಮೇಲೆ ನೇರ ಪ್ರಭಾವ ಬೀರುತ್ತದೆ.

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ.ಸಾಧನಶ್ರೀ
vveditoped@gmail.com

ನಾನು ನನ್ನ ಜೀವನದಲ್ಲಿ ಹಲವು ಜನರನ್ನು ಭೇಟಿಯಾಗಿದ್ದೇನೆ. ಅವರಲ್ಲಿಯೂ ಶ್ರೇಷ್ಠ ಆರೋಗ್ಯವನ್ನು ನಾನು ಕಂಡಿದ್ದು– ನನ್ನ ಅಜ್ಜಿ, ನಮ್ಮ ಆಯುರ್ವೇದ ಗುರು ಮತ್ತು ಓರ್ವ ಹಿರಿಯ ಪಂಡಿತರಲ್ಲಿ. ಈ ಒಬ್ಬರಲ್ಲೊಬ್ಬರಲ್ಲಿ ನಾನು ಗಮನಿಸಿದ ಸಾಮಾನ್ಯ ಅಭ್ಯಾಸವೆಂದರೆ, ಪ್ರತಿದಿನವೂ ನೆಲದ ಮೇಲೆ ಶಾಂತವಾಗಿ ಕುಳಿತು, ಕಾಲುಗಳನ್ನು ಮಡಿಸಿಕೊಂಡು, ಕೈಗಳಿಂದ ಆಹಾರ ಸೇವಿಸುವ ಕ್ರಮವನ್ನು ಅವರು ಪಾಲಿಸುತ್ತಿದ್ದರು. ಮೊದಲಿಗೆ ನಾನು ಹೀಗೆ ಭಾವಿಸಿದೆ– ಬಹುಶಃ ಅದು ಅವರು ಬೆಳೆದು ಬಂದ ರೀತಿಯಿರಬಹುದೆಂದು. ಆದರೆ, ಆಯುರ್ವೇದವನ್ನು ಅಧ್ಯಯನ ಮಾಡಿದಂತೆ, ಈ ಸರಳ ಪದ್ಧತಿಗಳು ಶಾರೀರಿಕ ಮತ್ತು ಮಾನಸಿಕವಾಗಿ ಎಷ್ಟು ಸಮಗ್ರವಾಗಿ ಆರೋಗ್ಯವನ್ನು ಬೆಳೆಸುತ್ತವೆ ಎಂಬುದು ಸ್ಪಷ್ಟವಾಯಿತು. ಇದರಿಂದಲೇ ನಾನು ಈ ಮಹತ್ವದ ಅನುಭವವನ್ನು ಹಂಚಿಕೊಳ್ಳಲು ಪ್ರೇರಿತಳಾದೆ.

ಸ್ನೇಹಿತರೆ, ಇಂದಿನ ವೇಗದ ಜೀವನಶೈಲಿಯಲ್ಲಿ ಊಟವೂ ಅತೀವ ತ್ವರಿತದ ಕೆಲಸವಾಗುತ್ತಿದೆ. ನಿಂತುಕೊಂಡು, ನಡೆಯುತ್ತಾ ಅಥವಾ ಮೊಬೈಲ್ ನೋಡುತ್ತಾ ಆಹಾರ ಸೇವಿಸುವುದು ಸಾಮಾನ್ಯವಾಗಿದೆ. ಆದರೆ ಭಾರತೀಯ ಸಂಪ್ರದಾಯದಲ್ಲಿ ''ಕುಳಿತು, ಗಮನವಿಟ್ಟು ಊಟ ಮಾಡು'' ಎಂಬ ನಿಯಮಕ್ಕೆ ವಿಶೇಷ ಮಹತ್ವವಿದೆ. ಇದರ ಹಿಂದೆ ಶಿಸ್ತು ಮಾತ್ರವಲ್ಲ, ಆಳವಾದ ಆರೋಗ್ಯ ವಿಜ್ಞಾನವೂ ಅಡಗಿದೆ.

ಇದು ಸಂಪ್ರದಾಯವಲ್ಲ, ಶುದ್ಧ ವಿಜ್ಞಾನ

ನೆಲದಲ್ಲಿ ಕುಳಿತು ಊಟ ಮಾಡುವ ಪದ್ಧತಿ ಕೇವಲ ಪುರಾತನ ಭಾರತೀಯ ಆಚರಣೆ ಎಂದು ಹಲವರು ಭಾವಿಸುತ್ತಾರೆ. ಆದರೆ ಭಾರತೀಯ ಸಂಸ್ಕೃತಿಯಲ್ಲಿ ರೂಢಿಯಾಗಿರುವ ಬಹುತೇಕ ಪದ್ಧತಿಗಳು ದೀರ್ಘ ಅನುಭವ ಮತ್ತು ಸೂಕ್ಷ್ಮ ಅವಲೋಕನದಿಂದ ರೂಪುಗೊಂಡ ಆರೋಗ್ಯ ವಿಜ್ಞಾನಗಳೇ ಆಗಿವೆ. ಊಟ ಮಾಡುವ ವಿಧಾನವೂ ಅದಕ್ಕೆ ಹೊರತಲ್ಲ. ಆಹಾರ ಸೇವಿಸುವ ರೀತಿಯು ದೇಹದ ಒಳಾಂಗಗಳ ಕಾರ್ಯಕ್ಷಮತೆ ಹಾಗೂ ಒಟ್ಟು ಆರೋಗ್ಯದ ಮೇಲೆ ನೇರ ಪ್ರಭಾವ ಬೀರುತ್ತದೆ.

ಸುಖಾಸನ ಮತ್ತು ದೇಹಭಂಗಿ

ಸುಖಾಸನದಲ್ಲಿ ನೆಲದ ಮೇಲೆ ಕುಳಿತು ಊಟ ಮಾಡುವಾಗ ಬೆನ್ನೆಲುಬು ಸಹಜವಾಗಿ ನೇರವಾಗಿರುತ್ತದೆ ಮತ್ತು ಭುಜಗಳು ಎತ್ತಲ್ಪಟ್ಟ ಸ್ಥಿತಿಯಲ್ಲಿ ಇರುತ್ತವೆ. ಇದು ದೇಹದ ತೂಕವನ್ನು ಸಮವಾಗಿ ಹಂಚಿ, ಕತ್ತು, ಬೆನ್ನು ಹಾಗೂ ಭುಜಗಳ ಮೇಲೆ ಬರುವ ಅನಗತ್ಯ ಒತ್ತಡವನ್ನು ಕಡಿಮೆ ಮಾಡುತ್ತದೆ. ದೀರ್ಘಕಾಲ ತಪ್ಪಾದ ದೇಹಭಂಗಿಯಿಂದ ಉಂಟಾಗುವ ನೋವುಗಳು ಮತ್ತು ಅಸೌಕರ್ಯಗಳನ್ನು ತಡೆಯಲು ಈ ಆಸನ ಸಹಕಾರಿಯಾಗಿದೆ.

ಜೀರ್ಣಕ್ರಿಯೆಗೆ ಅನುಕೂಲಕರ ಆಸನ

ಸುಖಾಸನದಲ್ಲಿ ಕುಳಿತು ಊಟ ಮಾಡುವುದರಿಂದ ರಕ್ತಪ್ರವಾಹವು ಮುಖ್ಯವಾಗಿ ಜೀರ್ಣಾಂಗಗಳತ್ತ ಕೇಂದ್ರೀಕೃತವಾಗುತ್ತದೆ. ಊಟ ಮಾಡುವ ಸಮಯದಲ್ಲಿ ಅಗತ್ಯವಿಲ್ಲದ ಕಾಲುಗಳತ್ತದ ರಕ್ತಸಂಚಾರವನ್ನು ಇದು ಕಡಿಮೆ ಮಾಡುತ್ತದೆ.

ಈ ರೀತಿ ಹೊಟ್ಟೆಯ ಅಂಗಗಳಿಗೆ ಹೆಚ್ಚುವರಿ ರಕ್ತಪ್ರವಾಹ ದೊರಕುವುದರಿಂದ ಜೀರ್ಣಕ್ರಿಯೆ ಉತ್ತಮವಾಗಿ ನಡೆಯುತ್ತದೆ ಹಾಗೂ ಪೋಷಕಾಂಶಗಳ ಬಳಕೆ ಪರಿಣಾಮಕಾರಿಯಾಗಿ ಆಗುತ್ತದೆ.

ಊಟದ ಸಮಯದಲ್ಲಿ ಕೆಳಗೆ ಕುಳಿತುಕೊಳ್ಳುವುದರಿಂದ ದೇಹವು ವಿಶ್ರಾಂತ ಸ್ಥಿತಿಗೆ ಪ್ರವೇಶಿಸುತ್ತದೆ. ಇದರ ಪರಿಣಾಮವಾಗಿ ಜೀರ್ಣಾಂಗಗಳಿಗೆ ರಕ್ತಪ್ರವಾಹ ಹೆಚ್ಚಾಗಿ, ಜೀರ್ಣಕ್ರಿಯೆ ಸಕ್ರಿಯಗೊಳ್ಳುತ್ತದೆ. ನೇರ ಆಸನದಲ್ಲಿರುವಾಗ ಆಹಾರವು ಆಹಾರನಾಳದ ಮೂಲಕ ಸುಲಭವಾಗಿ ಸಾಗುತ್ತದೆ. ಇದರಿಂದ ಅಜೀರ್ಣ, ಎದೆಯುರಿ ಹಾಗೂ ಆಸಿಡ್ ರಿಫ್ಲಕ್ಸ್‌ನಂಥ ಸಮಸ್ಯೆಗಳು ಕಡಿಮೆಯಾಗುತ್ತವೆ.

ಸಹಜ ಚಲನೆ ಮತ್ತು ಜೀರ್ಣರಸಗಳ ಸ್ರವಣೆ

ನೆಲದ ಮೇಲೆ ಇಟ್ಟ ತಟ್ಟೆಯಿಂದ ಊಟ ಮಾಡುವಾಗ ಸ್ವಲ್ಪ ಮುಂದಕ್ಕೆ ಬಾಗಿ ಆಹಾರ ತೆಗೆದುಕೊಳ್ಳುವುದು ಮತ್ತು ಮತ್ತೆ ನೇರವಾಗಿ ಕುಳಿತುಕೊಳ್ಳುವುದು ಸಹಜವಾಗಿಯೇ ನಡೆಯುತ್ತವೆ. ಈ ಸಣ್ಣ ಚಲನೆಗಳು ಹೊಟ್ಟೆ ಹಾಗೂ ಸ್ನಾಯುಗಳನ್ನು ಸಕ್ರಿಯಗೊಳಿಸಿ, ಜೀರ್ಣರಸಗಳ ಸ್ರವಣೆಗೆ ಉತ್ತೇಜನ ನೀಡುತ್ತವೆ. ಪರಿಣಾಮವಾಗಿ ಆಹಾರವು ಸರಿಯಾಗಿ ಜೀರ್ಣಗೊಳ್ಳುತ್ತದೆ.

ಮನಸ್ಸಿನ ನೆಮ್ಮದಿ, ಆರೋಗ್ಯದ ಮೂಲ

ಆಯುರ್ವೇದದ ಪ್ರಕಾರ, ಆಹಾರ ಸೇವಿಸುವ ಸಮಯದಲ್ಲಿ ಮನಸ್ಸು ಶಾಂತವಾಗಿರುವುದು ಅತ್ಯಂತ ಮುಖ್ಯ. ಸುಖಾಸನವು ಮನಸ್ಸನ್ನು ಸ್ಥಿರಗೊಳಿಸಿ, ಅಲಕ್ಷ್ಯ ಮತ್ತು ಆತುರವನ್ನು ಕಡಿಮೆ ಮಾಡುತ್ತದೆ. ಶಾಂತ ಮನಸ್ಸಿನಲ್ಲಿ ಸೇವಿಸಿದ ಆಹಾರವನ್ನು ದೇಹ ಉತ್ತಮವಾಗಿ ಹೀರಿಕೊಳ್ಳುತ್ತದೆ. ಅದಕ್ಕಾಗಿಯೇ ಊಟವನ್ನು ಒಂದು ಪವಿತ್ರ ಕ್ರಿಯೆಯಂತೆ ಕಾಣಲಾಗಿದೆ. ಮನಸ್ಸಿನ ಸ್ಥಿತಿಯೂ ಆಹಾರದ ಜೀರ್ಣಕ್ರಿಯೆಗೆ ನೇರವಾಗಿ ಸಂಬಂಧಿಸಿದೆ. ಕುಳಿತು ಶಾಂತ ಮನಸ್ಸಿನಿಂದ ಊಟ ಮಾಡಿದಾಗ, ದೇಹವು 'ವಿಶ್ರಾಂತ ಸ್ಥಿತಿಗೆ' ಪ್ರವೇಶಿಸುತ್ತದೆ. ಇದರಿಂದ ಪ್ಯಾರಾಸಿಂಪಥೆಟಿಕ್ ನರಮಂಡಲ ಸಕ್ರಿಯವಾಗಿ, ಜೀರ್ಣಕ್ರಿಯೆ ಉತ್ತಮಗೊಳ್ಳುತ್ತದೆ. ಆಹಾರದೊಂದಿಗೆ ನಮ್ಮ ಸಂಪರ್ಕ ಗಾಢವಾಗುತ್ತದೆ.

ದೀರ್ಘಾಯುಷ್ಯದ ಸುಳಿವು

ಒಂದು ಮಹತ್ವದ ಅಂಶವೆಂದರೆ, ಸುಖಾಸನದಲ್ಲಿ ಅಥವಾ ಕಾಲುಮಡಚಿ ಕುಳಿತು ಊಟ ಮಾಡಿ, ನಂತರ ಯಾವುದೇ ಆಧಾರವಿಲ್ಲದೆ ಸ್ವತಃ ಎದ್ದು ನಿಲ್ಲುವ ಸಾಮರ್ಥ್ಯವನ್ನು ಒಟ್ಟು ದೈಹಿಕ ಆರೋಗ್ಯದ ಸೂಚಕವೆಂದು ವಿವಿಧ ಸಂಶೋಧನೆಗಳು ಪರಿಗಣಿಸುತ್ತವೆ. ಈ ಸಾಮರ್ಥ್ಯವು ಸ್ನಾಯುಬಲ, ಸಮತೋಲನ ಹಾಗೂ ಸಂಧಿಗಳ ಆರೋಗ್ಯವನ್ನು ಸೂಚಿಸುವುದರಿಂದ, ಇಂಥ ವ್ಯಕ್ತಿಗಳು ಸಾಮಾನ್ಯವಾಗಿ ದೀರ್ಘಾಯುಷ್ಯ ಹೊಂದಿರುವ ಸಾಧ್ಯತೆ ಹೆಚ್ಚು ಎಂದು ತಿಳಿದುಬಂದಿದೆ.

ಹೀಗಾಗಿ, ಕುಳಿತು ಊಟ ಮಾಡುವ ಪದ್ಧತಿ ಕೇವಲ ಸಂಪ್ರದಾಯವಲ್ಲ; ಅದು ಆರೋಗ್ಯಕರ ಮತ್ತು ಸಮತೋಲನಯುತ ಜೀವನದ ಸರಳ ಆದರೆ ಪರಿಣಾಮಕಾರಿ ಮಾರ್ಗವಾಗಿದೆ. ಆದ್ದರಿಂದ, ಊಟವೆಂದರೆ ಕೇವಲ ಹೊಟ್ಟೆ ತುಂಬಿಸುವ ಕ್ರಿಯೆಯಲ್ಲ; ಅದು ದೇಹ-ಮನಸ್ಸು-ಆರೋಗ್ಯವನ್ನು ಪೋಷಿಸುವ ಸಂಸ್ಕಾರ. ದಿನಕ್ಕೆ ಕೆಲ ನಿಮಿಷಗಳಾದರೂ ಕುಳಿತು, ಮನಸ್ಸನ್ನು ನೆಮ್ಮದಿಯಾಗಿ ಇರಿಸಿಕೊಂಡು ಆಹಾರ ಸೇವಿಸುವ ಅಭ್ಯಾಸ ಆರೋಗ್ಯದತ್ತ ಒಂದು ಸರಳ, ಆದರೆ ಮಹತ್ವದ ಹೆಜ್ಜೆಯಾಗಿದೆ.

ಕೈಯಿಂದ ಊಟ ಮಾಡುವುದರ ಆರೋಗ್ಯ ಲಾಭಗಳು

ಭಾರತೀಯ ಸಂಪ್ರದಾಯದಲ್ಲಿ ಕೈಯಿಂದ ಊಟ ಮಾಡುವ ಪದ್ಧತಿಗೂ ವಿಶೇಷ ಮಹತ್ವವಿದೆ. ಇದನ್ನು ಶಿಸ್ತು ಅಥವಾ ಅಭ್ಯಾಸವೆಂದು ಮಾತ್ರ ನೋಡದೇ, ಆರೋಗ್ಯದ ದೃಷ್ಟಿಯಿಂದಲೂ ಅರ್ಥಮಾಡಿಕೊಳ್ಳಬೇಕು. ಕೈಯಿಂದ ಆಹಾರ ಸೇವಿಸುವಾಗ ಬೆರಳುಗಳು ಆಹಾರವನ್ನು ಸ್ಪರ್ಶಿಸುವ ಕ್ಷಣದಲ್ಲೇ ಮಿದುಳಿಗೆ ಸಂವೇದನಾತ್ಮಕ ಸಂದೇಶಗಳು ಹೋಗುತ್ತವೆ. ಇದರಿಂದ ದೇಹ ಜೀರ್ಣಕ್ರಿಯೆಗೆ ಸಿದ್ಧಗೊಳ್ಳುತ್ತದೆ.

ಕೈಯಿಂದ ಆಹಾರ ತೆಗೆದುಕೊಳ್ಳುವಾಗ ಅದರ ತಾಪಮಾನ, ಗಟ್ಟಿತನ ಹಾಗೂ ತೇವಾಂಶವನ್ನು ನಾವು ಸಹಜವಾಗಿ ಅರಿತುಕೊಳ್ಳುತ್ತೇವೆ. ಇದರಿಂದ ಅತಿಬಿಸಿ ಆಹಾರ ಸೇವನೆಯಿಂದ ಉಂಟಾಗುವ ಹಾನಿ ತಪ್ಪುತ್ತದೆ. ಜತೆಗೆ ಆಹಾರವನ್ನು ನಿಧಾನವಾಗಿ ಮತ್ತು ಎಚ್ಚರಿಕೆಯಿಂದ ಸೇವಿಸುವ ಅಭ್ಯಾಸವೂ ಬೆಳೆಯುತ್ತದೆ. ಆತುರವಿಲ್ಲದೆ ತಿನ್ನುವುದರಿಂದ ಜೀರ್ಣಕ್ರಿಯೆ ಉತ್ತಮಗೊಳ್ಳುತ್ತದೆ.

ಅಂತೆಯೇ, ಕೈಯ ಬೆರಳುಗಳನ್ನು ಪಂಚಮಹಾಭೂತಗಳ ಪ್ರತಿನಿಧಿಗಳೆಂದು ಪರಿಗಣಿಸಲಾಗುತ್ತದೆ. ಬೆರಳುಗಳು ಆಹಾರವನ್ನು ಸ್ಪರ್ಶಿಸುವುದರಿಂದ ಆ ಭೂತತತ್ತ್ವಗಳು ಜೀರ್ಣಕ್ರಿಯೆಗೆ ಸಹಕಾರಿಯಾಗುತ್ತವೆ ಎಂಬ ನಂಬಿಕೆಯಿದೆ. ಇದು ಆಹಾರ ಮತ್ತು ದೇಹದ ನಡುವೆ ಸಹಜ ಸಂಪರ್ಕವನ್ನು ನಿರ್ಮಿಸುತ್ತದೆ.

ಕೈಯಲ್ಲಿನ ಪ್ರತಿಯೊಂದು ಬೆರಳು ಕೂಡ ವಿಶ್ವವನ್ನು ಮತ್ತು ನಮ್ಮ ದೇಹವನ್ನು ನಿಯಂತ್ರಿಸುವ ಪಂಚಮಹಾಭೂತಗಳ ಪ್ರತಿನಿಧಿ ಎಂದು ವಿವರಿಸಲಾಗಿದೆ.

- ಹೆಬ್ಬೆರಳು ಅಗ್ನಿ ತತ್ತ್ವವನ್ನು ಸೂಚಿಸುತ್ತದೆ. ಇದು ದೇಹದಲ್ಲಿನ ಜೀರ್ಣಾಗ್ನಿ, ಚಯಾಪಚಯ ಕ್ರಿಯೆ ಹಾಗೂ ಪರಿವರ್ತನೆಗೆ ಸಂಬಂಧಿಸಿದೆ.
- ತೋರು ಬೆರಳು ವಾಯು ತತ್ತ್ವದ ಸಂಕೇತವಾಗಿದ್ದು, ಚಲನೆ, ನರಸಂಚಾರ ಮತ್ತು ರಕ್ತಸಂಚಲನವನ್ನು ನಿಯಂತ್ರಿಸುತ್ತದೆ.
- ಮಧ್ಯಮ ಬೆರಳು ಆಕಾಶ ತತ್ತ್ವವನ್ನು ಪ್ರತಿನಿಧಿಸುತ್ತದೆ. ಇದು ದೇಹದಲ್ಲಿ ಸಮತೋಲನ, ವಿಸ್ತರಣೆ ಮತ್ತು ಜೀರ್ಣಾಂಗದ ನಡುವಿನ ಸಂಪರ್ಕವನ್ನು ಕಾಪಾಡುತ್ತದೆ.
- ಅನಾಮಿಕ ಬೆರಳು ಭೂಮಿ ತತ್ತ್ವದ ಪ್ರತೀಕವಾಗಿದ್ದು, ದೇಹದ ಸ್ಥಿರತೆ, ಬಲ ಮತ್ತು ರಚನೆಯನ್ನು ಸೂಚಿಸುತ್ತದೆ.
- ಕಿರು ಬೆರಳು ಜಲ ತತ್ತ್ವವನ್ನು ಪ್ರತಿನಿಧಿಸಿ, ದೇಹದ ದ್ರವ ಸಮತೋಲನ ಮತ್ತು ಜೀರ್ಣಕ್ರಿಯೆಗೆ ಸಹಕಾರಿಯಾಗುತ್ತದೆ.

ಕೈಯಿಂದ ಆಹಾರ ಸೇವಿಸುವಾಗ ಈ ಪಂಚತತ್ತ್ವಗಳ ಸಂಯೋಜನೆ ಸಹಜವಾಗಿ ಕಾರ್ಯನಿರ್ವಹಿಸುತ್ತದೆ ಎಂಬ ವಿವರಣೆ ಇದೆ. ಆಹಾರವನ್ನು ಸ್ಪರ್ಶಿಸುವ ಕ್ಷಣದಲ್ಲೇ ಪ್ರಾಣಶಕ್ತಿ ಸಕ್ರಿಯಗೊಂಡು, ದೇಹವು ಜೀರ್ಣಕ್ರಿಯೆಗೆ ಸಿದ್ಧಗೊಳ್ಳುತ್ತದೆ. ಇದರಿಂದ ಜೀರ್ಣಕ್ರಿಯೆ ಉತ್ತೇಜಿತವಾಗಿ, ಪೋಷಕಾಂಶಗಳ ಹೀರಿಕೆ ಉತ್ತಮವಾಗುತ್ತದೆ.

ಹೀಗಾಗಿ, ಕೈಯಿಂದ ಊಟ ಮಾಡುವ ಪದ್ಧತಿ ಕೇವಲ ಸಂಪ್ರದಾಯವಲ್ಲ; ಅದು ಆಹಾರ ಮತ್ತು ದೇಹದ ನಡುವಿನ ಆಳವಾದ ಸಂಪರ್ಕವನ್ನು ನಿರ್ಮಿಸಿ, ಆರೋಗ್ಯವನ್ನು ಸಮಗ್ರವಾಗಿ ಪೋಷಿಸುವ ವೈಜ್ಞಾನಿಕ ಆಯುರ್ವೇದ ಅಭ್ಯಾಸವಾಗಿದೆ.

ಇದಲ್ಲದೆ, ಕೈಯಿಂದ ಊಟ ಮಾಡುವಾಗ ಆಹಾರದ ಪ್ರಮಾಣದ ಮೇಲೆ ಸ್ವಯಂ ನಿಯಂತ್ರಣ ಉಂಟಾಗುತ್ತದೆ. ಚಮಚ ಅಥವಾ ಉಪಕರಣಗಳ ಮೂಲಕ ತಿನ್ನುವಂತೆ ದೊಡ್ಡ ಮೊತ್ತದಲ್ಲಿ ಆಹಾರ ತೆಗೆದುಕೊಳ್ಳುವ ಪ್ರವೃತ್ತಿ ಕಡಿಮೆಯಾಗುತ್ತದೆ. ಇದರಿಂದ ಅತಿಹಾರ ತಪ್ಪಿ, ತೃಪ್ತಿಯ ಭಾವನೆ ಬೇಗ ಉಂಟಾಗುತ್ತದೆ.

ಕೈಯಿಂದ ಆಹಾರ ಸೇವಿಸುವಾಗ ಸ್ಪರ್ಶ, ವಾಸನೆ, ದೃಷ್ಟಿ ಮತ್ತು ರುಚಿ ಎಂಬ ಹಲವು ಇಂದ್ರಿಯಗಳು ಒಂದೇ ಸಮಯದಲ್ಲಿ ಕಾರ್ಯನಿರ್ವಹಿಸುತ್ತವೆ. ಈ ಸಂವೇದನಾತ್ಮಕ ಅನುಭವದಿಂದ ತೃಪ್ತಿಯ ಭಾವನೆ ಬೇಗ ಉಂಟಾಗುತ್ತದೆ. ಪರಿಣಾಮವಾಗಿ ಕಡಿಮೆ ಪ್ರಮಾಣದ ಆಹಾರದಲ್ಲಿಯೇ ಹೊಟ್ಟೆ ತುಂಬಿದ ಅನುಭವ ಸಿಗುತ್ತದೆ. ಇದು ಅತಿಹಾರವನ್ನು ತಡೆಯಲು ಸಹಾಯ ಮಾಡಿ, ಜೀರ್ಣಕ್ರಿಯೆಯ ತೊಂದರೆಗಳ ಪ್ರಮುಖ ಕಾರಣವಾದ ಅಧಿಕ ಆಹಾರ ಸೇವನೆಯನ್ನು ಕಡಿಮೆ ಮಾಡುತ್ತದೆ.

ಒತ್ತಡ ಕಡಿತ ಮತ್ತು ಕಾರ್ಟಿಸೋಲ್ ನಿಯಂತ್ರಣ

ಜೀರ್ಣಕ್ರಿಯೆ ಮತ್ತು ಒತ್ತಡಗಳು ಪರಸ್ಪರ ಆಳವಾಗಿ ಸಂಪರ್ಕ ಹೊಂದಿವೆ. ಒತ್ತಡ ಹೆಚ್ಚಾದಾಗ ಜೀರ್ಣಕ್ರಿಯೆ ನಿಧಾನಗೊಳ್ಳುತ್ತದೆ; ಇದರಿಂದ ಹೊಟ್ಟೆಉಬ್ಬರ, ಆಮ್ಲಪಿತ್ತ ಮತ್ತು ಪೋಷಕಾಂಶಗಳ ಹೀರಿಕೆ ಕುಂದುವ ಸಾಧ್ಯತೆ ಇರುತ್ತದೆ. ಕೈಯಿಂದ ಊಟ ಮಾಡುವ ಪದ್ಧತಿಯು ಮನಸ್ಸನ್ನು ಪ್ರಸ್ತುತ ಕ್ಷಣದಲ್ಲಿ ನೆಲೆಗೊಳಿಸಿ, ಅರಿವನ್ನು ಉತ್ತೇಜಿಸುತ್ತದೆ. ಈ ಅರಿವು ಒತ್ತಡವನ್ನು ಕಡಿಮೆ ಮಾಡಿ, ಕಾರ್ಟಿಸೋಲ್ ಎಂಬ ಒತ್ತಡ ಹಾರ್ಮೋನ್ ಮಟ್ಟವನ್ನು ಸಮತೋಲನದಲ್ಲಿಡಲು ಸಹಕಾರಿಯಾಗಿದೆ. ಪರಿಣಾಮವಾಗಿ ಜೀರ್ಣಕ್ರಿಯೆ ಸುಧಾರಿಸಿ, ದೇಹವು ಆಹಾರದಿಂದ ಹೆಚ್ಚಿನ ಪೋಷಣೆಯನ್ನು ಪಡೆಯುತ್ತದೆ.

ಹೀಗಾಗಿ, ಕೈಯಿಂದ ಊಟ ಮಾಡುವ ಅಭ್ಯಾಸ ಕೇವಲ ದೇಹಕ್ಕೆ ಮಾತ್ರವಲ್ಲ, ಅದು ಮನಸ್ಸಿನ ನೆಮ್ಮದಿ ಮತ್ತು ಭಾವನಾತ್ಮಕ ಸಮತೋಲನಕ್ಕೂ ಸಹಕಾರಿ.

ಸಂಸ್ಕೃತಿ ಎಂಬುದು ಆರೋಗ್ಯದ ಸ್ಮರಣೆ

ಭಾರತೀಯ ಸಂಸ್ಕೃತಿಯನ್ನು ಬಹುಸಾರಿ ಆಚರಣೆಗಳ ಸಂಕಲನವೆಂದು ಮಾತ್ರ ನೋಡುವ ಪ್ರವೃತ್ತಿಯಿದೆ. ಆದರೆ ನಿಜವಾಗಿ ನೋಡಿದರೆ, ನಮ್ಮ ಸಂಪ್ರದಾಯಗಳು ಪೀಳಿಗೆಯಿಂದ ಪೀಳಿಗೆಗೆ ಹರಿದುಬಂದ ಜೀವನ ವಿಜ್ಞಾನದ ಸಂಗ್ರಹಗಳಾಗಿವೆ. ಕುಳಿತು ಊಟ ಮಾಡುವುದು, ಕೈಯಿಂದ ಆಹಾರ ಸೇವಿಸುವುದು, ಆಹಾರಕ್ಕೆ ಪೂಜ್ಯತೆಯನ್ನು ನೀಡುವುದು– ಇವೆಲ್ಲವೂ ಅಂಧ ಅನುಸರಣೆಗಳಲ್ಲ; ಅವು ದೇಹ, ಮನಸ್ಸು ಮತ್ತು ಆಯುಷ್ಯವನ್ನು ಸಂರಕ್ಷಿಸುವ ಸೂಕ್ಷ್ಮ ವಿಜ್ಞಾನಗಳೇ ಆಗಿವೆ. ಆಧುನಿಕ ಜೀವನಶೈಲಿ ನಮಗೆ ವೇಗವನ್ನು ಕಲಿಸಿದರೂ, ಆರೋಗ್ಯದ ಲಯವನ್ನು ಮರೆಸಿದೆ. ಆದರೆ ನಮ್ಮ ಸಂಸ್ಕೃತಿ ಆ ಲಯವನ್ನು ಮರಳಿ ನೆನಪಿಸುತ್ತದೆ. ಆಹಾರವನ್ನು ಕೇವಲ ಕ್ಯಾಲೊರಿಗಳಾಗಿ ನೋಡದೇ, ಅದು ಪ್ರಾಣಶಕ್ತಿಯ ಮೂಲವೆಂದು ಅರಿಯಲು ಕಲಿಸುತ್ತದೆ. ದೇಹದೊಂದಿಗೆ ಸಂವಾದ ನಡೆಸುವ ರೀತಿಯಲ್ಲಿ ಬದುಕಲು ಮಾರ್ಗದರ್ಶನ ನೀಡುತ್ತದೆ.

ಇಂದು ವಿಜ್ಞಾನವೂ ದೃಢಪಡಿಸುತ್ತಿರುವ ಈ ಸರಳ ಅಭ್ಯಾಸಗಳು– ಕುಳಿತು ಊಟ ಮಾಡುವುದು, ಕೈಯಿಂದ ಆಹಾರ ಸೇವಿಸುವುದು – ನಮ್ಮ ದೈನಂದಿನ ಜೀವನದಲ್ಲಿ ಮರುಸ್ಥಾಪಿತವಾಗಬೇಕಾದ ಅವಶ್ಯಕತೆಯಿದೆ. ಆರೋಗ್ಯಕ್ಕಾಗಿ ಹೊಸದನ್ನು ಹುಡುಕುವ ಮೊದಲು, ನಮ್ಮದೇ ಸಂಸ್ಕೃತಿಯೊಳಗೆ ನೆಲೆಸಿರುವ ಜ್ಞಾನವನ್ನು ಮರುಅಳವಡಿಸಿಕೊಳ್ಳುವ ಕಾಲ ಇದು.

ಏಕೆಂದರೆ, ಸಂಸ್ಕೃತಿ ಎಂಬುದು ಹಿಂದಿನ ಕಾಲದ ನೆನಪಲ್ಲ; ಅದು ಭವಿಷ್ಯದ ಆರೋಗ್ಯದ ದಾರಿ.

ನಿಜಮಹಾತ್ಮ ಬಾಬಾಸಾಹೇಬ: ಒಂದು ಶುರುವಾತು

ಬಾಬಾಸಾಹೇಬರ ಜೀವನವನ್ನು ರಾಜಕೀಯ ಕಥಾನಕಗಳಿಂದ ಹೊರತಂದು, ರಾಷ್ಟ್ರೀಯತೆಯ ನೆಲೆಯಲ್ಲಿ ಪುನರ್ ಸ್ಥಾಪಿಸುವ ಧೈರ್ಯಶಾಲಿ ಪ್ರಯತ್ನ ಮಾಡಿದೆ 'ನಿಜಮಹಾತ್ಮ ಬಾಬಾಸಾಹೇಬ' ನಾಟಕ. ಬಾಬಾಸಾಹೇಬರನ್ನು ಯಾವುದೋ ಒಂದು ರಾಜಕೀಯ ಚೌಕಟ್ಟಿಗೆ ಸೀಮಿತಗೊಳಿಸುವ ಬದಲಿಗೆ ಅವರ ನೈಜ ಸ್ವಭಾವಗಳಾದ ಚಿಕಿತ್ಸಕ ಬುದ್ಧಿ, ತಪ್ಪನ್ನು ಪ್ರಶ್ನಿಸುವ, ವಿರೋಧಿಸುವ ಧೈರ್ಯ ಮತ್ತು ಸತ್ಯಕ್ಕಾಗಿ ಒಬ್ಬಂಟಿಯಾಗಲು ಸಿದ್ಧನಾದ ಮಹಾಮಾನವತೆಯ ನೆಲೆಯಲ್ಲಿ ಅವರನ್ನು ನೋಡಬೇಕು.

ಕಹಿಸತ್ಯ
ಜನಮೇಜಯ ಉಮರ್ಜಿ
vveditoped@gmail.com

ಸತ್ಯ ಯಾವಾಗಲೂ ಕಹಿಯೇ. ಸತ್ಯವನ್ನು ಹೇಳಲು ಧೈರ್ಯ ಬೇಕು, ಸತ್ಯವನ್ನು ಮರೆಮಾಚುವುದು ರಾಜಕೀಯದ ಜಾಣತನ. ಸತ್ಯಕ್ಕೆ ಪಕ್ಷವೂ ಇಲ್ಲ, ಬಣ್ಣವೂ ಇಲ್ಲ; ಅದು ಸ್ಪಷ್ಟ ಮತ್ತು ಶುಭ್ರ. ಆದರೆ ಪಕ್ಷಗಳು ತಮಗೆ ಬೇಕಾದಂತೆ ಬಣ್ಣ ಬಳಿಯಬಹುದು. ಎಷ್ಟೇ ಕಥಾನಕಗಳ ಹೊರತಾಗಿಯೂ ಸತ್ಯ ಒಂದು ದಿನ ಹೊರಬರುತ್ತದೆ. ಕಣ್ಣಿದೆ, ಪುಸ್ತಕವಿದೆ; ಆದರೆ ಓದಲು ಬೆಳಕು ಬೇಕು, ಅಂದರೆ ಸಾಧನ ಬೇಕು. ಡಾ. ಬಾಬಾಸಾಹೇಬರ ಬದುಕು ತೆರೆದ ಪುಸ್ತಕ. ಅವರು ಬದುಕನ್ನು ಅಕ್ಷರಗಳಲ್ಲಿ ಬರೆದಿಟ್ಟಿದ್ದಾರೆ. ಅವಿನಾಶಿಯಾಗಿದ್ದು ಅಕ್ಷರ. ಡಾ. ಬಾಬಾಸಾಹೇಬರನ್ನು ರಾಜಕೀಯ ಕಾರಣಗಳಿಗಾಗಿ ಬಳಸಿಕೊಳ್ಳಲಾಗಿದೆ. ಅವರ ಬದುಕಿನ ಹಲವು ಸತ್ಯಗಳು ಹಿನ್ನೆಲೆಗೆ ಸರಿದಿವೆ. ಸಂವಿಧಾನ ಶಿಲ್ಪಿ ಡಾ. ಬಾಬಾಸಾಹೇಬರು ನಿಜಮಹಾತ್ಮರು. ಅವರ ಮಾತು ಮತ್ತು ಬರಹಗಳ ಹಿಂದೆ ಸಂಶೋಧನೆ ಮತ್ತು ತಲಸ್ಪರ್ಶಿ ಅಧ್ಯಯನಗಳಿವೆ. ಇಷ್ಟೆಲ್ಲಾ ನೆನಪಾಗಲು ಕಾರಣ ಮೊನ್ನೆ ಮೊನ್ನೆ ಅಡ್ಡಂಡ ಅವರ 'ನಿಜಮಹಾತ್ಮ ಬಾಬಾಸಾಹೇಬ' ನಾಟಕ ನೋಡಿದೆ. ಅಡ್ಡಂಡ ನಿಜದ ಬೆನ್ನು ಹತ್ತಿದ್ದಾರೆ. 'ಟಿಪ್ಪುವಿನ ನಿಜಕನಸು' ನಂತರ ಇದು. ಈಗ ಮೇಲಿನ ಸಾಲುಗಳನ್ನು ಮತ್ತೊಮ್ಮೆ ಓದಿ. ಬಾಬಾಸಾಹೇಬರು ಏನು? ನಾಟಕದಲ್ಲಿ ಅವರ ಜೀವನ ತೆರೆದಿಡುವುದರಲ್ಲಿ ಅಡ್ಡಂಡ ಅವರ ಸಾಹಸವೇನು? ಗೊತ್ತಾಗುತ್ತದೆ.

ನಾಟಕವನ್ನೆಲ್ಲಾ ಪೂರಾ ಹೇಳಿದರೆ ನೋಡಲು ಏನೂ ಉಳಿದಿರುವುದಿಲ್ಲ, ಆದರೆ ಅದರಲ್ಲಿ ಬಂದಿರುವ ಕೆಲ ವಿಷಯಗಳ ಚರ್ಚೆ ಮಾಡಲು ಅಡ್ಡಿಯಿಲ್ಲ. ಬಾಬಾಸಾಹೇಬರ ಬಗ್ಗೆ 'ಸಾಮಾಜಿಕ ಕ್ರಾಂತಿಸೂರ್ಯ' ಪುಸ್ತಕ ಬರೆದ ದತ್ತೋಪಂತ್ ಠೇಂಗಡಿ ಅವರು ನಿರೂಪಣೆ ಮಾಡುವಂತೆ ಚಿತ್ರಿಸಿರುವ ನಾಟಕ, ಬಾಬಾಸಾಹೇಬರ ಜೀವನವನ್ನು ರಾಜಕೀಯ ಕಥಾನಕಗಳಿಂದ ಹೊರತಂದು, ರಾಷ್ಟ್ರೀಯತೆಯ ನೆಲೆಯಲ್ಲಿ ಪುನರ್ ಸ್ಥಾಪಿಸುವ ಧೈರ್ಯಶಾಲಿ ಪ್ರಯತ್ನ ಮಾಡಿದೆ. ಬಾಬಾಸಾಹೇಬರನ್ನು ಯಾವುದೋ ಒಂದು ರಾಜಕೀಯ ಚೌಕಟ್ಟಿಗೆ ಸೀಮಿತಗೊಳಿಸಬಾರದು, ಬದಲಾಗಿ ಅವರ ನೈಜ ಸ್ವಭಾವಗಳಾದ ಚಿಕಿತ್ಸಕ ಬುದ್ಧಿ, ತಪ್ಪನ್ನು ಪ್ರಶ್ನಿಸುವ, ವಿರೋಧಿಸುವ ಧೈರ್ಯ ಮತ್ತು ಸತ್ಯಕ್ಕಾಗಿ ಒಬ್ಬಂಟಿಯಾಗಲು ಸಿದ್ಧನಾದ ಮಹಾಮಾನವತೆಯ ನೆಲೆಯಲ್ಲಿ ಅವರನ್ನು ನೋಡಬೇಕು.

ಕೆಲವೊಂದು ಮರೆಯಲಾಗದ ಕಹಿಸತ್ಯಗಳಿವೆ, ಅವುಗಳನ್ನು ನೋಡೋಣ. ಹಿಂದೂ ಸಮಾಜದಲ್ಲಿ ಮಹಿಳೆಯರಿಗೆ ಕಾನೂನುಬದ್ಧ ಸಮಾನ ಹಕ್ಕುಗಳನ್ನು ನೀಡುವ ಉದ್ದೇಶದ 'ಹಿಂದೂ ಕೋಡ್ ಬಿಲ್' ಅನ್ನು ಕಾಂಗ್ರೆಸ್ ಸರಕಾರ ರಾಜಕೀಯ ಲಾಭ-ನಷ್ಟದ ಲೆಕ್ಕಾಚಾರದಿಂದ ಉದ್ದೇಶಪೂರ್ವಕವಾಗಿ ಮುಂದೂಡಿದ ಕಾರಣ ಬಾಬಾಸಾಹೇಬರು 1951ರಲ್ಲಿ ಪ್ರಧಾನಿ ಜವಾಹರಲಾಲ್ ನೆಹರು ಅವರ ಸಚಿವ ಸಂಪುಟಕ್ಕೆ ರಾಜೀನಾಮೆ ನೀಡಿದರು. ಸಾಮಾಜಿಕ ನ್ಯಾಯದ ವಿಚಾರದಲ್ಲಿ ರಾಜಕೀಯ ಅನುಕೂಲತೆ ಮೇಲುಗೈ ಸಾಧಿಸಿದ ಈ ನಡೆ, ಅಂಬೇಡ್ಕರ್ ಅವರೊಂದಿಗೆ ಕಾಂಗ್ರೆಸ್ ಹೊಂದಿದ್ದ ಮೂಲಭೂತ ಭಿನ್ನತೆಯನ್ನು ಬಹಿರಂಗಪಡಿಸಿತು. ಇದಾದ ಬಳಿಕ 1952ರ ಮೊದಲ ಲೋಕಸಭಾ ಚುನಾವಣೆಯಲ್ಲಿ, ಜಾಗತಿಕ ಮಟ್ಟದಲ್ಲಿ ಗೌರವ ಪಡೆದ ಬಾಬಾಸಾಹೇಬರನ್ನು ಕಾಂಗ್ರೆಸ್ ತನ್ನ ಎಲ್ಲಾ ಶಕ್ತಿ ಬಳಸಿ ಸೋಲಿಸಿತು. ಪ್ರಜಾಪ್ರಭುತ್ವದಲ್ಲಿ ಇದು ಸಾಮಾನ್ಯ ಎಂದು ತೇಪೆ ಹಚ್ಚಲಾಗುತ್ತಿರುವುದು ವಿಪರ್ಯಾಸ. 1956ರ ಡಿಸೆಂಬರ್ 6ರಂದು ಸಾಮಾಜಿಕ ಕ್ರಾಂತಿಸೂರ್ಯ ಅಸ್ತಂಗತನಾದಾಗ, ಅಂದಿನ ಕಾಂಗ್ರೆಸ್ ಸರಕಾರ ನಡೆದುಕೊಂಡ ರೀತಿ, ಅವರ ಅಂತ್ಯಕ್ರಿಯೆಗೆ ದೆಹಲಿಯಲ್ಲಿ ದೊರೆಯದ ಜಾಗ, ಈ ಎಲ್ಲ ಘಟನೆಗಳು ಒಟ್ಟಾಗಿ ಅಂಬೇಡ್ಕರ್ ಅವರ ವಿಚಾರಗಳನ್ನು ಉಪಯೋಗಿಸಿಕೊಂಡು ಅವರನ್ನು ಕಡೆಗಣಿಸಿದ ಕಾಂಗ್ರೆಸ್ಸಿನ ದ್ವಂದ್ವ ಮತ್ತು ಅವಕಾಶವಾದಿ ರಾಜಕೀಯದ ಪ್ರಶ್ನೆಗಳನ್ನು ಮುಂದಿಟ್ಟಿವೆ.

1927ರಲ್ಲಿ ಮಹಾರಾಷ್ಟ್ರದ ಮಹಾಡ್‌ನಲ್ಲಿ ನಡೆದ ಚವದಾರ್ ಕೆರೆ ಸತ್ಯಾಗ್ರಹ ಮತ್ತು 1930ರಲ್ಲಿ ನಾಸಿಕ್‌ನ ಕಾಳಾರಾಮ ದೇವಸ್ಥಾನ ಪ್ರವೇಶ ಚಳವಳಿ ಇವು, ಡಾ. ಬಾಬಾಸಾಹೇಬರ ಸಾಮಾಜಿಕ ಹೋರಾಟಗಳ ಪ್ರಮುಖ ಮೈಲಿಗಲ್ಲುಗಳಾಗಿವೆ. ಚವದಾರ್ ಕೆರೆಯ ಘಟನೆ ಕೇವಲ ಸಾಮಾಜಿಕ ಪ್ರತಿಭಟನೆ ಅಲ್ಲ, ಅದು ಸಾಮರಸ್ಯದ ಪ್ರಯಾಸವೂ ಆಗಿದೆ. ಅದೇ ರೀತಿಯಾಗಿ ಕಾಳಾರಾಮ ದೇವಸ್ಥಾನ ಪ್ರವೇಶ ಆಂದೋಲನದಲ್ಲಿ, ದೇವಾಲಯಗಳು ಸಾರ್ವಜನಿಕ ಸಂಸ್ಥೆಗಳಾಗಿದ್ದರೆ, ಅವುಗಳ ಪ್ರವೇಶದ ಹಕ್ಕನ್ನು ಜಾತಿಯ ಆಧಾರದಲ್ಲಿ ನಿರಾಕರಿಸಲಾಗದೆಂಬ ಬಾಬಾಸಾಹೇಬರ ನಿಲುವು ಸ್ಪಷ್ಟವಾಗಿದೆ. ಈ ಎರಡು ಹೋರಾಟಗಳು ಕೇವಲ ಹಕ್ಕಿನ ಬೇಡಿಕೆಗಳಲ್ಲ, ಅವು ಸಾಮಾಜಿಕ ಸಾಮರಸ್ಯದ ಹೋರಾಟಗಳೂ ಆಗಿವೆ.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಸ್ಥಾಪಕರಾದ ಡಾ. ಕೇಶವ ಬಲಿರಾಮ ಹೆಡ್ಗೆವಾರ್ ಮತ್ತು ಡಾ. ಬಾಬಾಸಾಹೇಬರು ಒಂದೇ ಕಾಲಘಟ್ಟದಲ್ಲಿದ್ದವರು. ಇವರಿಬ್ಬರ ನಡುವೆ ನಡೆದಿರುವ ಭೇಟಿ ಮತ್ತು ವಿಚಾರ ವಿನಿಮಯಕ್ಕೆ ಇತಿಹಾಸ ಸಾಕ್ಷಿಯಿದೆ; ಸಂಘದ ಶಿಬಿರಕ್ಕೆ ಭೇಟಿಯಿತ್ತ ಬಾಬಾಸಾಹೇಬರು ಅಲ್ಲಿ ಯಾರೂ ಜಾತಿಯಿಂದ ಗುರುತಿಸಿಕೊಳ್ಳದೇ ಹಿಂದೂಗಳಾಗಿ ಗುರುತಿಸಿಕೊಂಡಿದ್ದನ್ನು ನೋಡಿ ಆನಂದ ಪಟ್ಟಿದ್ದಾರೆ ಮತ್ತು ಪ್ರಶಂಸಿಸಿದ್ದಾರೆ. ಹೆಡ್ಗೆವಾರರು ಹಿಂದೂ ಸಮಾಜದ ಒಳಗಿನ ವಿಭಜನೆಗಳನ್ನು ನಿವಾರಿಸಿ ರಾಷ್ಟ್ರವನ್ನು ಬಲಪಡಿಸಲು ಸಂಘಟನೆಯ ಮೂಲಕ ವ್ಯಕ್ತಿ ನಿರ್ಮಾಣದ ಮಾರ್ಗವನ್ನು ಆಯ್ದರೆ, ಬಾಬಾಸಾಹೇಬರು ಸಂವಿಧಾನ, ಕಾನೂನು ಮತ್ತು ಸಂಸ್ಥಾತ್ಮಕ ಸುಧಾರಣೆಗಳ ಮೂಲಕ ಸಾಮಾಜಿಕ ಸಾಮರಸ್ಯವನ್ನು ಸ್ಥಾಪಿಸುವ ಧ್ಯೇಯ ಹೊತ್ತವರು. ಇಬ್ಬರ ಮಾರ್ಗಗಳು ಭಿನ್ನವಾಗಿದ್ದರೂ, ಇಬ್ಬರಲ್ಲೂ ಭಾರತವನ್ನು ಶಕ್ತಿಶಾಲಿ, ಸ್ವಾಭಿಮಾನಿ ರಾಷ್ಟ್ರವನ್ನಾಗಿ ರೂಪಿಸಬೇಕೆಂಬ ಮೂಲಚಿಂತನೆ ಸ್ಪಷ್ಟವಾಗಿತ್ತು. ಅವರಿಬ್ಬರ ವಿಚಾರ ವಿನಿಮಯದಲ್ಲಿ ಕಮ್ಯುನಿಸ್ಟರು ತರುವ ಅಪಾಯಗಳನ್ನು ನಾಟಕದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ.

ಅಸ್ಪೃಶ್ಯತೆ ಹಿಂದೂ ಸಮಾಜಕ್ಕೆ ಅಂಟಿದ ಶಾಪ. ಇದನ್ನು ತೊಡೆಯಲು ಸಾವರ್ಕರರು ಸಾಕಷ್ಟು ಪ್ರಯತ್ನಿಸಿದ್ದರು. ರತ್ನಾಗಿರಿಯಲ್ಲಿ ಇದಕ್ಕಾಗಿ 'ಪತಿತ ಪಾವನ ಮಂದಿರ' ಸ್ಥಾಪಿಸಿದ್ದರು. ಇದು ಜಾತಿಭೇದವಿಲ್ಲದೆ ಎಲ್ಲರಿಗೂ ಪ್ರವೇಶವಿದ್ದ ದೇವಾಲಯವಾಗಿ, ಸಾವರ್ಕರರ ಹಿಂದೂ ಸಾಮರಸ್ಯ ನಿಲುವಿನ ಪ್ರತೀಕವಾಗಿತ್ತು. ಇದೇ ಸಂದರ್ಭದಲ್ಲಿ ಬಾಬಾಸಾಹೇಬರು ಮತ್ತು ಸಾವರ್ಕರರ ನಡುವೆ ರಾಷ್ಟ್ರ, ಧರ್ಮ ಮತ್ತು ಭವಿಷ್ಯದ ಭಾರತದ ಕುರಿತ ಚರ್ಚೆಗಳು ನಡೆದಿರುವುದನ್ನು ಸಮಕಾಲೀನ ಉಲ್ಲೇಖಗಳು ಸೂಚಿಸುತ್ತವೆ. ಬಾಬಾಸಾಹೇಬರು 'Thoughts on Pakistan' (1940) ಕೃತಿ ಬರೆದದ್ದು ದೇಶ ವಿಭಜನೆಯ ಉದ್ದೇಶದಿಂದಲ್ಲ, ವಿಭಜನೆ ತರುವ ರಾಜಕೀಯ, ಸಾಮಾಜಿಕ ಮತ್ತು ಭೌಗೋಳಿಕ ಪರಿಣಾಮಗಳನ್ನು ತರ್ಕಬದ್ಧವಾಗಿ ಅಲ್ಲಿ ವಿಶ್ಲೇಷಿಸಿದ್ದರು. ಧರ್ಮದ ಆಧಾರದಲ್ಲಿ ದೇಶ ಒಡೆಯುವುದೇ ಆದರೆ ಸಂಪೂರ್ಣ ಪ್ರಜಾ ವಿನಿಮಯವಾಗಬೇಕು ಎಂಬುದು ಅವರ ಸ್ಪಷ್ಟ ನಿಲುವಾಗಿತ್ತು. ''ಮುಸ್ಲಿಮರ ನಿಷ್ಠೆಯು ದೇಶಾತೀತವಾಗಿ ಅವರ ಬ್ರದರ್‌ಹುಡ್‌ಗೇ ಹೊರತು, ದೇಶಕ್ಕಲ್ಲ'' ಎಂದು ಅವರು ಸ್ಪಷ್ಟವಾಗಿ ಹೇಳಿದ್ದರು. ಇತ್ತ ಸಾವರ್ಕರರು ಧರ್ಮಾಧಾರಿತ ವಿಭಜನೆಗೆ ತೀವ್ರ ವಿರೋಧ ವ್ಯಕ್ತಪಡಿಸಿ, 'ಅಖಂಡ ಭಾರತ' ಎಂಬ ರಾಷ್ಟ್ರಕಲ್ಪನೆಯನ್ನು ಸ್ಪಷ್ಟವಾಗಿ ಪ್ರತಿಪಾದಿಸಿದರು.

ಹಿಂದುಳಿದ ಮತ್ತು ದಮನಿತ ವರ್ಗಗಳ ಉತ್ಥಾನ ಕುರಿತು ಮಹಾತ್ಮ ಗಾಂಧೀಜಿ ಮತ್ತು ಬಾಬಾಸಾಹೇಬರ ಚಿಂತನಾ ಪ್ರಕ್ರಿಯೆಗಳು ಮೂಲಭೂತವಾಗಿ ಭಿನ್ನವಾಗಿದ್ದವು. ಗಾಂಧಿಯವರ 'ಹರಿಜನ' ಎಂಬ ಪರಿಕಲ್ಪನೆಯು ಆತ್ಮಪರಿವರ್ತನೆ ಮತ್ತು ಸಹಾನುಭೂತಿಯ ಮೂಲಕ ಸಮಾಜ ಸುಧಾರಣೆಯನ್ನು ಮತ್ತು ಅಸ್ಪೃಶ್ಯತೆಯನ್ನು ತೊಡೆದುಹಾಕುವುದಾಗಿದ್ದರೂ, ಎಲ್ಲ ಹಿಂದೂಗಳನ್ನು ಒಂದೇ ಎಂದು ಗುರುತಿಸದೆ ದಮನಿತರನ್ನು ಪ್ರತ್ಯೇಕವಾಗಿ ಗುರುತಿಸುವಂತೆ ಮಾಡಿದ್ದು ಸರಿ ಇರಲಿಲ್ಲ. ಬಾಬಾಸಾಹೇಬರು ''ದಮನವು ಈಗ ಕೇವಲ ನೈತಿಕ ಸಮಸ್ಯೆಯಲ್ಲ, ಅದು ಸಂಸ್ಥಾತ್ಮಕ ಅನ್ಯಾಯವಾಗಿದೆ. ಅದಕ್ಕೆ ಪರಿಹಾರವೂ ಸಂವಿಧಾನಾತ್ಮಕ ಮಾರ್ಗಗಳಿಂದ ಮಾತ್ರ ಸಾಧ್ಯ'' ಎಂಬ ನಿಲುವು ತಳೆದಿದ್ದರು. ಈ ಭಿನ್ನತೆಯೇ 1932ರ ಪೂನಾ ಒಪ್ಪಂದದ ಸಂದರ್ಭದಲ್ಲಿ ಸ್ಪಷ್ಟವಾಗಿ ವ್ಯಕ್ತವಾಯಿತು; ಅಂಬೇಡ್ಕರ್ ಅವರು ನಂತರ ತಮ್ಮ ಬರಹಗಳಲ್ಲಿ ಈ ಒಪ್ಪಂದವು ದಲಿತರ ಸ್ವತಂತ್ರ ರಾಜಕೀಯ ಶಕ್ತಿಗೆ ಸಂಪೂರ್ಣ ನ್ಯಾಯ ನೀಡಲಿಲ್ಲ ಎಂದು ಒಪ್ಪಿಕೊಂಡಿದ್ದಾರೆ. ಅಷ್ಟೇ ಅಲ್ಲದೆ, ಗಾಂಧಿಯವರ ತುಷ್ಟೀಕರಣ ನೀತಿಯ ಬಗ್ಗೆ ಬಾಬಾಸಾಹೇಬರಿಗೆ ಸ್ಪಷ್ಟ ವಿರೋಧವಿತ್ತು. ಸೆಕ್ಯುಲರ್ ಮತ್ತು ಸೋಷಲಿಸ್ಟ್ ಎಂಬ ಪದಗಳನ್ನು ಸಂವಿಧಾನದ ಪೀಠಿಕೆಯೊಳಗೆ ಸೇರಿಸಲು ಅವರು ನಿರಾಕರಿಸಿದ್ದರು. ಮುಂದೆ ಅವುಗಳನ್ನು, ಪ್ರಜಾಪ್ರಭುತ್ವವನ್ನು ಗಾಳಿಗೆ ತೂರಿ, ತುರ್ತು ಪರಿಸ್ಥಿತಿ ಹೇರಿ ಸೇರಿಸಲಾಯಿತು.

ಭಾರತದ ಸಂವಿಧಾನ ಶಿಲ್ಪಿ ಡಾ. ಬಾಬಾಸಾಹೇಬರಿಗೆ ಸಂವಿಧಾನ ಸಭೆಯೊಳಗೆ ದೊರೆತ ಸ್ಥಾನಮಾನ ಮತ್ತು ನಂತರದ ರಾಜಕೀಯ ವರ್ತನೆ, ಸ್ವತಂತ್ರ ಭಾರತದ ಪ್ರಾರಂಭಿಕ ವರ್ಷಗಳ ಒಂದು ಮಹತ್ವದ ವಿರೋಧಾಭಾಸವಾಗಿದೆ. ಬಾಬಾಸಾಹೇಬರು ಸಂವಿಧಾನ ಸಭೆಗೆ ಮೊದಲಿನಿಂದಲೇ ಕಾಂಗ್ರೆಸ್ಸಿನ ಆಯ್ಕೆಯ ಅಭ್ಯರ್ಥಿಯಾಗಿರಲಿಲ್ಲ, ಬಾಂಬೆ ಪ್ರಾಂತ್ಯದಿಂದ ಒದಗಿದ ಸೋಲಿನ ನಂತರ ಅವರು ಬಂಗಾಳದಿಂದ ಸಂವಿಧಾನ ಸಭೆಗೆ ಪ್ರವೇಶ ಪಡೆದರು. ಸಂವಿಧಾನ ಕರಡು ಸಮಿತಿಯ ಅಧ್ಯಕ್ಷರಾಗಿ ಅವರು ಅನನ್ಯ ಬೌದ್ಧಿಕ ಕೊಡುಗೆ ನೀಡಿದರೂ, ಅವರನ್ನು ಮುಂದೆ ಸರಿಯಾಗಿ ನಡೆಸಿಕೊಳ್ಳಲಿಲ್ಲ. ಸಂವಿಧಾನ ಸ್ವೀಕೃತಿಯ ಸಂದರ್ಭದಲ್ಲಿ ನಡೆದ ಪ್ರಲಾಪಗಳು ಇದಕ್ಕೆ ಪುಷ್ಟಿ ಕೊಡುತ್ತವೆ. 1950ರಲ್ಲಿ ಸಂವಿಧಾನ ಸ್ವೀಕೃತಿಯಾದ ನಂತರ ಕಾಂಗ್ರೆಸ್ ನೇತೃತ್ವದ ರಾಜಕೀಯ ವ್ಯವಸ್ಥೆಯಲ್ಲಿ ಅವರಿಗೆ ಸಮರ್ಪಕ ಸ್ಥಾನ ಅಥವಾ ಬೆಂಬಲ ದೊರಕಲಿಲ್ಲ. ನಂತರದ ಚುನಾವಣಾ ಸೋಲುಗಳು, ಸಚಿವ ಸಂಪುಟದಿಂದ ರಾಜೀನಾಮೆ ಹಾಗೂ ನಿರಂತರ ರಾಜಕೀಯ ನಿರ್ಲಕ್ಷ್ಯ ಇವೆಲ್ಲವುಗಳು, 'ಬಾಬಾಸಾಹೇಬರನ್ನು ಲಾಭಕ್ಕಾಗಿ ಬಳಸಿಕೊಂಡು ನಂತರ ನಿರ್ಲಕ್ಷಿಸಲಾಯಿತೆ? ಹಿಂದೆ ಮಾಡಿದ ತಪ್ಪುಗಳ ನೆನಪೂ ಇಲ್ಲದೇ ಅವುಗಳನ್ನು ಮುಚ್ಚಿಟ್ಟು ಇಂದಿಗೂ ಅವರನ್ನು ಬಳಸಿಕೊಳ್ಳುವ, ಕಥಾನಕಗಳನ್ನು ಸೃಷ್ಟಿಸಿ ಲಾಭಮಾಡಿಕೊಳ್ಳುವ ಕಾರ್ಖಾನೆಗಳು ಮುಂದುವರಿದಿವೆಯಾ?' ಎಂಬ ಪ್ರಶ್ನೆಗಳನ್ನು ಸಾರ್ವಜನಿಕ ವಲಯದಲ್ಲಿ ಈ ನಾಟಕವು ಎತ್ತಿದೆ.

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಆಸ್ಪತ್ರೆಗಳಿಗೂ ಲಗ್ಗೆಹಾಕಿದ ಎಂಬಿಎಗಳು

ಭಿನ್ನರಾಶಿ
ಡಾ. ನಾಗರಾಜ ಶೆಣೈ
vveditoped@gmail.com

ಆ ಹಿರಿಯ ವೈದ್ಯರನ್ನು ಭೇಟಿಯಾಗಲು ನನ್ನ ಪತ್ನಿಯ ಜತೆಗಾರನಾಗಿ ಹೋಗಿದ್ದೆ. ಪತ್ನಿಯ ತಪಾಸಣೆ ಮುಗಿದು ಪ್ರಿಸ್ಕ್ರಿಪ್ಷನ್ ಬರೆದಾದ ನಂತರ ನನ್ನೊಂದಿಗೆ ಕುಶಲ ಮಾತುಕತೆಗಿಳಿದ ವೈದ್ಯರು, ''ನೀವೇನು ಮಾಡ್ತಾ ಇದ್ದೀರಿ?'' ಅಂತ ನನ್ನ ಉದ್ಯೋಗದ ಕುರಿತು ಕೇಳಿದರು. ಕಾಲೇಜೊಂದರಲ್ಲಿ ಪ್ರಾಧ್ಯಾಪಕನಾಗಿರುವ ಕುರಿತು ನಾನು ಹೇಳಿದೆ.

''ಯಾವ ಕೋರ್ಸ್ ಕಲಿಸುತ್ತೀರಿ?'' ಎಂಬ ಅವರ ಪ್ರಶ್ನೆಗೆ ನಾನು ''ಎಂಬಿಎ'' ಎಂದು ಹೇಳಿದೆ. ಆಗ ಅವರು ಎಂಬಿಎ ಕುರಿತಾದ ತಮ್ಮ ಅನುಭವ-ಅಭಿಪ್ರಾಯಗಳನ್ನು ಹಂಚಿಕೊಳ್ಳುತ್ತಾ, ''ಮುಂಚೆ ನಾವು ಸಹ ಅನೇಕ ಜನ ಡಾಕ್ಟರ್‌ಗಳು ಸೇರಿಕೊಂಡು ಹಾಸ್ಪಿಟಲ್‌ಗಳನ್ನು ನಡೆಸುತ್ತಾ ಇದ್ದೆವು. ಬಂದಿರುವ ರೋಗಿಗಳಿಗೆ ಎಲ್ಲಾ ತರಹದ ಸ್ಪೆಷಲಿಸ್ಟ್ ಡಾಕ್ಟರ್‌ಗಳು, ಸೌಕರ್ಯಗಳು ಒಂದೇ ಕಡೆ ಸಿಗುವಂತಾದರೆ ಅವರಿಗೂ, ಅವರ ಕುಟುಂಬದವರಿಗೂ ಒಳ್ಳೆಯದು ಮತ್ತು ಅನುಕೂಲಕರ ಎಂಬ ವಿಚಾರದೊಂದಿಗೆ ಅಂಥ ಆಸ್ಪತ್ರೆಗಳು ನಡೆಯುತ್ತಿದ್ದವು. ಒಳ್ಳೆಯ ಗಳಿಕೆಯೂ ಇತ್ತು. ನಾವೆಲ್ಲ ತೃಪ್ತಿ, ಸಮಾಧಾನದಿಂದಲೇ ಇದ್ದೆವು. ಅಂಥ ಸಮಯದಲ್ಲಿ 'ನಿಮ್ಮ' ಎಂಬಿಎಗಳು ನಮ್ಮ ಆಸ್ಪತ್ರೆಯ ಒಳಗಡೆ ಬಂದ್ರು'' ಅಂತ ಹೇಳಿ ನನ್ನೆಡೆಗೆ ಬೆರಳು ತೋರಿಸಿ ಮುಗುಳ್ನಕ್ಕರು.

ನಂತರ ಅವರು ತುಸು ಗಂಭೀರವಾಗಿ ಮುಂದುವರಿದು, ''ಹಾಗೆ ಬಂದ ಎಂಬಿಎಗಳು, 'ನಾವು ನಿಮ್ಮ ಹಾಸ್ಪಿಟಲ್‌ಗಳನ್ನು ಇನ್ನೂ ಚೆನ್ನಾಗಿ, ಪ್ರೊಫೆಷನಲ್ ಆಗಿ ಮ್ಯಾನೇಜ್ ಮಾಡ್ತೀವಿ; ಅದರಿಂದಾಗಿ ಆಸ್ಪತ್ರೆಗೆ ಇನ್ನೂ ಹೆಚ್ಚಿನ ಲಾಭ, ಡಾಕ್ಟರುಗಳಿಗೆ ಇನ್ನೂ ಹೆಚ್ಚಿನ ಆದಾಯ ಸಿಗಲಿದೆ' ಅಂದರು. ಈ ಆಫೀಸ್ ಕೆಲಸ, ಅಡ್ಮಿನಿಸ್ಟ್ರೇಷನ್ ಕೆಲಸ ಇವು ನಮಗೂ ಕಿರಿಕಿರಿಯೇ ಆಗಿದ್ದವು. ಇವೆಲ್ಲಾ ಕೆಲಸಗಳನ್ನು ಅವರು ನೋಡಿಕೊಂಡರೆ ನಾವು ಬರೀ ರೋಗಿಗಳ ರೋಗಪತ್ತೆ, ಚಿಕಿತ್ಸೆ, ಉಪಚಾರ ಇಂಥವನ್ನೆಲ್ಲ ನೋಡಿಕೊಂಡು ಇರಬಹುದು ಅಂತ ಅಂದುಕೊಂಡು, 'ಆಯ್ತು' ಅಂತ ಒಪ್ಪಿಕೊಂಡೆವು. ಆಗ ಇವರು ಒಂದೊಂದಾಗಿ ತಮ್ಮ ಮ್ಯಾನೇಜ್‌ಮೆಂಟ್ ತಂತ್ರಗಳನ್ನು ಶುರುಮಾಡತೊಡಗಿದರು. ಎಲ್ಲಾ ವೈದ್ಯರಿಗೂ ಇಂತಿಷ್ಟು ಟಾರ್ಗೆಟ್ ಅಂತ ಫಿಕ್ಸ್ ಮಾಡತೊಡಗಿದರು. ಪ್ರತಿಯೊಬ್ಬ ವೈದ್ಯರೂ ಇಂತಿಷ್ಟು ವೈದ್ಯರನ್ನು ನೋಡಬೇಕು, ಇಂತಿಷ್ಟು ಬಿಲ್ ಮಾಡಬೇಕು ಅಂತೆಲ್ಲ ಹೇಳತೊಡಗಿದರು. ನಾವು, 'ಇದೇನು? ವೈದ್ಯರಿಗೆ ಅದ್ಯಾಕೆ ಟಾರ್ಗೆಟ್?' ಅಂತ ಕೇಳಿದಾಗ ಅವರು, 'ಆಗ ಮಾತ್ರವೇ ನಿಮ್ಮ ಆಸ್ಪತ್ರೆಗೆ ಹೆಚ್ಚಿನ ಲಾಭ, ನಿಮಗೂ ಹೆಚ್ಚಿನ ಆದಾಯ ಬರುತ್ತೆ' ಅಂದರು. ಅದಾದ ಸ್ವಲ್ಪ ಹೊತ್ತಿನ ನಂತರ, 'ಬ್ಲಡ್ ಟೆಸ್ಟ್, ಅಲ್ಟ್ರಾಸೌಂಡ್, ಎಂಆರ್‌ಐ, ಸಿ.ಟಿ. ಮುಂತಾದ ಪ್ರಭೇದದ ಸ್ಕ್ಯಾನಿಂಗ್‌ಗಳು, ಟೆಸ್ಟ್‌ಗಳನ್ನು ಹೆಚ್ಚೆಚ್ಚು ಬರೆದುಕೊಡಬೇಕು' ಎಂದರು. 'ಅಗತ್ಯ ಇದ್ದಾಗಲೇನೋ ಸರಿ, ಆದರೆ ಅನಗತ್ಯವಾಗಿ ಯಾಕೆ ಅವನ್ನೆಲ್ಲಾ ಬರೆದುಕೊಡಬೇಕು?' ಅನ್ನೋದು ನನ್ನಂಥವರ ದೊಡ್ಡ ಪ್ರಶ್ನೆಯಾಗಿತ್ತು. ಅದಕ್ಕೆ ಉತ್ತರವಾಗಿ ಎಂಬಿಎಗಳು, 'ಇಲ್ಲ, ಇಲ್ಲ, ಬರೆದುಕೊಡಲೇಬೇಕು. ಹಾಗೆ ಮಾಡಿದರೆ ಮಾತ್ರ ಆ ಮಷಿನ್‌ಗಳಿಗೆ ಹಾಕಿದ ದುಡ್ಡು ಬೇಗ ವಾಪಸ್ ಬರುತ್ತೆ' ಅಂದ್ರು. ನಮಗ್ಯಾಕೋ ಇದು ಯಾವುದೂ ಸರಿಕಾಣಲಿಲ್ಲ. ಆದರೆ ನಾವು ಅಷ್ಟು ತಲೆ ಕೆಡಿಸಿಕೊಳ್ಳಲಿಲ್ಲ. ನಮ್ಮ ಎಂದಿನ ಅಭ್ಯಾಸಗಳನ್ನೇ ಮುಂದುವರಿಸಿದೆವು.....

''ಕೆಲ ದಿನಗಳ ನಂತರ ಅನೇಕ ತರುಣ ವೈದ್ಯರು ನಮ್ಮ ಆಸ್ಪತ್ರೆಗಳನ್ನು ಸೇರಿಕೊಂಡರು. ಅವರೆಲ್ಲರೂ ಈ ಎಂಬಿಎಗಳು ಹೇಳಿದ್ದನ್ನು ಅಕ್ಷರಶಃ ಪಾಲಿಸುತ್ತಾ ಹೋದರು. ಪ್ರತಿಯಾಗಿ ಅವರಿಗೇ ಹೆಚ್ಚು ಪ್ರಾಧಾನ್ಯ ಸಿಗತೊಡಗಿತು. ಆಗ ನನ್ನಂಥವರೆಲ್ಲ ಹಿಂದುಳಿದುಬಿಟ್ಟೆವು. ಬರ್ತಾ ಬರ್ತಾ ಈ ಹೊಸ ಡಾಕ್ಟರ್‌ಗಳಿಗೆ ಹೆಚ್ಚಿನ ಇನ್ಸೆಂಟಿವ್, ವಿದೇಶ ಪ್ರಯಾಣಯೋಗ, ಪ್ರಶಸ್ತಿ ಅಂತೆಲ್ಲ ಬರಲಿಕ್ಕೆ ಶುರುವಾಯಿತು. ನಾವುಗಳು ಇದನ್ನೆಲ್ಲಾ ನೋಡ್ತಾ ಸೈಡಿನಲ್ಲಿ ನಿಂತು, ಚಪ್ಪಾಳೆ ಹೊಡೆಯುವ ಕೆಲಸಕ್ಕೆ ಸೀಮಿತವಾಗಿಬಿಟ್ಟೆವು. ಕಡೆಕಡೆಗೆ ನಮ್ಮ ಪರ್ಫಾರ್ಮೆನ್ಸ್ ಅಪ್ರೈಸಲ್‌ಗಳಲ್ಲೂ ಅವರಿಗೇ ಹೆಚ್ಚಿನ ಕ್ರೆಡಿಟ್ಟು, ಸ್ಯಾಲರಿ ಹೈಕು. ಯಾರು ಒಳ್ಳೆಯ ಡಾಕ್ಟರ್ ಅಂದರೆ ಹೆಚ್ಚಿನ ಕಾಯಿಲೆಯನ್ನು ವಾಸಿಮಾಡಿದವರಾಗಿರಲಿಲ್ಲ; ಆಸ್ಪತ್ರೆಗೆ ಹೆಚ್ಚು ಲಾಭ ತಂದುಕೊಟ್ಟವರಾರು ಅನ್ನೋದರ ಮೇಲೆ ಪ್ರಾಧಾನ್ಯದ ನಿರ್ಧಾರವಾಗಲಿಕ್ಕೆ ಶುರುವಾಯಿತು. ಆಸ್ಪತ್ರೆಗೆ ಬರೋ ಎಲ್ಲರಿಗೂ ದೊಡ್ಡ ಕಾಯಿಲೆಯ ಟೆಸ್ಟುಗಳು, ಮಾತ್ರೆಗಳು, ಟ್ರೀಟ್‌ಮೆಂಟ್ ಷೆಡ್ಯೂಲ್‌ಗಳು ಸಾಮಾನ್ಯವಾಗುತ್ತಾ ಹೋದವು. ಅದನ್ನೆಲ್ಲಾ ನಮ್ಮಿಂದ ನೋಡಲಾಗಲಿಲ್ಲ. ಹೀಗಾಗಿ ಹೊಸಬರು ಮೇಲೆ ಏರುತ್ತಾ ಹೋದರು, ನನ್ನಂಥವರು ಅಲ್ಲಿಂದ ಹೊರಗೆ ಬಂದುಬಿಟ್ಟೆವು...''

ಹೀಗೆ ಆ ವೈದ್ಯರು ಎಂಬಿಎಗಳ ಜನ್ಮ ಜಾಲಾಡುತ್ತಾ ಹೋದರು. ನಾವಿಂದು Corporitazation ಎಂದು ಕರೆಯುವ, ಮಾನವೀಯ ಭಾವನೆಗಳಿಂದ ಮುಕ್ತವಾದ, ನಿಯಮಬಂಧಿತ ಎನಿಸಿರುವ, ಕೇವಲ ಲಾಭಾಪೇಕ್ಷೆಯ ಪ್ರಕ್ರಿಯೆಯನ್ನು ಆ ವೈದ್ಯರು ತಮ್ಮದೇ ಆದ ಶೈಲಿಯಲ್ಲಿ ಹೀಗೆ ಹೇಳಿದ್ದರು. ಆದರೆ ಅವರ ಯಾವ ಟೀಕೆಗೂ, ಲೇವಡಿಗೂ ನನ್ನಲ್ಲಿ ಉತ್ತರವಿರಲಿಲ್ಲ.

ಹೀಗಾಗಿಯೇ ನೋಡಿ, ಹಿಂದಿನ ಕಾಲದ ನಮ್ಮ ಡಾಕ್ಟರ್‌ಗಳು, ''ಅಯ್ಯೋ, ನಿಮಗೆ ಯಾವುದೇ ಕಾಯಿಲೇನೇ ಇಲ್ಲಾರೀ. ಸುಮ್ನೇ ದಿನಾ ಇದೊಂದಿಷ್ಟು ಮಾತ್ರ ತಗೊಳ್ಳಿ. ಸಕ್ಕರೆ, ಎಣ್ಣೆ ಪದಾರ್ಥ ತಿನ್ನೋದನ್ನ ನಿಲ್ಲಿಸಿ. ಬೆಳಗ್ಗೆ-ಸಾಯಂಕಾಲ ಒಂದು ಗಂಟೆಯಷ್ಟು ನಡಿಗೆಗೆ ಒಡ್ಡಿಕೊಳ್ಳಿ, ಎಲ್ಲವೂ ಸರಿಹೋಗುತ್ತೆ'' ಅಂತ ಕಾಯಿಲೆ ಇರೋರಿಗೆ ಹೇಳಿ, ಅವರ ಕಾಯಿಲೆಯನ್ನು ವಾಸಿಮಾಡುತ್ತಿದ್ದರು. ಈಗ ಅಂಥದೇನೂ ಗಂಭೀರ ಕಾಯಿಲೆ ಇಲ್ಲದವರಿಗೂ 'ಆ ಟೆಸ್ಟು, ಈ ಟೆಸ್ಟು' ಅಂತೆಲ್ಲ ಹೇಳಿ ಮಾಡಿಸಿ, ''ಬಹಳ ಸೀರಿಯಸ್ ಆಗಿದೆ, ಸರ್ಜರಿ ಮಾಡಲೇಬೇಕು, ಅದನ್ನು ಈಗಲೇ ಮಾಡಬೇಕು'' ಅಂತ ಹೇಳಿ, ಆಪರೇಷನ್ ಥಿಯೇಟರ್‌ಗೆ ಎಳೆದೊಯ್ದು, ಅವರನ್ನು ಜೀವನಪರ್ಯಂತದ ರೋಗಿಗಳನ್ನಾಗಿ ಮಾಡುವ ಆಸ್ಪತ್ರೆಗಳಿವೆ.

ವೈದ್ಯಕೀಯ ಶಾಸ್ತ್ರ ಮತ್ತು ತಂತ್ರಜ್ಞಾನವು ಅತ್ಯಂತ ಮುಂದುವರಿದಿರುವ ವರ್ತಮಾನದ ಕಾಲದ ಈ ವ್ಯಂಗ್ಯವು ನನ್ನನ್ನು ಬಹಳ ಕಾಡುತ್ತದೆ!

(ಲೇಖಕರು ಶಿಕ್ಷಣತಜ್ಞರು ಹಾಗೂ ಚಿಂತಕರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:10

ಸಮಾಚಾರ ಸಣ್ಣದಲ್ಲ

ಕೇರಳ ಕಾಂಗ್ರೆಸ್ ಸಭೆಗೆ ಶಶಿ ತರೂರ್ ಗೈರು

ತಿರುವನಂತಪುರಂ: ಕೇರಳದ ತಿರುವನಂತಪುರದ ಸಂಸದರಾಗಿರುವ ಶಶಿ ತರೂರ್ ಕಾಂಗ್ರೆಸ್‌ನಿಂದ ಮತ್ತಷ್ಟು ಅಂತರ ಕಾಯ್ದುಕೊಂಡಿದ್ದಾರೆ. ಕೇರಳ ಚುನಾವಣೆ ಹಿನ್ನೆಲೆಯಲ್ಲಿ ಶುಕ್ರವಾರ ದೆಹಲಿಯಲ್ಲಿ ರಾಹುಲ್ ಗಾಂಧಿ ಕರೆದಿದ್ದ ಮಹತ್ವದ ಸಭೆಗೆ ಶಶಿ ತರೂರ್ ಗೈರಾಗಿ ಬಂಡಾಯ ಸಾರಿದ್ದಾರೆ. ರಾಹುಲ್ ಪ್ರಮುಖ ಸಭೆ ಇದ್ದರೂ ಮೋದಿ ಬರುತ್ತಾರೆ ಅಂತ ತಮ್ಮ ಸ್ವಕ್ಷೇತ್ರದಲ್ಲೇ ಉಳಿದಿದ್ದರು, ಮೋದಿ ಜತೆ ವೇದಿಕೆ ಹಂಚಿಕೊಳ್ಳಲು ಬಯಸಿದ್ದರು ಅಂತ ಕಾಂಗ್ರೆಸ್ ಮೂಲಗಳು ವ್ಯಂಗ್ಯವಾಡಿವೆ. ಆದರೆ ಮೋದಿ ರ‍್ಯಾಲಿಯಲ್ಲಿ ಶಶಿ ತರೂರ್ ಇರಲಿಲ್ಲ. ಕೆಲ ದಿನಗಳ ಹಿಂದೆ ರಾಹುಲ್ ಗಾಂಧಿ ಕೊಚ್ಚಿನ್‌ಗೆ ಬಂದಿದ್ದಾಗ ತರೂರ್‌ಗೆ ಸರಿಯಾಗಿ ಗೌರವ ಕೊಡಲಿಲ್ಲ. ರಾಹುಲ್ ಬರುವ ಸಮಯ ಆಗಿದೆ ಬೇಗ ಭಾಷಣ ಮುಗಿಸಿ ಅಂತ ತರೂರ್‌ಗೆ ಹೇಳಿದ್ದರಿಂದ ಮುನಿಸಿಕೊಂಡಿದ್ದಾರೆ ಅಂತ ತಿಳಿದು ಬಂದಿದೆ. ಎಡಪಕ್ಷದ ಮುಷ್ಠಿಯಲ್ಲಿದ್ದ ತಿರುವನಂತಪುರಂ ಕಾರ್ಪೊರೇಷನ್ ಗೆದ್ದಿದ್ದ ಬಿಜೆಪಿಗೆ ಶಶಿ ತರೂರ್ ಹೊಗಳಿ, ತನ್ನ ಪಕ್ಷದ ಕೆಂಗಣ್ಣಿಗೂ ಗುರಿಯಾಗಿದ್ದರು.

ಕಥುವಾ: ಜೈಶೆ ಉಗ್ರನ ಹತ್ಯೆ, ಶಸ್ತ್ರಾಸ್ತ್ರ ವಶ

ಶ್ರೀನಗರ: ಜಮ್ಮು ಕಾಶ್ಮೀರದ ಕಥುವಾದಲ್ಲಿ ಶುಕ್ರವಾರ ನಡೆದ ಗುಂಡಿನ ಚಕಮಕಿಯಲ್ಲಿ ಜೈಶ್-ಎ-ಮೊಹಮ್ಮದ್ ಸಂಘಟನೆಗೆ ಸೇರಿದ ಭಯೋತ್ಪಾದಕನನ್ನು ಭದ್ರತಾ ಪಡೆಗಳು ಹೊಡೆದುರುಳಿಸಿವೆ. ಭಾರತೀಯ ಸೇನೆ ಮತ್ತು ಜಮ್ಮು-ಕಾಶ್ಮೀರ ಪೊಲೀಸರ ವಿಶೇಷ ಕಾರ್ಯಾಚರಣೆ ಗುಂಪು ಶುಕ್ರವಾರ ಜಂಟಿಯಾಗಿ ನಡೆಸಿದ ಕಾರ್ಯಾಚರಣೆಯಲ್ಲಿ ಪಾಕಿಸ್ತಾನ ಮೂಲದ ಉಸ್ಮಾನ್ ಎಂಬ ಉಗ್ರ ಸಾವನ್ನಪ್ಪಿದ್ದಾನೆ. ಮೃತ ಉಗ್ರನಿಂದ ಎಂ4 ಸ್ವಯಂಚಾಲಿತ ರೈಫಲ್ ಸೇರಿದಂತೆ ಭಾರೀ ಪ್ರಮಾಣದ ಶಸ್ತ್ರಾಸ್ತ್ರಗಳು ಹಾಗೂ ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ. ಕಥುವಾ ಜಿಲ್ಲೆಯ ಬಿಲ್ಲಾವರ್ ಪ್ರದೇಶದ ಪರ್ಹೇಟರ್ ಎಂಬಲ್ಲಿ ಉಗ್ರರು ಅಡಗಿರುವ ಖಚಿತ ಮಾಹಿತಿಯ ಮೇರೆಗೆ ಸೇನೆ ಮತ್ತು ಸಿಆರ್‌ಪಿಎಫ್ ಪಡೆಗಳು ಜಂಟಿ ಕಾರ್ಯಾಚರಣೆ ಆರಂಭಿಸಿ ಪ್ರದೇಶವನ್ನು ಸುತ್ತುವರಿದಿವೆ. ಈ ವೇಳೆ ಗುಂಡಿನ ಚಕಮಕಿ ನಡೆದಿದ್ದು, ಓರ್ವ ಭಯೋತ್ಪಾದಕನನ್ನು ಹೊಡೆದುರುಳಿಸಲಾಗಿದೆ ಎಂದು ಸೇನೆಯ ರೈಸಿಂಗ್ ಸ್ಟಾರ್ ಕಾರ್ಪ್ಸ್ ಸಾಮಾಜಿಕ ಜಾಲತಾಣದಲ್ಲಿ ತಿಳಿಸಿದೆ.

ಜಾಲತಾಣ ನಿರ್ಬಂಧ: ಆಂಧ್ರದಲ್ಲಿ ಸಮಿತಿ

ಅಮರಾವತಿ: 16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣ ವೇದಿಕೆಗಳನ್ನು ನಿರ್ಬಂಧಿಸುವ ಸಾಧ್ಯತೆಯ ಕುರಿತು ಅಧ್ಯಯನ ನಡೆಸಲು ಆಂಧ್ರಪ್ರದೇಶ ಸರಕಾರವು ಸಚಿವರನ್ನು ಒಳಗೊಂಡ ಸಮಿತಿಯನ್ನು ರಚಿಸಲಾಗಿದೆ ಎಂದು ರಾಜ್ಯ ಗೃಹ ಸಚಿವೆ ವಂಗಲಪುಡಿ ಅನಿತಾ ತಿಳಿಸಿದರು. ಐಟಿ ಸಚಿವ ನಾರಾ ಲೋಕೇಶ್ ನೇತೃತ್ವದ ಸಚಿವರ ಗುಂಪು ಮತ್ತು ಆರೋಗ್ಯ ಸಚಿವ ಸತ್ಯಕುಮಾರ್ ಹಾಗೂ ಗೃಹ ಸಚಿವರು ಸೇರಿದಂತೆ ಇತರ ಸದಸ್ಯರಿದ್ದೇವೆ. ಈ ಸಮಿತಿ ವಿವಿಧ ರಾಜ್ಯ ಸರಕಾರಗಳು ಮತ್ತು ದೇಶಗಳು ಈ ಕುರಿತು ಅನುಸರಿಸುತ್ತಿರುವ ಮಾದರಿಗಳನ್ನು ಅಧ್ಯಯನ ಮಾಡಲಿದ್ದು, ಅತ್ಯುತ್ತಮ ಮಾದರಿಯನ್ನು ಅಳವಡಿಸಿಕೊಳ್ಳಲಿದೆ ಎಂದು ಮಾಹಿತಿ ನೀಡಿದರು. ಆಸ್ಟ್ರೇಲಿಯಾ ಸರಕಾರವೂ 16 ವರ್ಷ ವಯಸ್ಸಿನೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣ ಬಳಕೆಗೆ ಮಿತಿಯನ್ನು ನಿಗದಿ ಪಡಿಸುವ ಕಾನೂನನ್ನು ಹೊರತಂದಿದೆ. ಹಲವು ದೇಶಗಳ ಮಾದರಿಗಳನ್ನು ಅಧ್ಯಯನ ಮಾಡಿ ಸಾಮಾಜಿಕ ಮಾಧ್ಯಮ ದುರುಪಯೋಗ ಹೇಗೆ ನಿಯಂತ್ರಿಸಬೇಕು ಎಂಬ ವರದಿ ತರುತ್ತೇವೆ ಎಂದರು.

ಶಾಲೆಗಳಿಗೆ ಬಾಂಬ್ ಬೆದರಿಕೆಯ ಮೇಲ್

ಲಖನೌ : ಉತ್ತರ ಪ್ರದೇಶದ ನೋಯ್ಡಾದ ಶಿವ ನಾಡರ್ ಶಾಲೆ ಮತ್ತು ಫಾದರ್ ಆಗ್ನೆಲ್ ಶಾಲೆ ಮತ್ತು ಅಹಮದಾಬಾದ್‌ನ ಹಲವು ಖಾಸಗಿ ಶಾಲೆಗಳಿಗೆ ಶುಕ್ರವಾರ ಬಾಂಬ್ ಬೆದರಿಕೆ ಇ-ಮೇಲ್ ಬಂದಿವೆ. ಇದರ ಬೆನ್ನಲ್ಲೇ ಅಧಿಕಾರಿಗಳು ತ್ವರಿತ ಕ್ರಮ ಕೈಗೊಂಡು, ಮುನ್ನೆಚ್ಚರಿಕಾ ಕ್ರಮವಾಗಿ ವಿದ್ಯಾರ್ಥಿಗಳನ್ನು ಬೇಗನೆ ಮನೆಗೆ ಕಳುಹಿಸಿದ್ದಾರೆ. ಗಣರಾಜ್ಯೋತ್ಸವಕ್ಕೆ ಕೇವಲ ಮೂರು ದಿನಗಳ ಮೊದಲು ಈ ಬೆದರಿಕೆ ಬಂದಿರುವುದು ಆತಂಕ ಸೃಷ್ಟಿಸಿದೆ. ನೋಯ್ಡಾದಲ್ಲಿ ಬೆದರಿಕೆ ಇ-ಮೇಲ್‌ಗೆ ಪ್ರತಿಕ್ರಿಯೆಯಾಗಿ ಭದ್ರತಾ ಸಿಬ್ಬಂದಿ ತಂಡವು ಎರಡು ಶಾಲೆಗಳಿಗೂ ದೌಡಾಯಿಸಿತು. ತನಿಖೆ ನಡೆಸಲು ಬಾಂಬ್ ನಿಷ್ಕ್ರಿಯ ದಳ ಮತ್ತು ಶ್ವಾನದಳವನ್ನು ಆವರಣದಲ್ಲಿ ನಿಯೋಜಿಸಲಾಯಿತು. ನೋಯ್ಡಾದ ಶಿವ ನಾಡರ್ ಶಾಲೆಯಲ್ಲಿ ವಿದ್ಯಾರ್ಥಿಗಳನ್ನು ನಿಗದಿತ ಸ್ಥಳಗಳಿಗೆ ಸುರಕ್ಷಿತವಾಗಿ ಕರೆದೊಯ್ಯಲು ಬಸ್ ವ್ಯವಸ್ಥೆ ಮಾಡಲಾಗಿದ್ದು, ಮಕ್ಕಳನ್ನು ಕರೆದುಕೊಂಡು ಹೋಗುವ ವೇಳೆ ಬಸ್ ಸಿಬ್ಬಂದಿಯೊಂದಿಗೆ ಸಂಪರ್ಕದಲ್ಲಿರಲು ಪೋಷಕರಿಗೆ ಮನವಿ ಮಾಡಲಾಯಿತು.

ಇಡೀ ದಿನ ಕ್ರಿಯಾಲೋಪ

← ಮೊದಲಪುಟದಿಂದ ಆದರೆ ಸರಕಾರದ ಈ ನಡೆಗೆ ಬಿಜೆಪಿಯ ಸುನೀಲ್‌ಕುಮಾರ್ ಸೇರಿದಂತೆ ಹಲವರು ಆಕ್ಷೇಪ ವ್ಯಕ್ತಪಡಿಸಿದ್ದು, ಇದರ ವಿರುದ್ಧ ಬಾವಿಗಿಳಿದು ಪ್ರತಿಭಟನೆ ಮಾಡುವುದಾಗಿ ಹೇಳಿದ್ದಾರೆ. ಆದ್ದರಿಂದ ಮಂಗಳವಾರದಿಂದ ಆರಂಭಗೊಳ್ಳುವ ಅಧಿವೇಶನ ಮತ್ತೆ ಗೊಂದಲದ ಗೂಡಾಗುವುದು ನಿಶ್ಚಿತ ಎನ್ನಲಾಗಿದೆ. ಇನ್ನು ರಾಜ್ಯಪಾಲರ ವಿರುದ್ಧವೂ ನಿರ್ಣಯ ಮಂಡಿಸುವ ಆಲೋಚನೆಯಲ್ಲಿರುವ ರಾಜ್ಯ ಸರಕಾರ, ಜಂಟಿ ಅಧಿವೇಶನದ ಕೊನೆಯ ದಿನ ಈ ನಿರ್ಣಯ ಮಂಡಿಸಲು ತೀರ್ಮಾನಿಸಿದೆ. ಸರಕಾರ ಈ ನಿರ್ಣಯ ಮಂಡಿಸಲು ಮುಂದಾಗುತ್ತಿದ್ದಂತೆ ಬಿಜೆಪಿ ತೀವ್ರವಾಗಿ ಗದ್ದಲ ಎಬ್ಬಿಸುವುದು ನಿಶ್ಚಿತ. ಗದ್ದಲದಲ್ಲಿಯೇ ನಿರ್ಣಯ ಅನುಮೋದನೆ ಪಡೆದು ಸದನವನ್ನು ಮುಂದೂಡುವ ಲೆಕ್ಕಾಚಾರದಲ್ಲಿ ಸರಕಾರವಿದೆ ಎಂದು ತಿಳಿದುಬಂದಿದೆ.

ಬಿಜೆಪಿಗೆ ಅಧಿಕಾರ ನೀಡಿದರೆ ಶಬರಿಮಲೆ ಚಿನ್ನ ಕಳವು ಸಮಗ್ರ ತನಿಖೆ ಗ್ಯಾರಂಟಿ

ಕೇರಳದಲ್ಲಿ ಕಮಲ ಅರಳಲಿದೆ: ಮೋದಿ

ತಿರುವನಂತಪುರಂ: 1987ಕ್ಕಿಂತ ಮೊದಲು ಬಿಜೆಪಿ ಗುಜರಾತ್‌ನಲ್ಲಿ ಒಂದು ಚಿಕ್ಕ ಪಕ್ಷವಾಗಿತ್ತು. ಆ ವರ್ಷ ಮೊದಲ ಬಾರಿಗೆ ಅಹಮದಾಬಾದ್ ಮುನ್ಸಿಪಲ್ ಕಾರ್ಪೊರೇಷನ್ ಚುನಾವಣೆಯನ್ನು ಬಿಜೆಪಿ ಗೆದ್ದಿತು. ಗುಜರಾತ್ ರಾಜಧಾನಿಯಿಂದ ಬಿಜೆಪಿ ಜೈತ್ರಯಾತ್ರೆ ಆರಂಭವಾಗಿ ಆ ರಾಜ್ಯದೆಲ್ಲಡೆ ವ್ಯಾಪಿಸಿದಂತೆ, ಕೇರಳದಲ್ಲಿ ತಿರುವನಂತಪುರ ಮಹಾನಗರ ಪಾಲಿಕೆಯನ್ನು ಇದೇ ಮೊದಲ ಬಾರಿಗೆ ಗೆಲ್ಲುವ ಮೂಲಕ ಕೇರಳದಲ್ಲೂ ಬಿಜೆಪಿಯ ಹೊಸ ರಾಜಕೀಯ ಪ್ರಯಾಣ ಪ್ರಾರಂಭವಾಗಿದೆ. ಮುಂದಿನ ದಿನಗಳಲ್ಲಿ ಗುಜರಾತ್‌ನಂತೆ ಬಿಜೆಪಿಯ ಗೆಲುವು ಕೇರಳ ರಾಜ್ಯವಿಡೀ ವ್ಯಾಪಿಸಲಿದೆ ಎಂದು ಪ್ರಧಾನಿ ಮೋದಿ ಹೇಳಿದರು.

ಕೇರಳದ ರಾಜಧಾನಿಯಾದ ತಿರುವನಂತಪುರದಲ್ಲಿ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಿದ ಮೋದಿ, ಇದೇ ಮೊದಲ ಬಾರಿಗೆ ಪಾಲಿಕೆಯ ಅಧಿಕಾರವನ್ನು ಬಿಜೆಪಿಗೆ ನೀಡಿದ ಜನತೆಯನ್ನು ಅಭಿನಂದಿಸಿದರು. ಕೇರಳದಲ್ಲಿ ಬಿಜೆಪಿ ಸರಕಾರ ರಚನೆಯಾದರೆ ಶಬರಿಮಲೆ ದೇವಸ್ಥಾನದ ಚಿನ್ನ ಕಳವು ಪ್ರಕರಣದ ಸಮಗ್ರ ಮತ್ತು ಪಾರದರ್ಶಕ ತನಿಖೆ ನಡೆಸಲಾಗುವುದು, ಇದು ಮೋದಿಯ ಗ್ಯಾರಂಟಿ ಎಂದು ಪ್ರಧಾನಿ ಹೇಳಿದ್ದಾರೆ.

ಚುನಾವಣಾ ದಿನಾಂಕ ಪ್ರಕಟವಾಗುವ ಮೊದಲೇ ಕೇರಳದಲ್ಲಿ ಪ್ರಧಾನಿ ಮೋದಿ ಬಿಜೆಪಿ ಪರ ಪ್ರಚಾರಕ್ಕೆ ಇಳಿದಿದ್ದು, ಶುಕ್ರವಾರ ತಿರುವನಂತಪುರದಲ್ಲಿ ನಡೆದ ಬಿಜೆಪಿಯ ಸಾರ್ವಜನಿಕ ಕಾರ್ಯಕ್ರಮದಲ್ಲೂ ಭಾಗಿಯಾಗಿ ಎಲ್‌ಡಿಎಫ್, ಯುಡಿಎಫ್ ಮೈತ್ರಿಕೂಟಗಳ ವಿರುದ್ಧ ವಾಗ್ದಾಳಿ ನಡೆಸಿದರು.

ತಿರುವನಂತಪುರ ಪಾಲಿಕೆಯಲ್ಲಿ ಬಿಜೆಪಿ ಅಧಿಕಾರ ಹಿಡಿದಿದೆ, ಇದು ರಾಜ್ಯದ ಜನರು ಬದಲಾವಣೆ ಬಯಸುತ್ತಿದ್ದಾರೆ ಎನ್ನುವುದಕ್ಕೆ ಸ್ಪಷ್ಟ ಉದಾಹರಣೆ. ಕೇರಳ ರಾಜ್ಯದಲ್ಲಿ ಇದೀಗ ರಾಜಕೀಯ ಬದಲಾವಣೆ ಅನಿವಾರ್ಯ. ಲೆಫ್ಟ್ ಡೆಮಾಕ್ರಟಿಕ್ ಫ್ರಂಟ್ ಮತ್ತು ಯುನೈಟೆಡ್ ಡೆಮಾಕ್ರಟಿಕ್ ಫ್ರಂಟ್ ಒಕ್ಕೂಟಗಳು ಕೇರಳವನ್ನು ಭ್ರಷ್ಟಾಚಾರ ಮತ್ತು ತುಷ್ಟೀಕರಣದ ರಾಜಕೀಯಕ್ಕೆ ತಳ್ಳಿವೆ ಎಂದು ಮೋದಿ ದೂರಿದರು. ಎಲ್‌ಡಿಎಫ್, ಯುಡಿಎಫ್‌ನ ಧ್ವಜಗಳು ಮತ್ತು ಚಿಹ್ನೆಗಳು ಭಿನ್ನವಾಗಿದ್ದರೂ ಅವುಗಳೆರಡರ ಕಾರ್ಯಸೂಚಿ ಬಹುತೇಕ ಒಂದೇ ಆಗಿವೆ. ದಶಕಗಳಿಂದ ಎಲ್‌ಡಿಎಫ್ ಮತ್ತು ಯುಡಿಎಫ್ ತಿರುವನಂತಪುರವನ್ನು ನಿರ್ಲಕ್ಷಿಸಿ ಇಲ್ಲಿನ ಜನತೆಯನ್ನು ಮೂಲಭೂತ ಸೌಕರ್ಯಗಳಿಂದ ವಂಚಿತಗೊಳಿಸಿತ್ತು. ಆದರೆ ನಮ್ಮ ಬಿಜೆಪಿ ತಂಡ ಅಭಿವೃದ್ಧಿ ಹೊಂದಿದ ರಾಜಧಾನಿಗಾಗಿ ಇದೀಗ ಕೆಲಸ ಮಾಡಲು ಪ್ರಾರಂಭಿಸಿದೆ ಎಂದರು.

- ಕೇರಳದಲ್ಲಿ ಮೋದಿ ಚುನಾವಣಾಪೂರ್ವ ಪ್ರಚಾರ
- ಮೋದಿ ಗ್ಯಾರಂಟಿಯ ಆಶ್ವಾಸನೆ ನೀಡಿದ ಪ್ರಧಾನಿ
- ತಿರುವನಂತಪುರಂ ನಗರ ಇನ್ನು ದೇಶಕ್ಕೇ ಮಾದರಿ
- ಎರಡೂ ಒಕ್ಕೂಟಗಳಿಂದ ಕೇರಳದಲ್ಲಿ ಭ್ರಷ್ಟಾಚಾರ
- ಗುಜರಾತ್‌ನಂತೆ ಕೇರಳದಲ್ಲೂ ಬಿಜೆಪಿ ಪ್ರಗತಿ ಖಚಿತ

3 ಅಮೃತ್ ಭಾರತ್ ರೈಲಿಗೆ ಹಸಿರು ನಿಶಾನೆ

ತನ್ನ ಭಾಷಣಕ್ಕೂ ಮೊದಲು ಕೇರಳ, ತಮಿಳುನಾಡು, ಕರ್ನಾಟಕ, ತೆಲಂಗಾಣ ಮತ್ತು ಆಂಧ್ರಪ್ರದೇಶ ನಡುವಿನ ಪ್ರಾದೇಶಿಕ ರೈಲು ಸಂಪರ್ಕವನ್ನು ಹೆಚ್ಚಿಸಲು ಮೂರು ಅಮೃತ್ ಭಾರತ್ ಎಕ್ಸ್‌ಪ್ರೆಸ್ ರೈಲುಗಳು ಸೇರಿದಂತೆ ನಾಲ್ಕು ಹೊಸ ರೈಲು ಸೇವೆಗಳಿಗೆ ಪ್ರಧಾನಿ ಮೋದಿ ಹಸಿರು ನಿಶಾನೆ ತೋರಿದರು. ನಾಗರಕೋಯಿಲ್-ಮಂಗಳೂರು, ತಿರುವನಂತಪುರಂ-ತಾಂಬರಂ, ತಿರುವನಂತಪುರಂ- ಚರ್ಲಪಲ್ಲಿ ಮಾರ್ಗಗಳಿಗೆ ಅಮೃತ್ ಭಾರತ್ ಎಕ್ಸ್‌ಪ್ರೆಸ್ ರೈಲುಗಳಿಗೆ ಅವರು ಹಸಿರು ನಿಶಾನೆ ತೋರಿಸಿದರು. ನಗರದ ಜೀವನೋಪಾಯವನ್ನು ಬಲಪಡಿಸುವ ಪ್ರಯತ್ನಗಳ ಭಾಗವಾಗಿ, ಪ್ರಧಾನಿ ಮೋದಿ ಅವರು ಒಂದು ಲಕ್ಷ ಪಿ.ಎಂ ಸ್ವನಿಧಿ ಕ್ರೆಡಿಟ್ ಕಾರ್ಡ್ ವಿತರಿಸಿದರು. ವಿಜ್ಞಾನ ಮತ್ತು ನಾವೀನ್ಯತೆ ಕ್ಷೇತ್ರದ ನಾವೀನ್ಯತೆ, ತಂತ್ರಜ್ಞಾನ ಮತ್ತು ಉದ್ಯಮಶೀಲತಾ ಕೇಂದ್ರಕ್ಕೂ ಮೋದಿ ಅಡಿಪಾಯ ಹಾಕಿದರು.

ತಿರುವನಂತಪುರಂ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಬಿಜೆಪಿಯ ಗೆಲುವು ಐತಿಹಾಸಿಕ, ಈ ಗೆಲುವು ಉತ್ತಮ ಬದಲಾವಣೆಯ ಜಯ ಮತ್ತು ಅಭಿವೃದ್ಧಿ ಹೊಂದಬೇಕಿರುವ ಕೇರಳದ ಸಂಕಲ್ಪದ ಗೆಲುವು, ಅಷ್ಟೇ ಅಲ್ಲ ಕೇರಳವನ್ನು ಭ್ರಷ್ಟಾಚಾರದಿಂದ ಮುಕ್ತಗೊಳಿಸುವ ಬದ್ಧತೆಯ ವಿಜಯ ಎಂದು ಬಣ್ಣಿಸಿದರು. ತಿರುವನಂತಪುರಂ ಇನ್ನು ಇಡೀ ದೇಶಕ್ಕೆ ಮಾದರಿ ನಗರವಾಗಲಿದೆ, ಭಾರತದ ಅತ್ಯುತ್ತಮ ನಗರಗಳಲ್ಲಿ ಒಂದನ್ನಾಗಿ ಮಾಡಲು ನಾನು ನನ್ನ ಸಂಪೂರ್ಣ ಬೆಂಬಲವನ್ನು ನೀಡುತ್ತೇನೆ ಎಂದು ಮೋದಿ ಹೇಳಿದರು.

ಡಬ್ಲ್ಯುಹೆಚ್‌ಒನಿಂದ ಹೊರಬಂದ ಅಮೆರಿಕ

ವಾಷಿಂಗ್ಟನ್: ವಿಶ್ವ ಆರೋಗ್ಯ ಸಂಸ್ಥೆಯಿಂದ ಅಮೆರಿಕ ಹೊರಬಂದಿದೆ. ಡಬ್ಲ್ಯುಹೆಚ್‌ಒನಲ್ಲಿದ್ದ ತನ್ನ ಸದಸ್ಯತ್ವವನ್ನು ಅಮೆರಿಕ ಅಧಿಕೃತವಾಗಿ ರದ್ದುಗೊಳಿಸಿದೆ.

ಅಮೆರಿಕ ನಿರ್ಧಾರದ ಬಳಿಕ ಜಿನಿವಾದಲ್ಲಿರುವ ಡಬ್ಲ್ಯುಹೆಚ್‌ಒ ಕಚೇರಿಯಲ್ಲಿ ಅಮೆರಿಕದ ಧ್ವಜವನ್ನೂ ತೆರವು ಮಾಡಲಾಗಿದೆ. ಚೀನಾದ ವುಹಾನ್‌ನಲ್ಲಿ ಉದ್ಭವಿಸಿದ ಕೋವಿಡ್-19 ಸಾಂಕ್ರಾಮಿಕ ರೋಗವನ್ನು ತಪ್ಪಾಗಿ ನಿರ್ವಹಿಸಿದೆಯಲ್ಲದೆ, ಸುಧಾರಣೆಗಳನ್ನು ಕೈಗೊಳ್ಳಲು ಡಬ್ಲ್ಯುಹೆಚ್‌ಒ ವಿಫಲವಾಗಿದೆ ಎಂದು ಅಮೆರಿಕ ಆರೋಪಿಸಿತ್ತು. ರೋಗಗಳ ಕಣ್ಗಾವಲು ಮತ್ತು ನಿರ್ಣಾಯಕ ಆರೋಗ್ಯ ಸವಾಲುಗಳಂತಹ ವಿಷಯಗಳ ಕುರಿತು ಇತರ ರಾಷ್ಟ್ರಗಳೊಂದಿಗೆ ದ್ವಿಪಕ್ಷೀಯ ಸಹಕಾರಕ್ಕೆ ಅಮೆರಿಕ ಇನ್ನು ಮುಂದೆಯೂ ಆದ್ಯತೆ ನೀಡಲಿದೆ, ಆದರೆ ಡಬ್ಲ್ಯುಹೆಚ್‌ಒ ವೀಕ್ಷಕನಾಗಿ ಮುಂದುವರಿಯುವುದಿಲ್ಲ ಎಂದು ಅಮೆರಿಕ ಆರೋಗ್ಯ ಇಲಾಖೆ ತಿಳಿಸಿದೆ.

2024 ಮತ್ತು 2025ರ ಡಬ್ಲ್ಯುಹೆಚ್‌ಒ ಸದಸ್ಯತ್ವ ಶುಲ್ಕದಲ್ಲಿ ಅಮೆರಿಕ ಇನ್ನೂ ಸುಮಾರು 260 ಮಿಲಿಯನ್ ಡಾಲರ್‌ಗಳನ್ನು ಬಾಕಿ ಉಳಿಸಿಕೊಂಡಿದೆ. ಬಾಕಿಗಳನ್ನು ಪಾವತಿಸದೆ ಅಮೆರಿದ ಈ ಬೇರ್ಪಡಿಕೆ ಸಾಧ್ಯವಿಲ್ಲ ಎಂದು ಅದರ ನಿರ್ಧಾರದ ಬಳಿಕ ಡಬ್ಲ್ಯುಹೆಚ್‌ಒ ವಕ್ತಾರರು ತಿಳಿಸಿದ್ದಾರೆ.

ಡಬ್ಲ್ಯುಹೆಚ್‌ಒ ಸದಸ್ಯ ರಾಷ್ಟ್ರಗಳ ಅನುಚಿತ ರಾಜಕೀಯ ಪ್ರಭಾವದಿಂದ ಸ್ವಾತಂತ್ರ್ಯವನ್ನು ಪ್ರದರ್ಶಿಸುವಲ್ಲಿ ಅಸಮರ್ಥತೆಯಿಂದಾಗಿ, ಅಮೆರಿಕವು ವಿಶ್ವ ಆರೋಗ್ಯ ಸಂಸ್ಥೆಯಿಂದ ಹೊರಬಂದಿದೆ ಎಂದು ಅಮೆರಿಕದ ಆರೋಗ್ಯ ಮತ್ತು ಮಾನವ ಸೇವೆಗಳ ಇಲಾಖೆ ಮತ್ತು ಅಮೆರಿಕದ ವಿದೇಶಾಂಗ ಇಲಾಖೆ ಘೋಷಿಸಿದೆ.

ದುಡ್ಡೂ ಇಲ್ಲ ಸಿಬ್ಬಂದಿ ವಾಪಸ್

ಕಳೆದ ವರ್ಷ ಜನವರಿಯಲ್ಲಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಡಬ್ಲ್ಯುಹೆಚ್‌ಒ ತೊರೆಯುವ ಅಮೆರಿಕದ ಯೋಜನೆಯನ್ನು ಘೋಷಿಸಿದ್ದರು. ವರ್ಷಪೂರ್ತಿ ನಡೆದ ಈ ಪ್ರಕ್ರಿಯೆಯಲ್ಲಿ ಅಮೆರಿಕವು ಡಬ್ಲ್ಯುಹೆಚ್‌ಒಗೆ ಹಣಕಾಸು ಒದಗಿಸುವುದನ್ನೂ ನಿಲ್ಲಿಸಿತ್ತಲ್ಲದೆ, ಡಬ್ಲ್ಯುಹೆಚ್‌ಒನಿಂದ ತನ್ನ ಎಲ್ಲಾ ಸಿಬ್ಬಂದಿಯನ್ನು ಹಿಂತೆಗೆದುಕೊಂಡಿತ್ತು.

ಇನಾಮು ಘೋಷಣೆಯಾಗಿದ್ದ ಒಡಿಶಾ ಮಾವೋವಾದಿಗಳು

ಛತ್ತೀಸ್‌ಗಢದಲ್ಲಿ 9 ನಕ್ಸಲರು ಶರಣು

ರಾಯ್‌ಪುರ್: ಛತ್ತೀಸ್‌ಗಢದ ಧಮ್ತಾರಿ ಜಿಲ್ಲೆಯಲ್ಲಿ 9 ನಕ್ಸಲರು ಪೊಲೀಸರಿಗೆ ಶರಣಾಗಿದ್ದಾರೆ. ಎಲ್ಲರ ತಲೆಗೂ ಸೇರಿ ಸುಮಾರು 47 ಲಕ್ಷ ರು. ಬಹುಮಾನ ಘೋಷಣೆ ಮಾಡಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶರಣಾದ ನಕ್ಸಲರಲ್ಲಿ ಏಳು ಮಹಿಳೆಯರು ಹಾಗೂ ಇಬ್ಬರು ಪುರುಷರು ಸೇರಿದ್ದಾರೆ. ಇವರು ಒಡಿಶಾ ಮಾವೋವಾದಿಗಳ ಸಮಿತಿಯ ಧಮ್ತಾರಿ-ಗರಿಯಾಬಂದ್-ನುವಾಪಾಡಾ ವಿಭಾಗದ ನಾಗ್ರಿ, ಸಿತಾನದಿ ಪ್ರದೇಶ ಸಮಿತಿ ಮತ್ತು ಮೈನ್‌ಪುರ ಸ್ಥಳೀಯ ಗೆರಿಲ್ಲಾ ಸ್ಕ್ವಾಡ್‌ಗೆ ಸೇರಿದವರು ಎಂದು ಪೊಲೀಸ್ ಇನ್ಸ್‌ಪೆಕ್ಟರ್ ಹೇಳಿದ್ದಾರೆ.

ಮಾವೋವಾದಿ ಸಿದ್ಧಾಂತ ಮತ್ತು ಅರಣ್ಯ ಜೀವನದ ಕಷ್ಟಗಳಿಂದ ಅವರೆಲ್ಲ ನಿರಾಶೆಗೊಂಡಿದ್ದಾರೆ. ರಾಜ್ಯ ಸರಕಾರದ ಶರಣಾಗತಿ ಮತ್ತು ಪುನರ್ವಸತಿ ನೀತಿಯಿಂದ ಅವರೆಲ್ಲ ಪ್ರಭಾವಿತರಾಗಿ ಪೊಲೀಸರ ಮುಂದೆ ಶರಣಾಗಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಶರಣಾದವರ ವಿವರ: ಸೀತಾನದಿ ಪ್ರದೇಶ ಸಮಿತಿಯ ಕಾರ್ಯದರ್ಶಿ ಜ್ಯೋತಿ ಅಲಿಯಾಸ್ ಜೈನಿ (28) ಮತ್ತು ವಿಭಾಗೀಯ ಸಮಿತಿ ಸದಸ್ಯೆ, ಉಷಾ ಅಲಿಯಾಸ್ ಬಾಲಮ್ಮ (45) ಇವರಿಗೆ ತಲಾ 8 ಲಕ್ಷ ರು. ಬಹುಮಾನ ಘೋಷಿಸಲಾಗಿತ್ತು. ರಾಮದಾಸ್ ಮಾರ್ಕಮ್ (30), ರೋನಿ ಅಲಿಯಾಸ್ ಉಮಾ (25), ನಿರಂಜನ್ ಅಲಿಯಾಸ್ ಪೋಡಿಯಾ (25), ಸಿಂಧು ಅಲಿಯಾಸ್ ಸೋಮಾಡಿ (25), ರೀನಾ ಅಲಿಯಾಸ್ ಚಿರೋ (25), ಮತ್ತು ಅಮಿಲಾ ಅಲಿಯಾಸ್ ಸನ್ನಿ (25) ಇವರಿಗೆ ತಲಾ 5 ಲಕ್ಷ ರು. ಬಹುಮಾನ ಘೋಷಿಸಲಾಗಿತ್ತು. ಬಾಲಮ್ಮ ತೆಲಂಗಾಣ ಮೂಲದವಳು, ಇತರರು ಛತ್ತೀಸ್‌ಗಢದ ವಿವಿಧ ಜಿಲ್ಲೆಯವರಾಗಿದ್ದಾರೆ.

ರಾಯ್‌ಪುರ ಪೊಲೀಸ್ ವ್ಯಾಪ್ತಿಯ ಧಮ್ತಾರಿ ಮತ್ತು ಗರಿಯಾಬಂದ್ ಜಿಲ್ಲೆಗಳಲ್ಲಿ ಹಾಗೂ ಒಡಿಶಾದ ಪಕ್ಕದ ನುವಾಪಾ ಜಿಲ್ಲೆಯಲ್ಲಿ ಪಟ್ಟಿ ಮಾಡಲಾಗಿದ್ದ ಎಲ್ಲಾ ಸಕ್ರಿಯ ನಕ್ಸಲರು ಕೊಲ್ಲಲ್ಪಟ್ಟಿದ್ದಾರೆ. ಕೆಲವರು ಶರಣಾಗಿದ್ದಾರೆ. ಈ ಪ್ರದೇಶದಲ್ಲಿ ಇನ್ನೂ ಮಾವೋವಾದಿಗಳು ಸಕ್ರಿಯವಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಮ್ಮ ಬೆರಳುಗಳು ಟ್ರಿಗರ್ ಮೇಲಿದೆ: ಟ್ರಂಪ್‌ಗೆ ನೇರ ಎಚ್ಚರಿಕೆ

ಅಮೆರಿಕಕ್ಕೆ ಇರಾನ್ ಪ್ರತಿದಾಳಿ ಎಚ್ಚರಿಕೆ

ಪ್ಯಾರಿಸ್: ಸಾಮೂಹಿಕ ಪ್ರತಿಭಟನೆ ಹಾಗೂ ಅಮೆರಿಕ ಅಧ್ಯಕ್ಷ ಟ್ರಂಪ್ ಬೆದರಿಕೆಗೆ ಪ್ರತಿಯಾಗಿ ಇರಾನ್ ಕೂಡ ಇದೀಗ ವಾಷಿಂಗ್ಟನ್‌ಗೆ ಪ್ರತಿದಾಳಿ ಮಾಡುವ ಹೇಳಿಕೆ ನೀಡಿದ್ದು, ನಮ್ಮ ಬೆರಳುಗಳು ಟ್ರಿಗರ್ ಮೇಲಿದೆ ಎಂದು ಇರಾನ್ ಕ್ರಾಂತಿಕಾರಿ ಗಾರ್ಡ್ ನೇರ ಎಚ್ಚರಿಕೆ ನೀಡಿದೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇರಾನ್ ವಿರುದ್ಧ ಹೊಸ ಮಿಲಿಟರಿ ಕ್ರಮದ ಆಯ್ಕೆಯನ್ನು ಪದೇ ಪದೇ ಹೇಳುತ್ತಿದ್ದು, ಟೆಹ್ರಾನ್ ಇದನ್ನು ಗಮನಿಸುತ್ತಿದ್ದು, ಅಮೆರಿಕದ ಶಸ್ತ್ರಸಜ್ಜಿತ ನೌಕಪಡೆ ಗಲ್ಫ್ ಕಡೆ ಸಾಗುತ್ತಿದೆ ಎಂದು ಹೇಳಿದ್ದಾರೆ. ಇದಕ್ಕೆ ಪ್ರತಿಯಾಗಿ ಉತ್ತರಿಸಿರುವ ಇರಾನಿನ ಕ್ರಾಂತಿಕಾರಿ ಗಾರ್ಡ್ ಕಮಾಂಡರ್ ಜನರಲ್ ಮೊಹಮ್ಮದ್ ಪಾಕ್ಪೂರ್, ಇರಾನ್ ಎಂದಿಗಿಂತಲೂ ಹೆಚ್ಚು ಸಿದ್ಧವಾಗಿದೆ. ಸರ್ವೋಚ್ಚ ನಾಯಕರ ಆದೇಶ ಹಾಗೂ ತಾವೂ ಕೂಡಾ ದಾಳಿಗೆ ಪ್ರತಿದಾಳಿ ನಡೆಸಲು ಸಿದ್ಧವಾಗಿದ್ದೇವೆ ಎಂದು ತಿರುಗೇಟು ನೀಡಿದ್ದಾರೆ. ಮತ್ತೊಬ್ಬ ಹಿರಿಯ ಸೇನಾ ಅಧಿಕಾರಿ ಜನರಲ್ ಅಲಿ ಅಬ್ದುಲ್ಲಾಹಿ ಅಲಿಯಾಬಾದಿ ಮಾತನಾಡಿ, ಅಮೆರಿಕ ದಾಳಿ ಮಾಡಿದರೆ ಅವರ ಎಲ್ಲಾ ಹಿತಾಸಕ್ತಿ ನೆಲೆಗಳು ಮತ್ತು ಪ್ರಭಾವಿ ಕೇಂದ್ರಗಳನ್ನು ಗುರಿಯಾಗಿಸಿಕೊಂಡು ಇರಾನ್‌ನ ಸಶಸ್ತ್ರ ಪಡೆ ದಾಳಿ ನಡೆಸಲಿದೆ ಎಂದು ಎಚ್ಚರಿಸಿದ್ದಾರೆ

ಡಿಸೆಂಬರ್ ಅಂತ್ಯದಿಂದ ಇರಾನ್‌ನಲ್ಲಿ ಆರಂಭವಾಗಿರುವ ಪ್ರತಿಭಟನೆಯು, ಇರಾನಿನ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ನೇತೃತ್ವದ ಇರಾನ್‌ನ ಕ್ಲೆರಿಕಲ್ ನಾಯಕತ್ವಕ್ಕೆ ಭಾರಿ ಆಘಾತವನ್ನುಂಟು ಮಾಡಿದೆ. ಪ್ರತಿಭಟನೆ ಹೆಚ್ಚಾದ ಬೆನ್ನಲ್ಲೇ ಇಂಟರ್‌ನೆಟ್ ಸೇವೆಗಳನ್ನು ಬಂದ್ ಮಾಡಲಾಗಿದ್ದು, ಈ ಪ್ರತಿಭಟನೆಯಲ್ಲಿ ಸಾವಿರಾರು ಜನರು ಹತರಾಗಿದ್ದಾರೆ.

ಟೆಹ್ರಾನ್ ವಿರುದ್ಧ ಕ್ರಮ ತೆಗೆದುಕೊಳ್ಳುವುದಾಗಿ ಅಮೆರಿಕ ಹೇಳುತ್ತಿದ್ದರೂ ಎರಡು ದೇಶಗಳು ರಾಜತಾಂತ್ರಿಕತೆಗೆ ಅವಕಾಶವನ್ನು ನೀಡಬೇಕೆಂದು ಒತ್ತಾಯಿಸುತ್ತಿದ್ದಾರೆ. ಖಮೇನಿ ಬೆದರಿಕೆ ಬೆನ್ನಲ್ಲೇ ಮಾತನಾಡಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ತಮ್ಮ ಹತ್ಯೆಗೆ ಸಂಚು ರೂಪಿಸಿದ್ದೇ ಆದರೆ, ಇರಾನ್ ಅನ್ನು ಈ ಭೂಮಿಯ ಮೇಲಿಂದ ಅಳಿಸಿ ಹಾಕುವುದಾಗಿ ಇರಾನಿ ನಾಯಕರಿಗೆ ಎಚ್ಚರಿಕೆ ನೀಡಿದ್ದರು. ಗುರುವಾರ ಭಾಷಣ ಮಾಡಿದ ಇರಾನ್ ಅಧ್ಯಕ್ಷ ಮಸೌದ್ ಪೆಜೆಶ್ಕಿಯಾನ್, ಪ್ರತಿಭಟನೆಯು ನಾಗರಿಕರ ಸ್ವಾಭಾವಿಕ ಹಕ್ಕು, ಆದರೆ ಮುಗ್ಧ ಜನರ ಮತ್ತು ಬೆಂಬಲಿತ ಪ್ರತಿಭಟನಾಕಾರರ ನಡುವೆ ವ್ಯತ್ಯಾಸವಿದೆ ಎಂದಿದ್ದಾರೆ.

ಟ್ರಂಪ್ ನಿಲುವು

ದಾವೋಸ್‌ನ ವಿಶ್ವ ಆರ್ಥಿಕ ವೇದಿಕೆಯಲ್ಲಿ ಮಾತನಾಡಿರುವ ಟ್ರಂಪ್, ಅಗತ್ಯಬಿದ್ದಲ್ಲಿ ಇರಾನ್ ಕಡೆಗೆ ಏರ್‌ಫೋರ್ಸ್ ಒನ್ ಕಳುಹಿಸಲಾಗುವುದು. ಏನಾದರೂ ಆಗುವ ಮುಂಚೆ ಏನಾಗುತ್ತಿದೆ ಎಂದು ಸೂಕ್ಷ್ಮವಾಗಿ ನಾವು ಗಮನಿಸುತ್ತೇವೆ ಎಂದಿದ್ದಾರೆ.

ಮುರಿಗಂಗಾ ನದಿಯಲ್ಲಿ ಸರಕು ಹಡಗು ಮುಳುಗಡೆ | ಸಫಲವಾದ ರಕ್ಷಣಾ ಕಾರ್ಯಾಚರಣೆ

ಸರಕು ಹಡಗಿನಲ್ಲಿದ್ದ 12 ಬಾಂಗ್ಲಾ ನಾವಿಕರ ರಕ್ಷಣೆ

ಕೊಲ್ಕತ್ತಾ: ಗಂಗಾಸಾಗರ ಪ್ರದೇಶದ ಮುರಿಗಂಗಾ ನದಿಯಲ್ಲಿ ಎಂವಿ ತಮ್ಜಿದ್ ಆ್ಯಂಡ್ ನಾಸಿರ್ ಎಂಬ ಸರಕು ಹಡಗು ಮುಳುಗಿದ್ದು, ಅದರಲ್ಲಿ ಇದ್ದ 12 ಬಾಂಗ್ಲಾದೇಶಿ ನಾವಿಕರನ್ನು ರಕ್ಷಿಸಲಾಗಿದೆ ಎಂದು ವರದಿಯಾಗಿದೆ. ಪೊಲೀಸ್ ಮೂಲಗಳ ಪ್ರಕಾರ, ದಕ್ಷಿಣ 24 ಪರಗಣ ಜಿಲ್ಲೆಯ ಕಾಚುಬೇರಿಯಾ ಪ್ರದೇಶದ ಬಳಿ ಮುರಿಗಂಗಾ ನದಿಯ ಮಧ್ಯದಲ್ಲಿ ಸರಕು ಹಡಗು ಮುಳುಗಿದೆ ಎಂಬ ಮಾಹಿತಿ ದೊರೆತಿದೆ.

ತಕ್ಷಣವೇ ಪೊಲೀಸರು ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯಾಚರಣೆ ನಡೆಸಿದ್ದಾರೆ. ಹಡಗಿನಲ್ಲಿ ಇದ್ದ ಎಲ್ಲಾ 12 ನಾವಿಕರನ್ನು ಸುರಕ್ಷಿತವಾಗಿ ರಕ್ಷಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಹಡಗು ಕೊಲ್ಕತ್ತಾ ಬಂದರಿನಿಂದ ಬಾಂಗ್ಲಾದೇಶಕ್ಕೆ ಸರಕು ಸಾಗಿಸುತ್ತಿದ್ದ ಸಂದರ್ಭದಲ್ಲಿ, ನದಿಯ ಮಧ್ಯದಲ್ಲಿ ಯಾಂತ್ರಿಕ ದೋಷ ಉಂಟಾಗಿ ಹಡಗು ಮುಳುಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪ್ರಾಥಮಿಕ ವರದಿಗಳ ಪ್ರಕಾರ, ಯಾಂತ್ರಿಕ ದೋಷದ ಪರಿಣಾಮ ಹಡಗಿನ ಕೆಳಭಾಗದಲ್ಲಿ ಬಿರುಕು ಕಾಣಿಸಿಕೊಂಡು, ಅದರೊಳಗೆ ನೀರು ನುಗ್ಗತೊಡಗಿದೆ. ಪರಿಸ್ಥಿತಿಯನ್ನು ಅರಿತ ನಾವಿಕರು ತಕ್ಷಣ ಸಹಾಯಕ್ಕಾಗಿ ಕರೆ ಮಾಡಿದ ಬಳಿಕ, ಸಾಗರ್ ಪೊಲೀಸ್ ತಂಡ ಸ್ಥಳಕ್ಕೆ ತಲುಪಿ ರಕ್ಷಣಾ ಕಾರ್ಯಾಚರಣೆ ನಡೆಸಿದೆ. ರಕ್ಷಣಾ ಕಾರ್ಯಾಚರಣೆ ನಂತರ, ನಾವಿಕರನ್ನು ಗಂಗಾಸಾಗರ ಪೊಲೀಸ್ ವ್ಯಾಪ್ತಿಯ ಆಶ್ರಯ ಕೇಂದ್ರದಲ್ಲಿ ಇರಿಸಲಾಗಿದೆ, ಜೊತೆಗೆ ಹಡಗು ಮುಳುಗಿದ ಬಳಿಕ ಹಡಗಿನಲ್ಲಿದ್ದ ಯಾವುದಾದರೂ ಹಾನಿಕಾರಕ ರಾಸಾಯನಿಕಗಳು ನೀರಿಗೆ ಮಿಶ್ರಣವಾಗಿದೆಯೇ ಎಂಬುದನ್ನು ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಸೌರಚಾಲಿತ ಉಪಗ್ರಹಕ್ಕೆ ಎಕ್ಸ್ ಸಜ್ಜು

ದಾವೋಸ್: ಕೆಲ ವರ್ಷಗಳಲ್ಲಿ ಸೌರಶಕ್ತಿ ಚಾಲಿತ ಎಐ ಉಪಗ್ರಹಗಳನ್ನು ಸ್ಪೇಸ್ ಎಕ್ಸ್ ಉಡಾವಣೆ ಮಾಡಲಿದೆ ಎಂದು ಟೆಸ್ಲಾ ಮುಖ್ಯಸ್ಥ ಎಲೋನ್ ಮಸ್ಕ್ ಹೇಳಿದ್ದಾರೆ. ಮೊದಲ ಬಾರಿಗೆ ವಿಶ್ವ ಆರ್ಥಿಕ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬಾಹ್ಯಾಕಾಶವು ನಿಜವಾಗಿಯೂ ಅಪಾರ ಶಕ್ತಿಯ ಮೂಲವಾಗಿದೆ. ನೀವು ವರ್ಷಕ್ಕೆ ನೂರಾರು ಟೆರಾವ್ಯಾಟ್‌ಗಳಿಗೆ ಅಳೆಯಬಹುದು. ಸ್ಪೇಸ್‌ಎಕ್ಸ್ ಸಂಪೂರ್ಣವಾಗಿ ಮರುಬಳಕೆ ಮಾಡಬಹುದಾದ ರಾಕೆಟ್‌ಗಳ ಗುರಿಯನ್ನು ಹೊಂದಿದೆ ಎಂದರು. ಮುಂಬರುವ ದಿನಗಳಲ್ಲಿ ಅಮೆರಿಕದಲ್ಲಿ ದೊಡ್ಡ ಪ್ರಮಾಣದಲ್ಲಿ ಸೌರಶಕ್ತಿ ಮೂಲಸೌಕರ್ಯವನ್ನು ಪ್ರಾರಂಭಿಸಲಿದ್ದೇವೆ. ಸುಮಾರು 100 ಗಿಗಾವ್ಯಾಟ್‌ಗಳ ಸೌರಶಕ್ತಿಯನ್ನು ಪ್ರತ್ಯೇಕವಾಗಿ ಉತ್ಪಾದಿಸಲು ನೋಡುತ್ತಿದ್ದೇವೆ. ಈ ಯೋಜನೆಯನ್ನು 3 ವರ್ಷಗಳಲ್ಲಿ ಕಾರ್ಯರೂಪಕ್ಕೆ ತರಬಹುದು ಎಂದು ಅವರು ಹೇಳಿದರು. ಸೌರಶಕ್ತಿ ಉತ್ಪಾದನೆಯಲ್ಲಿ ಚೀನಾದ ಪ್ರಾಬಲ್ಯವನ್ನು ಉಲ್ಲೇಖಿಸಿ, ಇಂದು ಸುಂಕ ಅತ್ಯಂತ ಹೆಚ್ಚಾಗಿರುವುದರಿಂದ ವಸ್ತುಗಳನ್ನು ಆಮದು ಮಾಡಲು ಕಷ್ಟವಾಗುತ್ತಿದೆ.ಇತರ ಕಂಪನಿಗಳು ಸಹ ಸೌರಶಕ್ತಿ ಉತ್ಪಾದನೆಯತ್ತ ಮುಖ ಮಾಡುವಂತೆ ಅವರು ಒತ್ತಾಯಿಸಿದರು.

ರೈಲ್ವೆ ಇಲಾಖೆಯ ಚೊಚ್ಚಲ ಪ್ರಯೋಗ | ಅನುಮಾನಾಸ್ಪದ ವ್ಯಕ್ತಿಗಳ ಚಲನವಲನ ಪತ್ತೆ ಮಾಡಬಲ್ಲ ಹ್ಯೂಮನಾಯ್ಡ್ ರೋಬೋ

ವಿಶಾಖಪಟ್ಟಣಂ ರೈಲು ನಿಲ್ದಾಣದಲ್ಲಿ ರೋಬೋಟ್

ವಿಶಾಖಪಟ್ಟಣಂ (ಆಂಧ್ರ ಪ್ರದೇಶ): ತಂತ್ರಜ್ಞಾನ ಈಗ ಬೆರಳ ತುದಿಯಲ್ಲಿರುವುದರಿಂದ ಕೆಲವು ಕ್ಷೇತ್ರಗಳಲ್ಲಿ ರೋಬೋಗಳು ಬಂದಾಗಿವೆ. ಹೊಸ ಬೆಳವಣಿಗೆ ಎಂಬಂತೆ ಭಾರತೀಯ ರೈಲ್ವೆಯಲ್ಲಿ ಇದೇ ಮೊದಲ ಬಾರಿಗೆ ಈಸ್ಟ್ ಕೋಸ್ಟ್ ರೈಲ್ವೆ ವಲಯದ ವಾಲ್ಟೇರ್ ವಿಭಾಗವು ಪ್ರಯಾಣಿಕರ ಸುರಕ್ಷತೆ, ಭದ್ರತೆ ಮತ್ತು ಸೇವೆ ಹೆಚ್ಚಿಸಲು ವಿಶಾಖಪಟ್ಟಣಂ ರೈಲು ನಿಲ್ದಾಣದಲ್ಲಿ 'ಎಎಸ್‌ಸಿ ಅರ್ಜುನ್' ಎಂಬ ಹ್ಯೂಮನಾಯ್ಡ್ ರೋಬೋಟ್ ಅನ್ನು ಪರಿಚಯಿಸಿದೆ.

ರೋಬೋಟ್‌ಗಳು ಮನುಷ್ಯನ ಸೇವೆ ಮಾಡಲು, ಮನುಷ್ಯನ ದೈನಂದಿನ ಅಗತ್ಯಗಳನ್ನು ಪೂರೈಸುಲು ಹೊಂದಿಕೊಳ್ಳುತ್ತಿದ್ದು, ಈ ಪಟ್ಟಿಗೆ ಹೊಸ ಸೇರ್ಪಡೆ ಎಂಬಂತೆ ಭಾರತೀಯ ರೈಲ್ವೆಯಲ್ಲಿ ಇದು ಸೇರಿಸಿಕೊಂಡಿದೆ. ಮಾನವನ ದೇಹರಚನೆಯನ್ನು ಹೋಲುವ ರೋಬೋಟ್ ಇದಾಗಿದ್ದು, ಇದು ನಿಲ್ದಾಣದ ಭದ್ರತೆ ಮತ್ತು ಇತರ ಸುರಕ್ಷತಾ ಅಂಶಗಳನ್ನು ಮೇಲ್ವಿಚಾರಣೆ ಮಾಡುತ್ತದೆ.

'ನಮಸ್ಕಾರ... ಕ್ಷಮಿಸಿ, ದಯವಿಟ್ಟು' ಎಂಬ ಪದಗಳನ್ನು ಉಚ್ಚರಿಸುವ ಈ ರೋಬೋ, 'ನೀವು ಹತ್ತಬೇಕಾದ ರೈಲು ಈಗಾಗಲೇ ಬಂದಿದೆ, ದಯವಿಟ್ಟು ಎಚ್ಚರಿಕೆಯಿಂದ ಮುಂದುವರಿಯಿರಿ', 'ನಮಸ್ಕಾರ... ರೈಲ್ವೆ ಪೊಲೀಸ್ ಠಾಣೆಯ ಪ್ಲಾಟ್ ಫಾರ್ಮ್ ಸಂಖ್ಯೆ-1 ರಲ್ಲಿ ಯಾರೋ ಇಬ್ಬರು ವ್ಯಕ್ತಿಗಳು ಜಗಳವಾಡುತ್ತಿದ್ದಾರೆ, ತುರ್ತಾಗಿ ಬನ್ನಿ...' ಎಂಬ ಸಲಹೆಯಿಂದ ಹಿಡಿದು ಇತರ ಸೂಚನೆ ವರೆಗೆ ಎಲ್ಲ ಮಾಹಿತಿಯನ್ನು ಈ ಹ್ಯೂಮನಾಯ್ಡ್ ರೋಬೋಟ್ ಮಾಡಲಿದೆ.

ಪೂರ್ವ ಕರಾವಳಿ ಆರ್‌ಪಿಎಫ್ ಐಜಿಪಿ ಅಲೋಕ್ ಬೊಹ್ರಾ ಮತ್ತು ವಾಲ್ಟೇರ್ ಡಿಆರ್‌ಎಂ ಲಲಿತ್ ಬೊಹ್ರಾ ಸೇರಿದಂತೆ ರೈಲ್ವೆಯ ಅಧಿಕಾರಿಗಳು ಗುರುವಾರ ಈ ರೋಬೋಟ್‌ಗೆ ಚಾಲನೆ ನೀಡಿದ್ದು, ಇದು ನಿಲ್ದಾಣದಲ್ಲಿ ರೈಲ್ವೆ ಪೊಲೀಸರಿಗೆ ವಿವಿಧ ಸೇವೆಗಳನ್ನು ಒದಗಿಸಲಿದೆ.

ಭಾರತೀಯ ರೈಲ್ವೆಯಲ್ಲಿ ಇಂತಹ ರೋಬೋಟ್ ಪರಿಚಯಿಸುತ್ತಿರುವುದು ಇದೇ ಮೊದಲು. ಆರ್‌ಪಿಎಫ್‌ನ (ರೈಲ್ವೆ ರಕ್ಷಣಾ ಪಡೆ) ಆಧುನೀಕರಣ ಮತ್ತು ಡಿಜಿಟಲೀಕರಣದ ಮುಂದುವರಿದ ಭಾಗವಾಗಿ, ಈ ಹ್ಯೂಮನಾಯ್ಡ್ ರೋಬೋಟ್ ಕಾರ್ಯನಿರ್ವಹಿಸಲಿದೆ. ರೈಲ್ವೆ ನಿಲ್ದಾಣದಲ್ಲಿ ಅನುಮಾನಾಸ್ಪದ ವ್ಯಕ್ತಿಗಳು ಮತ್ತು ಅಪರಾಧಿಗಳ ಚಲನವಲನ ಪತ್ತೆ ಮಾಡಬಲ್ಲ ರೋಬೋಟ್ ಇದಾಗಿದ್ದು, ಪೊಲೀಸರಿಗೆ ಫೋಟೋಗಳೂ ಸೇರಿದಂತೆ ಮಾಹಿತಿಯನ್ನು ಒದಗಿಸುತ್ತದೆ. ಹಾಗೆಯೇ ಪ್ರಯಾಣಿಕರು ರೈಲ್ವೆ ನಿಲ್ದಾಣದಲ್ಲಿ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಗಳ ಪ್ರಕಟಣೆ ಕೂಡ ನೀಡುತ್ತದೆ.

ಪ್ರತೀ ರೈಲ್ವೆ ನಿಲ್ದಾಣದಲ್ಲಿ ಈ ರೋಬೋಟ್‌ನ (ಎಎಸ್‌ಸಿ ಅರ್ಜುನ್) ಸೇವೆಗಳನ್ನು ಬಳಸಿಕೊಳ್ಳಲು ರೈಲ್ವೆ ಪೊಲೀಸರು ಆಲೋಚಿಸುತ್ತಿದ್ದಾರೆ. ಈ ರೋಬೋ ಹಲವು ವೈಶಿಷ್ಟ್ಯಗಳನ್ನು ಹೊಂದಿದ್ದು, ಅತ್ಯಾಧುನಿಕ ಎಐ ಮತ್ತು ಐಒಟಿ ತಂತ್ರಜ್ಞಾನ ಮತ್ತು ನೈಜ ಸಮಯದ ಮೇಲ್ವಿಚಾರಣಾ ಸಾಮರ್ಥ್ಯಗಳೊಂದಿಗೆ ಕಾರ್ಯನಿರ್ವಹಿಸುತ್ತದೆ, ಅಲ್ಲದೇ ಅನೇಕ ಕೆಲಸ -ಕಾರ್ಯಗಳನ್ನು ಸುಲಭವಾಗಿ ನಿರ್ವಹಿಸಲು ಅನುವು ಮಾಡಿಕೊಡುತ್ತದೆ.

1 ವರ್ಷದ ಕಠಿಣ ಪರಿಶ್ರಮ

ರೈಲ್ವೆ ಪೊಲೀಸರು ಈ ರೋಬೋಟ್‌ಗೆ 'ಎಎಸ್‌ಸಿ ಅರ್ಜುನ್' ಎಂದು ಹೆಸರಿಟ್ಟಿದ್ದಾರೆ. ಕೋವಿಡ್ ಸಮಯದಲ್ಲಿ ದೇಹದ ಉಷ್ಣತೆಯನ್ನು ಪತ್ತೆಹಚ್ಚಲು ಉಷ್ಣ ಸಾಧನವನ್ನು ಕಂಡುಹಿಡಿದ ಅರ್ಜುನ್ ಅವರ ಹೆಸರನ್ನು ಇದಕ್ಕೆ ಇಡಲಾಗಿದೆ ಎಂಬುದು ಗಮನಾರ್ಹ. ಒಂದು ವರ್ಷದ ಕಠಿಣ ಪರಿಶ್ರಮದ ಫಲ ಇದಾಗಿದ್ದು, ಹಲವು ಮಾರ್ಪಾಡು ಮತ್ತು ಸೇರ್ಪಡೆಗಳೊಂದಿಗೆ ಅಭಿವೃದ್ಧಿಪಡಿಸಲಾಗಿದೆ. ಇದರ ಬೆಲೆ 20 ಲಕ್ಷ ರೂ. ಇದ್ದು, ಭವಿಷ್ಯದಲ್ಲಿ ಈ ರೋಬೋಟ್ ಅನ್ನು ಮತ್ತಷ್ಟು ಅಭಿವೃದ್ಧಿಪಡಿಸುವ ಇಚ್ಛೆ ಹೊಂದಲಾಗಿದೆ ಎಂದು ವಿಶಾಖಪಟ್ಟಣಂ ರೈಲ್ವೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ವಿಶಾಖಪಟ್ಟಣಂ ಬ್ರ್ಯಾಂಡ್

ವಿಶಾಖಪಟ್ಟಣವು ಎಎಸ್‌ಸಿ ಅರ್ಜುನ್ ಜನ್ಮಸ್ಥಳವಾಗಿದ್ದು, ಇದನ್ನು ರೋಬೋಕಪ್ಲರ್ ಎಂಬ ಕಂಪನಿ ತಯಾರಿಸಿದೆ. ಸಂಪೂರ್ಣವಾಗಿ ಸ್ಥಳೀಯವಾಗಿ ಲಭ್ಯವಾಗುವ ತಂತ್ರಜ್ಞಾನದಿಂದ ತಯಾರಿಸಲಾಗಿದೆ ಎಂಬುದು ಗಮನಾರ್ಹ. ಇದು ಆರ್‌ಪಿಎಫ್ ಪೊಲೀ ಸರು ಮತ್ತು ಪ್ರಯಾಣಿಕರಿಗೆ ಸ್ಮಾರ್ಟ್ ರೀತಿಯಲ್ಲಿ ಸಹಾಯ ಮಾಡುತ್ತದೆ. ಮುಖ ಗುರುತಿಸುವಿಕೆ ತಂತ್ರಜ್ಞಾನದೊಂದಿಗೆ ಒಳನುಗ್ಗುವವರನ್ನು ಪತ್ತೆ ಮಾಡುವುದು ಸೇರಿದಂತೆ ಅಧಿಕಾರಿಗಳಿಗೆ ತಕ್ಷಣ ಎಚ್ಚರಿಕೆ ನೀಡುತ್ತದೆ. ಇದು ಎಲ್ಲ ಕಡೆಗಳಲ್ಲಿ ಕಣ್ಗಾವಲು ಕ್ಯಾಮೆರಾಗಳನ್ನು ಹೊಂದಿದ್ದು, ಈ ವೈಶಿಷ್ಟ್ಯಗಳ ಮೂಲಕ, ಅದರ ಸುತ್ತಲೂ ಏನು ನಡೆಯುತ್ತಿದೆ ಎಂಬುದನ್ನು ಸುಲಭವಾಗಿ ಪತ್ತೆ ಮಾಡುತ್ತದೆ.

ರೋಬೋಟ್‌ನ ವಿಶೇಷ ಲಕ್ಷಣಗಳು

- ಎಐ ಮೂಲಕ ನಿಲ್ದಾಣಕ್ಕೆ ಪ್ರವೇಶಿಸುವ ಪ್ರಯಾಣಿಕರ ಸಂಖ್ಯೆ ಅಂದಾಜು.
- ಜನಸಂದಣಿಯನ್ನು ನಿರ್ವಹಿಸಲು ಈ ರೋಬೋಟ್ ಸಹಕಾರಿ.
- ಭದ್ರತಾ ಸಿಬ್ಬಂದಿಗೆ ತಕ್ಷಣವೇ ತುರ್ತು ಮಾಹಿತಿ ಪ್ರಸಾರ.
- ಹಿಂದಿ, ತೆಲುಗು ಮತ್ತು ಇಂಗ್ಲಿಷ್‌ನಲ್ಲಿ ಮಾತನಾಡಬಲ್ಲ ಸಾಮರ್ಥ್ಯ.
- ಸಾರ್ವಜನಿಕರಿಗೂ ಅಗತ್ಯಕ್ಕೆ ತಕ್ಕಂತೆ ಅಗತ್ಯ ಮಾಹಿತಿ, ಪ್ರಕಟಣೆ
- ನಿಲ್ದಾಣದ ಬೆಂಕಿ ಅವಘಡ ಇಲ್ಲವೇ ಹೊಗೆ ಪತ್ತೆಹಚ್ಚಿ ಎಚ್ಚರಿಕೆ
- ನಿರಂತರವಾಗಿ ನಿಲ್ದಾಣದಲ್ಲಿಯೇ ಸೇವೆ, ಬರುವವರ ಚಿತ್ರಗಳ ದಾಖಲು
- ಶಂಕಿತರೂ ಸೇರಿದಂತೆ ಆಗಾಗ್ಗೆ ಭೇಟಿ ನೀಡುವವರ ಗುರುತು ಪತ್ತೆ
- ಅಧಿಕಾರಿಗಳಿಗೆ ತಕ್ಷಣವೇ ಅಪಾಯದ ಮಾಹಿತಿ ರವಾನೆ

ಸಮಾಚಾರ ಸಣ್ಣದಲ್ಲ

ಕೆನರಾ ಬ್ಯಾಂಕ್‌ಗೆ ಭಾಷಾ ಪ್ರಶಸ್ತಿ

ಬೆಂಗಳೂರು: ಕೆನರಾ ಬ್ಯಾಂಕ್ ಪ್ರಧಾನ ಕಚೇರಿಯಿಂದ ಸಭೆ ಸೇರಿದ ಬೆಂಗಳೂರಿನ ಪಟ್ಟಣ ಅಧಿಕೃತ ಭಾಷಾ ಅನುಷ್ಠಾನ ಸಮಿತಿ (ಬ್ಯಾಂಕ್‌ಗಳು ಮತ್ತು ವಿಮೆ), ಟಿಒಎಲ್‌ಐಸಿ ಅಧಿಕೃತ ಭಾಷಾ ಪ್ರಶಸ್ತಿಯಡಿಯಲ್ಲಿ ಪ್ರಥಮ ಬಹುಮಾನ ನೀಡಿ ಗೌರವಿಸಲಾಗಿದೆ. ಇಂದೋರ್‌ನಲ್ಲಿ ಭಾರತ ಸರಕಾರದ ಗೃಹ ಸಚಿವಾಲಯದ ಅಧಿಕೃತ ಭಾಷಾ ಇಲಾಖೆ ಆಯೋಜಿಸಿದ್ದ ಮಧ್ಯ, ಪಶ್ಚಿಮ ಮತ್ತು ದಕ್ಷಿಣ ಪ್ರದೇಶಗಳ ಜಂಟಿ ಪ್ರಾದೇಶಿಕ ಸಮ್ಮೇಳನದಲ್ಲಿ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಕಾರ್ಯನಿರ್ವಾಹಕ ನಿರ್ದೇಶಕ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಪ್ರಭಾರ) ಹರ್ದೀಪ್ ಸಿಂಗ್ ಅಹ್ಲುವಾಲಿಯಾ ಅವರು ಕೇಂದ್ರ ಗೃಹ ವ್ಯವಹಾರಗಳ ರಾಜ್ಯ ಸಚಿವ ಬಂಡಿ ಸಂಜಯ್ ಕುಮಾರ್ ಅವರಿಂದ ಪ್ರತಿಷ್ಠಿತ ಪ್ರಶಸ್ತಿಯನ್ನು ಅನ್ನು ಪಡೆದರು. ಹೆಚ್ಚುವರಿಯಾಗಿ, ಟಿಒಎಲ್‌ಐಸಿ ಸಹಾಯಕ ಪ್ರಧಾನ ವ್ಯವಸ್ಥಾಪಕಿ ಮತ್ತು ಸದಸ್ಯ ಕಾರ್ಯದರ್ಶಿ ಶ್ರೀಕಲಾ ಅವರು ಸಂಸತ್ ಸದಸ್ಯ ಶಂಕರ್ ಲಾಲ್ವಾನಿ ಅವರಿಂದ ಪ್ರಮಾಣಪತ್ರವನ್ನು ಪಡೆದರು. ಬ್ಯಾಂಕಿಂಗ್ ಮತ್ತು ವಿಮಾ ವಲಯದಲ್ಲಿ ಅಧಿಕೃತ ಭಾಷೆಯ ಅನುಷ್ಠಾನವನ್ನು ಪ್ರೋತ್ಸಾಹಿಸುವ ಮತ್ತು ಉತ್ತೇಜಿಸುವಲ್ಲಿ ಸಮಿತಿಯ ಶ್ಲಾಘನೀಯ ಕಾರ್ಯಕ್ಷಮತೆಯನ್ನು ಈ ಮನ್ನಣೆ ಎತ್ತಿ ತೋರಿಸುತ್ತದೆ.

ದಲಿತ ಸಚಿವರ ವಿರುದ್ಧ ಷಡ್ಯಂತ್ರ: ಹನುಮೇಶ್

ಬೆಂಗಳೂರು: ರಾಜ್ಯ ಕಾಂಗ್ರೆಸ್ ಸರಕಾರದಲ್ಲಿ ಇಬ್ಬರು ದಲಿತ ಸಮುದಾಯದ ಸಚಿವರನ್ನು ಸಂಪುಟದಿಂದ ತೆಗೆದುಹಾಕುವಲ್ಲಿ ಯಶಸ್ವಿಯಾಗಿದ್ದು, ಇದೀಗ ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ ಅವರನ್ನು ಗುರಿಯಾಗಿಸಿ ಸಚಿವ ಸ್ಥಾನದಿಂದ ಪದಚ್ಯುತಗೊಳಿಸಲು ಭಾರಿ ಹುನ್ನಾರ ನಡೆಸಿದ್ದಾರೆ ಎಂದು ಅತಿ ಹಿಂದುಳಿದ ಸಣ್ಣ ಜಾತಿ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಹನುಮೇಶ್ ಗುಂಡೂರ್ ಹೇಳಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕ್ಷುಲ್ಲಕ ಕಾರಣದಿಂದ ಕೆ.ಎನ್. ರಾಜಣ್ಣ ಹಾಗೂ ಭ್ರಷ್ಟಾಚಾರ ಆರೋಪ ಹೊರಿಸಿ ಬಿ. ನಾಗೇಂದ್ರ ಅವರನ್ನು ಸಚಿವ ಸ್ಥಾನದಿಂದ ಪದಚ್ಯುತ ಗೊಳಿಸಲಾಯಿತು ಸಿದ್ದರಾಮಯ್ಯ ಸರಕಾರದಲ್ಲಿ ಏಳು ಮಂದಿ ದಲಿತ ಸಚಿವರಿದ್ದರು. ಇದೀಗ ಸಂಖ್ಯಾಬಲ ಐದಕ್ಕೆ ಕುಸಿದಿದೆ. ಈ ಸರಕಾರದಲ್ಲಿ ದಲಿತರನ್ನೇ ಗುರಿ ಮಾಡಲಾಗುತ್ತಿದೆ. ಯಾವುದೇ ಕಾರಣಕ್ಕೂ ಇಂತಹ ಷಡ್ಯಂತ್ರಗಳಿಗೆ ಅವಕಾಶ ನೀಡುವುದಿಲ್ಲ, ಹಾಗೇನಾದರೂ ಆದರೆ ಉಗ್ರ ಹೋರಾಟ ಮಾಡುವುದಾಗಿ ಎಚ್ಚರಿಕೆ ನೀಡಿದರು. ರಾಜ್ಯದಲ್ಲಿ ಸಚಿವ ಸಂಪುಟ ಪುನರ್ ರಚನೆ ನಡೆಯುವ ಸಾಧ್ಯತೆ ಇದೆ ಎಂಬ ಚರ್ಚೆ ನಡೆಯುತ್ತಿದೆ. ಇಂತಹ ಸಂದರ್ಭದಲ್ಲಿ ಪ್ರಬಲ ಖಾತೆಯನ್ನು ಕಸಿದು ಬೇರೆಯವರಿಗೆ ದೊರಕಿಸುವ ಷಡ್ಯಂತ್ರವೂ ನಡೆಯುತ್ತಿದೆ. ಸಚಿವ ತಿಮ್ಮಾಪುರ ಅವರು ಇಲಾಖೆಯಲ್ಲಿ ರಚನಾತ್ಮಕ ಕೆಲಸ ಮಾಡುತ್ತಿದ್ದಾರೆ. ಪಾರದರ್ಶಕತೆಗೆ ಒತ್ತು ನೀಡಿದ್ದು, ಅಬಕಾರಿ ಪರವಾನಗಿಯಲ್ಲಿ ದಲಿತರಿಗೂ ಹೆಚ್ಚಿನ ಪ್ರಾತಿನಿಧ್ಯ ದೊರಕಿಸಿಕೊಡುತ್ತಿದ್ದಾರೆ. ಇದನ್ನು ಸಹಿಸದೇ ಇಂತಹ ಷಡ್ಯಂತ್ರ ರೂಪಿಸಲಾಗಿದೆ ಎಂದರು.

ಪ್ರಾಮಾಣಿಕತೆ ಮೆರೆದ ಆಟೋ ಚಾಲಕ

ಬೆಂಗಳೂರು: ಮಹಿಳೆ ಬಿಟ್ಟು ಹೋಗಿದ್ದ ಪರ್ಸ್, ಐಫೋನ್ ತಂದು ಕೊಟ್ಟ ಆಟೋ ಡ್ರೈವರ್ ಕೆಲಸಕ್ಕೆ ಎಲ್ಲೆಡೆ ಮೆಚ್ಚುಗೆ ವ್ಯಕ್ತವಾಗಿದೆ. ಬೆಂಗಳೂರಿನ ಕೊತ್ತನೂರು ಠಾಣೆ ವ್ಯಾಪ್ತಿಯಲ್ಲಿ ಉತ್ತರ ಭಾರತ ಮೂಲದ ಮಹಿಳೆಯೊಬ್ಬರು ರ್‍ಯಾಪಿಡೊ ಮೂಲಕ ಆಟೋ ಬುಕ್ ಮಾಡಿದ್ದರು. ಪ್ರಯಾಣಿಸಿದ ನಂತರ ಪರ್ಸ್ ಹಾಗೂ ಐಫೋನ್ ಮರೆತು ಆಟೋ ಇಳಿದು ಹೋಗಿದ್ದರು. ಇದಾದ ಕೆಲ ಹೊತ್ತಿನ ನಂತರ ಪರ್ಸ್ ಮತ್ತು ಮೊಬೈಲ್ ಮರೆತಿರೋದು ಗೊತ್ತಾಗಿ ಠಾಣೆಗೆ ಮಾಹಿತಿ ನೀಡಿದ್ದರು. ಕೊತ್ತನೂರು ಠಾಣೆ ಪೊಲೀಸರು ಮಹಿಳೆ ನಂಬರ್‌ಗೆ ಕಾಲ್ ಮಾಡಿದಾಗ ಆಟೋ ಡ್ರೈವರ್ ಪ್ರತಿಕ್ರಿಯಿಸಿ, ಮೊಬೈಲ್ ಮತ್ತು ಪರ್ಸ್ ಅನ್ನು ಯುವತಿಗೆ ಮರಳಿಸಿದ್ದಾರೆ.

ರಾಜ್ಯಪಾಲರನ್ನು ಅಡ್ಡಗಟ್ಟಿದ ವಿಚಾರ ಸಂಬಂಧ ಬಿಜೆಪಿ ಕೆಂಡ | ಆಡಳಿತ, ವಿಪಕ್ಷಗಳ ನಡುವೆ ಮಾತಿನ ಚಕಮಕಿ

ಕಾಂಗ್ರೆಸ್ ಸದಸ್ಯರ ನಡೆಗೆ ಪರಿಷತ್‌ನಲ್ಲಿ ಜಟಾಪಟಿ

ವಿಶ್ವವಾಣಿ ಸುದ್ದಿಮನೆ ವಿಧಾನಪರಿಷತ್

ಕಾಂಗ್ರೆಸ್ ಸದಸ್ಯರು ರಾಜ್ಯಪಾಲರನ್ನು ಅಡ್ಡಗಟ್ಟಿದ ವಿಚಾರ ಸಂಬಂಧ ವಿಧಾನ ಪರಿಷತ್ ರಣಾಂಗಣವಾದ ಪ್ರಸಂಗ ಶುಕ್ರವಾರ ನಡೆದಿದೆ.

ವಿಧಾನಪರಿಷತ್ ಕಲಾಪ ಪ್ರಾರಂಭವಾಗುತ್ತಿದ್ದಂತೆ ಸಭಾಪತಿ ಬಸವರಾಜ್ ಹೊರಟ್ಟಿ ಪ್ರಶ್ನೋತ್ತರ ಕಲಾಪವನ್ನು ಪ್ರಾರಂಭಿಸಲು ಮುಂದಾದರು. ಈ ವೇಳೆ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ವಿಷಯ ಪ್ರಸ್ತಾಪಿಸಲು ಮುಂದಾದರು. ನಾನು ನೀಡಿರುವ ಪತ್ರದ ಮೇಲೆ ವಿಷಯ ಪ್ರಸ್ತಾಪಿಸಲು ಅವಕಾಶ ಕೊಡಿ ಎಂದು ಸಭಾಪತಿಯವರಿಗೆ ಮನವಿ ಮಾಡಿದರು.

ಈ ಹಂತದಲ್ಲಿ ಆಡಳಿತ ಮತ್ತು ಪ್ರತಿಪಕ್ಷಗಳ ಸದಸ್ಯರ ನಡುವೆ ಗದ್ದಲ, ಮಾತಿನ ಚಕಮಕಿ ನಡೆಯಿತು. ವಿಷಯ ಪ್ರಸ್ತಾಪಿಸಲು ವಿರೋಧ ಪಕ್ಷದ ನಾಯಕರಿಗೆ ಅವಕಾಶ ಕೊಡಿ ಎಂದು ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಒತ್ತಾಯ ಮಾಡಿದರು. ಆಗ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ಅವರು ಕ್ರಿಯಾಲೋಪ ಎತ್ತಲು ಮುಂದಾದರು. ಈ ಹಂತದಲ್ಲಿ ಮತ್ತೆ ಆಡಳಿತ ಮತ್ತು ಪ್ರತಿಪಕ್ಷದ ಸದಸ್ಯರ ನಡುವೆ ಮಾತಿನ ಚಕಮಕಿ ಗದ್ದಲ ಉಂಟಾಯಿತು.

ಆಗ ಸಭಾನಾಯಕ ಹಾಗೂ ಸಚಿವ ಭೋಸ್‌ರಾಜ್ ಅವರು ಪ್ರತಿಪಕ್ಷದ ಸದಸ್ಯರು ಸದನವನ್ನು ಹಾಳು ಮಾಡಲು ಬಂದಿದ್ದಾರೆ. ಅವರಿಗೆ ಕಲಾಪ ನಡೆಯಬಾರದೆಂಬ ದುರುದ್ದೇಶವಿದೆ. ಹೀಗಾಗಿಯೇ ಬೇಡದ ವಿಷಯಗಳನ್ನು ಪ್ರಸ್ತಾಪಿಸಲು ಮುಂದಾಗುತ್ತಿದ್ದಾರೆ. ಸಂವಿಧಾನ ವಿರೋಧಿ ಯಾರು? ರಾಷ್ಟ್ರಗೀತೆಗೆ ಅಪಮಾನ ಮಾಡಿದ್ದು ಯಾರು ಎಂಬುದು ಎಲ್ಲರಿಗೂ ಗೊತ್ತಿದೆ ಎಂದು ತಿರುಗೇಟು ನೀಡಿದರು. ಆಗ ಪ್ರತಿಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್ ಅವರು, ಪ್ರತಿಪಕ್ಷದ ನಾಯಕರು ಇನ್ನೂ ವಿಷಯವನ್ನೇ ಪ್ರಸ್ತಾಪಿಸಿಲ್ಲ. ಅವರು ಏನು ಹೇಳುತ್ತಾರೆ ಎಂಬುದು ಗೊತ್ತಿಲ್ಲ. ಅದಕ್ಕೂ ಮುನ್ನವೇ ಕ್ರಿಯಾಲೋಪ ಎತ್ತಲು ಅವಕಾಶ ನೀಡಿದರೆ ಹೇಗೆ ಎಂದು ಸಭಾಪತಿಯವರನ್ನು ಪ್ರಶ್ನಿಸಿದರು.

ಇದಕ್ಕೆ ದನಿಗೂಡಿಸಿದ ಜೆಡಿಎಸ್‌ನ ಭೋಜೇಗೌಡ, ಸಭಾ ನಾಯಕರಿಗೆ ಎಷ್ಟು ಸ್ಥಾನಮಾನ ಇರುತ್ತದೆಯೋ ಅದೇ ರೀತಿ ಪ್ರತಿಪಕ್ಷದ ನಾಯಕರಿಗೂ ಸರಿಸಮಾನವಾದ ಸ್ಥಾನಮಾನ ಇರುತ್ತದೆ. ನೀವು ವಿಷಯ ಪ್ರಸ್ತಾಪಿಸಲು ಅವಕಾಶ ಕೊಡದಿದ್ದರೆ ಸದಸ್ಯರ ಹಕ್ಕನ್ನು ಮೊಟಕುಗೊಳಿಸಿದಂತಾಗುತ್ತದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಪ್ರತಿಪಕ್ಷದ ನಾಯಕರು ಪತ್ರವನ್ನು ಕೊಟ್ಟಾಗ ಅದನ್ನು ಪರಿಶೀಲಿಸಿ ಚರ್ಚೆಗೆ ಅವಕಾಶ ಕೊಡಬೇಕು. ಅದಕ್ಕೂ ಮೊದಲೇ ಕ್ರಿಯಾಲೋಪ ಪ್ರಸ್ತಾಪಿಸಲು ಅವಕಾಶ ನೀಡಿದರೆ ಸದನಕ್ಕೆ ತಪ್ಪು ಸಂದೇಶ ರವಾನೆಯಾಗುತ್ತದೆ ಎಂದು ಹೇಳಿದರು. ಇದಕ್ಕೆ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ದನಿಗೂಡಿಸಿದರು.

ಯಾರು ಹೇಗೆ ವರ್ತಿಸಿದ್ದಾರೆಂದು ಗೊತ್ತು

ಆಡಳಿತ ಪಕ್ಷದ ಮುಖ್ಯ ಸಚೇತಕ ಸಲೀಂ ಅವರು, ಸದನದಲ್ಲಿ ಯಾರು ಹೇಗೆ ವರ್ತನೆ ಮಾಡಿದ್ದಾರೆ ಎಂಬುದು ಗೊತ್ತಿದೆ. ಸಂವಿಧಾನಕ್ಕೆ ವಿರುದ್ಧವಾಗಿ ನಡೆದುಕೊಂಡವರು ಯಾರು? ರಾಷ್ಟ್ರಗೀತೆಗೆ ಅಪಮಾನ ಮಾಡಿದವರು ಯಾರು ಎಂದು ಪ್ರಶ್ನಿಸಿದರು. ಈ ಹಂತದಲ್ಲಿ ಮತ್ತೆ ಆಡಳಿತ ಮತ್ತು ಪ್ರತಿಪಕ್ಷ ಸದಸ್ಯರ ನಡುವೆ ಭಾರೀ ಗದ್ದಲ, ಮಾತಿನ ಚಕಮಕಿ, ಆರೋಪ, ಪ್ರತ್ಯಾರೋಪಗಳು ನಡೆದವು. ಆಗಲೇ ಬೇಕು.. ಆಗಲೇಬೇಕು.. ಗೂಂಡಾ ಶಾಸಕ ಹರಿಪ್ರಸಾದ್ ಅಮಾನತು ಆಗಲೇಬೇಕು. ರೌಡಿಯಂತೆ ವರ್ತಿಸಿರುವ ಸದಸ್ಯನನ್ನು ಸದನದಿಂದ ಹೊರಗೆ ಹಾಕಿ. ಈ ತಕ್ಷಣವೇ ಅವರನ್ನು ಮಾರ್ಷಲ್‌ಗಳ ಮೂಲಕ ಹೊರಗೆ ಹಾಕಿ ಎಂದು ಬಿಜೆಪಿ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯಪಾಲರನ್ನು ಕರೆಸಿ ದುರುದ್ದೇಶಪೂರ್ವಕವಾಗಿ ಅಪಮಾನ ಮಾಡಲಾಗಿದೆ. ತಾವೊಬ್ಬ ಶಾಸಕರು ಎಂಬುದನ್ನು ಮರೆತು ಗೂಂಡಾ ವರ್ತನೆ ತೋರಿರುವ ಹರಿಪ್ರಸಾದ್ ಅವರಿಗೆ ಸದನದಲ್ಲಿ ಕೂರಲು ಅರ್ಹತೆ ಇಲ್ಲ ಎಂದು ಕಾಂಗ್ರೆಸ್ ವಿರುದ್ಧ ಪ್ರತಿಪಕ್ಷದ ಸದಸ್ಯರು ವಾಗ್ದಾಳಿ ನಡೆಸಿದರು. ಇದಕ್ಕೆ ತಿರುಗೇಟು ನೀಡಿದ ಕಾಂಗ್ರೆಸ್ ಸದಸ್ಯರು, ಮೊದಲು ರಾಜ್ಯಪಾಲರನ್ನು ವಾಪಸ್ ಕರೆಸಿಕೊಳ್ಳಬೇಕು. ಕೇಂದ್ರ ಸರಕಾರದ ಕೈಗೊಂಬೆಯಂತೆ ವರ್ತಿಸಿದ್ದಾರೆ. ಇದಕ್ಕೆ ಬಿಜೆಪಿಯೇ ಕಾರಣ ಎಂದು ದೂರಿದರು. ಈ ವೇಳೆ ಗದ್ದಲ ಎದ್ದಾಗ ತಾಳ್ಮೆ ಕಳೆದುಕೊಂಡು ಸಭಾಪತಿಗಳು ಪೀಠದಿಂದ ಎದ್ದು ನಿಂತು ನಿಮಗೆ ಮಾನ-ಮರ್ಯಾದೆ ಇಲ್ಲವೇ? ಸಹನೆಗೂ ಒಂದು ಇತಿಮಿತಿ ಇದೆ. ಇದೇ ರೀತಿ ನಡೆದುಕೊಂಡರೆ ಸದನದಿಂದ ಹೊರ ಹಾಕುತ್ತೇನೆ ಎಂದು ಎಚ್ಚರಿಸಿದರು.

ಆನಂತರನ ಸದನ ಸಮಾವೇಶಗೊಂಡಾಗ, ಸಭಾಪತಿ ಹೊರಟ್ಟಿ ಅವರು ಪೀಠದಿಂದ ಎದ್ದು ನಿಂತು, ಇದು ವಿಧಾನಸಭೆಯಲ್ಲಿ ನಡೆದಿದೆ.ಘಟನೆ ಕುರಿತು ಚರ್ಚೆಗೆ ಅವಕಾಶ ನೀಡಲಾಗುವುದು. ಈ ಕುರಿತು ಅರ್ಜಿ ನೀಡಿ ಪರಿಶೀಲನೆ ನಡೆಸುತ್ತೇನೆ ಎಂದು ಸದನಕ್ಕೆ ಮನವಿ ಮಾಡಿದರು. ಇದಕ್ಕೆ ಜೆಡಿಎಸ್ ಸದಸ್ಯ ಭೋಜೇಗೌಡ ಪ್ರಸ್ತಾಪಿಸಿ, ನಿನ್ನೆ ಇಬ್ಬರು ಸಭಾಪತಿಗಳು ಅಲ್ಲೇ ಇದ್ದರು. ಈ ಕುರಿತು ಅವರು ಸುಮೋಟೋ ಪ್ರಕರಣ ದಾಖಲು ಮಾಡಬೇಕಿತ್ತು ಎಂದು ಗಮನ ಸೆಳೆದರು. ಆಗ ಬಿ.ಕೆ. ಹರಿಪ್ರಸಾದ್ ಅವರು ರಾಜ್ಯಪಾಲರು ಸಂವಿಧಾನಕ್ಕೆ ಅಪಮಾನ ಮಾಡಿದ್ದಾರೆ ಎಂದು ಏರು ಧ್ವನಿಯಲ್ಲಿ ಉಲ್ಲೇಖಿಸಿದಾಗ ಮತ್ತೆ ಸದನದಲ್ಲಿ ಗದ್ದಲ ಕಂಡಿತು. ಆಗ ಮತ್ತೊಮ್ಮೆ ಸಭಾಪತಿ ಸದನವನ್ನು ಕೆಲ ಕಾಲ ಮುಂದೂಡಿಕೆ ಮಾಡಿದರು. ಪುನಃ ಭೋಜನ ವಿರಾಮದ ಬಳಿಕ ಸದನ ಸೇರಿದಾಗ ಗದ್ದಲ ಕಂಡ ಗರಂ ಆದ ಬಸವರಾಜ ಹೊರಟ್ಟಿ ಅವರು ಪೀಠಕ್ಕೆ ಗೌರವ ಕೊಡಿ. ಪ್ರಕಟಣೆಯೊಂದನ್ನು ತಿಳಿಸಬೇಕಾಗಿದೆ ಎಂದು ತಿಳಿಸಿದರು. ಇದಾದ ಬಳಿಕ ಬಿ. ಕೆ.ಹರಿಪ್ರಸಾದ್ ಅವರು ರಾಜ್ಯಪಾಲರಿಂದ ಸಂವಿಧಾನ ವಿರೋಧ ನಡೆ ಆಗಿದೆ ಎಂದು ಪುನರುಚ್ಚರಿಸಿದರು. ಇದಕ್ಕೆ ವಿಪಕ್ಷ ಸದಸ್ಯರು ಎದ್ದು ನಿಂತು ತೀವ್ರ ವಿರೋಧ ವ್ಯಕ್ತಪಡಿಸಿದರು. ಗದ್ದಲ ನಡುವೆಯೂ ಹರಿಪ್ರಸಾದ್ ರಾಜ್ಯಪಾಲರ ನಡೆ ಖಂಡಿಸಿದರು. ಆಡಳಿತ ಪಕ್ಷದ ಪುಟ್ಟಣ್ಣ ಸೇರಿದಂತೆ ಹಲವರು ಟೀಕೆ ಮಾಡಲು ಮುಂದಾದ ವೇಳೆ ಸಭಾಪತಿ ಹೊರಟ್ಟಿ ಅವರು ಈ ಯಾವ ಭಾಷಣ, ಮಾತುಗಳು ಕಡತಕ್ಕೆ ಹೋಗಬಾರದು ಎಂದು ರೋಲಿಂಗ್ ನೀಡಿದರು.

ಹರಿಪ್ರಸಾದ್ ಅಮಾನತಿಗೆ ಬಿಜೆಪಿ ಪಟ್ಟು

ವಿಧಾನ ಪರಿಷತ್‌ನಲ್ಲಿ ರಾಜ್ಯ ಪಾಲರ ವಿಷಯ ಪ್ರಸ್ತಾಪಿಸಿದ ಛಲವಾದಿ ನಾರಾಯಣಸ್ವಾಮಿ, ರಾಜ್ಯಪಾಲರು ಶಿಷ್ಟಾಚಾರದಂತೆ ಸದನಕ್ಕೆ ಬಂದು ಭಾಷಣ ಮಾಡಿದ್ದಾರೆ. ಅವರಿಂದ ಯಾವುದೇ ರೀತಿಯ ಕರ್ತವ್ಯಲೋಪ ಆಗಿಲ್ಲ. ಸದನದಿಂದ ನಿರ್ಗಮಿಸುವ ವೇಳೆ ಈ ಸದನದ ಸದಸ್ಯರಾದ ಹರಿಪ್ರಸಾದ್ ಅವರು ಅವರನ್ನು ಅಡ್ಡಗಟ್ಟಿ ಗೂಂಡಾಗಿರಿ ಪ್ರವೃತ್ತಿ ತೋರಿಸಿದ್ದಾರೆ. ಅವರನ್ನು ತಕ್ಷಣ ಸದನದಿಂದ ಅಮಾನತುಪಡಿಸಿ ಎಂದು ಒತ್ತಾಯಿಸಿದರು. ಗೂಂಡಾಗಿರಿ ಪದ ಬಳಸಿದಕ್ಕೆ ಕಾಂಗ್ರೆಸ್ ಸದಸ್ಯರು ಆಕ್ಷೇಪಿಸಿ, ಈ ಪದವನ್ನು ಕಡತದಿಂದ ತೆಗೆದು ಹಾಕಿ ಎಂದು ಮನವಿ ಮಾಡಿಕೊಂಡರು. ಮಾತು ಮುಂದುವರೆಸಿ, ಹಿಂದೆ ಹಂಸರಾಜ್ ಭಾರದ್ವಾಜ್ ಅವರು ಸರಕಾರ ಕೊಟ್ಟದ್ದ ಭಾಷಣವನ್ನೇ ಓದಿರಲಿಲ್ಲ. ತಾನು ಸರಕಾರದ ಗುಲಾಮ ಎಂದು ಹೇಳಿರಲಿಲ್ಲ. ಆಗ ಕಾಂಗ್ರೆಸ್ ಸದಸ್ಯರು ಬಾಯಿ ಮುಚ್ಚಿಕೊಂಡು ಏಕೆ ಕುಳಿತಿದ್ದರು ಎಂದು ಪ್ರಶ್ನಿಸಿದರು.

ಕ್ರಿಯಾಲೋಪ ಪ್ರಸ್ತಾಪಿಸಿದ ಹರಿಪ್ರಸಾದ್, ರಾಜ್ಯಪಾಲರು ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ನಡೆದುಕೊಂಡಿದ್ದಾರೆ. ಅವರಿಂದ ರಾಷ್ಟ್ರಗೀತೆಗೆ ಅವಮಾನವಾಗಿದೆ ಎಂದು ಹೇಳುತ್ತಿದ್ದಂತೆ ಸದನದಲ್ಲಿ ಭಾರೀ ಕೋಲಾಹಲ ಉಂಟಾಗಿತ್ತು. ಆರ್‌ಎಸ್ ಎಸ್‌ನವರು ಎಂದಿಗೂ ರಾಷ್ಟ್ರಗೀತೆಗೆ ಗೌರವ ಕೊಟ್ಟಿಲ್ಲ. ಬಿಜೆಪಿ ಅತ್ಯಾಚಾರಿಗಳ ಪಕ್ಷ, ಬಲಾತ್ಕಾರಿಗಳ ಪಕ್ಷ, ಸುಪ್ರೀಂಕೋರ್ಟ್‌ನಲ್ಲಿ ತಡೆಯಾಜ್ಞೆ ತಂದವರು ನಮ್ಮ ಬಗ್ಗೆ ಮಾತನಾಡುವ ನೈತಿಕತೆ ಉಳಿಸಿಕೊಂಡಿಲ್ಲ ಎಂದು ವಾಗ್ದಾಳಿ ನಡೆಸಿದರು. ಹೀಗೆ ಎರಡೂ ಕಡೆ ಗಲಾಟೆ ಉಂಟಾಗಿದ್ದರಿಂದ ಸಭಾಪತಿ ಸದನ ಮುಂದೂಡಿದರು.

ಚರ್ಚೆಗೆ ಕೋರಿದ ಮನವಿ ತಿರಸ್ಕಾರ

ನಿರ್ಣಯ ಪ್ರಸ್ತಾಪಿಸಿದ ಸಭಾಪತಿ, ಜಂಟಿ ವಿಧಾನಮಂಡಲ ಅಧಿವೇಶನ ಉದ್ದೇಶಿಸಿ ರಾಜ್ಯಪಾಲರು ಭಾಷಣ ಮಾಡಿ ತೆರಳುತಿದ್ದ ಸಂದರ್ಭದಲ್ಲಿ ರಾಷ್ಟ್ರಗೀತೆಗೆ ಅಪಮಾನ ಮಾಡಿ ಹೋಗಿದ್ದು, ಆಡಳಿತ ಪಕ್ಷದ ಸದಸ್ಯರು ಈ ಬಗ್ಗೆ ಚರ್ಚೆಗೆ ಅವಕಾಶ ನೀಡಬೇಕೆಂದು ಕೋರಿದ್ದಾರೆ. ಆದರೆ, ಇದು ಚರ್ಚೆಗೆ ಅವಕಾಶ ನೀಡಲು ಸಾಧ್ಯವಾಗದ ಹಿನ್ನೆಲೆ ಮನವಿ ಅನ್ನು ತಿರಸ್ಕಾರ ಮಾಡಲಾಗಿದೆ ಎಂದು ಪ್ರಕಟಿಸಿದರು. ಆಗ ಪ್ರತಿಪಕ್ಷ ಸದಸ್ಯರು ಮೇಜು ತಟ್ಟಿ ಸಭಾಪತಿ ನಿರ್ಣಯ ಸ್ವಾಗತಿಸಿದರು. ಬಳಿಕ ನಿರ್ಣಯ ಅಂಶ ಮುಂದುವರೆಸಿದ ಹೊರಟ್ಟಿ ಅವರು, ರಾಜ್ಯಪಾಲರು ಹೋಗುತ್ತಿದ್ದ ವೇಳೆ ಅಡ್ಡಗಟ್ಟಿ, ಧಿಕ್ಕಾರ ಕೂಗಿ ಅಪಮಾನ ಎಸಗಿರುವ ವಿಧಾನ ಪರಿಷತ್ತಿನ ಸದಸ್ಯರಾದ ಎಸ್.ರವಿ, ಬಿ.ಕೆ.ಹರಿಪ್ರಸಾದ್ ಅವರನ್ನು ಅಮಾನತು ಮಾಡಬೇಕೆಂದು ವಿಪಕ್ಷ ಸದಸ್ಯರು ಮನವಿ ಸಲ್ಲಿಸಿದ್ದಾರೆ. ಆದರೆ, ವಿಧಾನ ಪರಿಷತ್ತಿನ ಕಾರ್ಯವಿಧಾನ, ನಡುವಳಿಕೆ ನಿಯಮ ಪ್ರಕಾರ ಈ ಕುರಿತು ಪರಿಶೀಲಿಸಲು ನೀತಿ ಸಮಿತಿಗೆ ಒಪ್ಪಿಸಲಾಗುವುದು ಎಂದು ತೀರ್ಮಾನಿಸಿದರು. ಇದಾದ ನಂತರ, ವಿಧಾನ ಪರಿಷತ್ ಕಲಾಪವನ್ನು ಜನವರಿ 27ರಂದು ಬೆಳಗ್ಗೆ 11.00 ಗಂಟೆಗೆ ಮುಂದೂಡಲಾಗಿದೆ ಎಂದು ಬಸವರಾಜ ಹೊರಟ್ಟಿ ಪ್ರಕಟಿಸಿದರು.

2,500 ಕೋಟಿ ರು.ಅಬಕಾರಿ ಅಕ್ರಮ ಚರ್ಚಿಸಲು ಬಿಜೆಪಿ ಆಗ್ರಹ

ಕಿಕ್ ಇಳಿಯೋ ಮೊದಲೇ ಅವಕಾಶ ಕೊಡಿ

ಬೆಂಗಳೂರು: ವಿಧಾನಸಭೆಯಲ್ಲಿ ಅಬಕಾರಿ ಇಲಾಖೆಯ ಹಗರಣ ಸಂಬಂಧ ಉಭಯ ಪಕ್ಷಗಳ ಮಧ್ಯೆ ಕೋಲಾಹಲ ಉಂಟಾಯಿತು. ಪ್ರತಿಪಕ್ಷಗಳು ಅಬಕಾರಿ ಸಚಿವ ಆರ್ .ಬಿ.ತಿಮ್ಮಾಪುರ ರಾಜೀನಾಮೆಗೆ ಆಗ್ರಹಿಸಿ ಸದನದ ಬಾವಿಗಿಳಿದು ಪ್ರತಿಭಟನೆ ನಡೆಸಿದರು.

ಅಬಕಾರಿ ಇಲಾಖೆ ಹಗರಣದ ಬಗ್ಗೆ ಸದನದಲ್ಲಿ ಚರ್ಚೆಗೆ ಅವಕಾಶ ನೀಡುವಂತೆ ವಿಪಕ್ಷ ನಾಯಕ ಆರ್.ಅಶೋಕ ಆಗ್ರಹಿಸಿದರು. ಅಬಕಾರಿ ಇಲಾಖೆಯಲ್ಲಿ ಹಗರಣ ನಡೆದಿದೆ. ಸಚಿವ ತಿಮ್ಮಾಪುರ ಅವರು ಮೂರನೇ ಬಾರಿ ಹಗರಣ ಮಾಡಿರೋದು ಹೊರಗೆ ಬಂದಿದೆ. ಚರ್ಚೆಗೆ ಅವಕಾಶ ಬೇಕು ಎಂದು ಒತ್ತಾಯಿಸಿದರು.

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಬಗ್ಗೆ ಚರ್ಚೆ ಬಳಿಕ ನಿಯಮ 69ರ ಅಡಿ ಬದಲಾವಣೆ ಮಾಡಿ ಚರ್ಚೆಗೆ ಕೊಡುತ್ತೇನೆ ಎಂದು ಸ್ಪೀಕರ್ ಯು.ಟಿ.ಖಾದರ್ ಭರವಸೆ ನೀಡಿದರು. ಈಗ ರಾಜ್ಯಪಾಲರ ಭಾಷಣಕ್ಕೆ ಅವಕಾಶ ಮಾಡಿಕೊಡಿ ಎಂದು ಮನವಿ ಮಾಡಿದರು. ಅದಕ್ಕೆ ಹಗರಣ ನಡೆದಿದೆ ಈಗ ಅವಕಾಶ ಕೊಡಲ್ಲ ಅಂದರೆ ಹೇಗೆ ಎಂದು ಪ್ರಶ್ನಿಸಿದರು.

ಈ ವೇಳೆ ಸುನೀಲ್ ಕುಮಾರ್ ಮಾತನಾಡಿ, ಕೇರಳ, ತಮಿಳುನಾಡು, ಅಸ್ಸಾಂ ಚುನಾವಣೆಗೆ ದುಡ್ಡು ಕಳುಹಿಸಲು ಪ್ಲಾನ್ ಇದು. ಅದಕ್ಕಾಗಿ ಅಬಕಾರಿ ಇಲಾಖೆ ಸೇರಿ ಭ್ರಷ್ಟಾಚಾರ ನಡೆಯುತ್ತಿದೆ. ರಾಜ್ಯವನ್ನು ಲೂಟಿ ಮಾಡುತ್ತಿದೆ ಎಂದು ಆರೋಪಿಸಿದರು. ಇದಕ್ಕೆ ಕಾಂಗ್ರೆಸ್ ಸದಸ್ಯರ ತೀವ್ರ ವಿರೋಧ ವ್ಯಕ್ತಪಡಿಸಿದರು. ಈ ವೇಳೆ ಸದನದಲ್ಲಿ ತೀವ್ರ ಗದ್ದಲ, ಆರೋಪ ಪ್ರತ್ಯಾರೋಪ ನಡೆಸಿದರು.

ಚರ್ಚೆಗೆ ರೆಡಿ ಇದ್ದೇನೆ ಎಂದ ಅಬಕಾರಿ ಸಚಿವ

ಅಬಕಾರಿ ಇಲಾಖೆಯ ಲಂಚ ಪ್ರಕರಣದ ಬಗ್ಗೆ ಚರ್ಚೆಗೆ ಅವಕಾಶ ಕೊಡಬೇಕೆಂದು ಸದನದ ಬಾವಿಗಿಳಿದು ಬಿಜೆಪಿ ಜೆಡಿಎಸ್ ಸದಸ್ಯರು ಧರಣಿ ನಡೆಸಿದರು. ಲಂಚದ ಆಡಿಯೋ ಕುರಿತು ಲೋಕಯುಕ್ತಕ್ಕೆ ದೂರು ಕೊಟ್ಟ ಕೂಡಲೇ ಸಚಿವರ ರಾಜೀನಾಮೆ ಪಡೆಯಬೇಕಿತ್ತು. ಮುಖ್ಯಮಂತ್ರಿಗಳಿಗೆ ನೈತಿಕತೆ ಇದ್ದಿದ್ದರೆ ರಾಜೀನಾಮೆ ಪಡೆದು, ಸದನಕ್ಕೆ ಬರಬೇಕಿತ್ತು ಎಂದು ಆಗ್ರಹಿಸಿದರು, ಈ ವೇಳೆ ಜೋರು ಗದ್ದಲ ಉಂಟಾಗಿ ಕಲಾಪವನ್ನು 15 ನಿಮಿಷಗಳ ಸ್ಪೀಕರ್ ಮುಂದೂಡಿದರು. ಈ ವೇಳೆ ಪ್ರತಿಪಕ್ಷ ಸದಸ್ಯರ ಚರ್ಚೆಗೆ ರೆಡಿ ಇದ್ದೇನೆ ಎಂದ ಅಬಕಾರಿ ಸಚಿವ ಆರ್.ಬಿ ತಿಮ್ಮಾಪುರ ಹೇಳಿದರು.

ವಂದನಾ ನಿರ್ಣಯ ಮಂಡಿಸಿದ ಪೊನ್ನಣ್ಣ

ಸ್ಪೀಕರ್ ನಿಗದಿತ ಕಲಾಪವನ್ನು ಮುಂದುವರಿಸುತ್ತಾ, ಕಾಂಗ್ರೆಸ್ ಶಾಸಕ ಪೊನ್ನಣ್ಣ ಅವರಿಗೆ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ ಮಂಡಿಸಲು ಅವಕಾಶ ನೀಡುತ್ತಿದ್ದಂತೆ, ಆಡಳಿತ ಪಕ್ಷದ ಶಾಸಕ ಪ್ರದೀಪ್ ಈಶ್ವರ್ ಅವರು ಅನುಮೋದಿಸಿದರು. ನಂತರವೂ ಚರ್ಚೆಗೆ ಅವಕಾಶ ನೀಡದ ಸ್ಪೀಕರ್ ಕ್ರಮಕ್ಕೆ ಸದನದ ಬಾವಿಗಿಳಿದು ಬಿಜೆಪಿ ಜೆಡಿಎಸ್ ಸದಸ್ಯರು ಪ್ರತಿಭಟನೆ ನಡೆಸಿದರು. ಈ ವೇಳೆ ಸರಕಾರದ ವಿರುದ್ಧ ಘೋಷಣೆ ಕೂಗಿದರು. ತಿಮ್ಮಾಪುರ ರಾಜೀನಾಮೆಗೆ ಒತ್ತಾಯಿಸಿ ಕಾಂಗ್ರೆಸ್ ಸರಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಲಂಚದ ಆಡಿಯೊ ಕುರಿತು ಲೋಕಯುಕ್ತಕ್ಕೆ ದೂರು ಕೊಟ್ಟ ಕೂಡಲೇ ಸಚಿವರ ರಾಜೀನಾಮೆ ಪಡೆಯಬೇಕಿತ್ತು. ಮುಖ್ಯಮಂತ್ರಿಗಳಿಗೆ ನೈತಿಕತೆ ಇದ್ದಿದ್ದರೆ ರಾಜೀನಾಮೆ ಪಡೆದು, ಸದನಕ್ಕೆ ಬರಬೇಕಿತ್ತು ಎಂದು ಒತ್ತಾಯಿಸಿದರು.

ನಮ್ಮ ಬಳಿ ಕಿಕ್ ಬ್ಯಾಕ್ ದಾಖಲೆ ಇವೆ

ಸುನೀಲ್ ಕುಮಾರ್ ಅವರ ಆರೋಪಕ್ಕೆ ಸಾಥ್ ಕೊಟ್ಟ ಪ್ರತಿಪಕ್ಷ ನಾಯಕ ಆರ್.ಅಶೋಕ ಕೇರಳ, ಅಸ್ಸಾಂ, ಚುನಾವಣೆಗೆ ದುಡ್ಡು ಕಳುಹಿಸ್ತಿರೋದು ನಿಜ, ನಮ್ಮ ಬಳಿ ಕಿಕ್ ಬ್ಯಾಕ್ ದಾಖಲೆ ಇವೆ. ಚರ್ಚೆಗೆ ಕೊಡಿ ಎಂದು ಆಗ್ರಹಿಸಿದರು. ಈಶ್ವರಪ್ಪನ ಮೇಲೆ ಆರೋಪ ಬಂದಾಗ ರಾಜೀನಾಮೆ ಕೇಳಿದ್ದರಲ್ಲ. ಇವಾಗ ಯಾಕೇ ರಾಜೀನಾಮೆ ಕೊಡುತ್ತಿಲ್ಲ, ಯಾಕೇ ಮುಖ್ಯಮಂತ್ರಿಗಳು ಸಚಿವ ಆರ್.ಬಿ ತಿಮ್ಮಾಪುರ್ ರಾಜೀನಾಮೆ ಪಡೆಯುತ್ತಿಲ್ಲಾ ಎಂದು ಆರ್.ಅಶೋಕ ಪ್ರಶ್ನಿಸಿದರು. ಅಲ್ಲದೆ, ನಮ್ಮ ಬಳಿ ಲಂಚದ ಆಡಿಯೋ ಪೆನ್ ಡ್ರೈವ್ ಇದೆ, ಎಲ್ಲವೂ ದಾಖಲೆ ಇದೆ, ಕೊಡುತ್ತೇವೆ, ಚರ್ಚೆಗೆ ಕೊಡಿ, ನಾನು ಇದರಲ್ಲಿ ಏನಾದರೂ ತಪ್ಪು ಮಾತಾಡಿದ್ರೆ, ನಮಗೆ ಶಿಕ್ಷೆ ಕೊಡಿ, ಆದರೆ ಲಂಚ ಕೇಳಿರೋ ಇಲಾಖೆಯ ಸಚಿವರ ರಾಜೀನಾಮೆ ಪಡೆಯಿರಿ ಎಂದು ಆಗ್ರಹಿಸಿದರು.



ಪಂಡಿತ್ ಸತೀಶ್ ಹಂಪಿಹೊಳಿ ಹಾಗೂ ವಿದುಷಿ ಪೂರ್ಣ ಆಚಾರ್ಯ ಅವರ ಪರಿಕಲ್ಪನೆಯ ಕಲಾ ಸ್ಪಂದನ ಕಾರ್ಯಕ್ರಮವನ್ನು ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ನಾಡೋಜ ಮನು ಬಳಿಗಾರ್ ಉದ್ಘಾಟಿಸಿದರು. ಈ ವೇಳೆ ಅನನ್ಯ ರಾಘವೇಂದ್ರ, ಕಥಕ್ ನೃತ್ಯಗಾರ್ತಿ ವಿದುಷಿ ನಂದಿನಿ ಮೆಹತಾ, ಶ್ರೀರಾಮದಾಸ್ ಆಚಾರ್ಯ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕಿಶೋರಾವಸ್ಥೆ ಬದಲಾವಣೆ ಅರಿವು ಅಗತ್ಯ

ವಾಯುಸೇನೆ ತಾಣದ ಶಾಲೆಯಲ್ಲಿ ವಿದ್ಯಾರ್ಥಿನಿಯರಿಗಾಗಿ ನಡೆದ ಕಿಶೋರಾವಸ್ಥೆಯ ಜಾಗೃತಿ ಕಾರ್ಯಕ್ರಮದಲ್ಲಿ ಡಾ.ಸುಜಾತ ಮಾತನಾಡಿದರು.

ಬೆಂಗಳೂರು: ಕಿಶೋರಾವಸ್ಥೆ ಜೀವನದ ಅತ್ಯಂತ ಮಹತ್ವದ ಹಂತವಾಗಿದ್ದು, ಈ ಅವಧಿಯಲ್ಲಿ ದೇಹ ಹಾಗೂ ಮನಸ್ಸಿನಲ್ಲಿ ಉಂಟಾಗುವ ಬದಲಾವಣೆಗಳು ಸಹಜವಾಗಿವೆ ಎಂದು ವಿದ್ಯಾರ್ಥಿನಿಯರು ತಿಳಿದುಕೊಳ್ಳಬೇಕು. ಹಾರ್ಮೋನ್ ಬದಲಾವಣೆಗಳಿಂದ ಉಂಟಾಗುವ ಸಮಸ್ಯೆಗಳ ಬಗ್ಗೆ ಭಯಪಡುವ ಅಗತ್ಯವಿಲ್ಲ. ಸರಿಯಾದ ಮಾಹಿತಿ ಮತ್ತು ಅರಿವು ಇದ್ದರೆ ಆರೋಗ್ಯಕರ ಜೀವನ ನಡೆಸಬಹುದು ಎಂದು ಡಾ.ಸುಜಾತ ತಿಳಿಸಿದರು.

ವಾಯುಸೇನೆ ತಾಣದ ಶಾಲೆಯಲ್ಲಿ ವಿದ್ಯಾರ್ಥಿನಿಯರಿಗಾಗಿ ಕಿಶೋರಾವಸ್ಥೆಯ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಋತುಚಕ್ರದ ಸಮಯದಲ್ಲಿ ಪಾಲಿಸಬೇಕಾದ ವೈಯಕ್ತಿಕ ಸ್ವಚ್ಛತೆ, ನೈರ್ಮಲ್ಯ ಮತ್ತು ಆರೋಗ್ಯ ಕಾಳಜಿಗಳ ಬಗ್ಗೆ ವಿದ್ಯಾರ್ಥಿನಿಯರಿಗೆ ಜಾಗೃತಿ ಇರಬೇಕು. ಜತೆಗೆ ಪೌಷ್ಟಿಕ ಆಹಾರ ಸೇವನೆ, ನಿಯಮಿತ ವ್ಯಾಯಾಮ ಹಾಗೂ ಆರೋಗ್ಯಕರ ಜೀವನಶೈಲಿಯ ಮಹತ್ವವನ್ನು ವಿದ್ಯಾರ್ಥಿನಿಯರು ತಿಳಿದುಕೊಳ್ಳಬೇಕು ಎಂದರು.

ಈ ವಯಸ್ಸಿನಲ್ಲಿ ಎದುರಾಗುವ ಒತ್ತಡ, ಆತಂಕ ಮತ್ತು ಭಾವನಾತ್ಮಕ ಏರುಪೇರುಗಳನ್ನು ಹೇಗೆ ಧನಾತ್ಮಕವಾಗಿ ಎದುರಿಸಬೇಕಾಗಿದೆ. ಆತ್ಮವಿಶ್ವಾಸ ಬೆಳೆಸಿಕೊಳ್ಳುವುದು, ಸ್ವಯಂ ಗೌರವ ಕಾಪಾಡಿಕೊ ಳ್ಳುವುದು ಹಾಗೂ ಸಮಸ್ಯೆಗಳನ್ನು ಮುಕ್ತವಾಗಿ ಹಂಚಿಕೊಳ್ಳುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದರು.

ಸಾಯಿ ಗೋಲ್ಡ್ ಪ್ಯಾಲೇಸ್‌ನ 8ನೇ ಶಾಖೆ ಉದ್ಘಾಟನೆ

ಟಿ.ಎ.ಶರವಣ ಮಾಲೀಕತ್ವದ ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್‌ನ 8ನೇ ಶಾಖೆಯನ್ನು ಶುಕ್ರವಾರ ಕನಕಪುರ ರಸ್ತೆಯ ರಘುವನಹಳ್ಳಿಯಲ್ಲಿ ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಉದ್ಘಾಟಿಸಿದರು ಈ ವೇಳೆ ಕೇಂದ್ರ ಸಚಿವೆ ಶೋಭಾಕರಂದ್ಲಾಜೆ, ನಟಿ ರುಕ್ಮಿಣಿ ವಸಂತ್ ಸೇರಿ ಹಿರಿತೆರೆ, ಕಿರುತೆರೆ ಕಲಾವಿದರು ಪಾಲ್ಗೊಂಡಿದ್ದರು.

ಬೆಂಗಳೂರು: ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್ ಎಂಟನೇ ಶಾಖೆಯನ್ನು ಶುಕ್ರವಾರ ಕನಕಪುರ ರಸ್ತೆಯ ರಘುವನಹಳ್ಳಿಯಲ್ಲಿ ಕೇಂದ್ರ ಸಚಿವರಾದ ಎಚ್.ಡಿ ಕುಮಾರಸ್ವಾಮಿ, ಶೋಭ ಕರಾಂದ್ಲಾಜೆ, ನಟಿ ರುಕ್ಮಿಣಿ ವಸಂತ್, ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್ ಮಾಲೀಕ ಟಿ.ಎ.ಶರವಣ ಅವರಿಂದ ಉದ್ಘಾಟನೆ ಮಾಡಲಾಯಿತು.

ಈ ವೇಳೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮಾತನಾಡಿ, ಸಾಯಿಬಾಬ ಪರಮ ಭಕ್ತರಾದ ಶರವಣ ಅವರು ಸಾಯಿ ಗೋಲ್ಡ್ ಪ್ಯಾಲೇಸ್ ಸ್ಥಾಪನೆ ಮಾಡಿದ್ದಾರೆ. ಜನರಿಗೆ ಅನುಕೂಲವಾಗಿ, ಗ್ರಾಹಕರಿಗೆ ಉತ್ತಮ ಚಿನ್ನಾಭರಣ ಲಭಿಸಬೇಕು. ಬೆಂಗಳೂರಿನ ಪ್ರತಿಷ್ಠಿತ ಬಡಾವಣೆಗಳಲ್ಲಿ 7 ಮಳಿಗೆ ಆರಂಭಿಸಿದ್ದಾರೆ. ಈಗ 8ನೇ ಮಳಿಗೆ ಕನಕಪುರ ರಸ್ತೆಯಲ್ಲಿ ಪ್ರಾರಂಭವಾ ಗಿದೆ. ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್‌ನಲ್ಲಿ 500ಕ್ಕೂ ಹೆಚ್ಚು ನೌಕರರು ಕಾರ್ಯನಿರ್ವಹಿಸುತ್ತಿದ್ದು, ಅವರ ಕುಟುಂಬಗಳಿಗೆ ಆಸರೆಯಾಗಿದ್ದಾರೆ ಎಂದರು.

8ನೇ ಮಳಿಗೆ ಪ್ರಯುಕ್ತ ವಿಶೇಷ ಆಫರ್

10 ಗ್ರಾಂ ಚಿನ್ನ ಹಾಗೂ 1 ಕೆ.ಜಿ.ಬೆಳ್ಳಿ ಖರೀದಿಯಲ್ಲಿ ಐದು ಸಾವಿರ ಡಿಸ್ಕೌಂಟ್ ನೀಡಲಾಗುತ್ತಿದೆ. ಹಾಗೇ ಉಳಿತಾಯ ಹೂಡಿಕೆ ಮಾಡದವರಿಗೆ ಮೇಕಿಂಗ್ ಚಾರ್ಜ್ ಇರುವುದಿಲ್ಲ. 1 ಕ್ಯಾರೇಟ್ ಡೈಮಂಡ್ ಖರೀದಿಯಲ್ಲಿ ಹತ್ತುಸಾವಿರ ಡಿಸ್ಕೌಂಟ್ ಇರುತ್ತದೆ ಇ ಆಫರ್ ಫೆಬ್ರುವರಿ 10 ರವರಗೆ ಮಾತ್ರ ಇರುತ್ತದೆ ಎಂದು ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್ ಮಾಲೀಕ ಟಿ.ಎ.ಶರವಣ ತಿಳಿಸಿದರು.

ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್ ಮಾಲೀಕ ಟಿ.ಎ.ಶರವಣ ಮಾತನಾಡಿ, ಬೆಂಗಳೂರಿನಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆ ಶಾಪಿಂಗ್ ಮಾಡಲು ಸಂಚಾರ ದಟ್ಟಣೆಯಿಂದ ಒಂದು ದಿನ ವ್ಯರ್ಥವಾಗುತ್ತದೆ. ಜನರ ಅನುಕೂಲಕ್ಕಾಗಿ 8ನೇ ಶಾಖೆ ಕನಕಪುರ ರಸ್ತೆಯಲ್ಲಿ ಮಾಡಲಾಗಿದೆ ಇದರಿಂದ ಮಂಡ್ಯ, ಚನ್ನಪಟ್ಟಣ, ರಾಮನಗರ ಜನತೆಗೆ ಬಹಳ ಹತ್ತಿರವಾಗುತ್ತದೆ. ಚಿನ್ನದ ಬೆಲೆ ದಿನದಿಂದ ದಿನಕ್ಕೆ ಏರುತ್ತಿದೆ ಅವಶ್ಯಕತೆ ತಕ್ಕಂತೆ ಚಿನ್ನ ಖರೀದಿಸಿ ಎಂದರು.

ಸಹಕಾರ ಬ್ಯಾಂಕ್‌ಗಳು ಉದ್ಯೋಗ ಸೃಷ್ಟಿಗೆ ಆದ್ಯತೆ ನೀಡಲಿ

ಶ್ರೀ ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ವತಿಯಿಂದ ಆಯೋಜಿಸಿದ್ದ ಶ್ರೀ ತ್ಯಾಗರಾಜರ ಮಹೋತ್ಸವ-2026 ಕಾರ್ಯಕ್ರಮದಲ್ಲಿ ಅಂಚೆ ಚೀಟಿಗಳು, ಮೈ ಸ್ಟಾಂಪ್ ಹಾಗೂ ವಿಶೇಷ ಪೋಸ್ಟಲ್ ಕವರ್ ಬಿಡುಗಡೆ ಮಾಡಲಾಯಿತು. ಈ ವೇಳೆ ಪ್ರವಾಸೋದ್ಯಮ ಸಚಿವ ಎಚ್. ಕೆ. ಪಾಟೀಲ್, ಬ್ಯಾಂಕ್ ಅಧ್ಯಕ್ಷ ವೆಂಕಟೇಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಬೆಂಗಳೂರು: ಶ್ರೀ ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ವತಿಯಿಂದ ಆಯೋಜಿಸಿದ್ದ ಶ್ರೀ ತ್ಯಾಗರಾಜರ ಮಹೋತ್ಸವ-2026 ಕಾರ್ಯಕ್ರಮದಲ್ಲಿ ಅಂಚೆ ಚೀಟಿಗಳು, ಮೈ ಸ್ಟಾಂಪ್ ಹಾಗೂ ವಿಶೇಷ ಪೋಸ್ಟಲ್ ಕವರ್ ಬಿಡುಗಡೆ ಮಾಡಲಾಯಿತು.

ಈ ವೇಳೆ ಪ್ರವಾಸೋದ್ಯಮ ಸಚಿವ ಎಚ್. ಕೆ. ಪಾಟೀಲ್ ಮಾತನಾಡಿ, ಸಹಕಾರ ಬ್ಯಾಂಕುಗಳು ಉದ್ಯೋಗ ಸೃಷ್ಟಿಗೆ ಪೂರಕವಾಗುವ ಸಾಲಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ. ಈ ನಿಟ್ಟಿನಲ್ಲಿ ಶ್ರೀ ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕ್ ವಿವಿಧ ನವೀನ ಯೋಜನೆಗಳೊಂದಿಗೆ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದು ಶ್ಲಾಘನೀಯ ಎಂದರು.

ಬಿಜೆಪಿಯ ಮುಖ್ಯ ವಕ್ತಾರ ಅಶ್ವತ್ಥನಾರಾಯಣ ಮಾತನಾಡಿ, ಸಹಕಾರ ಬ್ಯಾಂಕುಗಳು ಮಧ್ಯಮ ಹಾಗೂ ಕೆಳಮಧ್ಯಮ ವರ್ಗದ ಜನರಿಗೆ ಆರ್ಥಿಕ ಆಸರೆಯಾಗಿ ಕಾರ್ಯನಿರ್ವಹಿಸುತ್ತಿವೆ. ಬೆಂಗಳೂರಿನ ನಾಗರಿಕರಿಗೆ ಸಹಕಾರ ವಲಯದ ಹೌಸಿಂಗ್ ಸೊಸೈಟಿಗಳು ಅಭಿವೃದ್ಧಿಪಡಿಸಿರುವ ಸೈಟುಗಳ ಮೇಲೆ ಮನೆ ನಿರ್ಮಾಣ ಹಾಗೂ ಸೈಟು ಖರೀದಿಗೆ ನೀಡುತ್ತಿರುವ ಸಾಲಗಳು ಜನರಿಗೆ ಬಹಳ ಸಹಕಾರಿಯಾಗಿವೆ. ಸಹಕಾರ ಕ್ಷೇತ್ರ ಬಡವರ ಆಪತ್‌ಭಾಂಧವನಂತೆ ಕೆಲಸ ಮಾಡುತ್ತಿದೆ ಎಂದರು.

ಈ ಸಂದರ್ಭದಲ್ಲಿ ಅತ್ಯುತ್ತಮ ನಗರ ಕೋ-ಆಪರೇಟಿವ್ ಬ್ಯಾಂಕ್ ಪ್ರಶಸ್ತಿಯನ್ನು ಬೆಂಗಳೂರಿನ ವಿಜಯನಗರದಲ್ಲಿರುವ ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ಲಿ. ಗೆ ಪ್ರದಾನ ಮಾಡಲಾಯಿತು. ಅದೇ ರೀತಿ 2025-26 ಅವಧಿಯ ಅತ್ಯುತ್ತಮ ಸಿಬ್ಬಂದಿ ಪ್ರಶಸ್ತಿಯನ್ನು ಶ್ರೀ ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕ್ ಲಿ.ನ ಐಟಿ ವ್ಯವಸ್ಥಾಪಕ ಕೆ.ಎನ್. ದೊಡ್ಡಗೌಡ ಹಾಗೂ ತುಮಕೂರಿನ ವೀರಶೈವ ಕೋ-ಆಪರೇಟಿವ್ ಬ್ಯಾಂಕ್ ಲಿ.ಯ ವ್ಯವಸ್ಥಾಪಕ ಎಸ್. ಆಶಾ ಅವರಿಗೆ ಪ್ರದಾನ ಮಾಡಲಾಯಿತು.

ಶ್ರೀ ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡು ರಾಷ್ಟ್ರೀಕೃತ ಬ್ಯಾಂಕುಗಳಿಗೆ ಸಮಾನವಾಗಿ ಗ್ರಾಹಕರಿಗೂ ಸದಸ್ಯರಿಗೂ ಸೇವೆ ನೀಡುತ್ತಿದೆ. ಮಹಿಳೆಯರು ಹಾಗೂ ಸ್ವಯಂ ಉದ್ಯೋಗ ಮಾಡುವವರಿಗೆ ವಿಶೇಷ ಸಾಲವನ್ನು ನೀಡುವ ಯೋಜನೆಯನ್ನು ಬ್ಯಾಂಕ್ ಹೊಂದಿದೆ.
-ಡಾ.ಎಂ.ಆರ್.ವೆಂಕಟೇಶ್, ಬ್ಯಾಂಕ್ ಅಧ್ಯಕ್ಷ

ಸಮಾಚಾರ ಸಣ್ಣದಲ್ಲ

ಗುರುಪತ್ವಂತ್ ಸಿಂಗ್ ವಿರುದ್ಧ ಎಫ್ಐಆರ್

ದೆಹಲಿ: ಈ ಹಿಂದೆ ಹಲವು ಬಾರಿ ಭಾರತಕ್ಕೆ ಬೆದರಿಕೆ ಒಡ್ಡಿದ್ದ ಖಲಿಸ್ತಾನಿ ಹಾಗೂ ಸಿಖ್ ಫಾರ್ ಜಸ್ಟೀಸ್ ನಾಯಕ ಗುರುಪತ್ವಂತ್ ಸಿಂಗ್ ಪನ್ನುನ್ ಜನವರಿ 26ರಂದು ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ನಡೆಯಲಿರುವ ಗಣರಾಜ್ಯೋತ್ಸವದ ಮುನ್ನ ದಿನ ಅಶಾಂತಿ ಸೃಷ್ಟಿಸುವುದಾಗಿ ಬೆದರಿಕೆ ಹಾಕಿದ್ದಾನೆ. ಈ ಕುರಿತು ದೆಹಲಿ ಪೊಲೀಸರು ಶುಕ್ರವಾರ ಎಫ್ಐಆರ್ ದಾಖಲಿಸಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ ಪ್ರಸಾರವಾದ ವಿಡಿಯೊ ಮಾಹಿತಿಯನ್ನು ಆಧರಿಸಿ ಪ್ರಕರಣ ದಾಖಲಿಸಿರುವುದಾಗಿ ಪೊಲೀಸ್ ಮೂಲಗಳು ತಿಳಿಸಿವೆ. ಕ್ರಿಮಿನಲ್ ಪಿತೂರಿ, ಭಾರತದ ಸಾರ್ವಭೌಮತ್ವ, ಏಕತೆ ಮತ್ತು ಸಮಗ್ರತೆಗೆ ಅಪಾಯವನ್ನುಂಟು ಮಾಡುವ ಕೃತ್ಯಗಳು ಮತ್ತು ರಾಷ್ಟ್ರೀಯ ಭದ್ರತೆಗೆ ಬೆದರಿಕೆ ಒಡ್ಡುವ ಇತರ ಅಪರಾಧಗಳಿಗೆ ಸಂಬಂಧಿಸಿದಂತೆ ಗುರುಪತ್ವಂತ್ ಸಿಂಗ್ ಪನ್ನುನ್ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 196, 197, 152 ಮತ್ತು 61 ರ ಅಡಿಯಲ್ಲಿ ಎಫ್ಐಆರ್ ದಾಖಲಿಸಲಾಗಿದೆ.

ಭ್ರೂಣ ಹತ್ಯೆ ಮಾಹಿತಿಗೆ 1 ಲಕ್ಷ ರು. ಬಹುಮಾನ

ಬೆಂಗಳೂರು: ರಾಜ್ಯದಲ್ಲಿ ಭ್ರೂಣ ಹತ್ಯೆ ತಡೆಗಟ್ಟುವ ನಿಟ್ಟಿನಲ್ಲಿ ಸರಕಾರ ಮತ್ತೊಂದು ಮಹತ್ವದ ಘೋಷಣೆ ಮಾಡಿದೆ. ಭ್ರೂಣ ಹತ್ಯೆ ಬಗ್ಗೆ ಮಾಹಿತಿ ಕೊಡುವ ಸಾರ್ವಜನಿಕರಿಗೆ ನಗದು ಬಹುಮಾನ ಮೊತ್ತವನ್ನು 50 ಸಾವಿರ ರು.ನಿಂದ 1 ಲಕ್ಷ ರು.ಗೆ ಹೆಚ್ಚಿಸಿದೆ. ರಾಷ್ಟ್ರೀಯ ಹೆಣ್ಣುಮಕ್ಕಳ ದಿನಾಚರಣೆ ಅಂಗವಾಗಿ ಆರೋಗ್ಯ ಸೌಧದಲ್ಲಿ ಆಯೋಜಿಸಿದ್ದ ಕಾರ್ಯಕ್ರಮ ಉದ್ದೇಶಿಸಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿದರು. ಈ ವೇಳೆ ಹೆಣ್ಣು ಭ್ರೂಣ ಹತ್ಯೆ ತಡೆಗಟ್ಟುವ ನಿಟ್ಟಿನಲ್ಲಿ ಆರೋಗ್ಯ ಇಲಾಖೆ ಕಟ್ಟುನಿಟ್ಟಿನ ಕಾನೂನು ಕ್ರಮಗಳನ್ನು ಜಾರಿಗೆ ತಂದಿದೆ. ಹೆಣ್ಣು ಮಗು ತನ್ನ ಕುಟುಂಬ ಅಥವಾ ಸಮಾಜಕ್ಕೆ ಹೊರೆಯಲ್ಲ, ಅವಳು ಶಕ್ತಿ ಮತ್ತು ಚೈತನ್ಯದ ಮೂಲ ಎಂದಿದ್ದಾರೆ. ಹೆಣ್ಣು ಭ್ರೂಣ ಹತ್ಯೆ ತಡೆಗಟ್ಟುವ ನಿಟ್ಟಿನಲ್ಲಿ ಆರೋಗ್ಯ ಇಲಾಖೆ ಕಟ್ಟುನಿಟ್ಟಿನ ಕಾನೂನು ಕ್ರಮಗಳನ್ನು ಜಾರಿಗೆ ತಂದಿದೆ. ಹೆಣ್ಣು ಮಗು ತನ್ನ ಕುಟುಂಬ ಅಥವಾ ಸಮಾಜಕ್ಕೆ ಹೊರೆಯಲ್ಲ, ಅವಳು ಶಕ್ತಿ ಮತ್ತು ಚೈತನ್ಯದ ಮೂಲ ಎಂದಿದ್ದಾರೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಸುಮಾರು 60%ರಷ್ಟು ಉದ್ಯೋಗಿಗಳು ಮಹಿಳಾ ಉದ್ಯೋಗಿಗಳಾಗಿರುವುದು ಬಹಳ ಹೆಮ್ಮೆಯ ವಿಷಯ ಎಂದೂ ಹೇಳಿದರು.

1 ಲಕ್ಷ ಮೆಟ್ರಿಕ್ ಟನ್ ಕಡಲೆ ಖರೀದಿಗೆ ಒಪ್ಪಿಗೆ

ದೆಹಲಿ: ಕೇಂದ್ರ ಸರಕಾರವು ರಾಜ್ಯದ ಕಡಲೆ ಬೆಳೆಗಾರರ ಬೆಂಬಲಕ್ಕೆ ಬಂದಿದೆ. ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಹ್ಲಾದ್ ಜೋಶಿ ಅವರ ಮನವಿ ಮೇರೆಗೆ ರಾಜ್ಯ ದಿಂದ ಬೆಂಬಲ ಬೆಲೆಯಲ್ಲಿ 1 ಲಕ್ಷ ಮೆಟ್ರಿಕ್ ಟನ್ ಕಡಲೆ ಖರೀದಿಗೆ ಒಪ್ಪಿಕೊಂಡಿದೆ.ಬೆಂಬಲ ಬೆಲೆ ಯೋಜನೆಯಡಿ ಕನಿಷ್ಠ ಬೆಂಬಲ ಬೆಲೆ 5,875 ರು. ದರದಲ್ಲಿ ಒಟ್ಟು 10,1340 ಎಂಟಿ ಹಿಂಗಾರು ಹಂಗಾಮಿನ ಕಡಲೆ ಕಾಳು ಖರೀದಿಸಲು ಕೇಂದ್ರ ಸರಕಾರ ಅನುಮತಿ ನೀಡಿದೆ. ಈ ಬಗ್ಗೆ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು ಜೋಶಿ ಅವರಿಗೆ ಪತ್ರ ಬರೆದು ಮಾಹಿತಿ ನೀಡಿದ್ದಾರೆ. ಕರ್ನಾಟಕದ ಪ್ರಮುಖ ದ್ವಿದಳ ಧಾನ್ಯಗಳಲ್ಲಿ ಕಡ್ಲೆಯೂ ಒಂದಾ ಗಿದ್ದು, ಸುಮಾರು 9.24 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಉತ್ಪಾದನೆ ಹೊಂದಿದೆ. ಆದರೆ ಪ್ರಸ್ತುತ ಮಾರುಕಟ್ಟೆ ಬೆಲೆಗಿಂತ ತೀರಾ ಕಡಿಮೆ ಬೆಲೆಯಿಂದಾಗಿ ಕಡಲೆ ಬೆಳೆಗಾರರು ತೀವ್ರ ಸಂಕಷ್ಟ ಎದುರಿಸುತ್ತಿದ್ದಾರೆ. ಹಾಗಾಗಿ ಬೆಂಬಲ ಬೆಲೆಯಲ್ಲಿ ಖರೀದಿಗೆ ಕ್ರಮ ಕೈಗೊಳ್ಳುವಂತೆ ಸಚಿವ ಜೋಷಿ ಅವರು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಪತ್ರ ಬರೆದು ಗಮನ ಸೆಳೆದಿದ್ದರು.

ಏರ್ ಇಂಡಿಯಾಗೆ 15,000 ಕೋಟಿ ನಷ್ಟ

ಗಾಂಧೀನಗರ: ಗುಜರಾತ್‌ನ ಅಹಮದಾಬಾದ್‌ನಲ್ಲಿ ಸಂಭವಿಸಿದ್ದ ವಿಮಾನ ದುರಂತದ ಬಳಿಕ ಏರ್ ಇಂಡಿಯಾ ವಿಮಾನ ಸಂಸ್ಥೆಗೆ ಸುಮಾರು 15,000 ಕೋಟಿ ರು.ನಷ್ಟವಾಗಿದೆ ಎಂದು ವರದಿಯಾಗಿದೆ. ಸುದ್ದಿ ಮಾಧ್ಯಮವೊಂದು ಈ ಕುರಿತು ವರದಿ ಮಾಡಿದ್ದು, 2025ರ ಜೂ.12ರಂದು ಗುಜರಾತ್‌ನ ಅಹಮದಾಬಾದ್ ಏರ್‌ಪೋರ್ಟ್ ಬಳಿ ವಿಮಾನ ದುರಂತ ಸಂಭವಿಸಿತ್ತು. ಈ ಘಟನೆ ಬಳಿಕ ವಿಮಾನ ಸಂಸ್ಥೆಗೆ ಆರ್ಥಿಕ ಹಿನ್ನಡೆ ಕಂಡಿದೆ. ಅದಕ್ಕೂ ಮುನ್ನ ಭಾರತ-ಪಾಕ್ ನಡುವಿನ ಯುದ್ಧದ ಬಳಿಕ ಪಾಕ್ ವಾಯುವಲಯ ಬಂದ್ ಮಾಡಿದ್ದಕ್ಕಾಗಿ ಏರ್ ಇಂಡಿಯಾಗೆ ನಷ್ಟವಾಗಿತ್ತು. ಆ ನಂತರ ಅಹಮದಾಬಾದ್ ವಿಮಾನ ದುರಂತದ ಬಳಿಕ ಮತ್ತಷ್ಟು ಆರ್ಥಿಕವಾಗಿ ಕುಸಿತ ಕಂಡಿದೆ. ಕಳೆದ 3 ವರ್ಷಗಳಲ್ಲಿ ಒಟ್ಟು 32,210 ಕೋಟಿ ರು. ನಷ್ಟ ಅನುಭವಿಸಿದೆ.

{ ಮಮತಾ ಬ್ಯಾನರ್ಜಿ } ಪಶ್ಚಿಮ ಬಂಗಾಳ ಸಿಎಂ

ಸದ್ಯ ನಡೆಯುತ್ತಿರುವ ಎಸ್ಐಆರ್ ಪ್ರಕ್ರಿಯೆಯ ಬಗ್ಗೆ ಆತಂಕದಿಂದಾಗಿ ಪಶ್ಚಿಮ ಬಂಗಾಳದಲ್ಲಿ ಪ್ರತಿದಿನ ಮೂರರಿಂದ ನಾಲ್ಕು ಜನರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಚುನಾವಣಾ ಆಯೋಗ ಮತ್ತು ಕೇಂದ್ರ ಸರಕಾರವು ಈ ಸಾವುಗಳಿಗೆ ನೈತಿಕ ಹೊಣೆ ಹೊರಬೇಕು. ಬಿಜೆಪಿಯು ಬಂಗಾಳದ ವಿರುದ್ಧ ಸದಾ ಪಿತೂರಿ ನಡೆಸುತ್ತಿದೆ.

ನವೀಕರಿಸಬಹುದಾದ ಇಂಧನಗಳ ಘಟಕ ಸ್ಥಾಪನೆಗೆ ಸ್ವಯಂಚಾಲಿತ ಭೂ ಪರಿವರ್ತನೆ ತಂತ್ರಾಂಶಕ್ಕೆ ಸಚಿವ ಕಂದಾಯ ಕೃಷ್ಣಬೈರೇಗೌಡ ಚಾಲನೆ

ಹೂಡಿಕೆದಾರರಿಗೆ ಅನುಕೂಲ, ಮಧ್ಯವರ್ತಿಗಳಿಗೆ ಕಡಿವಾಣ

ಬೆಂಗಳೂರು: ನವೀಕರಿಸಬಹುದಾದ ಇಂಧನಗಳ ಮೂಲ ಅಭಿವೃದ್ಧಿ ವಿಚಾರದಲ್ಲಿ ಮಧ್ಯವರ್ತಿಗಳ ಹಾವಳಿಗೆ ಕಡಿವಾಣ ಹಾಕಿ, ನೀತಿ-ನಿಯಮಗಳನ್ನು ಸರಳಗೊಳಿಸುವ ಮೂಲಕ ನೈಜ ಬಂಡವಾಳ ಹೂಡಿಕೆದಾರರಿಗೆ ಅನುಕೂಲ ಮಾಡಿಕೊಡುವುದೇ ನಮ್ಮ ಗುರಿ ಎಂದು ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಶುಕ್ರವಾರ ವಿಕಾಸಸೌಧದಲ್ಲಿ ನಡೆದ ಕಾರ್ಯಕ್ರಮದಲ್ಲಿ ನವೀಕರಿಸಬಹುದಾದ ಇಂಧನಗಳ ಘಟಕ ಸ್ಥಾಪನೆಗೆ ಸಂಬಂಧಿಸಿದ ಭೂಮಿ ಸ್ವಯಂಚಾಲಿತವಾಗಿಯೇ ಭೂ ಪರಿವರ್ತನೆಗೊಳ್ಳುವ ನೂತನ ತಂತ್ರಾಂಶಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಪ್ರಸ್ತುತ ಜಗತ್ತಿನಲ್ಲಿ ಅತೀ ಹೆಚ್ಚು ಚರ್ಚೆಯಾಗುತ್ತಿರುವ ವಿಚಾರ ಇಂಧನ ಭದ್ರತೆ. ಇಂಧನ ಭದ್ರತೆ ಇಲ್ಲದ ಯಾವ ದೇಶವೂ ಅಭಿವೃದ್ಧಿಯ ಪಥದಲ್ಲಿ ನಡೆಯುವುದು, ಆರ್ಥಿಕವಾಗಿ ಸಬಲರಾಗುವುದು ಅಸಾಧ್ಯ. ತಾಂತ್ರಿಕತೆ, ಬೌದ್ಧಿಕ ಶಕ್ತಿ ಆಧಾರಿತ ಆರ್ಥಿಕತೆ ಸಹ ವಿದ್ಯುತ್ ಸೇರಿದಂತೆ ನಾನಾ ಇಂಧನ ಮೂಲಗಳ ಮೇಲೆಯೇ ಅವಲಂಭಿತವಾಗಿವೆ. ನಮ್ಮ ದೇಶದಲ್ಲಿ ಕಡುಬಡವರೂ ಸಹ ಬಡತನದಿಂದ ವಿಮುಕ್ತಿ ಹೊಂದಲು, ನೀರಿನ ಭದ್ರತೆಯಂತೆಯೇ ಇಂಧನ ಭದ್ರತೆಯೂ ಮುಖ್ಯವಾಗಿದೆ ಎಂದರು.

ಕರ್ನಾಟಕ ಆರಂಭದಿಂದಲೂ ನವೀಕರಿಸಬಹುದಾದ ಇಂಧನಗಳ ಘಟಕ ಸ್ಥಾಪನೆಯಲ್ಲಿ ಮುಂಚೂಣಿಯಲ್ಲಿದೆ. ಆದರೂ ಈ ಘಟಕಗಳ ಸ್ಥಾಪನೆಗೆ ಈ ಹಿಂದೆ ಭೂ ಪರಿವರ್ತನೆ ಕಡ್ಡಾಯವಾಗಿತ್ತು. ಭೂ ಪರಿವರ್ತನೆಗೆ ಕನಿಷ್ಠ 6 ತಿಂಗಳು ಸಮಯ ತೆಗೆದುಕೊಳ್ಳುತ್ತಿತ್ತು. ಇದರಿಂದ ಮಧ್ಯವರ್ತಿಗಳು ಲಾಭ ಪಡೆಯುತ್ತಿದ್ದರು, ಭ್ರಷ್ಟಾಚಾರ ಎಲ್ಲೆ ಮೀರಿತ್ತು. ಇದರಿಂದ ಅಧಿಕಾರಿಗಳು ಲಾಭ ಪಡೆದರೋ ಅಥವಾ ಮಧ್ಯವರ್ತಿಗಳು ಲಾಭ ಪಡೆದರೋ ಗೊತ್ತಿಲ್ಲ. ಆದರೆ ಸರಕಾರಕ್ಕೆ ಮಾತ್ರ ಕೆಟ್ಟ ಹೆಸರು ಕಟ್ಟಿಟ್ಟ ಬುತ್ತಿಯಾಗಿತ್ತು. ಆದ್ದರಿಂದ ಮಧ್ಯವರ್ತಿಗಳ ಹಾವಳಿಗೆ ಕಡಿವಾಣ ಹಾಕಿ, ನೈಜ ಬಂಡವಾಳ ಹೂಡಿಕೆದಾರರಿಗೆ ಅನುಕೂಲ ಮಾಡಿಕೊಡಬೇಕು ಎಂಬ ಉದ್ದೇಶದಿಂದಲೇ ಭೂ ಪರಿವರ್ತನೆಯನ್ನು ಸ್ವಯಂ ಚಾಲಿತಗೊಳಿಸುವ ನೂತನ ತಂತ್ರಾಂಶಕ್ಕೆ ಇಂದು ಚಾಲನೆ ನೀಡಲಾಗಿದೆ. ಇದರಿಂದ ಈ ಉದ್ಯಮಕ್ಕೆ ಮತ್ತಷ್ಟು ಹೆಚ್ಚಿನ ಬಂಡವಾಳ ಹರಿದುಬರುವ ಭರವಸೆ ಇದೆ. ಈ ತಂತ್ರಾಂಶ ಇಡೀ ದೇಶದಲ್ಲೇ ಮಾದರಿ ವ್ಯವಸ್ಥೆ ಉದಾಹರಣೆಯಾಗಲಿದೆ ಎಂದರು.

ಕಾರ್ಯಕ್ರಮದಲ್ಲಿ ನವಿಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಟಿ.ಡಿ. ರಾಜೇಗೌಡ, ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗಳಾದ ಗೌರವ್ ಗುಪ್ತಾ, ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಗಳಾದ ರಾಜೇಂದ್ರ ಕುಮಾರ್ ಕಟಾರಿಯಾ, ಕಂದಾಯ ಆಯುಕ್ತರಾದ ಮೀನಾ ನಾಗರಾಜ್ ಹಾಗೂ ನವೀಕರಿಸಬಹುದಾದ ಇಂಧನ ಉದ್ಯಮಕ್ಕೆ ಸಂಬಂಧಿಸಿದ ಹಲವು ಹೂಡಿಕೆದಾರರು ಉಪಸ್ಥಿತರಿದ್ದರು.

ಸ್ವಯಂಚಾಲಿತವಾಗಿಯೇ ಭೂ ಪರಿವರ್ತನೆಗೊಳ್ಳುವ ನೂತನ ತಂತ್ರಾಂಶಕ್ಕೆ ಕೃಷ್ಣಬೈರೇಗೌಡ ಚಾಲನೆ ಚಾಲನೆ ನೀಡಿದರು.

40ರಿಂದ 50 ಗಿಗಾವ್ಯಾಟ್ ಉತ್ಪಾದಿಸುವ ಗುರಿ

ದೇಶಾದ್ಯಂತ ನವೀಕರಿಸಬಹುದಾದ ಇಂಧನ ಘಟಕಗಳಿಂದ 500 ಗಿಗಾವ್ಯಾಟ್ ವಿದ್ಯುತ್ ಉತ್ಪಾದಿಸುವ ಗುರಿ ಇದ್ದು, 300 ಗಿಗಾ ವ್ಯಾಟ್ ಗಿಂತ ಹೆಚ್ಚು ಉತ್ಪಾದನೆ ಸಾಧ್ಯವಾಗುತ್ತಿಲ್ಲ. ಈ ಪೈಕಿ ಕರ್ನಾಟಕವೇ ಶೇ.12ರಿಂದ ಶೇ.13ರಷ್ಟು ವಿದ್ಯುತ್ ಪೂರೈಸುತ್ತಿದೆ. ಉಳಿದ 200 ಗಿಗಾ ವ್ಯಾಟ್ ವಿದ್ಯುತ್ ಉತ್ಪಾದನೆಗೆ ದೇಶಾದ್ಯಂತ ಕನಿಷ್ಟ 8 ಲಕ್ಷ ಎಕರೆ ಭೂಮಿ ಬೇಕು. ಈ ಪೈಕಿ 40ರಿಂದ 50 ಗಿಗಾವ್ಯಾಟ್ ವಿದ್ಯುತ್ ಅನ್ನು ರಾಜ್ಯದಲ್ಲೇ ಉತ್ಪಾದಿಸುವ ಗುರಿ ಹೊಂದಿದ್ದು, ನೂತನ ಘಟಕಗಳ ಸ್ಥಾಪನೆಗೆ ಕನಿಷ್ಟ 1 ಲಕ್ಷ ಎಕರೆ ಭೂಮಿ ಬೇಕಾಗಬಹುದು ಎಂದು ಸಚಿವ ಕೃಷ್ಣಬೈರೇಗೌಡ ಹೇಳಿದರು.

ನವೀಕರಿಸಬಹುದಾದ ಮೂಲಗಳಿಂದ ಗುಜರಾತ್ ಹಾಗೂ ರಾಜಸ್ಥಾನ ರಾಜ್ಯಗಳು ಹೆಚ್ಚು ಇಂಧನ ಉತ್ಪಾದಿಸುತ್ತದೆ ಎನ್ನಲಾಗುತ್ತದೆ. ಆದರೆ ಈ ವಿಚಾರ ಸಂಪೂರ್ಣ ಸತ್ಯವಲ್ಲ. ಏಕೆಂದರೆ ಅವರಿಗೂ ನಮಗೂ ಸಾಕಷ್ಟು ವ್ಯತ್ಯಾಸವಿದೆ. ಕರ್ನಾಟಕದಲ್ಲಿ 1.20 ಕೋಟಿ ಹೆಕ್ಟೇರ್ ಜಮೀನಿನ ಪೈಕಿ ಪ್ರತಿ ಇಂಚು ಜಮೀನು ಸಹ ಬಳಸಬಹುದಾದ ಹಾಗೂ ಕೃಷಿಗೆ ಯೋಗ್ಯವಾದ ಭೂಮಿ. ಆದರೆ, ಗುಜರಾತ್ ಹಾಗೂ ರಾಜಸ್ಥಾನ್ ನಲ್ಲಿ ಶೇ.20 ರಿಂದ ಶೇ.25ರಷ್ಟು ಭೂಮಿ ಕೃಷಿಗೆ ಯೋಗ್ಯವಲ್ಲ. ಲಕ್ಷಾಂತರ ಎಕರೆ ಜಮೀನಿನಲ್ಲಿ ಜನ ಬದುಕುವುದೂ ಅಸಾಧ್ಯ.

–**ಕೃಷ್ಣಬೈರೇಗೌಡ,** ಕಂದಾಯ ಸಚಿವ

ಬಾಂಗ್ಲಾ ಚುನಾವಣೆ ನ್ಯಾಯಸಮ್ಮತ ಆಗದು

ದೆಹಲಿ: ಬಾಂಗ್ಲಾದೇಶ ಇಂದು ಪ್ರಪಾತದ ಅಂಚಿನಲ್ಲಿದೆ. ಹಾಗಾಗಿ ಜರ್ಜರಿತ ಮತ್ತು ರಕ್ತಸ್ರಾವವಾಗುತ್ತಿರುವ ರಾಷ್ಟ್ರದಲ್ಲಿ ಮುಂದಿನ ಚುನಾವಣೆ ನ್ಯಾಯಸಮ್ಮತವಾಗಿ ನಡೆಯುವುದಿಲ್ಲ ಎಂದು ಪದಚ್ಯುತ ಬಾಂಗ್ಲಾ ಪ್ರಧಾನಿ ಶೇಕ್ ಹಸೀನಾ ಭಾರತದ ರಾಜಧಾನಿಯಲ್ಲಿ ಪ್ರೆಸ್‌ಕ್ಲಬ್‌ಗೆ ಪ್ರಸಾರ ಮಾಡಿದ ಆಡಿಯೋ ಸಂದೇಶದಲ್ಲಿ ಹೇಳಿದ್ದಾರೆ.

ನವೆಂಬರ್‌ನಲ್ಲಿ ಢಾಕಾ ನ್ಯಾಯಾಲಯ ಹಸೀನಾ ಅವರನ್ನು ಪ್ರಚೋದನೆ, ಕೊಲ್ಲಲು ಆದೇಶ ಮತ್ತು ದೌರ್ಜನ್ಯಗಳನ್ನು ತಡೆಯಲು ನಿಷ್ಕ್ರಿಯತೆಗಾಗಿ ತಪ್ಪಿತಸ್ಥರೆಂದು ಘೋಷಿಸಿ ಮರಣದಂಡನೆ ಶಿಕ್ಷೆ ವಿಧಿಸಲಾಗಿದೆ. ಒಂದು ಕಾಲದಲ್ಲಿ ದೇಶದ ಅತ್ಯಂತ ಜನಪ್ರಿಯ ಪಕ್ಷವಾಗಿದ್ದ ಅವರ ಹಿಂದಿನ ಆಡಳಿತ ಅವಾಮಿ ಲೀಗ್‌ನ ಚಟುವಟಿಕೆಗಳನ್ನು ನಿಷೇಧಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನಸೌಧದ ಪೂರ್ವ ದಿಕ್ಕಿನಲ್ಲಿ ಮರುಪ್ರತಿಷ್ಠಾಪನೆ ಮಾಡಿರುವ ನೇತಾಜಿ ಸುಭಾಷ್ ಚಂದ್ರ ಬೋಸ್‌ರವರ ಪ್ರತಿಮೆಯನ್ನು ಲೋಕಾರ್ಪಣೆಗೊಳಿಸಿ, ಬೋಸ್ ಅವರ ಜನ್ಮ ದಿನದ ಅಂಗವಾಗಿ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ವಂದಿಸಿದರು. ಶಾಸಕರಾದ ರಿಜ್ವಾನ್ ಅರ್ಷದ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್ ಸೇರಿ ಹಲವು ಗಣ್ಯರು ಉಪಸ್ಥಿತರಿದ್ದರು.

ಇನ್ಫೋಸಿಸ್‌ನಿಂದ ಶೀಘ್ರ 20,000 ನೇಮಕಾತಿ

ಬೆಂಗಳೂರು: ಭಾರತದ ಐಟಿ ದಿಗ್ಗಜ ಸಂಸ್ಥೆ ಇನ್ಫೋಸಿಸ್ ಸಂಸ್ಥೆಯು 2027ನೇ ಹಣಕಾಸು ವರ್ಷದಲ್ಲಿ 20 ಸಾವಿರ ಹೊಸ ಪದವೀಧರರನ್ನು ನೇಮಕ ಮಾಡಿಕೊಳ್ಳುವುದಾಗಿ ಸಿಇಒ ಸಲೀಲ್ ಪರೇಖ್ ತಿಳಿಸಿದ್ದಾರೆ.

ಸ್ವಿಟ್ಜರ್‌ಲ್ಯಾಂಡ್‌ನ ದಾವೋಸ್‌ನಲ್ಲಿ ನಡೆದ ವಿಶ್ವ ಆರ್ಥಿಕ ವೇದಿಕೆಯ ವಾರ್ಷಿಕ ಸಭೆಯಲ್ಲಿ ಮಾತನಾಡಿದ ಸಲೀಲ್ ಪಾರೇಖ್, 2026 ಏಪ್ರಿಲ್ 1ರಿಂದ 2027 ಮಾರ್ಚ್ 31ರ ವರೆಗಿನ ಇನ್ಫೋಸಿಸ್ ವಿಶೇಷ ಡ್ರೈವ್ ನಡೆಸುವ ಮೂಲಕ 20,000 ಹೊಸಬರನ್ನು ನೇಮಿಸಿಕೊಳ್ಳಲಿದೆ ಎಂದು ಘೋಷಿಸಿದ್ದಾರೆ. ಇನ್ಫೋಸಿಸ್ ಪ್ರಸಕ್ತ ಸಾಲಿನ ಮೊದಲ ಮೂರು ತ್ರೈಮಾಸಿಕಗಳಲ್ಲಿ 18,000 ಪದವೀಧರರನ್ನು ನೇಮಿಸಿಕೊಂಡಿದೆ. ಕಳೆದ ತ್ರೈಮಾಸಿಕದಲ್ಲಿ ಒಟ್ಟು ಉದ್ಯೋಗಿಗಳ ಸಂಖ್ಯೆಯಲ್ಲಿ 5,000ಕ್ಕೂ ಹೆಚ್ಚು ಹೆಚ್ಚಳವಾಗಿದೆ. ಪ್ರಸಕ್ತ ಆರ್ಥಿಕ ವರ್ಷದ ಅಂತ್ಯದ ವೇಳೆಗೆ ಒಟ್ಟು 20,000 ನೇಮಕಾತಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ ಎಂದು ಅವರು ತಿಳಿಸಿದ್ದಾರೆ. ಎಐಯಿಂದ ಉದ್ಯೋಗ ಸೃಷ್ಟಿ: ಕೃತಕ ಬುದ್ಧಿಮತ್ತೆ ಅಥವಾ ಎಐ ತಂತ್ರಜ್ಞಾನದಿಂದ ಸಾಂಪ್ರದಾಯಿಕ ಉದ್ಯೋಗಗಳಿಗೆ ಸ್ವಲ್ಪ ಮಟ್ಟಿನ ಹಿನ್ನಡೆಯಾಗುತ್ತಿದ್ದರೂ, ಅದೇ ವಿಪುಲ ಅವಕಾಶಗಳನ್ನು ಸೃಷ್ಟಿಸುತ್ತಿದೆ ಎಂದು ಪರೇಖ್ ಅಭಿಪ್ರಾಯಪಟ್ಟಿದ್ದಾರೆ. ಕೆಲವು ಸಾಂಪ್ರದಾಯಿಕ ಕೆಲಸಗಳಲ್ಲಿ ಒತ್ತಡವಿದ್ದರೂ, ಎಐ ಕ್ಷೇತ್ರದಲ್ಲಿ ನಾವು ಹೆಚ್ಚಿನ ಬೆಳವಣಿಗೆ ಯನ್ನು ಕಾಣುತ್ತಿದ್ದೇವೆ. ಸಾಫ್ಟ್‌ವೇರ್ ಅಭಿವೃದ್ಧಿ, ಗ್ರಾಹಕ ಸೇವೆ ಮತ್ತು ಹಳೆಯ ಅಪ್ಲಿಕೇಶನ್‌ಗಳ ಆಧುನೀಕರಣದಲ್ಲಿ ಎಐ ಏಜೆಂಟ್‌ಗಳ ಬಳಕೆ ಹೆಚ್ಚಾಗುತ್ತಿದ್ದು, ಇದು ಹೊಸ ರೀತಿಯ ಉದ್ಯೋಗಗಳಿಗೆ ಬೇಡಿಕೆ ಸೃಷ್ಟಿಸಿದೆ ಎಂದು ಅವರು ಹೇಳಿದ್ದಾರೆ.

ಇದುವರೆಗೂ ಎಐ ತಂತ್ರಜ್ಞಾನವು ಕೇವಲ ಪರೀಕ್ಷಾರ್ಥ ಹಂತದಲ್ಲಿತ್ತು. ಆದರೆ ಈಗ ಅದು ಪೂರ್ಣ ಪ್ರಮಾಣದ ಪ್ರಾಜೆಕ್ಟ್‌ಗಳಲ್ಲಿ ಬಳಕೆಯಾಗುತ್ತಿದೆ. ಹಣಕಾಸು ವಲಯದಲ್ಲಿ ನಮ್ಮ ಟಾಪ್ 25 ಗ್ರಾಹಕರ ಪೈಕಿ 15 ಗ್ರಾಹಕರಿಗೆ ನಾವೇ ಎಐ ಪಾಲುದಾರರಾಗಿದ್ದೇವೆ. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಈ ಯೋಜನೆಗಳು ದೊಡ್ಡ ಮಟ್ಟದಲ್ಲಿ ಜಾರಿಯಾಗುತ್ತಿವೆ ಎಂದು ಪರೇಖ್ ವಿವರಿಸಿದ್ದಾರೆ.

ಎಐ ಕೌಶಲ್ಯ ಹೊಂದಿರುವ ಪ್ರತಿಭಾವಂತರಿಗೆ ಪ್ರಾಶಸ್ತ್ಯ

ಎಐ ಕೌಶಲ್ಯ ಹೊಂದಿರುವ ಪ್ರತಿಭಾವಂತರನ್ನು ಸೆಳೆಯಲು ಇನ್ಫೋಸಿಸ್ ಈಗಾಗಲೇ ಆರಂಭಿಕ ವೇತನವನ್ನು ಹೆಚ್ಚಿಸಿದೆ. ವಿಶೇಷ ಕೌಶಲ್ಯ ಬೇಡುವ ಹುದ್ದೆಗಳಿಗೆ ವಾರ್ಷಿಕ 21 ಲಕ್ಷ ರುಪಾಯಿವರೆಗೂ ಪ್ಯಾಕೇಜ್ ನೀಡಲಾಗುತ್ತಿದೆ ಎಂದು ವರದಿಗಳು ತಿಳಿಸಿವೆ. ಇಷ್ಟೇ ಅಲ್ಲದೆ ಅಮೆರಿಕದ ಜಿಡಿಪಿ ಬೆಳವಣಿಗೆ ಉತ್ತಮವಾಗಿರುವುದರಿಂದ ದೊಡ್ಡ ಕಂಪನಿಗಳು ತಂತ್ರಜ್ಞಾನದ ಮೇಲೆ ಹೂಡಿಕೆ ಮಾಡಲು ಮುಂದೆ ಬರುತ್ತಿವೆ ಎಂದು ಪಾರೇಖ್ ತಿಳಿಸಿದ್ದಾರೆ.

ಲಕ್ಕುಂಡಿ: ಉತ್ಖನನ ಸ್ಥಳಕ್ಕೆ ವಿದೇಶಿಗರ ಭೇಟಿ

ಗದಗ: ಲಕ್ಕುಂಡಿಯಲ್ಲಿ ನಿಧಿ ಸಿಕ್ಕ ಜಾಗ ಈಗ ಪ್ರವಾಸಿ ತಾಣವಾಗುತ್ತಿದೆ. ದಿನದಿಂದ ದಿನಕ್ಕೆ ಇಲ್ಲಿಗೆ ಭೇಟಿ ನೀಡಲು ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗುತ್ತಿದೆ. ಉತ್ಖನನ ನಡೆಯುತ್ತಿರುವ ಸ್ಥಳಕ್ಕೆ ಫ್ರಾನ್ಸ್ ಪ್ರವಾಸಿಗರ ತಂಡ ಶುಕ್ರವಾರ ಭೇಟಿ ನೀಡಿ ಪರಿಶೀಲನೆ ನಡೆಸಿತು. 15 ಜನರಿದ್ದ ವಿದೇಶಿ ಪ್ರವಾಸಿಗರ ತಂಡದಿಂದ ನಿಧಿ ಸಿಕ್ಕ ಜಾಗವನ್ನು ವೀಕ್ಷಣೆ ಮಾಡಿದೆ. ಉತ್ಖನನದ ಸ್ಥಳ ನೋಡಿ ವಿದೇಶಿ ಪ್ರವಾಸಿಗರು ಖುಷಿಪಟ್ಟಿದ್ದಾರೆ. ಇನ್ನೂ ಪ್ರಜ್ವಲ್ ಪ್ರಾಮಾಣಿಕತೆ ಕೇಳಿ ಮಿರಾಕಲ್ ಎಂದು ಬಣ್ಣಿಸಿದ್ದಾರೆ. ಪ್ರಾಮಾಣಿಕತೆಯಿಂದ ಸಿಕ್ಕ 470 ಗ್ರಾಂ ಚಿನ್ನವನ್ನು ಸರಕಾರಕ್ಕೆ ಹಸ್ತಾಂತರಿಸಿದ್ದ ರಿತ್ತಿ ಕುಟುಂಬಕ್ಕೆ ಲಕ್ಕುಂಡಿ ಗ್ರಾಮ ಪಂಚಾಯತ್ 30X40 ಸೈಟ್ ಘೋಷಣೆ ಮಾಡಿದೆ. ಪ್ರಜ್ವಲ್ ರಿತ್ತಿಗೆ ಉಚಿತ ಶಿಕ್ಷಣ, ಪ್ರಜ್ವಲ್ ತಾಯಿ ಗಂಗಮ್ಮಗೆ ಕೆಲಸ ಕೊಡುವುದಾಗಿ ಪಂಚಾಯತ್ ಭರವಸೆ ನೀಡಿದೆ. ಜ.21 ರಂದು ಉತ್ಖನನದ ವೇಳೆ ಹಸಿರು ಬಣ್ಣದ ನಾಗರಶಿಲೆ, ಸುಟ್ಟ ಮಣ್ಣಿನ ಬಿಲ್ಲೆ ಹಾಗೂ ಮೂಳೆಗಳು ಪತ್ತೆಯಾಗಿದ್ದವು. ಹಸಿರು ಬಣ್ಣದಲ್ಲಿ ನಾಗರ ಶಿಲೆ ಪತ್ತೆಯಾಗಿರುವುದು ಅಚ್ಚರಿ ಮೂಡಿಸಿತ್ತು. ಜ.22 ರಂದು ಆರತಿ ಬೆಳಗುವ ಆಕಾರದ ಲೋಹದ ವಸ್ತು ಪತ್ತೆಯಾಗಿತ್ತು.

ಲಕ್ಕುಂಡಿ ಉತ್ಖನನ ಸ್ಥಳಕ್ಕೆ ಫ್ರಾನ್ಸ್ ದೇಶದ 15 ಜನರ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿತು.

ಕಂದಾಯ ಇಲಾಖೆ ಸಿಬ್ಬಂದಿ ಲೋಕಾಯುಕ್ತ ಬಲೆಗೆ

ಕಲಬುರಗಿ: ಜಿಲ್ಲೆಯ ಜೇವರ್ಗಿಯಲ್ಲಿ ಲಂಚ ಪಡೆಯುವಾಗ ತಾಲೂಕಿನ ಕಂದಾಯ ಇಲಾಖೆ ಸಿಬ್ಬಂದಿ ಸತೀಶಕುಮಾರ್ ರಾಠೋಡ್ ಲೋಕಾಯುಕ್ತ ಬಲೆಗೆ ಬಿದ್ದಾನೆ. ಕಂದಾಯ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿ ರುವ ಸತೀಶ್ ಕುಮಾರ್ ರಾಠೋಡ್ ಫೋನ್ ಪೇ ಮೂಲಕ 10,000 ಲಂಚ ಪಡೆದಿರುವ ಹಿನ್ನೆಲೆಯಲ್ಲಿ ಲೋಕಾಯುಕ್ತ ಎಸ್ಪಿ ಸಿದ್ದರಾಜು ಅವರ ಮಾರ್ಗ ದರ್ಶನದಲ್ಲಿ ಲೋಕಾಯುಕ್ತ ಇನ್ಸ್ಪೆಕ್ಟರ್ ಅರುಣ್ ಕುಮಾರ್ ಅವರ ತಂಡ ಪಟ್ಟಣದ ಮಿನಿ ವಿಧಾನ ಸೌಧದ ಎದುರುಗಡೆ ಸತೀಶ್ ಕುಮಾರ್ ರಾಠೋಡ್ ವಶಕ್ಕೆ ಪಡೆದುಕೊಂಡಿದ್ದಾರೆ. ಬಂಧಿತ ಸತೀಶ್ ಕುಮಾರ್ ರಾಠೋಡನನ್ನು ಹೆಚ್ಚಿನ ವಿಚಾರಣೆಗಾಗಿ ಕಲಬುರಗಿಗೆ ಕರೆದೊಯ್ಯಲಾಗಿದ್ದು, ವಿಚಾರಣೆ ನಡೆಸಲಾಗುತ್ತಿದೆ ಎಂದು ತಿಳಿದು ಬಂದಿದೆ. ದಾಳಿಯಲ್ಲಿ ಸಿಬ್ಬಂದಿ ಮಾಜೀದ್, ಅಸ್ಲಾಂ ಕೊಡಚಿ, ಪ್ರಮೋದ್, ರಾಣೋಜಿ ಇದ್ದರು.

5 ಬಾರಿ ಸಂಚಾರ ನಿಯಮ ಉಲ್ಲಂಘನೆ: ಡಿಎಲ್ ರದ್ದು

ದೆಹಲಿ: ಸಂಚಾರ ನಿಯಮ ಉಲ್ಲಂಘನೆಯ ವಿಷಯದಲ್ಲಿ ಕೇಂದ್ರ ಸರಕಾರವು ಮೋಟಾರು ವಾಹನ ನಿಯಮಗಳನ್ನು ಬಿಗಿಗೊಳಿಸಿದ್ದು, ಒಂದು ವರ್ಷದೊಳಗೆ ಐದು ಅಥವಾ ಹೆಚ್ಚಿನ ಸಂಚಾರ ಉಲ್ಲಂಘನೆ ಮಾಡುವ ಚಾಲಕರಿಗೆ ಚಾಲನ ಪರವಾನಗಿಯನ್ನು ಅಮಾನತುಗೊಳಿಸಲಾಗುತ್ತದೆ ಎಂದು ರಸ್ತೆ ಸಾರಿಗೆ ಸಚಿವಾಲಯ ತಿಳಿಸಿದೆ.

ರಸ್ತೆ ಸಾರಿಗೆ ಸಚಿವಾಲಯವು ಮೋಟಾರು ವಾಹನ ನಿಯಮಗಳಿಗೆ ಹೊಸ ತಿದ್ದುಪಡಿ ಮಾಡಿದ ನಂತರ, ಒಂದು ವರ್ಷದೊಳಗೆ ಐದು ಅಥವಾ ಹೆಚ್ಚಿನ ಸಂಚಾರ ಉಲ್ಲಂಘನೆಗಳನ್ನು ಮಾಡುವ ಚಾಲಕರು ಮೂರು ತಿಂಗಳ ಚಾಲನಾ ನಿಷೇಧವನ್ನು ಎದುರಿಸಬೇಕಾಗುತ್ತದೆ.

ಹೊಸ ನಿಬಂಧನೆಯು ಭಾರತೀಯ ರಸ್ತೆಗಳಲ್ಲಿ ಪುನರಾವರ್ತಿತ ಅಪರಾಧಿಗಳನ್ನು ನಿಗ್ರಹಿಸಲು ಚಾಲನಾ ಪರವಾನಗಿಯನ್ನು ಅನರ್ಹಗೊಳಿಸಲು ಅಥವಾ ರದ್ದುಗೊಳಿಸಲು ಅಧಿಕಾರಿಗಳಿಗೆ ಅವಕಾಶವಿರುತ್ತದೆ.

ಈ ನಿಯಮವು ಜನವರಿ 1ರಿಂದ ಜಾರಿ ಮಾಡಲಾಗಿದ್ದು, ಒಂದು ವರ್ಷದೊಳಗೆ ಮಾಡಿದ ಅಪರಾಧಗಳಿಗೆ ಮಾತ್ರ ಅನ್ವಯಿಸುತ್ತದೆ ಎಂದು ಸಚಿವಾಲಯ ತಿಳಿಸಿದೆ.

ಪ್ರಾದೇಶಿಕ ಸಾರಿಗೆ ಕಚೇರಿ ಅಥವಾ ಜಿಲ್ಲಾ ಸಾರಿಗೆ ಕಚೇರಿ ಪರವಾನಗಿಯನ್ನು ಅಮಾನತುಗೊಳಿಸುವ ಬಗ್ಗೆ ನಿರ್ಧರಿಸುತ್ತದೆ. ಕ್ರಮ ಕೈಗೊಳ್ಳುವ ಮೊದಲು, ಪ್ರಾಧಿಕಾರವು ಪರವಾನಗಿ ಹೊಂದಿರುವವರಿಗೆ ಕೇಳಲು ಅವಕಾಶ ನೀಡಲಿದೆ.

ಅಡುಗೆ ಎಣ್ಣೆ ಆಮದು ಪೂರೈಕೆ ಕಡಿತ | 10 ಲೀ. ಸೂರ್ಯಕಾಂತಿ ಎಣ್ಣೆ ಬೆಲೆ 1600–1620 ರು. | ಪಾಮ್ ಎಣ್ಣೆ ಲೀ.ಗೆ 20 ರು. ಏರಿಕೆ

ಜನಸಾಮಾನ್ಯರಿಗೀಗ ಅಡುಗೆ ಎಣ್ಣೆ ಬೆಲೆ ಏರಿಕೆ ಬಿಸಿ

ಹೂವಪ್ಪ ಐ.ಹೆಚ್ ಬೆಂಗಳೂರು

ಒಂದೇ ವಾರದಲ್ಲಿ ವಿವಿಧ ಬ್ರ್ಯಾಂಡ್‌ಗಳ ಅಡುಗೆ ಎಣ್ಣೆ ದಿಢೀರ್ ಬೆಲೆ ಏರಿಕೆ ಕಂಡಿದೆ, ಹಾಗಾಗಿ ಜನಸಾಮಾನ್ಯರಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ. ಕಳೆದ ದಸರಾ, ದೀಪಾವಳಿ ಹಬ್ಬದ ಸೀಜನ್‌ನಲ್ಲಿ ಬೆಲೆ ಕಡಿಮೆ ಇತ್ತು. ಸೂರ್ಯಕಾಂತಿ ಎಣ್ಣೆ ಸಗಟು 10 ಲೀ. ಬಾಕ್ಸ್ ಒಂದಕ್ಕೆ 1400 ರು.ನಿಂದ 1410 ರು. ಹಾಗೂ ಪಾಮ್ ಆಯಿಲ್ 1130 ರು. ಇತ್ತು. ಆದರೆ ಈಗ ಸೂರ್ಯಕಾಂತಿ 1600–1620 ರು., ಪಾಮ್ ಎಣ್ಣೆ 1220 ರು. ಏರಿಕೆಯಾಗಿದೆ. ಅಂದರೆ ಈ ಹಿಂದಿನ ಬೆಲೆಗೆ ಹೋಲಿಸಿದರೆ ಸೂರ್ಯಕಾಂತಿ ಎಣ್ಣೆ ಲೀ.ಗೆ 20 ರು. ಏರಿಕೆಯಾಗಿದೆ. ಪಾಮ್ ಆಯಿಲ್, ಸೋಯಾ, ಕಡಲೆಕಾಯಿ, ರೈಸ್ ಬ್ರಾನ್ ಆಯಿಲ್, ಸಾಸಿವೆ ಎಣ್ಣೆ ತಲಾ 6–8 ರು. ಏರಿಕೆಯಾಗಿದೆ. ಚಿಲ್ಲರೆ ದರದಲ್ಲಿ 15–20 ರು.ನಷ್ಟು ಏರಿಕೆಯಾಗಿದೆ.

ಕಳೆದ ಸಾಲಿನಲ್ಲಿ ಮುಂಗಾರು ಎಣ್ಣೆಕಾಳು ಬೆಳೆ ಅತಿವೃಷ್ಟಿ ಮಳೆಯಿಂದಾಗಿ ಇಳುವರಿ ಶೇ.30ರಷ್ಟು ಕಡಿಮೆಯಾಗಿದೆ, ಜತೆಗೆ ದೇಶಿಯ ಅಡುಗೆ ಎಣ್ಣೆ ಉತ್ಪಾದನೆ ಪ್ರಸ್ತುತ ಬೇಡಿಕೆಗೆ ಸಾಕಾಗುವುದಿಲ್ಲ. ಹೀಗಾಗಿ ಶೇ.ಅಂದಾಜು 70ರಷ್ಟು ಆಮದು ಎಣ್ಣೆ ಮೇಲೆ ಅವಲಂಬನೆ ಆಗಿದೆ, ಇದು ಕೂಡಾ ಬೆಲೆ ಅಡುಗೆ ಎಣ್ಣೆ ಬೆಲೆ ಏರಿಕೆಗೆ ಕಾರಣವಾಗಿದೆ ಎನ್ನುತ್ತಾರೆ ಬೆಂಗಳೂರಿನ ಕನ್ನಿಕಾ ಆಯಿಲ್ ಮಿಲ್ಲಿನ ಮಾಲಕರಾದ ಶಂಕರ್.

ಉತ್ಪಾದನಾ ವೆಚ್ಚ ಏರಿಕೆ: ಮಲೇಷ್ಯಾದಂತಹ ದೇಶಗಳಲ್ಲಿ ಕಾರ್ಮಿಕರ ಹಾಗೂ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ಖಾದ್ಯ ತೈಲದ ಉತ್ಪಾದನಾ ವೆಚ್ಚ ಹೆಚ್ಚಳ ಮತ್ತು ರೂಪಾಯಿ ಮೌಲ್ಯ ಕುಸಿತ ಮುಖ್ಯ ಕಾರಣಗಳಾಗಿದ್ದು, ಇದರಿಂದಾಗಿ ಜಾಗತಿಕ ಮಾರುಕಟ್ಟೆಯಲ್ಲಿ ತಾಳೆ, ಸೂರ್ಯಕಾಂತಿ, ಸೋಯಾ ಎಣ್ಣೆಗಳ ಬೆಲೆ ಗಗನಕ್ಕೇರಿದೆ. ಆದರೆ ಕೇಂದ್ರದ ಸರಕಾರ ಸುಂಕ ಕಡಿತಗೊಳಿಸಿದರೆ ಇದರಿಂದ ವಿದೇಶಿ ಖಾದ್ಯ ಆಮದು ತೈಲ ಹೆಚ್ಚಾಳವಾದರೆ ಬೆಲೆ ಇಳಿಕೆಯಾಗುವ ಸಾಧ್ಯತೆಯೂ ಇದೆ ಎನ್ನುತ್ತಾರೆ ಖಾದ್ಯ ತೈಲ ಪೂರೈಕೆದಾರರು. ಈಗಾಲೇ ವಾಣಿಜ್ಯ ಎಲ್.ಪಿ.ಜಿ ದರ ಹೆಚ್ಚಿಸಲಾಗಿದೆ. ಇದೀಗ ಏಕಾಏಕಿ ಅಡುಗೆ ಎಣ್ಣೆ ಬೆಲೆ ಏರಿಕೆಯಾಗಿದೆ, ಹೀಗಾಗಿ ದರ ಏರಿಕೆಯು ಹೋಟೆಲ್ ಉದ್ಯಮದ ಮೇಲೂ ಪರಿಣಾಮ ಬೀರಿದೆ ಎನ್ನುತ್ತಾರೆ ಹೋಟೆಲ್ ಉದ್ಯಮಿಗಳು.

ಆಮದು ವಿವರ: ಭಾರತೀಯ ಖಾದ್ಯ ತೈಲ ಉತ್ಪಾದಕರ ಸಂಘದ ಮಾಹಿತಿಯ ಪ್ರಕಾರ, 2025–26ರ ವರ್ಷದ ಅಕ್ಟೋಬರ್–ನವೆಂಬರ್, ನವೆಂಬರ್–ಡಿಸೆಂಬರ್ ಅವಧಿಯಲ್ಲಿ ಭಾರತವು 25.13 ಲಕ್ಷ ಟನ್ ಲೀ.ಗಳಷ್ಟು ಆಹಾರ ಎಣ್ಣೆಯನ್ನು ಆಮದು ಮಾಡಿಕೊಂಡಿದೆ, ಇದು ಹಿಂದಿನ ವರ್ಷದ ಅದೇ ಅವಧಿಯ 28.43 ಲಕ್ಷ ಟನ್‌ಗಳೊಂದಿಗೆ ಹೋಲಿಸಿದರೆ ಕಡಿಮೆಯಾಗಿದೆ.

ಪಾಮ್ ಎಣ್ಣೆ ಆಮದು ಕಡಿಮೆಯಾದ ಕಾರಣ 2025–26ರ ವರ್ಷದ ಮೊದಲ ಎರಡು ತಿಂಗಳಲ್ಲಿ ಒಟ್ಟಾರೆ ಎಲ್ಲಾ ತರಹದ ಆಹಾರ ಎಣ್ಣೆ ಆಮದು ಅಂದಾಜು ಪ್ರಮಾಣವು ಶೇ.11.6ರಷ್ಟು ಕುಸಿತ ಕಂಡಿದೆ. ಮುಕ್ತ ಮಾರುಕಟ್ಟೆಯಲ್ಲಿ ಅಡುಗೆ ಎಣ್ಣೆ ಬೆಲೆ ಏರಿಕೆಗೆ ಇದೂ ಕಾರಣವಾಗಿದೆ.

ಸೂರ್ಯಕಾಂತಿ ಎಣ್ಣೆ ಆಮದು: 2025–26ರ ಮೊದಲ ಎರಡು ತಿಂಗಳಲ್ಲಿ ಸೂರ್ಯಕಾಂತಿ ಎಣ್ಣೆ ಆಮದು ಕಡಿಮೆಯಾಗಿದೆ. ಈ ಅವಧಿಯಲ್ಲಿ ಭಾರತವು ಅಂದಾಜು 4.92 ಲಕ್ಷ ಟನ್ ಸೂರ್ಯಕಾಂತಿ ಎಣ್ಣೆಯನ್ನು ಆಮದು ಮಾಡಿಕೊಂಡಿದ್ದು, ಹಿಂದಿನ ವರ್ಷ ಇದು 6.17 ಲಕ್ಷ ಟನ್ ಆಗಿತ್ತು.

ಸೋಯಾಬೀನ್ ಎಣ್ಣೆ ಆಮದು: ಅರ್ಜೆಂಟೀನಾದಿಂದ ಭಾರತವು 5.92 ಲಕ್ಷ ಟನ್ ಕಚ್ಚಾ ಸೋಯಾಬೀನ್ ಎಣ್ಣೆಯನ್ನು ಆಮದು ಮಾಡಿಕೊಂಡಿದೆ. ನಂತರ ಬ್ರೆಜಿಲ್‌ನಿಂದ 98,562 ಟನ್ ಹಾಗೂ ಚೀನಾದಿಂದ 1.05 ಲಕ್ಷ ಟನ್ ಆಮದು ಮಾಡಲಾಗಿದೆ. ರಷ್ಯಾ ದೇಶವು ನವೆಂಬರ್–ಡಿಸೆಂಬರ್ 2025–26ರ ಅವಧಿಯಲ್ಲಿ 2.66 ಲಕ್ಷ ಟನ್ ಕಚ್ಚಾ ಸೂರ್ಯಕಾಂತಿ ಎಣ್ಣೆಯನ್ನು ರಫ್ತು ಮಾಡಿದೆ. ಅರ್ಜೆಂಟೀನಾದಿಂದ 84,863 ಟನ್ ಹಾಗೂ ಉಕ್ರೇನ್‌ನಿಂದ 1.0 ಲಕ್ಷ ಟನ್ ಆಮದು ಮಾಡಲಾಗಿದೆ ಎಂದು ಹೇಳಲಾಗುತ್ತಿದೆ. ಸಾಸಿವೆ ಮತ್ತು ರಾಪ್ಸಿಡ್ ಬೆಳೆಗಳ ಅಡಿಯಲ್ಲಿ 89.36 ಲಕ್ಷ ಹೆಕ್ಟೇರ್ ಪ್ರದೇಶ ವರದಿಯಾಗಿದ್ದು, ಹಿಂದಿನ ವರ್ಷ ಇದು 86.57 ಲಕ್ಷ ಹೆಕ್ಟೇರ್ ಆಗಿತ್ತು.

ಅಡುಗೆ ಎಣ್ಣೆ ಎಪಿಎಂಸಿ ಸಗಟು ದರ 1 ಲೀ.

	ಹಿಂದಿನ ದರ	ಈಗಿನ ದರ
ಸೂರ್ಯಕಾಂತಿ ಎಣ್ಣೆ	140	160
ಕಡಲೆಕಾಯಿ ಎಣ್ಣೆ	210	220
ಪಾಮ್ ಆಯಿಲ್	116	122
ಸೋಯಾ	130	140
ರೈಸ್ ಆಯಿಲ್	136	140
ಸಾಸುವೆ ಎಣ್ಣೆ	175	180
ದೀಪದ ಎಣ್ಣೆ	126	130

ಜಾಗತಿಕ ಮಾರುಕಟ್ಟೆಯಲ್ಲಿ ಬೆಲೆ ಏರಿಕೆ ಹಾಗೂ ಖಾದ್ಯತೈಲ ಪೂರೈಕೆ ಕಡಿಮೆಯಾಗಿರುವುದರಿಂದ ಮುಕ್ತ ಮಾರುಕಟ್ಟೆಯಲ್ಲಿ ಬೆಲೆ ಹೆಚ್ಚಾಗಿದೆ.

–**ಡಿ.ಎಸ್. ಗೋವಿಂದರಾಜ್,** ಮಾಲೀಕರು, ರಾಧಾಕೃಷ್ಣ ಆಯಿಲ್ ಮಾಲೀಕರು, ಬೆಂಗಳೂರು,

ಅಕ್ಕಿ, ರಾಗಿ, ಗೋಧಿ ಬೇಳೆಕಾಳು ಹೀಗೆ ಎಲ್ಲಾ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗಿ ರುವಾಗ ಈಗ ಮತ್ತೆ ಅಡುಗೆ ಎಣ್ಣೆ ಲೀ.ಗೆ 18–20 ರು. ಏರಿಕೆಯಾದರೆ ನಮ್ಮಂತಹ ಬಡ ಮಧ್ಯಮ ವರ್ಗದವರ ಜನಜೀವನ ಮುಂದೆ ಹೇಗೆ ಎಂಬ ಚಿಂತೆಯಾಗಿದೆ.

–**ಸವಿತಾ ಪ್ರಕಾಶ್,** ಬೆಂಗಳೂರು

ಮಾನವನನ್ನು ಪ್ರಕೃತಿಯೊಂದಿಗೆ ಬೆಸೆವ ಸೂರ್ಯನಮಸ್ಕಾರ

• ಮಾಯಾ ಬಾಲಚಂದ್ರ, ಶ್ರೀನಿವಾಸಪುರ

'ಶರೀರಮಾದ್ಯಂ ಖಲು ಧರ್ಮ ಸಾಧನಂ', ಅಂದರೆ, 'ನಿಜ ಧರ್ಮ ಸಾಧನೆಗೆ ಶರೀರವೇ ಮೊದಲ ಸಾಧನ' ಎಂಬ ಅತ್ಯುನ್ನತ ಚಿಂತನೆಯೇ, ಪತಂಜಲಿ ಮುನಿಗಳ ಯೋಗಶಾಸ್ತ್ರದಲ್ಲಿ ಆಸನಾಭ್ಯಾಸಕ್ಕೆ ವಿಶಿಷ್ಟ ಸ್ಥಾನ ಕಲ್ಪಿಸಿದೆ. ಧರ್ಮ ಸಾಧನೆ ಎನ್ನುವುದು ಸೀಮಿತಾರ್ಥದ ಮತಾಚರಣೆಯಲ್ಲ, ಪ್ರಾಚೀನರಿಂದ ಉಲ್ಲೇಖಿತವಾದ ಆಚರಣೆಗಳ ಅಂಧಾನುಕರಣೆಯೂ ಅಲ್ಲ. ಪೂಜೆ, ಪ್ರಾರ್ಥನೆ, ಆರಾಧನೆಗೆ ಸೀಮಿತವಾದದ್ದೂ ಅಲ್ಲ. ಇದು ಜೀವನದ ಎಲ್ಲಾ ಆಯಾಮಗಳಲ್ಲಿ, ಎಲ್ಲಾ ಕ್ಷೇತ್ರಗಳಲ್ಲಿ, ಸರಿಯಾದ ಮಾರ್ಗಪಥಿಕರಾಗಿ, ನೈತಿಕವಾಗಿ ಬದುಕಿ, ಆಧ್ಯಾತ್ಮಿಕವಾಗಿ ಬೆಳೆದು, ದುರ್ಲಭವಾದ ನರಜನ್ಮವನ್ನು ಸಾರ್ಥಕಗೊಳಿಸಿಕೊಳ್ಳುವ ಒಂದು ಅನನ್ಯ ಪ್ರಕ್ರಿಯೆ. ಇಂಥ ಒಂದು ಸಮಗ್ರ ಪರಿಕಲ್ಪನೆಯನ್ನು ವಿಶ್ವದ ಬೇರೆ ಯಾವ ಪರಂಪರೆಗಳಲ್ಲೂ ಕಾಣೆವು. ಭಾರತೀಯ ಪರಂಪರೆಯು ಒಂದು ತಾತ್ವಿಕ ತಳಹದಿಯ ಮೇಲೆ ತನ್ನ ಧರ್ಮಾಚರಣೆಯನ್ನು ಜೀವಂತವಾಗಿ ಇಟ್ಟಿದೆ. ಇಲ್ಲಿ ಧರ್ಮವೆಂದರೆ ಸಂತೋಷದ ಪರಾಕಾಷ್ಠೆಯೇ. ಭೌತಿಕ ವಿಮೋಚನೆಯಂಥ ಮಾರ್ಗಸೂಚಿಯನ್ನು ಅನುಸರಿಸಿ ಪಡೆದ, ಅತ್ಯಂತ ಆನಂದದ ಸ್ಥಿತಿಯದು.

• ನೈಸರ್ಗಿಕವಾದುದೇ ಧರ್ಮ: ಧರ್ಮದ ವಿರುದ್ಧ ಅರ್ಥವೆಂದರೆ 'ಅಧರ್ಮ' ಅಥವಾ 'ಅನೈಸರ್ಗಿಕ'. ಧರ್ಮವೆಂದರೆ ನೈಸರ್ಗಿಕವಾದುದು. ನಿಸರ್ಗದೊಂದಿಗೆ ಹೆಣೆದುಕೊಳ್ಳುತ್ತಾ, ಗುರುತಿಸಿಕೊಳ್ಳುವಂಥದ್ದು ಎನ್ನುವುದು ಸೂಕ್ತ. ಸಾಧನೆಗಾಗಿ, ನಿಸರ್ಗ ಮಾರ್ಗವಾಗಿ ಸಾಗಲು, ನಿಸರ್ಗ ನಿರ್ಮಿತ ಶರೀರವೇ ವಾಹನ. ಈ ವಾಹನ ಸುಸ್ಥಿತಿಯಲ್ಲಿ ಇರಬೇಕಾದರೆ, ಯೋಗವೆಂಬ ಕಾಯಕಲ್ಪದ ಅವಶ್ಯಕತೆ ಇದೆ. 'ಅಪ್ರಾಪ್ತಸ್ಯ ಪ್ರಾಪಣಂ ಯೋಗಃ' ಅಂದರೆ, ಇಲ್ಲದ್ದನ್ನು ಪಡೆಯುವುದು ಯೋಗ ಎನ್ನುವ ಅರ್ಥದಲ್ಲಿಯೂ ಶಾಸ್ತ್ರಕಾರರು ಇದನ್ನು ವ್ಯಾಖ್ಯಾನಿಸುತ್ತಾರೆ. ಇಲ್ಲಿ, 'ಇಲ್ಲದ್ದು' ಎಂದರೆ ಬಾಹ್ಯದ ಭೋಗೋಪಕರಣಗಳಲ್ಲ. ಬದಲಿಗೆ, ಪ್ರತ್ಯಾಹಾರದ ಮೂಲಕ ಪಡೆದ ಅಂತರ್‌ಶಿಸ್ತು. ಪ್ರತ್ಯಾಹಾರವನ್ನು ಗಮನಿಸುವುದಾದರೆ, 'ಪ್ರತಿ' ಅಂದರೆ ಒಳಗೆ, 'ಆಹಾರ' ಎಂದರೆ ಎಳೆದುಕೊಳ್ಳುವುದು. ಹೊರಮುಖವಾದ ಇಂದ್ರಿಯಗಳನ್ನು ಒಳಗೆಳೆದುಕೊಂಡು, ಅಂತರ್ಮುಖವಾಗಿಸುವುದು. ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳ ಅರಿವನ್ನು ಕೊಡುವ ಜ್ಞಾನೇಂದ್ರಿಯಗಳನ್ನು ವಿಷಯಾವಭೋದ ಮಾಡುವಂತೆ, ಎಚ್ಚರದ ಸ್ಥಿತಿಗೆ ತಂದು, ಸ್ಥಿತಪ್ರಜ್ಞರಾಗುವುದು ಇಲ್ಲಿನ ಮಾರ್ಗಸೂಚಿ. ಇಂಥ ಯೋಗಿಗಳು, ಯಜ್ಞದ ಹಾಗೆ, ಅಪ್ರೇರಿತ ಕರ್ಮಗಳನ್ನು ಮಾಡುತ್ತಾ, ಮನೋನಿಗ್ರಹವನ್ನು ಸಾಧಿಸುತ್ತಾರೆ. ಅವರಿಗೆ ಕರ್ಮಬಂಧವಿರುವುದಿಲ್ಲ. ಇದು ಅಷ್ಟಾಂಗ ಯೋಗಸೂತ್ರದ ಮೂಲ ಆಶಯ.

• ಯೋಗಾಭ್ಯಾಸಿಗಳ ಆಪ್ತಮಿತ್ರ: ಆಧುನಿಕ ಜೀವನ ಶೈಲಿಯಲ್ಲಿ ಹೆಚ್ಚಿನವರಿಗೆ ಯೋಗಸೂತ್ರದ ಒಳಹೊಕ್ಕು, ಅಷ್ಟಾಂಗ ಯೋಗವನ್ನು ಅಭ್ಯಾಸ ಮಾಡಲು ಸಾಧ್ಯವಾಗುತ್ತಿಲ್ಲ. ಯೋಗಾನುಭಾವಿಗಳಾಗುವಷ್ಟು ಸಮಯಾವಕಾಶ ಕಲ್ಪಿಸಿಕೊಳ್ಳಲಾಗದ ಹಲವರು, ದೇಹಾರೋಗ್ಯ ಮತ್ತು ಶರೀರ ಸೌಂದರ್ಯಕ್ಕಾಗಿಯಾದರೂ ಯೋಗಭ್ಯಾಸದಲ್ಲಿ ತೊಡಗುತ್ತಿದ್ದಾರೆ. ಇದರಿಂದ ನಷ್ಟವೇನಿಲ್ಲ. ಜೀವನಯಾತ್ರೆಗೆ ಬಳಕೆಯಾಗುವ ವಾಹನವು ಸುಸ್ಥಿತಿಯಲ್ಲಿದ್ದರೆ, ಪ್ರಯಾಣ ಸುಲಲಿತವಾಗುವುದು ನಿಶ್ಚಿತ. ಮನೋ-ದೈಹಿಕ ಸ್ವಾಸ್ಥ್ಯದ ಸಾಧನೆಗೆ ಸಾಧನವಾಗಬಲ್ಲ ಸೂರ್ಯ ನಮಸ್ಕಾರವು ಇಂದಿನ ಯೋಗಾಭ್ಯಾಸಿಗಳ ನೆಚ್ಚಿನ ಸಂಗಾತಿ. ಚಲನಶೀಲವಾದ ಆಸನಗಳ ಮಾಲಿಕೆಗೆ ಸೂರ್ಯ ನಮಸ್ಕಾರವೆಂದೇ ಹೆಸರಿಸಲು ವಿಶಾಲವಾದ ಕಾರಣವಿದೆ. ಜಗತ್ತಿನ ಎಲ್ಲಾ ನಾಗರಿಕತೆಗಳಲ್ಲೂ ಸೂರ್ಯೋಪಾಸನೆಗೆ ಮಹತ್ವದ ಸ್ಥಾನ ಇದೆ. ಪರ್ಷಿಯನ್ನರು 'ಮಿತ್ರಾಸ್' ಎಂದು ಆರಾಧಿಸಿದರೆ, ಗ್ರೀಕರು 'ಅಪೋಲೋ' ಎಂದೂ, ಈಜಿಪ್ಷಿಯನ್ನರು 'ಓಸಿರಿಸ್' ಎಂದೂ ಸೂರ್ಯನನ್ನು ಪೂಜಿಸಿದ್ದಾರೆ. ಸೂರ್ಯನ ಗುಣ-ವಿಶೇಷಗಳಿಗೆ ಅನುಗುಣವಾಗಿ ಗುರುತಿಸುತ್ತಾ, ಭಾರತೀಯರ ಆರಾಧನೆ ಸಾಗುತ್ತದೆ. ಅಗಸ್ತ್ಯ ಮಹರ್ಷಿಗಳು ಶ್ರೀರಾಮನಿಗೆ 'ಆದಿತ್ಯ ಹೃದಯ' ಶ್ಲೋಕವನ್ನು ಬೋಧಿಸಿ, ವರ್ಷದ 12 ತಿಂಗಳಲ್ಲಿ, 12 ವಿವಿಧ ವೈಶಿಷ್ಟ್ಯದೊಂದಿಗೆ ಜೀವಜಾಲವನ್ನು ಪೊರೆವ ಸೂರ್ಯನನ್ನು, 12 ಬೇರೆ ಬೇರೆ ಹೆಸರುಗಳಿಂದ ಅರ್ಚಿಸಲು ತಿಳಿಸುತ್ತಾರೆ. ಅದರಲ್ಲಿ ಮಾಘ ಶುಕ್ಲ ಸಪ್ತಮಿಯ ದಿನದ ಸೂರ್ಯಾರಾಧನೆಯ ವಿಶೇಷತೆಯನ್ನು ಒತ್ತಿಹೇಳುತ್ತಾರೆ.

• ಪರಬ್ರಹ್ಮ ಸ್ವರೂಪ: ಸೂರ್ಯನನ್ನು ಪರಮಸತ್ಯ ಮತ್ತು ಅರಿವಿನ ಆಗರವಾಗಿ, ಕಣ್ಣಿಗೆ ಕಾಣುವ 'ಪರಬ್ರಹ್ಮ ಸ್ವರೂಪ' ಎಂದೇ ಪರಿಗಣಿಸಲಾಗಿದೆ. 12 ಆಸನಗಳ ಸರಣಿಯಲ್ಲಿ, ಸೂರ್ಯನ ಹನ್ನೆರಡು ಹೆಸರುಗಳನ್ನು ಪಠಿಸುತ್ತಾ, ದೃಷ್ಟಿ, ವಾಕ್, ಪ್ರಾಣ, ಚಿತ್ತವನ್ನೆಲ್ಲ ಒಂದೆಡೆ ಕ್ರಮಬದ್ಧವಾಗಿ ಕೇಂದ್ರೀಕರಿಸಿ, ಪ್ರಕೃತಿಯ ನಿತ್ಯಚಲಿತ ಸ್ವರೂಪಕ್ಕೆ ತಕ್ಕಂತೆ, ಶರೀರವನ್ನು ಗತಿಶೀಲ ಸ್ವಭಾವಕ್ಕೆ ಹೊಂದಿಸಿ, ಪ್ರಜ್ಞಾಪೂರ್ವಕವಾಗಿ ಅಂತರಂಗದ ಧ್ವನಿಯನ್ನು ಶ್ರವಣ ಮಾಡುವ ಅದ್ಭುತ ಪ್ರಕ್ರಿಯೆ ಇದು. ಸಾಮಾನ್ಯವಾಗಿ, ಆಂತರ್ಯದ ಧ್ವನಿ ಕೇಳಲು, ಶರೀರ ಮತ್ತು ಮನಸ್ಸನ್ನು ಒಂದೆಡೆ ನಿಲ್ಲಿಸಿ, ಧ್ಯಾನಸ್ಥ ಸ್ಥಿತಿಗೆ ತೆರಳುವ ಸಾಧನಾಮಾರ್ಗ ಹೆಚ್ಚು ಪ್ರಚಲಿತ. ಆದರೆ, ಸೂರ್ಯನಮಸ್ಕಾರದ ಮೂಲಕ, ಚಲನೆಯಲ್ಲಿದ್ದೇ ಧ್ಯಾನಸ್ಥ ಸ್ಥಿತಿ ತಲುಪಬಹುದೆನ್ನುವುದನ್ನು ಅಭ್ಯಾಸಿಗಳು ಮನಗಾಣಬೇಕು. ಇಲ್ಲಿ, ಸರ್ವಶಕ್ತ ಸೂರ್ಯನೇ ಜ್ಞಾನದ ಕೇಂದ್ರ. ಇದು ಕೇವಲ ಬಾಹ್ಯದ ಕಣ್ಣಿಗೆ ಕಾಣುವ ಸೂರ್ಯನಲ್ಲ, ನಮ್ಮೊಳಗಿರುವ ಸೂರ್ಯ, ಅಂದರೆ ಆಕಾಶ ತತ್ವವೂ ಹೌದು. ಹೀಗೆ ಅಂತರಂಗ-ಬಹಿರಂಗಗಳ ಸಮನ್ವಯವು ಇಲ್ಲಿ ನಡೆಯುತ್ತದೆ. ಇದು ಯೋಗಶಾಸ್ತ್ರದ ಅಪೇಕ್ಷೆ ಸಹ.

• ಸೂರ್ಯನೇ ಶಕ್ತಿಕೇಂದ್ರ: 'ಯುಜ್' ಧಾತುವಿನಿಂದಾದ ಯೋಗ ಎಂದರೆ ಸೇರಿಸು ಎನ್ನುವ ಅರ್ಥವನ್ನು ಬಿಂಬಿಸುವಲ್ಲಿ ಸಹಕರಿಸುವ ಅಂಶವಿದು. ಈ ಪ್ರಕ್ರಿಯೆಯಲ್ಲಿ, ಸೂರ್ಯನೇ ಕೇಂದ್ರಬಿಂದು ಆಗಲು ಬಹಳಷ್ಟು ಕಾರಣಗಳಿವೆ. ಪುರುಷ ಮತ್ತು ಪ್ರಕೃತಿ ತತ್ವಗಳೆರಡನ್ನೂ ಪ್ರತಿನಿಧಿಸುವ ಸೂರ್ಯನಲ್ಲಿ ಶಕ್ತಿಯ ಸಂಚಯನವಿದೆ. ಸೂರ್ಯನ ಶಕ್ತಿಯ ಕಿರಣಗಳಿಲ್ಲದೆ ಚೈತನ್ಯ ಪ್ರಕಟವಾಗಲು ಅಸಾಧ್ಯ. ಸೂರ್ಯರಶ್ಮಿ ಬೀಳುವೆಡೆ ಮಾತ್ರ ಜೀವೋತ್ಪನ್ನ, ಸೃಷ್ಟಿಕ್ರಿಯೆಗಳು ನಡೆಯುವುದು ವೈಜ್ಞಾನಿಕವಾಗಿ ಸಾಬೀತಾದ ಅಂಶ. ಎಲ್ಲ ಚರಾಚರಗಳ ಒಳ-ಹೊರಗೂ ಸದಾ ಸಕ್ರಿಯವಾಗಿರುವುದು ಈ ಶಕ್ತಿಯ ಸಂಚಲನ. ಹಾಗಾಗಿಯೇ ಸೂರ್ಯ ಹಿರಣ್ಯಗರ್ಭ, ಎಂದರೆ ಇದು ತತ್ವಶಾಸ್ತ್ರದ ಪ್ರಕಾರ ವಿಶ್ವಸ್ಥಿತಿಗೆ ಕಾರಣವಾದ ಮೂಲಬೀಜ ಅಥವಾ ಶಕ್ತಿ. ಇದರಿಂದಲೇ ಜೀವಿಗಳ ಉಗಮ ಎನ್ನುವ ಗಾಢವಾದ ನಂಬಿಕೆ ಇದೆ. ಇದನ್ನು ಅಲ್ಲಗಳೆಯಲು ಯಾವುದೇ ವೈಜ್ಞಾನಿಕ ಆಧಾರಗಳಿಲ್ಲ. ಹಿರಣ್ಯಗರ್ಭವು ಜೀವ ಮತ್ತು ಬ್ರಹ್ಮರನ್ನು ಏಕಕಾಲದಲ್ಲಿ ಪ್ರತಿನಿಧಿಸುತ್ತದೆ. ಇದರಿಂದಲೇ ವಿಶ್ವದ ಸ್ಥೂಲ, ಸೂಕ್ಷ್ಮ ರೂಪಗಳು ಆವಿರ್ಭವಿಸಿದವು ಎಂದು ನಿದರ್ಶನಗಳ ಮೂಲಕ ಋಷಿಮುನಿಗಳು ತಿಳಿಸಿದ್ದಾರೆ. ಎಲ್ಲಾ ಅಸ್ತಿತ್ವಗಳ ಒಟ್ಟು ಮೊತ್ತ ಇದು. ಇದರಲ್ಲಿ ಎಲ್ಲವೂ ಅಡಕವಾಗಿ, ಅಲ್ಲಿಂದಲೇ ಹೊರಟು ಮತ್ತಲ್ಲಿಗೇ ಮರಳುತ್ತವೆ. ಇದು ಸಾರ್ವತ್ರಿಕ ಪ್ರಜ್ಞೆಯ ಮೂಲಸೆಲೆ.

ರಥಸಪ್ತಮಿಯ ಸಂಕೇತಗಳು, ಮಾನವ ಶರೀರ, ಜೀವನವನ್ನು ಸೂಚ್ಯವಾಗಿ ತಿಳಿಸುತ್ತವೆ. 'ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇವ ತು । ಬುದ್ಧಿಂ ತು ಸಾರಥಿಂ ವಿದ್ಧಿ ಮನಃ ಪ್ರಗ್ರಹಮೇವ ಚ' ಎಂದರೆ, 'ಆತ್ಮ' ರಥದ ಮಾಲೀಕ, ದೇಹವೇ ರಥ, ಬುದ್ಧಿಯೇ (ವಿವೇಕಶಕ್ತಿ) ರಥವನ್ನು ನಡೆಸುವ ಸಾರಥಿ, ಮನಸ್ಸು ಕುದುರೆಗಳ ಲಗಾಮಿನಂತೆ ಎನ್ನುತ್ತದೆ ಕಠೋಪನಿಷತ್. ಶ್ರೋತ್ರ, ಚಕ್ಷು, ಸ್ಪರ್ಶ, ರಸನ ಗ್ರಹಣ, ಕೈ, ಕಾಲುಗಳು ರಥಕ್ಕೆ ಕಟ್ಟಿದ ಏಳು ಕುದುರೆಗಳು. ಕುದುರೆಗಳು ಎಳೆದಂತೆಲ್ಲಾ ರಥ ಹೋಗುವಂತಿಲ್ಲ. ಅದಕ್ಕೆ ನಿರ್ದಿಷ್ಟ ಮಾರ್ಗದಲ್ಲಿ ಚಲಿಸಬೇಕಾದ ನಿಯಮವಿದೆ. ಆಕರ್ಷಕವಾಗಿ ಕಂಡದ್ದರ ಹಿಂದೆ ತತ್‌ಕ್ಷಣ ಹೋಗಿ, ನಡೆದು, ಪಡೆಯಲು ಆಗದಂತೆ, ಕಾಲು ಊನವಾಗಿರುವವನನ್ನೇ ಸಾರಥಿಯನ್ನಾಗಿ ಹೊಂದಿರುವ ಸೂರ್ಯ ನೀಡುವ ಸಂದೇಶ ಬಹಳ ದೊಡ್ಡದು.

ಸೂರ್ಯ ಅಂದರೆ ಸುಮ್ಮನೆ ಅಲ್ಲ!

ನಮ್ಮ ಶರೀರ ಎನ್ನುವ ರಥದಲ್ಲಿ, 'ಜೀವ' ಎನ್ನುವ ಸೂರ್ಯ ಕುಳಿತಿದ್ದಾನೆ, 'ಸೂರಿಗಮ್ಯತ್ವ ಸೂರ್ಯಃ'- ಸೂರಿ ಎಂದರೆ ಪ್ರಜ್ಞಾವಂತ, ಗಮ್ಯತ್ವ ಎಂದರೆ ಅರಿಯಬಹುದಾದ ಗುಣ, ಸೂರ್ಯಃ ಅಂದರೆ ಆತ್ಮ ತತ್ವ. ಜ್ಞಾನಿಗಳ ಅರಿವಿಗೆ ಮಾತ್ರ ನಿಲುಕುವ ತತ್ವ ಸೂರ್ಯತತ್ವ. ಜಗತ್ತಿನ ಎಲ್ಲವನ್ನು ಕಾಣುವಂತೆ ಮಾಡುವವ ಸೂರ್ಯ. ತನ್ನ ಬೆಳಕನ್ನು ಎಲ್ಲೆಡೆಯೂ ಚೆಲ್ಲುವುದರ ಮೂಲಕ, ಎಲ್ಲವನ್ನೂ ನಮಗೆ ತೋರಿಸಿಕೊಡುವವ ಸೂರ್ಯ. ಜ್ಞಾನಾರ್ಥಿಗಳಾಗಿ ಸಾಗುತ್ತಿರುವ ಸಾಧಕರಿಗೆ ತನ್ನ ಬೆಳಕನ್ನು ನೀಡಿ, ಮುನ್ನಡೆಯಲು ದಾರಿ ತೋರುವವ ಸೂರ್ಯ. ನಮ್ಮ ಶರೀರವೆಂಬ ರಥವು, ಸರಿಯಾದ ಮಾರ್ಗದಲ್ಲಿ ಸಾಗಬೇಕಾದರೆ, ರಥಿಕನಾದ ಸೂರ್ಯನ ಬಗ್ಗೆ, ಅಂದರೆ ನಮ್ಮೊಳಗಿನ ಪರಬ್ರಹ್ಮ ತತ್ವದ ಬಗ್ಗೆ ಅಚಲವಾದ ನಂಬಿಕೆ ಬೇಕು. ಆ ನಂಬಿಕೆಯೇ, ನಮ್ಮನ್ನು ಧೀರತೆಯೆಡೆಗೆ ಕೊಂಡೊಯ್ಯುವ ಆತ್ಮವಿಶ್ವಾಸಕ್ಕೆ ದಾರಿಯಾಗುತ್ತದೆ.

ಋಗ್ವೇದದಲ್ಲಿ ಸೂರ್ಯನನ್ನು ಪ್ರಾಣದ ಅಧಿಷ್ಠಾನ ಎನ್ನಲಾಗಿದೆ. 'ಆದಿತ್ಯೋ ವೈ ಪ್ರಾಣಃ' ಇಲ್ಲಿ ಪ್ರಕಾಶದ ಮೂಲ, ಜೀವಶಕ್ತಿ ಎಲ್ಲವೂ ಸೂರ್ಯನೇ. ಪ್ರಾಚೀನ 'ಹಠಯೋಗ ಪ್ರದೀಪಿಕಾ' ಗ್ರಂಥದಲ್ಲಿ ಸೂರ್ಯನಾಡಿ, ಚಂದ್ರನಾಡಿಯ ಮೂಲಕ ಉಸಿರಾಟವನ್ನು ಕ್ರಮಬದ್ಧವಾಗಿಸುವ ಬಗ್ಗೆ ನಿಶ್ಚಿತ ಮಾಹಿತಿಗಳಿವೆ. ಇದನ್ನೇ ಅನುಸರಿಸಿ ಮುಂದೆ ಸೂರ್ಯ ನಮಸ್ಕಾರ ಎನ್ನುವ ಗತಿಶೀಲ ಆಸನಾಭ್ಯಾಸ ಗುಚ್ಛದ ಕ್ರಮ ಬೆಳೆದುಬಂದಿದೆ ಎನ್ನುವುದನ್ನು ಅಧ್ಯಯನದ ಮೂಲಕ ತಿಳಿಯಬಹುದು. ಶರೀರ ತೀವ್ರ ಚಟುವಟಿಕೆಯಿಂದ ಕೂಡಿದ್ದಾಗಲೂ, ಮನಸ್ಸು ಏಕಕೇಂದ್ರಿತವಾಗಿ, ಒಂದು ಬಿಂದುವಿನಲ್ಲಿ ನೆಲೆನಿಂತು, ಸ್ಥಿರತೆಯನ್ನು ಪಡೆದುಕೊಳ್ಳುವುದೇ ಸೂರ್ಯ ನಮಸ್ಕಾರದ ವೈಶಿಷ್ಟ್ಯ. ವರ್ತಮಾನದಲ್ಲಿ ಸೂರ್ಯ ನಮಸ್ಕಾರದ ಕಡೆಗೆ ಜನರ ಗಮನ ಅನಾಯಾಸವಾಗಿ ಹೋಗುತ್ತಿರುವುದಕ್ಕೆ ಇದೇ ಮುಖ್ಯ ಕಾರಣ. ಪ್ರಸ್ತುತದಲ್ಲಿ ಜನರಿಗೆ, ಕಣ್ಮುಚ್ಚಿ, ಶರೀರವನ್ನು ಒಂದಿಷ್ಟು ಕಾಲ ಶಾಂತವಾಗಿ ಕುಳ್ಳಿರಿಸಿಕೊಳ್ಳಬಲ್ಲ ತಾಳ್ಮೆ, ಸಹನೆಗಳಿಲ್ಲ. ಶರೀರ ಕ್ರಿಯಾಶೀಲವಾಗಿದ್ದಾಗಲೇ, ಕಣ್ಣುಗಳು ತೆರೆದಂತೆಯೇ, ಏಕಾಗ್ರತೆ ಸಾಧಿಸುತ್ತಾ, ಮನೋ-ದೈಹಿಕ ಸ್ವಾಸ್ಥ ಸೇರಿದಂತೆ ಎಲ್ಲವನ್ನೂ ಒಮ್ಮೆಲೆ ಸಾಧಿಸಬಲ್ಲೆವಾದರೆ, ಆ ಪ್ರಕ್ರಿಯೆ ನಮಗೆ ವರವೇ ತಾನೆ?! ಈ ಸಾಧನೆಯಿಂದ ಸಂತೋಷ ದೊರೆಯುವುದಂತೂ ಖಚಿತ.

ಉತ್ತರಾಯಣದ ಪಯಣದಲ್ಲಿ ಸೂರ್ಯನ ಶಾಖ ಹೆಚ್ಚುತ್ತಲೇ ಹೋಗುವುದು ಪ್ರಕೃತಿಯ ನಿಯಮ. ಈ ಅವಧಿಯಲ್ಲಿ ಭೂಮಿಯು ಸೂರ್ಯನಿಗೆ ಹೆಚ್ಚು ಸಮೀಪವರ್ತಿ. ಮುಂದೆ ಹೆಚ್ಚಲಿರುವ ಬಿಸಿಲಿನ ತಾಪಕ್ಕೆ, ಶರೀರವನ್ನು ಒಳಗಿನಿಂದಲೇ ಸಿದ್ಧಪಡಿಸಿಕೊಳ್ಳಬೇಕು. ಸೂರ್ಯ ನಮಸ್ಕಾರವನ್ನು ಮಾಡುವುದರಿಂದ ಶರೀರದ ಒಳಗಿನ ಉಷ್ಣತೆ, ಬಾಹ್ಯದ ಉಷ್ಣತೆಯೊಂದಿಗೆ ಸಮತೋಲನ ಸಾಧಿಸುತ್ತದೆ. ಪ್ರಕೃತಿಯ ನಡೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಾ, ಬದಲಾವಣೆಗೆ ತಕ್ಕಂತೆ ನಮ್ಮನ್ನು ಸಿದ್ಧಗೊಳಿಸಿಕೊಳ್ಳುವ ಆಚರಣೆಯನ್ನೇ ಸಂಸ್ಕೃತಿಯನ್ನಾಗಿಸಿಕೊಂಡಲ್ಲಿ, ಆ ಆಚರಣೆಯೇ ಅಧ್ಯಾತ್ಮವಾಗಿಬಿಡುತ್ತದೆ. ರಥಸಪ್ತಮಿಯ ದಿನ 108 ಸೂರ್ಯ ನಮಸ್ಕಾರಗಳನ್ನು ಮಾಡಿ, ಶರೀರದ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಂಡಲ್ಲಿ, ವರ್ಷಪೂರ್ತಿ ನಿರೋಗಿಗಳಾಗಿರಬಹುದು ಎನ್ನುವ ಸದಾಶಯ ಯೋಗ ಪ್ರವರ್ತಕರದ್ದು.

ದುರ್ಬಲ ಮಕ್ಕಳ ಬಗ್ಗೆ ಹೆಚ್ಚು ಕಾಳಜಿ ಮಾಡುವ ತಂದೆ-ತಾಯಿ

ಇದು ಮಹಾಭಾರತದಲ್ಲಿ ಬರುವ ಕಥೆ. ಒಮ್ಮೆ ಧೃತರಾಷ್ಟ್ರನ ಹತ್ತಿರ ವೇದವ್ಯಾಸರು ಬಂದು, ''ನೋಡು ಧೃತರಾಷ್ಟ್ರ, ನಿನ್ನ ಮಕ್ಕಳಾದ ದುರ್ಯೋಧನ-ದುಶ್ಯಾಸನ, ಅವರ ಮಾವ ಶಕುನಿ, ಪಾಂಡುವಿನ ಮಕ್ಕಳಿಗೆ ತುಂಬಾ ತೊಂದರೆ ಕೊಡುತ್ತಿದ್ದಾರೆ. ನೀನು ಅವರಿಗೆ ಸ್ವಲ್ಪ ಬುದ್ಧಿ ಹೇಳಬಾರದೆ?'' ಎಂದು ಕೇಳಿದರು. ಇದರಿಂದ ಧೃತರಾಷ್ಟ್ರನಿಗೆ ಬೇಸರವಾಯಿತು. ''ನೀವು ಯಾವಾಗಲೂ ನನ್ನ ಮಕ್ಕಳಿಗೆ ಬುದ್ಧಿ ಹೇಳುವಂತೆ ಹೇಳುತ್ತೀರಿ. ನೀವು ಪಾಂಡು ಮಕ್ಕಳ ಮೇಲೆ ಹೆಚ್ಚು ಪ್ರೀತಿ ವಾತ್ಸಲ್ಯ ತೋರಿಸುತ್ತೀರಿ. ಯಾಕೆ ನನ್ನ ಮಕ್ಕಳು ನಿಮಗೆ ಮೊಮ್ಮಕ್ಕಳಲ್ಲವೇ? ಪಾಂಡು ಮಕ್ಕಳು ಮಾತ್ರ ಮೊಮ್ಮಕ್ಕಳಾ?'' ಎಂದು ಸಿಡಿಮಿಡಿಗೊಂಡು ಕೇಳಿದ.

ಇದನ್ನು ಕೇಳಿದ ವ್ಯಾಸರು ಒಂದು ಕಥೆ ಹೇಳುತ್ತಾರೆ:

''ಒಮ್ಮೆ ದೇವಲೋಕದಲ್ಲಿ ಕಾಮಧೇನು ಅಳುತ್ತಿದ್ದಳು. ಅಲ್ಲಿಗೆ ಬಂದ ಇಂದ್ರದೇವ, 'ಯಾಕೆ ಅಳುತ್ತಾ ಇರುವೆ, ನಮ್ಮಿಂದ ಏನಾದರೂ ತಪ್ಪಾಯಿತೇ ಅಥವಾ ಯಾರಾದರೂ ನಿನ್ನ ಮನಸ್ಸಿಗೆ ನೋವಾಗುವಂತೆ ಮಾತನಾಡಿದರಾ?' ಎಂದು ಕೇಳಿದ. ಕಾಮಧೇನು ಇಂದ್ರನನ್ನು ಕರೆದು, ಅಲ್ಲಿನೋಡು ಎಂದು ಭೂಮಿಯ ಕಡೆ ತೋರಿಸಿದಳು. ಅದೊಂದು ಹಳ್ಳಿ, ಅಲ್ಲಿ ಬಡ ರೈತನ ಗದ್ದೆಯಿತ್ತು. ರೈತನು ತನ್ನ ಹತ್ತಿರವಿದ್ದ ಎರಡೂ ಎತ್ತುಗಳನ್ನು ನೊಗಕ್ಕೆ ಕಟ್ಟಿ ಗದ್ದೆಯಲ್ಲಿ ಕೆಲಸ ಮಾಡಿಸುತ್ತಿದ್ದ. ಅವು ಮುಂದೆ ಹೋಗದಿದ್ದರೆ ಬಾರುಕೋಲಿನಿಂದ ಅವುಗಳಿಗೆ ಹೊಡೆಯುತ್ತಿದ್ದ. ಆ ಎತ್ತುಗಳು ಸರಿಯಾಗಿ ಹೊಟ್ಟೆಗೂ ಇಲ್ಲದೆ ಚರ್ಮ ಮೂಳೆ ಬಿಟ್ಟುಕೊಂಡು ನೊಗ ಎಳೆಯಲಾಗದೆ ಕಷ್ಟಪಡುತ್ತಿದ್ದವು. ಅವುಗಳ ಕಣ್ಣಲ್ಲಿ ನೀರು ಬರುತ್ತಿತ್ತು. ಎತ್ತುಗಳನ್ನು ತೋರಿಸಿದ ಕಾಮಧೇನು, 'ದೇವರಾಜ, ನನ್ನ ಮಕ್ಕಳು ಹೇಗೆ ಅಳುತ್ತಿವೆ, ಅವುಗಳ ಕಷ್ಟ ನನ್ನಿಂದ ನೋಡಲಾಗುತ್ತಿಲ್ಲ, ಏನಾದರೂ ಮಾಡಿ ಅವುಗಳ ಕಷ್ಟವನ್ನು ಪರಿಹರಿಸು' ಎಂದು ಕೇಳಿಕೊಂಡಳು....

''ಅದಕ್ಕೆ ಇಂದ್ರನು, 'ಏನಮ್ಮ ಕಾಮಧೇನು, ನಿನಗೆ ಇವೇ ಎರಡು ಮಕ್ಕಳಾ? ಎತ್ತು, ಹಸುಗಳು ಸೇರಿ ಕೋಟಿ ಕೋಟಿ ಮಕ್ಕಳಿದ್ದಾರೆ. ಅವುಗಳನ್ನೆಲ್ಲಾ ಬಿಟ್ಟು ಈ ಎರಡು ಮಕ್ಕಳ ಮೇಲೆ ಮಾತ್ರ ಅಷ್ಟೊಂದು ಪ್ರೀತಿ ಯಾಕೆ?' ಎಂದು ಕೇಳಿದ. ಆಗ ಕಾಮಧೇನು ಹೇಳಿದಳು- 'ನೋಡು ಇಂದ್ರ, ನೀನು ಹೇಳಿದಂತೆ ನನಗೆ ಎತ್ತು, ಹಸುಗಳು ಸೇರಿ ಕೋಟಿ ಕೋಟಿ ಮಕ್ಕಳು ಇದ್ದಾರೆ ನಿಜ. ಅವುಗಳೆಲ್ಲ ಸುಖವಾಗಿ ಇದ್ದಾವೆ. ಆದರೆ ಈ ಎರಡು ಮಕ್ಕಳು ಮಾತ್ರ ಹೊಟ್ಟೆಗಿಲ್ಲದೆ ಆ ರೈತನ ಗದ್ದೆಯನ್ನು ಉಳಬೇಕು. ಅಲ್ಲದೆ ಮಳೆ ಬರದೆ ಭೂಮಿಯೆಲ್ಲ ಒಣಗಿ ಬಿರುಕು ಬಿಟ್ಟಿದೆ. ಕಲ್ಲಿನಂತೆ ಗಟ್ಟಿಯಾಗಿರುವ ಭೂಮಿಯನ್ನು ನೇಗಿಲಿನಿಂದ ಎಳೆಯಲು ಹೊಟ್ಟೆಗೂ ಹಾಕದೆ ನಿತ್ರಾಣವಾಗಿರುವ ಅವುಗಳಿಂದ ಕೆಲಸ ಮಾಡಿಸುತ್ತಾನೆ, ಕೆಲಸ ಮಾಡಲು ಆಗದೆ ರೈತನ ಕೈಯಲ್ಲಿ ಹೊಡೆಸಿಕೊಳ್ಳುತ್ತಾ ನಿತ್ಯವೂ ಕಣ್ಣೀರು ಹಾಕುತ್ತವೆ. ಇದನ್ನು ನನ್ನಿಂದ ನೋಡಲಾಗುವುದಿಲ್ಲ ಹಾಗಾಗಿ ಹೇಳಿದೆ' ಎಂದಿತು. ಕನಿಕರಗೊಂಡ ಇಂದ್ರನು, 'ಕಾಮಧೇನು, ನಿನ್ನ ಮಕ್ಕಳ ಮೇಲಿರುವ ಕರುಳಿನ ಪ್ರೀತಿ ನನಗೆ ಅರ್ಥವಾಯಿತು' ಎನ್ನುತ್ತಾ, ಸುತ್ತಮುತ್ತ ಮಳೆ ಸುರಿಸಿದನು. ಇದರಿಂದ ಭೂಮಿಯೆಲ್ಲಾ ಹಸಿಯಾಗಿ ಮಣ್ಣು ಮೃದುವಾಯಿತು. ಎತ್ತುಗಳು ಸರಾಗವಾಗಿ ನೇಗಿಲನ್ನು ಎಳೆದವು. ಇದು ಕಾಮಧೇನುವಿಗಿರುವ ಪುತ್ರವಾತ್ಸಲ್ಯ''.

ಹೀಗೆ ಕತೆ ಹೇಳಿ ಮುಗಿಸಿದ ವ್ಯಾಸರು, ''ನೋಡು ಧೃತರಾಷ್ಟ್ರ ನೀನೂ ನನಗೆ ಮಗ, ಪಾಂಡುವೂ ಮಗನೇ, ಹಾಗೆಯೇ ನಿನ್ನ ಮಕ್ಕಳು ಮೊಮ್ಮಕ್ಕಳೇ, ಪಾಂಡು ಮಕ್ಕಳೂ ಮೊಮ್ಮಕ್ಕಳೇ! ಎಲ್ಲರ ಮೇಲೂ ನನಗೆ ಸಮಾನವಾದ ಪ್ರೀತಿ ಇದೆ. ಆದರೆ ಯಾವ ಮಕ್ಕಳು ಹೆಚ್ಚು ಕಷ್ಟಪಡುತ್ತಿರುತ್ತಾರೋ, ಅವರ ಬಗ್ಗೆ ಹೆತ್ತ ತಂದೆ-ತಾಯಿಗೆ ಕನಿಕರ, ಪ್ರೀತಿ ಜಾಸ್ತಿ ಇರುತ್ತದೆ. ಅದು ಸಹಜ ಕೂಡ. ಆದುದರಿಂದ ನಿನ್ನ ಮಕ್ಕಳು ಪಾಂಡು ಮಕ್ಕಳಿಗೆ ತೊಂದರೆ ಕೊಡದಂತೆ ತಿದ್ದಿ ಬುದ್ಧಿ ಹೇಳು. ತಂದೆ ಇಲ್ಲದ ಅವರನ್ನು ನಿನ್ನ ಮಕ್ಕಳಂತೆಯೇ ಪಾಲಿಸಬೇಕು'' ಎಂದು ಬುದ್ಧಿವಾದ ಹೇಳಿದರು.

ಮನೆಯಲ್ಲಿ ತಂದೆ-ತಾಯಿಗಳು ಕೆಲವೊಮ್ಮೆ ಸಹಜವಾಗಿ ದುರ್ಬಲ ಮಕ್ಕಳ ಬಗ್ಗೆ ಹೆಚ್ಚು ಕಾಳಜಿ ಮಾಡುತ್ತಾರೆ. ಇದನ್ನು ಕಂಡು ಅಸೂಯೆ ಪಡುವುದು ಬೇಡ. ತಂದೆ-ತಾಯಿಗಳಿಗೆ ಎಲ್ಲರ ಬಗ್ಗೆಯೂ ಸಮಾನ ಪ್ರೀತಿ ಇರುತ್ತದೆ; ಆದರೆ ಕಾಳಜಿಯು ಆ ಮಕ್ಕಳ ಮಾನಸಿಕ, ದೈಹಿಕ ಸಾಮರ್ಥ್ಯದ ಮೇಲೆ ಅವಲಂಬಿತವಾಗಿರುತ್ತದೆ.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಕೋಪದಿಂದ ಅನರ್ಥ

• ಕೆ.ಶ್ರೀನಿವಾಸರಾವ್, ಹರಪನಹಳ್ಳಿ

ಕೋಪ ಎಂಬುದು ಮಾನವ ಸಹಜ ಕ್ರಿಯೆ, ಆದರೆ ಅದು ಅತಿರೇಕಕ್ಕೆ ಹೋದರೆ ಅನರ್ಥ ಸಾಧ್ಯವಾಗಿಬಿಡುತ್ತದೆ. ಕೋಪದ ಕೈಗೆ ಬುದ್ಧಿ ಕೊಡಬಾರದು, ಏಕೆಂದರೆ ಅದು ನಮ್ಮನ್ನೇ ದಹಿಸಿಬಿಡುತ್ತದೆ. ಬಂಧು-ಮಿತ್ರರಿಂದಲೂ ನಮ್ಮನ್ನು ದೂರವಾಗಿಸುತ್ತದೆ. ಕೋಪಕ್ಕೆ ಹೆಚ್ಚಿನ ಅವಧಿಯವರೆಗೆ ಆಯಸ್ಸು ಕೊಟ್ಟರೆ ಅದು ವ್ರಣವಾಗುತ್ತದೆ. ಕಚೇರಿಯಲ್ಲಿ ಮೇಲಧಿಕಾರಿ ಬೈದರೆಂದು ಉಳಿದವರ ಮೇಲೆ ಎಗರಾಡುವುದು, ಬಸ್ಸಿನಲ್ಲಿ ಸೀಟು ಸಿಗದಿದ್ದಾಗ ರೇಗಾಡುವುದು, ಮದುವೆಮನೆಯಲ್ಲಿ ಊಟದ ಸರತಿಸಾಲು ತಪ್ಪಿದಾಗ ದುರುಗುಟ್ಟುವುದು, ಅಡುಗೆ ಮನೆಯಿಂದ ತಡವಾಗಿ ಕಾಫಿ ಬರದಿದ್ದಾಗ, ಸಾಂಬಾರಿಗೆ ಕೊಂಚ ಉಪ್ಪು ಹೆಚ್ಚಾಗಿದ್ದಾಗ ರೇಗುವುದು ಇವೆಲ್ಲವೂ ಕೋಪದ ವಿವಿಧ ರೂಪಗಳೇ. ಇನ್ನು ಕೆಲವರು ತಮ್ಮ ಶರ್ಟಿಗೆ ಇಸ್ತ್ರಿ ಮಾಡದೆ ಇರಿಸಿದಾಗ, ತವರಿಗೆ ಹೋದರೆ ಫೋನ್ ಮಾಡದೆ ಇದ್ದಾಗ, ಮಗನು ಗೆಳೆಯರೊಂದಿಗೆ ಬೀದಿ ತಿರುಗಿಕೊಂಡು ತಡವಾಗಿ ಮನೆಗೆ ಬಂದಾಗ ಕೋಪಾಗ್ನಿಯನ್ನು ಸ್ಫೋಟಿಸುವುದಿದೆ ಹಾಗೂ ಬೀದಿಯವರಿಗೂ ಕೇಳುವಂತೆ ಅರಚುವುದಿದೆ.

ಪರಿಣಾಮವಾಗಿ ಕೋಪಕ್ಕೆ ತುತ್ತಾದವರು ಎದುರಿಗೆ ಹೆದರಿದರೂ ಹಲ್ಲುಕಚ್ಚಿಕೊಂಡರೂ ಹಿಂದಿನಿಂದ ಟೀಕೆ, ನಿಂದನೆ, ಅಪಹಾಸ್ಯ ಮಾಡುತ್ತಾರೆ. ಆದ್ದರಿಂದ, ಎಂಥದ್ದೇ ಅಸಹಾಯಕತೆಯಿರಲಿ, ಕೈಕಾಲು ಆಡದಂಥ ಸ್ಥಿತಿಯಿರಲಿ, ಹೇಳಬೇಕಾದುದನ್ನು ಮೆಲುದನಿಯಲ್ಲಿ ಹೇಳುವುದು ಒಳಿತು.

'ಸಿಟ್ಟು ಬಂದಾಗ ನಾನು ಮನುಷ್ಯನೇ ಅಲ್ಲ', 'ನಿನ್ನನ್ನು ಕೊಂದುಬಿಡುತ್ತೇನೆ', 'ನಿನ್ನ ಮುಖಕ್ಕೆ ಆಸಿಡ್ ಹಾಕ್ತೀನಿ'- ಇವು ಉಗ್ರಕೋಪ ಬಂದಾಗ ಕೆಲವರಿಂದ ಹೊಮ್ಮುವ ಆಣಿಮುತ್ತುಗಳು! 'ಮನೆಯೊಳಗಣ ಕಿಚ್ಚು ಮನೆಯನ್ನೇ ಸುಡುವಂತೆ, ತನ್ನಲ್ಲಿ ಹುಟ್ಟಿದ ಕೋಪ ತನ್ನನ್ನೇ ಸುಡುವುದು' ಎಂದಿದ್ದಾರೆ ಜಗಜ್ಯೋತಿ ಬಸವಣ್ಣನವರು. ಆದ್ದರಿಂದ, ಅನರ್ಥಕ್ಕೆ ಹಾದಿ ಮಾಡಿಕೊಟ್ಟು ವಿನಾಶಕ್ಕೆ ಕಾರಣವಾಗುವ ಕೋಪವನ್ನು ಕೈಬಿಟ್ಟು, ಪರಸ್ಪರ ಗೌರವ ಮತ್ತು ಸಾಮಾಜಿಕ ಜೀವನಕ್ಕೆ ಪೂರಕವಾಗುವ ಶಾಂತಸ್ವಭಾವವನ್ನು ನೆಚ್ಚಿಕೊಳ್ಳೋಣ. 'ಕೋಪ ಬಂದಾಗ ಕ್ಷಿಪ್ರ ಪ್ರತಿಕ್ರಿಯೆ ತೋರದೆ 20ವರೆಗೆ ಎಣಿಸಬೇಕು' ಎಂದು ಹಿರಿಯರು ಹೇಳುವುದುಂಟು. ಇದು ತಮಾಷೆಯ ಮಾತಲ್ಲ, ಹೀಗೆ ಕೊಂಚ ಕಾಲವನ್ನು ವ್ಯಯಿಸುವುದರಿಂದ ಕೋಪವು ತಣಿದು, ಸರಿ-ತಪ್ಪುಗಳ ವಿವೇಚನೆ ಹೆಚ್ಚುತ್ತದೆ. ಆದ್ದರಿಂದ ಕೋಪಕ್ಕೆ ಕಡಿವಾಣ ಹಾಕಿಕೊಂಡು ಪ್ರಶಾಂತವಾಗಿರೋಣ.

ಗುಳೇದಗುಡ್ಡಕ್ಕೆ ಬನ್ನಿ, ಜಿಲೇಬಿ-ರಬಡಿ ತಿನ್ನಿ..!

• ಡಾ.ಕರವೀರಪ್ರಭು ಕ್ಯಾಲಕೊಂಡ, ಬಾದಾಮಿ

ಬಾಗಲಕೋಟೆ ಜಿಲ್ಲೆಯ ತಾಲೂಕು ಕೇಂದ್ರವಾಗಿರುವ ಗುಳೇದಗುಡ್ಡ 'ರವಿಕೆ ಖಣ'ಕ್ಕೆ ಪ್ರಸಿದ್ಧ ಎಂಬುದು ಎಲ್ಲರಿಗೂ ಗೊತ್ತು. ಆದರೆ, ಅಷ್ಟೇ ಖ್ಯಾತಿ ಪಡೆದಿರುವ ಚಳಿಗಾಲದ ತಿನಿಸು 'ಜಿಲೇಬಿ-ರಬಡಿ' ಬಗ್ಗೆ ಬಹಳ ಜನರಿಗೆ ಗೊತ್ತಿರಲಿಕ್ಕಿಲ್ಲ. 'ಗುಳೆ ಬಂದವರ ಊರು' ಎಂಬ ಗ್ರಹಿಕೆಯಿಂದ ಹುಟ್ಟಿಕೊಂಡಿರುವಂಥದ್ದು 'ಗುಳೇದಗುಡ್ಡ' ಎಂಬ ಹೆಸರು. ಹಿಂದೆಲ್ಲ ಉದ್ಯೋಗ ಅರಸಿ, ವ್ಯಾಪಾರ-ವಹಿವಾಟಿಗೆ ಹೊರಗಿನ ಜನರಷ್ಟೇ ಇಲ್ಲಿಗೆ ವಲಸೆ ಬಂದಿಲ್ಲ; ಶತಮಾನದ ಹಿಂದೆ ದೂರದ ರಾಜಸ್ಥಾನದ ಅಬು ರಸ್ತೆಯ ಖ್ಯಾತ ಸಿಹಿಖಾದ್ಯ 'ಜಿಲೇಬಿ-ರಬಡಿ' ಕೂಡ ಗುಳೆ ಬಂದಿದೆ, ವಿಶಿಷ್ಟ ಸ್ವಾದದಿಂದ ಜನಮನವನ್ನು ಗೆದ್ದಿದೆ. ಜಿಲೇಬಿ ಸಾಮಾನ್ಯವಾಗಿ ಬಹುತೇಕರಿಗೆ ಚಿರಪರಿಚಿತ, ಆದರೆ 'ರಬಡಿ' ಎಂದಾಕ್ಷಣ ವಿಲಕ್ಷಣ ಕುತೂಹಲ ಮೂಡಬಹುದು.

ರಬಡಿಯನ್ನು ಗುಳೇದಗುಡ್ಡದ 2-3 ಕುಟುಂಬಗಳು ಚಳಿಗಾಲದಲ್ಲಷ್ಟೇ ತಯಾರಿಸುತ್ತವೆ. ಸುಮಾರು 110 ವರ್ಷಗಳಿಂದ ಇದೇ ವೃತ್ತಿಯನ್ನು ಮಾಡಿಕೊಂಡು ಬಂದಿರುವ ಕುಟುಂಬಗಳಿವು. ಈ ಎರಡು ಅಂಗಡಿಗಳ ಮುಂದೆ ಜನರು 'ಜಿಲೇಬಿ-ರಬಡಿ'ಗಾಗಿ ಸಾಲುಗಟ್ಟಿ ನಿಲ್ಲುತ್ತಾರೆ. ವಿಜಯದಶಮಿಯಿಂದ ಶಿವರಾತ್ರಿಯವರೆಗೆ, ಬೆಳಗ್ಗೆ 7ರಿಂದ 11.30 ಗಂಟೆಯವರೆಗೆ ಮಾತ್ರ ಸಿಗುವ ಈ ಸಿಹಿತಿನಿಸು ಶಕ್ತಿವರ್ಧಕವೂ ಹೌದು. ಸಿಹಿರಸಿಕರ ಪಾಲಿಗೆ ಫೇವರಿಟ್ ಕೂಡ ಹೌದು!

ಹಳ್ಳಿ ಹಳ್ಳಿಗೆ ಹೋಗಿ ಎಮ್ಮೆಯ ಹಾಲನ್ನು ಸಂಗ್ರಹಿಸಿ, ಗಟ್ಟಿಯಾಗುವವರೆಗೆ ಅದನ್ನು ಐದಾರು ತಾಸುಗಳವರೆಗೆ ಕಾಯಿಸಿ, ಕೆನೆಗಟ್ಟಿಸಿ, ನಂತರ ಪೂರ್ಣ ತಣ್ಣಗಾಗಿಸಿ, ಸಕ್ಕರೆಪುಡಿ, ಏಲಕ್ಕಿ, ಗೋಡಂಬಿ ಪುಡಿ ಬೆರೆಸಿದರೆ, ಜಿಲೇಬಿಯ ಜತೆಗೆ ಸವಿಯಬಹುದಾದ ರಬಡಿ ಸಿದ್ಧವಾಗುತ್ತದೆ. ಜಿಲೇಬಿ ಮತ್ತು ರಬಡಿಯನ್ನು ಹೀಗೆ ಒಟ್ಟಾಗಿ ಸವಿದರೆ ದೇಹದಲ್ಲಿ ಉತ್ಸಾಹ ಹೆಚ್ಚುತ್ತದೆ. ಹೀಗಾಗಿ ಇದು ಚಳಿಗಾಲಕ್ಕೆ ತಕ್ಕ ಖಾದ್ಯ. ಚಳಿಗಾಲದಲ್ಲಿ ಬರುವ ಬೀಗರು-ಬಿಜ್ಜರು, ಬಂಧು-ಮಿತ್ರರ ಸತ್ಕಾರಕ್ಕೆ 'ಜಿಲೇಬಿ-ರಬಡಿ'ಯ ಜೋಡಿ ಹೇಳಿಮಾಡಿಸಿದ ಖಾದ್ಯ. ಸ್ವರ್ಗಮಹಿಮೆ ಕುರಿತು ನೀವು ಆಸಕ್ತರಾಗಿದ್ದಲ್ಲಿ ಗುಳೇದಗುಡ್ಡಕ್ಕೆ ಒಮ್ಮೆ ಬಂದು ಅದರ ರುಚಿಯನ್ನು ಸವಿಯಬಹುದು!

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಟೆ



ಎಡದಿಂದ ಬಲಕ್ಕೆ

1. ವಾತಾವರಣದಲ್ಲಿರುವ ಈ ಅನಿಲವನ್ನಷ್ಟೇ ನಾವು ಉಸಿರಾಡಬಹುದು (5)
4. ಅಪೇಕ್ಷೆ ಅಥವಾ ಆಸೆಗೆ ಮತ್ತೊಂದು ಹೆಸರು (3)
5. ರಜಾ ಇದ್ದರೂ ನಿಜವಾಗಿಯೂ ಇದು ಇರುಳು (3)
7. ಮೇಲಿನಿಂದ ನೋಡಿದಾಗ ಕಂಡಿತು ಭೂಮಿ (3)
9. ರೋಗ ಶಮನಕ್ಕೆ ಭೇಟಿ ನೀಡುವ ಆಸ್ಪತ್ರೆ (4)
11. ಮರುಳುಮಾಡು ಅಥವಾ ಪ್ರಲೋಭನೆ ತೋರಿಸು ಎನ್ನುವುದನ್ನು ಹೀಗೆನ್ನಬಹುದು (4)
13. ಎರಡು ಕೈಗಳಿಂದಲೂ ಬಾಣಬಿಡಬಲ್ಲ ಅರ್ಜುನನಿಗೆ ಈ ಹೆಸರಿದೆ (4)
15. ಸಾಮಗ್ರಿ ಅಥವಾ ಸಲಕರಣೆ (4)
17. ಸರಕಾರಕ್ಕೆ ಕಟ್ಟುವ ಕಂದಾಯ (3)
19. ಸಿದ್ಧತೆಗೆ ಮತ್ತೊಂದು ಹೆಸರು (3)
21. ಚೆಂಡು ಎನ್ನಲು ಮತ್ತೊಂದು ಹೆಸರು (3)
22. ಬೇರೆಯವರನ್ನು ಆಶ್ರಯಿಸಿರುವ ವ್ಯಕ್ತಿ (5)

ಮೇಲಿಂದ ಕೆಳಕ್ಕೆ

1. ಸೊಂಡಿಲಿರುವ ಕರಿ (2)
2. ದೇವತೆ ಇಲ್ಲಿ ತಲೆಕೆಳಗಾಗಿದ್ದಾನೆ (3)
3. ಎರಡಕ್ಷರದ ಕೈ (2)
4. ಬರೆಯುವ ಹಾಳೆ (3)
6. ಕುಲುಕುವುದಲ್ಲ, ಕೈಗೆ ಸಿಗು (3)
7. ಪಲ್ಲಕ್ಕಿ, ಡೋಲಿ (2)
8. ಲಕ್ಷ್ಯ ಅಥವಾ ಎಚ್ಚರ (2)
10. ತಂಗುವಿಕೆ ಅಥವಾ ಮೊಕ್ಕಾಮು (3)
12. ಸರದೊಂದಿಗೆ ಬರುವ ಒಂದು ಬಗೆಯ ಧಾನ್ಯ (3)
13. ನಿರಂತರ, ಅಡೆತಡೆಯಿಲ್ಲದ (3)
14. ಶವವನ್ನು ಸುಡಲು ಒಟ್ಟುಮಾಡಿದ ಕಟ್ಟಿಗೆ ರಾಶಿ (2)
15. ದ್ವೇಷಕ್ಕೆ ಮತ್ತೊಂದು ಹೆಸರು (2)
16. ಬಟ್ಟೆ ಒಗೆದು ಶುಚಿಮಾಡಿಕೊಡುವ ಅಗಸ (3)
18. ತಲೆಕೆಳಗಾಗಿರುವ ಬಳ್ಳಿ ಅಥವಾ ಗೊಂಚಲು (3)
20. ಇನ್ನೊಂದು ರೀತಿ ತಲೆಕೆಳಗಾಗಿದೆ (2)
21. ಲೋಹದ ತಂತಿಯಿದು (2)

ಸರಿಯುತ್ತರಗಳು

ಎಡದಿಂದ ಬಲಕ್ಕೆ
1.ಆಮ್ಲಜನಕ 4.ಕಾಮನೆ 5.ರಜನಿ
7.ಮೇದಿನಿ 9.ದವಾಖಾನೆ
11.ಗಾಳಹಾಕು 13.ಸವ್ಯಸಾಚಿ
15.ಪರಿಕರ 17.ತೆರಿಗೆ 19.ತಯಾರಿ
21.ಕಂದುಕ 22.ಪರಾವಲಂಬಿ

ಮೇಲಿಂದ ಕೆಳಕ್ಕೆ
1.ಆನೆ 2.ಜವಿದಿ 3.ಕರ 4.ಕಾಗದ
6.ನಿಲುಕು 7.ಮೇನೆ 8.ನಿಗಾ
10.ವಾಸ್ತವ್ಯ 12.ಹಾರಕ 13.ಸತತ
14.ಚಿತೆ 15.ಪಗೆ 16.ರಜಕ
18.ರಿಲ್ಲವ 20.ರಿಪ 21.ಕಂಬಿ

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ವಿವಾದ ಪರಿಹಾರ ಸಮಿತಿಗೆ ಆಗ್ರಹ

ದೆಹಲಿ: ವಿಶ್ವಕಪ್ ಟೂರ್ನಿಯಿಂದ ಹೊರಗುಳಿಯದಂತೆ ತನ್ನನ್ನು ತಾನು ಉಳಿಸಿಕೊಳ್ಳಲು ಬಾಂಗ್ಲಾದೇಶ ಹೊಸ ಪ್ರಯತ್ನವನ್ನು ಪ್ರಾರಂಭಿಸಿದೆ. ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿಗೆ ಇಮೇಲ್ ಮೂಲಕ ಕಳುಹಿಸಲಾದ ಪತ್ರದಲ್ಲಿ, ಬಿಸಿಬಿ ತನ್ನ ಪಂದ್ಯಗಳನ್ನು ಭಾರತದಿಂದ ಲಂಕೆಗೆ ಸ್ಥಳಾಂತರಿಸುವ ಬೇಡಿಕೆಯನ್ನು ಪರಿಹರಿಸಲು ಸ್ವತಂತ್ರ ವಿವಾದ ಪರಿಹಾರ ಸಮಿತಿ (ಡಿಆರ್‌ಸಿ) ರಚಿಸುವಂತೆ ಒತ್ತಾಯಿಸಿದೆ. ಈ ಸಮಿತಿಯು ಐಸಿಸಿಗೆ ಸಂಬಂಧಿಸಿದ ಕಾನೂನು ವಿವಾದಗಳನ್ನು ಪರಿಹರಿಸುವ ಸ್ವತಂತ್ರ ವಕೀಲರನ್ನು ಒಳಗೊಂಡಿದೆ. ಐಸಿಸಿ ತನ್ನ ಬೇಡಿಕೆಯ ಮೇರೆಗೆ ಕಾರ್ಯನಿರ್ವಹಿಸುತ್ತದೆ ಮತ್ತು ತನ್ನ ಪ್ರಕರಣವನ್ನು ಡಿಆರ್‌ಸಿಗೆ ವಹಿಸುತ್ತದೆ ಎಂದು ಭಾವಿಸುವುದಾಗಿ ಬಿಸಿಬಿ ಹೇಳಿದೆ. ಡಿಆರ್‌ಸಿಯ ಸಂಪೂರ್ಣ ಪ್ರಕ್ರಿಯೆಯು ಬ್ರಿಟಿಷ್ ಕಾನೂನಿನ ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ ಮತ್ತು ಲಂಡನ್‌ನಲ್ಲಿರುವ ನ್ಯಾಯಾಲಯದಿಂದ ವಿಚಾರಣೆ ನಡೆಸಲ್ಪಡುತ್ತದೆ. ಡಿಆರ್‌ಸಿ ಪ್ರಕ್ರಿಯೆಯು ಸ್ವತಂತ್ರ ಸಮಿತಿಗಳ ಗೌಪ್ಯ ಮಧ್ಯಸ್ಥಿಕೆಯ ಮೂಲಕ ಕಾರ್ಯನಿರ್ವಹಿಸುತ್ತದೆ.

2ನೇ ಇನಿಂಗ್ಸ್‌ನಲ್ಲೂ ಶುಭ್‌ಮನ್ ವಿಫಲ

ದೆಹಲಿ: ಭಾರತ ಟೆಸ್ಟ್ ನಾಯಕ ಶುಭಮನ್ ಗಿಲ್ ಸೌರಾಷ್ಟ್ರ ವಿರುದ್ಧದ ಎರಡೂ ಇನಿಂಗ್ಸ್‌ಗಳಲ್ಲಿ ಬ್ಯಾಟಿಂಗ್‌ನಲ್ಲಿ ಉತ್ತಮ ಪ್ರದರ್ಶನ ನೀಡಲು ವಿಫಲರಾಗಿದ್ದಾರೆ. ಪ್ರಥಮ ಇನಿಂಗ್ಸ್‌ನಲ್ಲಿ ಖಾತೆ ತೆರೆಯಲು ವಿಫಲರಾದ ಗಿಲ್ ದ್ವಿತೀಯ ಇನಿಂಗ್ಸ್‌ನಲ್ಲಿ ಕೇವಲ 14 ರನ್‌ಗಳಿಗೆ ಔಟಾಗಿದ್ದಾರೆ. ಎರಡೂ ಬಾರಿ ಎಡಗೈ ಸ್ಪಿನ್ನರ್ ಪಾರ್ಥ್ ಭೂತ್ ಅವರ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದ ಗಿಲ್ ರಣಜಿಯಲ್ಲೂ ಫಾರ್ಮ್ ಕಂಡುಕೊಳ್ಳಲು ವಿಫಲರಾದರು. ಸೌರಾಷ್ಟ್ರ ಒಡ್ಡಿದ 320 ರನ್‌ಗಳ ಗುರಿಯನ್ನು ಬೆನ್ನಟ್ಟಿದ ಪಂಜಾಬ್ ಈ ಪಂದ್ಯದಲ್ಲಿ 194 ರನ್‌ಗಳಿಂದ ಸೋಲು ಅನುಭವಿಸಿದೆ.

ಆಸ್ಟ್ರೇಲಿಯನ್ ಓಪನ್: ಜೊಕೊವಿಕ್‌ಗೆ ಜಯ

ಮೆಲ್ಬೋರ್ನ್: ನೊವಾಕ್ ಜೊಕೊವಿಕ್ ಮತ್ತು ಯಾನಿಕ್ ಸಿನ್ನರ್ ಅವರು ಎದುರಾಳಿಗಳ ವಿರುದ್ಧ ನಿರಾಯಾಸ ಜಯಗಳಿಸಿ ಮೂರನೇ ಸುತ್ತಿಗೆ ಲಗ್ಗೆಯಿಟ್ಟರು. ಕೊಕೊವಿಕ್ ಅವರು 6-3, 6-2ರಿಂದ 141ನೇ ಕ್ರಮಾಂಕದ ಕ್ವಾಲಿಫೈಯರ್ ಫ್ರಾನ್ಸಿಸ್ಕೋ ಮಿಸ್ಟ್ರೆಲ್ಲಿ ಅವರನ್ನು ಮಣಿಸಿದರು. ಎರಡು ಬಾರಿಯ ಚಾಂಪಿಯನ್ ಸಿನ್ನರ್ ಅವರು ಆಸ್ಟ್ರೇ ಲಿಯಾದ ಜೇಮ್ಸ್ ಥಕ್ವರ್ಡ್ ಅವರನ್ನು 6-1, 6-4, 6-2 ರಿಂದ ಮಣಿಸಿದರು. ಬೇರೆ ಪಂದ್ಯಗಳ ಪೈಕಿ ಅನುಭವಿ ಆಟಗಾರ ವಾವ್ರಿಂಕಾ ಅವರು ತಮ್ಮ ವಿದಾಯದ ಆಸ್ಟ್ರೇಲಿಯಾ ಓಪನ್‌ನಲ್ಲಿ 4 ಗಂಟೆ 33 ನಿಮಿಷ ಆಟವಾಡಿ 4-6, 6-3, 3-6, 7-5, 7-6 (10-3) ಅಂತರದಿಂದ ಫ್ರಾನ್ಸ್‌ನ ಕ್ವಾಲಿಫೈಯರ್ ಆರ್ಥರ್ ಜಿಯಾ ಅವರನ್ನು ಸೋಲಿಸಿದರು.

ಭಾರತ-ನ್ಯೂಜಿಲೆಂಡ್ 2ನೇ ಟಿ20 ಪಂದ್ಯ | ಇಶಾನ್ ಕಿಶನ್, ಸೂರ್ಯಕುಮಾರ್ ಸ್ಫೋಟಕ ಬ್ಯಾಟಿಂಗ್

ಭಾರತಕ್ಕೆ ಸತತ 2ನೇ ಜಯ

ರಾಯ್ಪುರ: ಇಶಾನ್ ಕಿಶನ್ ಹಾಗೂ ಸೂರ್ಯಕುಮಾರ್ ಯಾದವ್ ಅವರ ಸ್ಫೋಟಕ ಅರ್ಧಶತಕಗಳ ಬಲದಿಂದ ಭಾರತ ತಂಡವು 2ನೇ ಟಿ20 ಪಂದ್ಯದಲ್ಲಿಯೂ ನ್ಯೂಜಿಲೆಂಡ್ ವಿರುದ್ಧ 7 ವಿಕೆಟ್‌ಗಳ ಭರ್ಜರಿ ಗೆಲುವು ಪಡೆಯಿತು. ಆ ಮೂಲಕ 5 ಪಂದ್ಯಗಳ ಸರಣಿಯಲ್ಲಿ 2-0 ಮುನ್ನಡೆಯನ್ನು ಪಡೆದಿದೆ.

ನ್ಯೂಜಿಲೆಂಡ್ ನೀಡಿದ್ದ 209 ರನ್‌ಗಳ ಗುರಿಯನ್ನು ಹಿಂಬಾಲಿಸಿದ ಭಾರತ ತಂಡ, ಇಶಾನ್ ಕಿಶನ್ ಹಾಗೂ ಸೂರ್ಯಕುಮಾರ್ ಯಾದವ್ ಅವರ ಅರ್ಧಶತಕಗಳ ಬಲದಿಂದ ಕೇವಲ 15.2 ಓವರ್‌ಗಳಿಗೆ 3 ವಿಕೆಟ್ ಕಳೆದುಕೊಂಡು 209 ರನ್ ಗಳಿಸಿ ಗೆಲುವಿನ ದಡ ಸೇರಿತು.

ಇಶಾನ್ 32 ಎಸೆತ-76 ರನ್: ಗುರಿ ಬೆಂಬತ್ತಿದ ಭಾರತ ತಂಡಕ್ಕೆ ಉತ್ತಮ ಆರಂಭ ಸಿಗಲಿಲ್ಲ. ತಂಡದ ಮೊತ್ತ 6 ರನ್ ಇರುವಾಗಲೇ ಭಾರತ ತಂಡವು ಸಂಜು ಸ್ಯಾಮ್ಸನ್ ಮತ್ತು ಅಭಿಷೇಕ್ ಶರ್ಮಾ ಅವರ ವಿಕೆಟ್‌ಗಳನ್ನು ಕಳೆದುಕೊಂಡಿತು. ಆದರೆ ಮೂರನೇ ವಿಕೆಟ್‌ಗೆ ಇಶಾನ್ ಕಿಶನ್ ಹಾಗೂ ಸೂರ್ಯಕುಮಾರ್ ಯಾದವ್ ಸ್ಫೋಟಕ ಬ್ಯಾಟಿಂಗ್ ಮೂಲಕ ಕೇವಲ 48 ಎಸೆತಗಳಲ್ಲಿ 122 ರನ್‌ಗಳ ಜತೆಯಾಟವನ್ನು ಆಡಿ ತಂಡವನ್ನು ಗೆಲುವಿನ ಸನಿಹಕ್ಕೆ ತಂದರು. ಕಳೆದ ಪಂದ್ಯದಲ್ಲಿ ವಿಫಲರಾಗಿದ್ದ ಇಶಾನ್ ಕಿಶನ್ ಈ ಪಂದ್ಯದಲ್ಲಿ ಕೇವಲ 32 ಎಸೆತಗಳಲ್ಲಿ 4 ಸಿಕ್ಸರ್ ಹಾಗೂ 11 ಬೌಂಡರಿಗಳೊಂದಿಗೆ 76 ರನ್‌ಗಳನ್ನು ಬಾರಿಸಿದರು.

ಸೂರ್ಯಕುಮಾರ್ ಅಬ್ಬರ: ಸಾಲು ಸಾಲು ವೈಫಲ್ಯಗಳನ್ನು ಕಂಡಿದ್ದ ಸೂರ್ಯಕುಮಾರ್ ಯಾದವ್, ಈ ಪಂದ್ಯದಲ್ಲಿ ಸ್ಫೋಟಕ ಇನ್ನಿಂಗ್ಸ್ ಆಡುವ ಮೂಲಕ ತಮ್ಮ ಲಯಕ್ಕೆ

ಮರಳಿದರು. ಆಡಿದ 37 ಎಸೆತಗಳಲ್ಲಿ 4 ಸಿಕ್ಸರ್ ಹಾಗೂ 9 ಬೌಂಡರಿಗಳೊಂದಿಗೆ ಅಜೇಯ 82 ರನ್‌ಗಳನ್ನು ಬಾರಿಸಿ ಭಾರತ ತಂಡದ ಗೆಲುವಿಗೆ ನೆರವು ನೀಡಿದರು. ಅವರ ಜತೆ ನಾಲ್ಕನೇ ವಿಕೆಟ್‌ಗೆ 81 ರನ್ ಗಳಿಸಿದ್ದ ಶಿವಂ ದುಬೆ 18 ಎಸೆತಗಳಲ್ಲಿ ಅಜೇಯ 36 ರನ್ ಸಿಡಿಸಿದರು.

208 ರನ್ ಕಲೆ ಹಾಕಿದ ನ್ಯೂಜಿಲೆಂಡ್: ಇದಕ್ಕೂ ಮುನ್ನ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ನ್ಯೂಜಿಲೆಂಡ್ ತಂಡವು ಮಿಚೆಲ್ ಸ್ಯಾಂಟ್ನರ್ ಹಾಗೂ ರಚಿನ್ ರವೀಂದ್ರ ಬ್ಯಾಟಿಂಗ್ ಬಲದಿಂದ ತನ್ನ ಪಾಲಿನ 20 ಓವರ್‌ಗಳಿಗೆ 6 ವಿಕೆಟ್ ನಷ್ಟಕ್ಕೆ 208 ರನ್‌ಗಳನ್ನು ಕಲೆ ಹಾಕಿತ್ತು. ನ್ಯೂಜಿಲೆಂಡ್ ಪರ ಇನ್ನಿಂಗ್ಸ್ ಆರಂಭಿಸಿದ ಡೆವೋನ್ ಕಾನ್ವೆ ಹಾಗೂ ಟಿಮ್ ಸೀಫರ್ಟ್ ಜೋಡಿ ಮುರಿಯದ ಮೊದಲನೇ ವಿಕೆಟ್‌ಗೆ 3.2 ಓವರ್‌ಗಳಿಗೆ 43 ರನ್‌ಗಳನ್ನು ಕಲೆ ಹಾಕಿ ತಮ್ಮ ತಂಡಕ್ಕೆ ಉತ್ತಮ ಆರಂಭವನ್ನು ತಂದುಕೊಟ್ಟಿದ್ದರು. ಡೆವೋನ್ ಕಾನ್ವೆ (19) ಹಾಗೂ ಟಿಮ್ ಸೀಫರ್ಟ್ (24) ದೊಡ್ಡ ಇನಿಂಗ್ಸ್‌ಗೆ

ಪರಿವರ್ತಿಸುವಲ್ಲಿ ವಿಫಲರಾದರು. ಈ ಇಬ್ಬರನ್ನು ಕ್ರಮವಾಗಿ ಹರ್ಷಿತ್ ರಾಣಾ ಹಾಗೂ ವರುಣ್ ಚಕ್ರವರ್ತಿ ಔಟ್ ಮಾಡಿದರು.

ಗ್ಲೆನ್ ಫಿಲಿಪ್ಸ್ (19), ಡ್ಯಾರಿಲ್ ಮಿಚೆಲ್ (18) ಹಾಗೂ ಮಾರ್ಕ್ ಚಾಪ್ಮನ್ (10) ಅವರು ಮಧ್ಯಮ ಕ್ರಮಾಂಕದಲ್ಲಿ ಹೆಚ್ಚು ಹೊತ್ತು ಉಳಿಯಲಿಲ್ಲ. ಆದರೆ ರಚಿನ್ ರವೀಂದ್ರ 26 ಎಸೆತಗಳಲ್ಲಿ 4 ಸಿಕ್ಸರ್ ಹಾಗೂ 2 ಬೌಂಡರಿಗಳೊಂದಿಗೆ 44 ರನ್‌ಗಳನ್ನು ಸಿಡಿಸಿದರು. ಅವರು ಅರ್ಧಶತಕದಂಚಿನಲ್ಲಿ ಕುಲ್ದೀಪ್ ಯಾದವ್‌ಗೆ ವಿಕೆಟ್ ಒಪ್ಪಿಸಿದರು.

ಮಿಂಚಿನ ಮಿಚೆಲ್ ಸ್ಯಾಂಟ್ನರ್: ರಚಿನ್ ರವೀಂದ್ರ ವಿಕೆಟ್ ಒಪ್ಪಿಸಿದ ಬಳಿಕ ಕ್ರೀಸ್‌ಗೆ ಬಂದ ಮಿಚೆಲ್ ಸ್ಯಾಂಟ್ನರ್ ಕೊನೆಯ ಓವರ್‌ಗಳಲ್ಲಿ ಮಿಂಚಿನ ಬ್ಯಾಟಿಂಗ್ ಪ್ರದರ್ಶನವನ್ನು ತೋರಿದರು. ಅವರು 27 ಎಸೆತಗಳಲ್ಲಿ ಒಂದು ಸಿಕ್ಸರ್ ಹಾಗೂ 6 ಬೌಂಡರಿಗಳೊಂದಿಗೆ ಅಜೇಯ 47 ರನ್‌ಗಳನ್ನು ಸಿಡಿಸಿದರು. ಝ್ಯಾಕರಿ ಫೌಕ್ಸ್ 8 ಎಸೆತಗಳಲ್ಲಿ ಅಜೇಯ 15 ರನ್ ಸಿಡಿಸಿದರು.

ಟಿ20 ವಿಶ್ವಕಪ್: ಭಾರತಕ್ಕೆ ಬರಲು ನಿರಾಕರಿಸಿದ ನೆರೆ ರಾಷ್ಟ್ರಕ್ಕೆ ಆರ್ಥಿಕ ಸಂಕಷ್ಟ

ಬಾಂಗ್ಲಾದೇಶಕ್ಕೆ 240 ಕೋಟಿ ರು. ನಷ್ಟದ ಭೀತಿ

ದೆಹಲಿ: 2026ರ ಟಿ20 ವಿಶ್ವಕಪ್ ಆರಂಭಕ್ಕೆ ಕೆಲವೇ ದಿನಗಳು ಬಾಕಿ ಇರುವಾಗ ಭಾರತಕ್ಕೆ ಪ್ರಯಾಣಿಸಲು ಬಾಂಗ್ಲಾದೇಶ ಕ್ರಿಕೆಟ್ ಮಂಡಳಿ ಸ್ಪಷ್ಟವಾಗಿ ನಿರಾಕರಿಸಿದೆ. ಬಾಂಗ್ಲಾದೇಶದ ಸ್ಥಾನಕ್ಕೆ ಸ್ಕಾಟ್ಲೆಂಡ್ ತಂಡ ಸೇರ್ಪಡೆಯಾಗುವ ಮುನ್ಸೂಚನೆ ಲಭ್ಯವಾಗಿದೆ. ಬಾಂಗ್ಲಾದೇಶದ ಈ ನಿರ್ಧಾರದಿಂದಾಗಿ ತಂಡ ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕುವ ಸಾಧ್ಯತೆ ಇದೆ.

ಬಾಂಗ್ಲಾದೇಶಕ್ಕೆ 240 ಕೋಟಿ ರೂ. ನಷ್ಟ: ಭದ್ರತಾ ಕಾರಣಗಳನ್ನು ಮುಂದಿಟ್ಟುಕೊಂಡು 2026ರ ಟಿ20 ವಿಶ್ವಕಪ್‌ನ ತನ್ನ ಪಂದ್ಯಗಳನ್ನು ಲಂಕೆಗೆ ಸ್ಥಳಾಂತರಿಸುವಂತೆ ಬಾಂಗ್ಲಾದೇಶ ಐಸಿಸಿಗೆ ಮನವಿ ಮಾಡಿತ್ತು. ಐಪಿಎಲ್‌ನಿಂದ ವೇಗಿ ಮುಸ್ತಫಿಜುರ್ ರೆಹಮಾನ್ ಅವರನ್ನು ಬಿಸಿಸಿಐ ವಾಪಸ್ ಕಳುಹಿಸಿದ ಬೆಳವಣಿಗೆಯ ನಂತರ ಬಾಂಗ್ಲಾದೇಶ ಈ ಭದ್ರತಾ ಆತಂಕವನ್ನು ವ್ಯಕ್ತಪಡಿಸಿತ್ತು. ತಮ್ಮ ಆಟಗಾರರು ಮತ್ತು ಅಭಿಮಾನಿಗಳ ಸುರಕ್ಷತೆಯ ದೃಷ್ಟಿಯಿಂದ ಈ ಕಠಿಣ ನಿಲುವು ತಳೆದಿರುವುದಾಗಿ ಬಾಂಗ್ಲಾದ ಕ್ರೀಡಾ ಸಲಹೆಗಾರ ಆಸಿಫ್ ನಜ್ರುಲ್ ಹೇಳಿಕೊಂಡಿದ್ದರು. ಆದರೆ ವೇಳಾಪಟ್ಟಿಯಲ್ಲಿ ಬದಲಾವಣೆ ಸಾಧ್ಯವಿಲ್ಲ ಎಂದು ಐಸಿಸಿ ಈ ಮನವಿಯನ್ನು ತಿರಸ್ಕರಿಸಿದೆ. ಇದರಿಂದ ಬಾಂಗ್ಲಾದೇಶ ಕ್ರಿಕೆಟ್ ಮಂಡಳಿಗೆ ಸುಮಾರು 27 ಮಿಲಿಯನ್ ಡಾಲರ್ (ಅಂದಾಜು 240 ಕೋಟಿ ರೂ.) ಆರ್ಥಿಕ ನಷ್ಟವಾಗಲಿದೆ. ಈ ನಷ್ಟವು ಅವರ ವಾರ್ಷಿಕ ಆದಾಯದ ಶೇ.60 ರಷ್ಟಾಗಲಿದ್ದು, ಪ್ರಸಾರ ಹಕ್ಕು

ಹಾಗೂ ಪ್ರಾಯೋಜಕತ್ವದ ಮೇಲೆಯೂ ಭಾರಿ ಹೊಡೆತ ಬೀಳಲಿದೆ.

ಐಸಿಸಿ ಕಠಿಣ ನಿಲುವು: ವಿಶ್ವಕಪ್ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆ ಮಾಡಲಾಗುವುದಿಲ್ಲ ಎಂದು ಐಸಿಸಿ ಈಗಾಗಲೇ ಸ್ಪಷ್ಟಪಡಿಸಿದೆ. ಬಾಂಗ್ಲಾದೇಶಕ್ಕೆ ಅಂತಿಮ ನಿರ್ಧಾರ ತೆಗೆದುಕೊಳ್ಳಲು ಗುರುವಾರದವರೆಗೆ ಕಾಲಾವಕಾಶ ನೀಡಲಾಗಿತ್ತು. ಆದರೆ ಬಾಂಗ್ಲಾದೇಶದ ಕ್ರೀಡಾ ಸಲಹೆಗಾರ ಆಸಿಫ್ ನಜ್ರುಲ್, ಭಾರತದಲ್ಲಿ ನಮ್ಮ ಆಟಗಾರರು, ಪತ್ರಕರ್ತರು ಮತ್ತು ಪ್ರೇಕ್ಷಕರಿಗೆ ಭದ್ರತೆ ನೀಡುವ ಬಗ್ಗೆ ನಮಗೆ ನಂಬಿಕೆಯಿಲ್ಲ. ಇದು ಕೇವಲ ಕಲ್ಪನೆಯಲ್ಲ, ವಾಸ್ತವದ ಆತಂಕ ಎಂದು ಹೇಳುವ ಮೂಲಕ ಸರ್ಕಾರದ ಕಠಿಣ ನಿಲುವನ್ನು ಸಮರ್ಥಿಸಿಕೊಂಡಿದ್ದಾರೆ.

ಸ್ಕಾಟ್ಲೆಂಡ್‌ಗೆ ಲಕ್ಕಿ ಚಾನ್ಸ್?

ಬಾಂಗ್ಲಾದೇಶ ಅಧಿಕೃತವಾಗಿ ಹಿಂದೆ ಸರಿದರೆ, ಐಸಿಸಿ ಶ್ರೇಯಾಂಕದ ಆಧಾರದ ಮೇಲೆ ಸ್ಕಾಟ್ಲೆಂಡ್ ತಂಡಕ್ಕೆ ಟೂರ್ನಿಯಲ್ಲಿ ಆಡುವ ಅವಕಾಶ ಸಿಗಲಿದೆ. ಈ ಕುರಿತು ಪ್ರತಿಕ್ರಿಯಿಸಿರುವ ಕ್ರಿಕೆಟ್ ಸ್ಕಾಟ್ಲೆಂಡ್‌ನ ಸಂವಹನ ವಿಭಾಗದ ಮುಖ್ಯಸ್ಥ ಚಾರ್ಲ್ಸ್ ಪ್ಯಾಟರ್ಸನ್, ಸದ್ಯದ ಪರಿಸ್ಥಿತಿಯ ಬಗ್ಗೆ ನಾವು ಪ್ರತಿಕ್ರಿಯಿಸುವುದಿಲ್ಲ. ಅಧಿಕೃತ ಮಾಹಿತಿ ಬಂದ ನಂತರ ತಿಳಿಸುತ್ತೇವೆ ಎಂದಿದ್ದಾರೆ.

ಆರ್ಥಿಕವಾಗಿ ಹೈರಾಣಾಗಲಿರುವ ಬಿಪಿಎಲ್: ವರದಿಗಳ ಪ್ರಕಾರ, ವಿಶ್ವಕಪ್‌ನಿಂದ ಹೊರಗುಳಿಯುವುದರಿಂದ ಪ್ರಸಾರ ಹಕ್ಕು, ಪ್ರಾಯೋಜಕತ್ವ ಮತ್ತು ಐಸಿಸಿ ನೀಡುವ ಆದಾಯದಲ್ಲಿ ಬಾಂಗ್ಲಾದೇಶಕ್ಕೆ ಭಾರಿ ನಷ್ಟವಾಗಲಿದೆ. ಒಟ್ಟು 240 ಕೋಟಿ ರೂಪಾಯಿಗಳಷ್ಟು ಹಣವನ್ನು ಅವರು ಕಳೆದುಕೊಳ್ಳಬೇಕಾಗುತ್ತದೆ. ಇದು ಬಾಂಗ್ಲಾದೇಶದ ಕ್ರಿಕೆಟ್ ಭವಿಷ್ಯದ ಮೇಲೆ ದೊಡ್ಡ ಪರಿಣಾಮ ಬೀರಲಿದೆ. ಬಾಂಗ್ಲಾದೇಶದ ಕ್ರಿಕೆಟ್ ತಂಡ ಈಗಾಗಲೇ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದು, ಟಿ-20 ವಿಶ್ವಕಪ್ ಹಾಗೂ ಐಪಿಎಲ್‌ನಿಂದ ಹೊರಬಿದ್ದಿರುವುದರಿಂದ ಗಾಯದ ಮೇಲೆ ಬರೆ ಎಳೆದಂತಾಗಿದೆ.

ಇಂಡೋನೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್

ಸಿಂಧು, ಲಕ್ಷ್ಯ ಕನಸು ಭಗ್ನ

ನುಸ್ತಾರಾ: ಬಿಡಬ್ಲ್ಯುಎಫ್ ಸೂಪರ್-500 ಬ್ಯಾಡ್ಮಿಂಟನ್ ಟೂರ್ನಮೆಂಟ್ ಇಂಡೋನೇಷ್ಯಾ ಮಾಸ್ಟರ್ಸ್-2026ರಲ್ಲಿ ಭಾರತದ ಅಭಿಯಾನ ಶುಕ್ರವಾರ ಕೊನೆಗೊಂಡಿತು. ಜಕಾರ್ತಾದ ಇಸ್ಟೋರಾ ಸೆನಾಯನ್ ಕ್ರೀಡಾಂಗಣದಲ್ಲಿ ನಡೆದ ತಮ್ಮ ಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ ಪಿವಿ ಸಿಂಧು ಮತ್ತು ಲಕ್ಷ್ಯ ಸೇನ್ ಸೋಲನ್ನು ಕಂಡಿದ್ದಾರೆ. 30 ವರ್ಷದ ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಮತ್ತು ವಿಶ್ವದ 13ನೇ ಶ್ರೇಯಾಂಕದ ಸಿಂಧು, ಟೋಕಿಯೊ 2020ರ ಮಹಿಳಾ ಸಿಂಗಲ್ಸ್ ಚಾಂಪಿಯನ್ ಚೀನಾದ ಚೆನ್ ಯು ಫೀ ವಿರುದ್ಧ 42 ನಿಮಿಷಗಳ ಪಂದ್ಯದಲ್ಲಿ 21-13, 21-17 ಅಂತರದಲ್ಲಿ ಸೋಲು ಕಂಡರು. ಇದು 14 ಪಂದ್ಯಗಳಲ್ಲಿ ಅವರ ಎಂಟನೇ ಸೋಲಾಗಿದೆ.

ಚೆನ್ ಯು ಫೀ ಆರಂಭದಿಂದಲೇ ಪ್ರಾಬಲ್ಯ ಸಾಧಿಸಿ ಮೊದಲ ಹಂತದಲ್ಲೇ 5 -0 ಮುನ್ನಡೆ ಸಾಧಿಸಿದರು. ಬಳಿಕ ಭಾರತದ ಉತ್ತಮ ಪ್ರದರ್ಶನ ನೀಡಿ 9 - 8 ಅಂಕಗಳೊಂದಿಗೆ ಮುನ್ನಡೆ ಸಾಧಿಸಿದರು. ಆದರೆ ಆಟದ ಮಧ್ಯದ ವಿರಾಮದ ನಂತರ ಚೆನ್ ಯು ಫೀ ಮತ್ತೆ ಹಿಡಿತ ಸಾಧಿಸಿ ಸುಲಭವಾಗಿ ಮೊದಲ ಸೆಟ್ ಅನ್ನು ಗೆದ್ದುಕೊಂಡರು. ಎರಡನೇ ಗೇಮ್‌ನಲ್ಲಿ ಇಬ್ಬರು ಆಟಗಾರ್ತಿಯರ ನಡುವೆ ನಿಕಟ ಪೈಪೋಟಿ ಏರ್ಪಟ್ಟಿತ್ತು. ಸಿಂಧು 10-6 ಮುನ್ನಡೆ ಸಾಧಿಸಿ ಸೆಟ್ ಗೆಲ್ಲುವ ಸೂಚನೆ ನೀಡಿದ್ದರು. ನಂತರ 12-9 ಮುನ್ನಡೆ ಸಾಧಿಸಿದರು, ಆದರೆ ಚೆನ್ ಯು ಫೀ ಸತತ ಎಂಟು ಅಂಕಗಳನ್ನು ಗಳಿಸಿ 17-12 ಅಂಕಗಳೊಂದಿಗೆ ಮುನ್ನಡೆ ಸಾಧಿಸಿದರು.

ಸಿಂಧು ಮತ್ತೆ ಕಮ್‌ಬ್ಯಾಕ್ ಮಾಡಿ 17-16 ಅಂಕಗಳನ್ನು ಕಲೆಹಾಕಿದರು, ಆದರೆ ಚೆನ್ ತಮ್ಮ ಹಿಡಿತವನ್ನು ಕಾಯ್ದುಕೊಂಡು ನೇರ ಸೆಟ್‌ಗಳಿಂದ ಪಂದ್ಯವನ್ನು ಗೆದ್ದುಕೊಂಡರು.

ನ್ಯೂಜಿಲೆಂಡ್ ತಂಡದ ಬೌಲರ್ ಗಾಯಾಳು ಮುಂದಿನ ತಿಂಗಳ ವಿಶ್ವಕಪ್ ತಂಡದಿಂದ ಹೊರಕ್ಕೆ

ಆ್ಯಡಂ ಮಿಲ್ನೆ ಸ್ಥಾನಕ್ಕೆ ಜೇಮಿಸನ್

ದೆಹಲಿ: ಸ್ನಾಯು ಸೆಳೆತದ ಗಾಯಕ್ಕೆ ಒಳಗಾಗಿರುವ ನ್ಯೂಜಿಲೆಂಡ್ ತಂಡದ ವೇಗದ ಬೌಲರ್ ಆ್ಯಡಂ ಮಿಲ್ನೆ ಅವರು ಟಿ20 ವಿಶ್ವಕಪ್ ಟೂರ್ನಿಯಿಂದ ಹೊರ ಬಿದ್ದಿದ್ದಾರೆ. ದಕ್ಷಿಣ ಆಫ್ರಿಕಾ ವಿರುದ್ಧ ನಡೆದಿದ್ದ ಟಿ20 ಟೂರ್ನಿಯ ಪಂದ್ಯದ ವೇಳೆ ಅವರು ಸ್ನಾಯು ಸೆಳೆತದ ಗಾಯಕ್ಕೆ ತುತ್ತಾಗಿದ್ದರು. ಅವರ ಬದಲು ಮುಂದಿನ ವಿಶ್ವಕಪ್ ಟೂರ್ನಿಯ ನ್ಯೂಜಿಲೆಂಡ್ ತಂಡಕ್ಕೆ ಕೈಲ್ ಜೇಮಿಸನ್ ಸೇರ್ಪಡೆಯಾಗಿದ್ದಾರೆ.

ಆ್ಯಡಂ ಮಿಲ್ನೆ ಅವರು ದಕ್ಷಿಣ ಆಫ್ರಿಕಾ ಟಿ20 ಟೂರ್ನಿಯ ಸನ್‌ರೈಸರ್ಸ್ ಈಸ್ಟರ್ನ್ ಕೇಪ್ ತಂಡದ ಪರ ಆಡುತ್ತಿದ್ದಾರೆ. ಈ ವಾರ ಎಂಐ ಕೇಪ್ ವಿರುದ್ಧದ ಪಂದ್ಯದ ವೇಳೆ ಆ್ಯಡಂ ಮಿಲ್ನೆ ಅವರು ಬೌಲಿಂಗ್ ಮಾಡುತ್ತಿದ್ದ ವೇಳೆ ಸ್ನಾಯು ಸೆಳೆತದ ಗಾಯಕ್ಕೆ ತುತ್ತಾಗಿದ್ದರು. ಅವರ ಗಾಯವು ಗಂಭೀರವಾಗಿರುವ ರೀತಿಯಲ್ಲೇ ಪತ್ತೆಯಾಗಿದೆ.

'ಆ್ಯಡಮ್ ಅವರು ಟಿ20 ವಿಶ್ವಕಪ್ ಟೂರ್ನಿಗೆ ಸಿದ್ಧರಾಗಲು ತುಂಬಾ ಶ್ರಮಿಸಿದ್ದರು ಮತ್ತು ಈಸ್ಟರ್ನ್ ಕೇಪ್ ಸನ್‌ರೈಸರ್ಸ್‌ಗಾಗಿ ತಮ್ಮ ಎಂಟು ಪಂದ್ಯಗಳಲ್ಲಿ ತಮ್ಮ ಅತ್ಯುತ್ತಮ ಪ್ರದರ್ಶನವನ್ನು ತೋರಿದ್ದರು' ಎಂದು ನ್ಯೂಜಿಲೆಂಡ್ ಹೆಡ್ ಕೋಚ್ ರಾಬ್ ವಾಲ್ಟರ್ ಬೇಸರ ವ್ಯಕ್ತಪಡಿಸಿದ್ದಾರೆ. ಟಿ20 ವಿಶ್ವಕಪ್ ಟೂರ್ನಿಯ ಪ್ರಯಾಣ ಮೀಸಲು ಆಟಗಾರನಾಗಿದ್ದ ಕೈಲ್ ಜೇಮಿಸನ್ ಅವರು ಪ್ರಸ್ತುತ ಜೇಮಿಸನ್ ಅವರು ಭಾರತ ವಿರುದ್ಧದ ಟಿ20 ಸರಣಿಯಲ್ಲಿ ಆಡುತ್ತಿದ್ದಾರೆ.

ಶಮಿಗೆ ಮನೋಜ್ ತಿವಾರಿ ಬೆಂಬಲ

ದೆಹಲಿ: ಭಾರತ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಅವರು ಕ್ರಿಕೆಟ್ ಅಭಿಮಾನಿಗಳ ಕೆಂಗಣ್ಣಿಗೆ ಗುರಿಯಾಗಿ ವ್ಯಾಪಕ ಟೀಕೆಗಳನ್ನು ಎದುರಿಸುತ್ತಿದ್ದಾರೆ. ಟೀಮ್ ಇಂಡಿಯಾ ಮಾಜಿ ಆಟಗಾರ ಮನೋಜ್ ತಿವಾರಿ ಮಾತನಾಡಿ, ನಿತೀಶ್ ರಾಣಾ ಅವರು ಮೊಹಮ್ಮದ್ ಶಮಿ ಸ್ಥಾನ ತುಂಬಲು ಸಾಧ್ಯವಿಲ್ಲ. ರಾಣಾ ಆಲ್‌ರೌಂಡರ್ ಕಾರ್ಯ ನಿರ್ವಹಿಸಿದರೂ, ಬೌಲಿಂಗ್ ವಿಭಾಗದಲ್ಲಿ ಮೊಹಮ್ಮದ್ ಶಮಿ ಅವರಿಲ್ಲದೆ ತಂಡ ಬಲಿಷ್ಠವಾಗಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ. ಗಂಭೀರ್ ತಂಡದ ಆಯ್ಕೆಯ ಬಗ್ಗೆ ಇನ್ನಷ್ಟು ಬದ್ಧತೆ ಮೆರೆಯಬೇಕು ಎಂದರು.

ಪಯಣದಲ್ಲಿ ಸಾಗುವ ಲೈಫ್ ಎಲ್ಲಿಂದ್ ಎಲ್ಲಿಗೆ

ಮೂವರು ಪ್ರಾಣ ಸ್ನೇಹಿತರ ಜೀವನದ ಪಯಣದ ಕಥೆಯನ್ನು ಒಳಗೊಂಡ ಲೈಫ್ ಎಲ್ಲಿಂದ ಎಲ್ಲಿಗೆ ಚಿತ್ರ ತೆರೆಗೆ ಸಿದ್ಧವಾಗಿದೆ. ಭಾವನಾತ್ಮಕ ಕಥೆಯ ಈ ಚಿತ್ರವನ್ನು ಅರ್ಜುನ್ ಶಿವನ್ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಲೆನಿನ್, ಮಂಜುನಾಥ್, ಕ್ರಿಶ್, ಅರ್ಜುನ್ ಶಿವನ್ ಅನು ಪ್ರೇಮ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ವಿಪ್ರ ವೆಂಚರ್ಸ್ ಬ್ಯಾನರ್‌ನಲ್ಲಿ ಮುಳ್ಳೂರು ಗುರುಪ್ರಸಾದ್ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಸದ್ಯ ಈ ಚಿತ್ರದ ಎರಡು ಹಾಡುಗಳು ಬಿಡುಗಡೆಯಾಗಿದ್ದು ಕೇಳಲು ಮಧುರವಾಗಿ ಮೂಡಿಬಂದಿವೆ. ನಿವೃತ್ತ ಪೊಲೀಸ್ ಅಧಿಕಾರಿ ಭಾಸ್ಕರ ರಾವ್, ಸುಬ್ರಮಣ್ಯ ಶರ್ಮ, ಇಳಯ ಆಳ್ವ ಗುರೂಜಿ ಹಾಡುಗಳನ್ನು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು.

ಇದು ಮೂವರು ಆತ್ಮೀಯ ಸ್ನೇಹಿತರ ಜೀವನ ಪಯಣದ ಸಿನಿಮಾ. ಕಿರಿಕ್ ಪಾರ್ಟಿ ಥರ ಒಂದು ಫನ್ ಜರ್ನಿ ಇಲ್ಲಿದೆ. ಜೀವನದಲ್ಲಿ ಏನು ಪಡೆಯದಿದ್ದರೂ ಸ್ನೇಹಿತರು ಇರಬೇಕು. ಮೈಸೂರಿನಿಂದ ಆರಂಭವಾಗುವ ಜರ್ನಿ ದೆಹಲಿವರೆಗೆ ಸಾಗಲಿದೆ ಎಂದು ನಿರ್ದೇಶಕ ಅರ್ಜುನ್ ಶಿವನ್ ಹೇಳಿದರು.

ಈ ಕಥೆ ಕೇಳಿದಾಗಲೇ ನನಗೆ ತುಂಬಾ ಕನೆಕ್ಟ್ ಆಯ್ತು. ಹಾಗೆಯೇ ನಿರ್ಮಾಣಕ್ಕೆ ಸಮ್ಮತಿಸಿದೆ. ಇದು ಎಲ್ಲಾ ಪ್ರೇಕ್ಷರಿಗೆ ಇಷ್ಟವಾಗುತ್ತದೆ. ಎಲ್ಲರೂ ಸೇರಿ ಮಾಡಿರುವ ಚಿತ್ರವಿದು. ಇದೊಂದು ಸುಂದರ ಜರ್ನಿಯ ಚಿತ್ರ ಎಂದು ನಿರ್ಮಾಪಕ ಮುಲ್ಲೂರ್ ಗುರುಪ್ರಸಾದ್ ತಿಳಿಸಿದರು. ಅನು ಪ್ರೇಮಾ ರಿಚಾ ಫರ್ನಾಂಡೀಸ್ ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ವೈಶಾಖ ಶಶಿಧರನ್ ಹಾಗೂ ಕಿರಣ್ ವೈಶಿಷ್ಠ ಸಂಗೀತ ಸಂಯೋಜಿಸಿದ್ದಾರೆ. ಸುಮಂತ್ ಛಾಯಾಗ್ರಹಣ, ಮಂಜು ಸ್ವಾಮಿ ಕಲಾ ನಿರ್ದೇಶನ ಈ ಚಿತ್ರಕ್ಕಿದೆ. ಮಾರ್ಚ್‌ನಲ್ಲಿ ಲೈಫ್ ಎಲ್ಲಿಂದ್ ಎಲ್ಲಿಗೆ ತೆರೆಗೆ ಬರಲಿದೆ.

ಉಳ್ಳವರು ಇಲ್ಲದವರ ನಡುವಿನ ಹೋರಾಟ

ಈ ಹಿಂದೆ ತೆರೆಗೆ ಬಂದ ಕಾಟೇರ ಚಿತ್ರದಲ್ಲಿ ಭೂಮಿಗಾಗಿ ನಡೆಯುವ ಹೋರಾಟವನ್ನು ರೋಚಕವಾಗಿ ಕಟ್ಟಿಕೊಡಲಾಗಿತ್ತು. ಈಗ ಅದೇ ಛಾಪು ಈ ವಾರ ಬಿಡುಗಡೆಯಾದ ಲ್ಯಾಂಡ್ ಲಾರ್ಡ್ ಸಿನಿಮಾದಲ್ಲಿಯೂ ಇದೆ. ಅದು ನೂರಾರು ಮಂದಿ ವಾಸವಿರುವ ಗ್ರಾಮ. ಇಡೀ ಊರೇ ಜಮೀನ್ದಾರನದ್ದು. ಆ ಊರಲ್ಲಿ ಇರುವ ಬಡವರಿಗೆ ತುಂಡು ಭೂಮಿಯೂ ಇರುವುದಿಲ್ಲ. ಒಂದು ವೇಳೆ ಯಾರಿಗಾದರೂ ಭೂಮಿಕೊಟ್ಟರೆ ಅವರು ನನ್ನಂತೆ ಲ್ಯಾಂಡ್ ಲಾರ್ಡ್ ಅಂತ ಮೆರೆಯುತ್ತಾರೆ ಅನ್ನುವ ಉದ್ದೇಶದಿಂದ ಶ್ರೀಮಂತ ಜಮೀನ್ದಾರ ಯಾರಿಗೂ ಅಂಗೈ ಅಗಲದ ಭೂಮಿಯನ್ನು ನೀಡಿರುವುದಿಲ್ಲ.

ಹೀಗಿದ್ದಾಗ ತಾನು ಭೂಮಿಯನ್ನು ಪಡೆದೇ ತ್ತೀರುವೆ ಎಂದು ರಾಚಯ್ಯ, ಲ್ಯಾಂಡ್‌ಲಾರ್ಡ್ ವಿರುದ್ಧ ಸೆಟೆದು ನಿಲ್ಲುತ್ತಾನೆ. ಇತ್ತ ಲ್ಯಾಂಡ್ ಲಾಡ್ ಆರ್ಭಟ ಜೋರಾಗಿಯೇ ಇರುತ್ತದೆ. ಬಡವರನ್ನು ಮಟ್ಟಹಾಕಬೇಕು ಎಂದು ಅವನು ಹೋರಾಟಕ್ಕೆ ಇಳಿಯುತ್ತಾನೆ. ಈ ಹೋರಾಟದಲ್ಲಿ ಯಾರು ಗೆಲ್ಲುತ್ತಾರೆ. ರಾಚಯ್ಯ ಜಮೀನ್ದಾರ ಅಟ್ಟಹಾಸ ಮೆಟ್ಟುನಿಂತು, ತಾನು ಅಂದುಕೊಂಡಂತೆ ಭೂಮಿ ಪಡೆಯುತ್ತಾನಾ ಎಂಬುದನ್ನು ಸಿನಿಮಾ ನೋಡಿ ತಿಳಿದರೆ ಚೆಂದ.

ನಿರ್ದೇಶಕ ಜಡೇಶ್ ಕುಮಾರ್ ಹಂಪಿ, ಉಳ್ಳವರು ಮತ್ತು ಇಲ್ಲದವರ ನಡುವಿನ ಹೋರಾಟವನ್ನು ರೋಚಕವಾಗಿ ಕಟ್ಟಿಕೊಟ್ಟಿದ್ದಾರೆ. ನಾಲ್ಕು ದಶಕಗಳ ಹಿಂದೆ ಜಮೀನ್ದಾರರ ಉಪಟಳದ ನಡುವೆ ಬಡವರ ಬದುಕು ಎಷ್ಟೊಂದು ಶೋಚನೀಯವಾಗಿತ್ತು. ಎಂಬುದನ್ನು ಮನಕ್ಕೆ ಮುಟ್ಟುವಂತೆ ತೆರೆಯಲ್ಲಿ ಕಟ್ಟಿಕೊಟ್ಟಿದ್ದಾರೆ. ಇಡೀ ಸಿನಿಮಾವನ್ನು ರೆಟ್ರೋ ಶೈಲಿಯಲ್ಲಿ ಸೊಗಸಾಗಿ ನಿರೂಪಿಸಿದ್ದಾರೆ. ರಾಚಯ್ಯನಾಗಿ ದುನಿಯಾ ವಿಜಯ್ ಅದ್ಭುತವಾಗಿ ಅಭಿನಯಿಸಿದ್ದಾರೆ. ತಮ್ಮ ಪಾತ್ರದಲ್ಲಿ ಜೀವಿಸಿದ್ದಾರೆ. ಕೋಲಾರ ಭಾಗದ ಸಂಭಾಷಣೆಯನ್ನು ಕೇಳುವುದೇ ಹಿತ. ಇನ್ನು ರಚಿತಾ ಈ ಹಿಂದಿನ ಎಲ್ಲಾ ಸಿನಿಮಾಗಳಿಗಿಂತ ವಿಭಿನ್ನ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ನಿಂಗವ್ವನಾಗಿ ಡಿ ಗ್ಲಾಮರ್ ರೋಲ್ ನಲ್ಲಿ ಮಿಂಚಿದ್ದಾರೆ. ಹಿರಿಯ ನಟಿ ಉಮಾಶ್ರೀ ಅವರದ್ದು ಚಿಕ್ಕ ಪಾತ್ರವಾದರೂ ಸಿನಿಮಾ ನೋಡಿ ಹೊರಬಂದ ಮೇಲೆಯೂ ಆ ಪಾತ್ರ ಪ್ರೇಕ್ಷಕರನ್ನು ಕಾಡುತ್ತದೆ. ವಿಜಯ್ ಪುತ್ರಿ ರಿತನ್ಯಾ ಮೊದಲ ಚಿತ್ರದಲ್ಲಿಯೇ ಮೆಚ್ಚುವ ನಟನೆ ತೋರಿದ್ದಾರೆ.

ಇನ್ನು ಬಹುತೇಕ ಕಾಮಿಡಿ ಪಾತ್ರಗಳಲ್ಲಿಯೇ ಮನಗೆದ್ದಿದ್ದ ರಾಜ್ ಶೆಟ್ಟಿ ಇಲ್ಲಿ ಖದರ್ ಖಳನಾಗಿ ಅಬ್ಬರಿಸಿದ್ದಾರೆ. ರಾಜ್ ಶೆಟ್ಟಿ ಗೆಟಪ್ ಕೂಡ ಇಲ್ಲಿ ಹೊಸತಾಗಿದೆ. ಉಳಿದಂತೆ ಶರತ್ ಲೋಹಿತಾಶ್ವ, ಅವಿನಾಶ್, ಅಚ್ಯುತ ಕುಮಾರ್, ರಾಕೇಶ್ ಅಡಿಗ ಹೀಗೆ ಎಲ್ಲರೂ ತಮ್ಮ ಪಾತ್ರಗಳಿಗೆ ಜೀವತುಂಬಿ ಅಭಿನಯಿಸಿದ್ದಾರೆ. ಚಿತ್ರದ ಹಾಡುಗಳು ಮಧುರವಾಗಿದ್ದು ಸಂಗೀತ ಮನಕ್ಕೆ ನಾಟುತ್ತದೆ. ಲ್ಯಾಂಡ್ ಲಾರ್ಡ್ ಕಮರ್ಷಿಯಲ್ ಚೌಕಟ್ಟಿನಲ್ಲಿ ಮೂಡಿಬಂದಿರುವ ಮನರಂಜನಾತ್ಮಕ ಸಿನಿಮಾವಾಗಿದ್ದು, ಮನೆ ಮಂದಿಯೆಲ್ಲಾ ಒಟ್ಟಾಗಿ ಕುಳಿತು ನೋಡಬಹುದಾಗಿದೆ.



ಚಿತ್ರ: ಲ್ಯಾಂಡ್ ಲಾರ್ಡ್
ನಿರ್ದೇಶನ : ಜಡೇಶ್ ಕುಮಾರ್
ನಿರ್ಮಾಣ: ಸಾರಥಿ ಫಿಲಂಸ್
ತಾರಾಗಣ: ದುನಿಯಾ ವಿಜಯ್, ರಚಿತಾ ರಾಮ್, ರಾಜ್ ಶೆಟ್ಟಿ, ಅವಿನಾಶ್ ಉಮಾಶ್ರೀ ಮುಂತಾದವರು.
ರೇಟಿಂಗ್ : ★★★½

ಭಗ್ನ ಪ್ರೇಮಿಯ ಅಂತರಂಗ

ಎಲ್ಲರಲ್ಲಿಯೂ ಪ್ರೀತಿ ಮೂಡುತ್ತದೆ. ಆದರೆ ಆ ಪ್ರೀತಿಯನ್ನು ಯಾರು ಉಳಿಸಿಕೊಂಡು ಹೋಗುತ್ತಾರೆ ಅನ್ನೋದೇ ಮುಖ್ಯ. ಇತ್ತೀಚಿನ ದಿನಗಳಲ್ಲಿ ಬೆಳಗ್ಗೆ ಹುಟ್ಟುವ ಪ್ರೀತಿ ಸಂಜೆಯೊಳಗೆ ಮಸುಕಾಗುತ್ತದೆ. ಇಂದು ಪ್ರೀತಿಯ ದೃಷ್ಟಿಕೋನ ಹೇಗಿದೆ ಎಂಬುದನ್ನು ಎಲ್ಲರಿಗೂ ಹೊಂದಿಕೆಯಾಗುವಂತೆ ಕಲ್ಟ್ ಚಿತ್ರದಲ್ಲಿ ಕಟ್ಟಿಕೊಡಲಾಗಿದೆ. ತ್ರಿಕೋನಾ ಪ್ರೇಮಕಥೆಯ ಕಲ್ಟ್ ಪ್ರೇಕ್ಷರನ್ನು ಸೆಳೆಯುತ್ತಿದೆ.

ಚಿತ್ರ: ಕಲ್ಟ್
ನಿರ್ದೇಶನ : ಅನಿಲ್ ಕುಮಾರ್
ನಿರ್ಮಾಣ : ಲೋಕಿ ಸಿನಿಮಾಸ್
ತಾರಾಗಣ: ಝೈದ್ ಖಾನ್, ರಚಿತಾ ರಾಮ್, ಮಲೈಕಾ, ರಂಗಾಯಣ ರಘು ಮುಂತಾದವರು.
ರೇಟಿಂಗ್: ★★★½

ಬೆಂಗಳೂರಿನಲ್ಲಿ ಆರಂಭವಾಗುವ ಪ್ರೇಮ್ ಕಹಾನಿ, ಕರಾವಳಿ ತ್ತೀರದವರೆಗೂ ಸಾಗುತ್ತದೆ. ಅಲ್ಲಿಂದ ಗ್ರಾಮೀಣ ಭಾಗದ ಕಥೆಯೂ ಬೆಸದುಕೊಳ್ಳುತ್ತದೆ.

ಮಾಧವ ಬಲು ಮುಗ್ಧ ಬಯಸಿದ ಹುಡುಗಿಯನ್ನೇ: ವರಿಸಬೇಕು ಎಂಬುದು ಆತನ ಬಯಕೆ. ಹೀಗಿರುವಾಗಲೇ ಮಗ್ಗಲು ಬದಲಿಸುವ ಪ್ರೀತಿ, ಮಾಸಿ ಹೋದ ನೆನಪುಗಳು ಮತ್ತೆ ಕಾಡಿ, ಮನಸನ್ನು ಘಾಸಿಗೊಳಿಸುತ್ತವೆ. ಇದರಿಂದ ನಾಯಕ ಮುಗ್ಧತೆಯಿಂದ ಮೃಗದಂತೆ ಬದಲಾಗುತ್ತಾನೆ. ಕೊನೆಗೆ ನಾಯಕ ತನ್ನ ಪ್ರೀತಿಯನ್ನು ಮರಳಿ ಪಡೆಯುತ್ತಾನಾ ಎಂಬುದನ್ನು ಸಿನಿಮಾ ನೋಡಿಯೇ ತಿಳಿಯಬೇಕು.

ಪ್ರಸ್ತುತ ಕಾಲಘಟ್ಟಕ್ಕೆ ಹೊಂದುವ ಕಥೆಯನ್ನು ಆಯ್ದುಕೊಂಡಿರುವ ನಿರ್ದೇಶಕ ಅನಿಲ್ ಕುಮಾರ್ ಅದನ್ನು ನೈಜತೆಗೆ ಹತ್ತಿರವಾಗುವಂತೆ ಕಟ್ಟಿಕೊಟ್ಟಿದ್ದಾರೆ. ಹದಿಹರೆಯದಲ್ಲಿ ಮೂಡುವ ಪ್ರೇಮ, ಅದು ಪಡೆಯುವ ಆಯಾಮ. ಇದೆಲ್ಲವನ್ನು ಇಲ್ಲಿ ಭಿನ್ನ ರೂಪದಲ್ಲಿ ಕಟ್ಟಿಕೊಡಲಾಗಿದೆ. ಅದಕ್ಕೂ ಮುಖ್ಯವಾಗಿ ದೌರ್ಜನ್ಯಕ್ಕೆ ಒಳಗಾದ ಹುಡುಗಿಯ ಬಗ್ಗೆ ಯಾರು ಚಿಂತಿಸುತ್ತಾರೆ , ಆಕೆಗೆ ಯಾರು ಬದುಕು ರೂಪಿಸಿಕೊಡುತ್ತಾರೆ ಎಂಬ ಸೂಕ್ಷ್ಮ ಅಂಶಗಳನ್ನು ಆಯ್ದುಕೊಂಡು ನೀತಿ ಪಾಠ ಹೇಳಲಾಗಿದೆ.

ಝೈದ್ ಖಾನ್ ಅವರದ್ದು ಈ ಚಿತ್ರದಲ್ಲಿ ಮಾಗಿದ ಅಭಿನಯ. ಅವರ ಮ್ಯಾನರಿಸಂ, ಸಂದರ್ಭಕ್ಕೆ ತಕ್ಕಂತೆ ಸಂಭಾಷಣಾ ಶೈಲಿ ಅದ್ಭುತವಾಗಿದೆ. ಝೈದ್ ಲವ್ವರ್ ಬಾಯ್ ಆಗಿ, ರಗಡ್ ಆಗಿ, ಭರ್ಜರಿ ಆ್ಯಕ್ಷನ್ ನಲ್ಲಿ ಮಿಂಚಿದ್ದಾರೆ. ರಚಿತಾ ರಾಮ್ ಬೋಲ್ಡ್ ಆಗಿ ಕಂಗೊಳಿಸಿದ್ದು ತಮ್ಮ ಪಾತ್ರಕ್ಕೆ ಜೀವತುಂಬಿದ್ದಾರೆ.

ಗೌರಿ ಕಲ್ಯಾಣದ ಸಂಭ್ರಮ

ಕಿರುತೆರೆಯಲ್ಲಿ ಈಗಾಗಲೇ ಹಲವು ಧಾರಾವಾಹಿಗಳು ಪ್ರಸಾರವಾಗುತ್ತಿವೆ. ಅವುಗಳ ಸಾಲಿಗೆ ಈಗ ಗೌರಿ ಕಲ್ಯಾಣ ಧಾರಾವಾಹಿಯೂ ಸೇರ್ಪಡೆಯಾಗುತ್ತಿದೆ. ತನ್ನ ಮೂರು ಹೆಣ್ಣುಮಕ್ಕಳನ್ನು ಒಳ್ಳೆಯ ಶ್ರೀಮಂತ ಮನೆತನಕ್ಕೆ ಸೇರಿಸಬೇಕು ಅಂತ ಗುರಿ ಹೊಂದಿರುವ ಅಮ್ಮ. ಪವಿತ್ರ ಬಂಧನದಲ್ಲಿ ತಮ್ಮನ ಖುಷಿಗೋಸ್ಕರ ಯಾವ ತ್ಯಾಗಕ್ಕೂ ಸಿದ್ಧವಿರುವ ಅಣ್ಣ. ಹೀಗೆ ತ್ಯಾಗ ಮತ್ತು ಗುರಿಯ ಸುತ್ತ ಸಾಗುವ ಕೌಟುಂಬಿಕ ಕಥನ ಇಲ್ಲಿದೆ.

ಮಧ್ಯಮ ವರ್ಗದ, ಸಂಪ್ರದಾಯಸ್ಥ ಮನೆತನದ ಸಭ್ಯ ಗೃಹಿಣಿ ಕಾಂತಲಕ್ಷ್ಮಿಗೆ ಮೋನಿಕಾ, ಗೌರಿ ಮತ್ತು ಚಿನ್ಮಯಿ ಈ ಮೂವರು ಸುಂದರ ಹೆಣ್ಣುಮಕ್ಕಳು. ತನ್ನ ಮೂರೂ ಮಕ್ಕಳನ್ನು ಶ್ರೀಮಂತ ಕುಟುಂಬಕ್ಕೆ ಸೊಸೆಯಾಗಿ ಕಳಿಸಬೇಕು ಎನ್ನುವ ಮಹದಾಸೆ ಹೊಂದಿರುತ್ತಾಳೆ. ಬಡತನದಲ್ಲಿ ತಾನು ಅನುಭವಿಸಿದ ಕಷ್ಟ ತನ್ನ ಮಕ್ಕಳು ಅನುಭವಿಸಬಾರದು ಎಂದು ಹಂಬಲಿಸೋ ಆ ತಾಯಿಗೆ, ತನ್ನ ಮಕ್ಕಳ ಸುಂದರ ಭವಿಷ್ಯದ್ದೇ ಕನಸು. ಅದಕ್ಕಾಗಿ ಪರಿಪರಿಯಾದ ಪ್ರಯತ್ನ ಮಾಡುತ್ತಾಳೆ. ಆಕೆಯ ಆ ಪ್ರಯತ್ನ, ಆಕೆ ತನ್ನ ಗುರಿ ಸಾಧನೆಗೆ ಹಿಡಿದ ದಾರಿ ಫಲ ನೀಡುತ್ತದೆಯೆ ಎಂಬುದು ಈ ಧಾರಾವಾಹಿಯ ಕಥಾಹಂದರ.

ಮಧ್ಯಮ ವರ್ಗದ ಜನರ ಸರಳತೆ ಮತ್ತು ಶ್ರೀಮಂತ ಸಮಾಜದ ನಿರೀಕ್ಷೆಗಳ ನಡುವೆ ನಡೆಯುವ ಭಾವನಾತ್ಮಕ ಹೋರಾಟ ಗೌರಿ ಕಲ್ಯಾಣದ ಹೈಲೈಟ್. ಇಲ್ಲಿ ಹಣ ಮತ್ತು ಅಧಿಕಾರದ ಅಮಲಿದೆ, ಮೇಲ್ವರ್ಗ ಕೆಳವರ್ಗಗಳ ನಡುವಿನ ಸಂಘರ್ಷವೂ ಕಾಣಿಸುತ್ತದೆ. ಸಂಬಂಧಗಳಲ್ಲಿನ ಮೌಲ್ಯಗಳನ್ನು ಸಾರುವುದಷ್ಟೇ ಅಲ್ಲದೆ, ಅಕ್ಕ-ತಂಗಿಯರ ನಡುವಿನ ಬಾಂಧವ್ಯಕ್ಕೂ ಈ ಧಾರಾವಾಹಿ ಕನ್ನಡಿಯಾಗಲಿದೆ. ಶ್ರೀಮಂತ ಮತ್ತು ಬಡವ ಅನ್ನೋ ಎರಡು ವರ್ಗಗಳ ನಡುವಿನ ಕಂದಕ ಎಷ್ಟು ಆಳವಿದೆ ಅನ್ನುವದನ್ನು ಈ ಧಾರಾವಾಹಿ ಮಾರ್ಮಿಕವಾಗಿ ಬಿಚ್ಚಿಡಲಿದೆ.

ಗೌರಿ ಕಲ್ಯಾಣ ಧಾರಾವಾಹಿಯಲ್ಲಿ ಗೌರಿಯಾಗಿ ಶಿಲ್ಪಾ ಕಾಮತ್, ವಿವೇಕ್ ಚಕ್ರವರ್ತಿಯಾಗಿ ಶರತ್ ಕುಮಾರ್, ಕಾಂತಲಕ್ಷ್ಮೀ ಪಾತ್ರದಲ್ಲಿ ದೀಪಿಕಾ ಶರಣ್ ಶೆಟ್ಟಿ, ಶಾಂತವೀರಣ್ಣ ಪಾತ್ರದಲ್ಲಿ ಅಶೋಕ್ ಜಂಬೆ, ಮೋನಿಕಾ ಪಾತ್ರದಲ್ಲಿ ಸಹನಾ, ಚಿನ್ಮಯಿ ಪಾತ್ರದಲ್ಲಿ ನಿಹಾರಿಕಾ ಶೆಟ್ಟಿ, ಚಕ್ರವರ್ತಿ ಪಾತ್ರದಲ್ಲಿ ಗುರುದತ್, ಸರಿತಾ ಪಾತ್ರದಲ್ಲಿ ಶೀಲಾ, ಚಂಚಲಾ ಪಾತ್ರದಲ್ಲಿ ಜ್ಯೋತಿ ನಟಿಸುತ್ತಿದ್ದಾರೆ. ಎನ್.ಭರತ್ ಕುಮಾರ್ ನಿರ್ದೇಶನ ಮಾಡುತ್ತಿರುವ ಈ ಧಾರಾವಾಹಿಯನ್ನು ರಾಮ್‌ಜಿ ನಿರ್ಮಾಣ ಮಾಡುತ್ತಿದ್ದಾರೆ.

ಕಿರುತೆರೆಯಲ್ಲಿ ಅನನ್ಯ ಸಾಧಕರು

ಚಿತ್ರರಂಗಕ್ಕೆ ತಮ್ಮದೇ ಆದ ಕೊಡುಗೆ ನೀಡಿದ ಕಲಾವಿದರಾದ ಹ್ಯಾಟ್ರಿಕ್ ಹೀರೊ ಶಿವರಾಜ್ ಕುಮಾರ್, ನಟ ಪ್ರಕಾಶ್ ರಾಜ್, ಡಾಲಿ ಧನಂಜಯ್, ಶ್ರೀನಾಥ್, ಉಮಾಶ್ರೀ, ಸಾಧು ಕೋಕಿಲ, ಸಾಹಿತಿ ಜೋಗಿ, ಕವಿ ಬಿ.ಆರ್.ಲಕ್ಷ್ಮಣರಾವ್ ಸೇರಿದಂತೆ ಕರುನಾಡಿನ ವಿವಿಧ ಕ್ಷೇತ್ರಗಳ ಸಾಧಕರನ್ನು ಉದಯ ಕನ್ನಡಿಗ ಕಾರ್ಯಕ್ರಮದಲ್ಲಿ ಸನ್ಮಾನಿಸಿ ಗೌರವಿಸಲಾಯಿತು. ಕಲಾವಿದರು ಮಾತ್ರವಲ್ಲದೆ ಗಾಯಕ ಸಂಜಿತ್ ಹೆಗ್ಡೆ, ಕಬ್ಬಡ್ಡಿ ಆಟಗಾರ್ತಿ ಧನಲಕ್ಷ್ಮೀ ಪೂಜಾರಿ, ಕಾರ್ಗಿಲ್ ಯೋಧ ಕ್ಯಾಪ್ಟನ್ ನವೀನ್ ನಾಗಪ್ಪ, ಉದ್ಯಮಿ ಕಿಶೋರ್ ಕುಮಾರ್ ರೈ, ಪರಿಸರವಾದಿ ಶಿವಾನಂದ ಕಳವೆ, ಆಧುನಿಕ ಭಗೀರಥ ಎಂದೇ ಪ್ರಸಿದ್ಧಿಪಡೆದ, ಕೃಷಿಕ ಅಮ್ಮೈ ಮಹಾಲಿಂಗ ಅವರನ್ನು ಪುರಸ್ಕರಿಸಲಾಯಿತು.

ನಿರ್ದೇಶಕರಾದ ನಾಗತಿಹಳ್ಳಿ ಚಂದ್ರಶೇಖರ್, ಬರಗೂರು ರಾಮಚಂದ್ರಪ್ಪ, ಓಂಸಾಯಿ ಪ್ರಕಾಶ್ ನಿರ್ಮಾಪಕರಾದ ಚಿನ್ನೇಗೌಡ, ಸಾ.ರಾ.ಗೋವಿಂದು, ಶಶಿಕುಮಾರ್, ರಮೇಶ್ ಭಟ್, ಗಿರಿಜಾ ಲೋಕೇಶ್, ಮಂಡ್ಯ ರಮೇಶ್, ಹೀಗೆ ಹಲವು ಹಿರಿಯ ಕಲಾವಿದರು ಪಾಲ್ಗೊಂಡು ಕಾರ್ಯಕ್ರಮಕ್ಕೆ ಮೆರಗು ನೀಡಿದರು. ವಿಶೇಷವೆಂದರೆ ನಟ ಡಾಲಿ ಧನಂಜಯ್ ತಮ್ಮ ಜೀವನದ ಮಹತ್ವದ ವಿಷಯವೊಂದನ್ನು ಕಾರ್ಯಕ್ರಮದಲ್ಲಿ ಹಂಚಿಕೊಂಡಿದ್ದಾರೆ. ಈ ಕಾರ್ಯಕ್ರಮ ಶನಿವಾರ ಮತ್ತು ಭಾನುವಾರ ಉದಯ ಟಿವಿಯಲ್ಲಿ ಪ್ರಸಾರವಾಗಲಿದೆ.